ಭಾನುವಾರ, ಮಾರ್ಚ್ 17, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 77 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಆನ್‌ಲೈನ್ ಬಳಸಿಕೊಂಡು ಸೃಷ್ಟಿಸಿದ ಮಾರುಕಟ್ಟೆಯಿಂದ ಕಿನ್ನಾಳ ಕಲೆ ಮನೆ ಬಾಗಿಲಿಗೆ ತಲುಪಿದೆ.

'ಭಾರತ ಇತಿಹಾಸದ ದೊಡ್ಡ ಹಗರಣ' 9
ರಾಜ್ಯದ ಬಿಜೆಪಿ ನಾಯಕರ ವಿರುದ್ಧ ಸಂಗಣ್ಣ ಕರಡಿ ಗರಂ
ಸಾಂಸ್ಕೃತಿಕ ಅಕಾಡೆಮಿಗಳಿಗೆ ಕೊನೆಗೂ ನೇಮಕ 6
'ಗುಜರಿ ರಾಜಕಾರಣೆ ಅಂದುಕೊಂಡಿದ್ದೀರಾ?' 7

ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟ • ರಾಜ್ಯದಲ್ಲಿ ಏಪ್ರಿಲ್ 26, ಮೇ 7ರಂದು ಎರಡು ಹಂತಗಳಲ್ಲಿ ಮತದಾನ

ಭಾರತ ಮತ, ಏಳು ಹಂತ

ಲೋಕಸಭೆ, ನಾಲ್ಕು ರಾಜ್ಯಗಳ ವಿಧಾನಸಭೆ (ಆಂಧ್ರ ಪ್ರದೇಶ, ಒಡಿಶಾ, ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂ) ಮತ್ತು ವಿವಿಧ ರಾಜ್ಯಗಳ 26 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಚುನಾವಣಾ ಆಯೋಗ ಶನಿವಾರ ವೇಳಾಪಟ್ಟಿ ಪ್ರಕಟಿಸಿದೆ. ದೇಶದಲ್ಲಿ ಏಳು ಹಂತಗಳಲ್ಲಿ ಹಾಗೂ ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ



ಮತದಾನದ ದಿನಾಂಕ	ಹಂತ	ಕ್ಷೇತ್ರ	ರಾಜ್ಯ
ಏಪ್ರಿಲ್ 19	1	102	21
ಏಪ್ರಿಲ್ 26	2	89	13
ಮೇ 7	3	94	12
ಮೇ 13	4	96	10
ಮೇ 20	5	49	08
ಮೇ 25	6	57	07
ಜೂನ್ 1	7	57	08

ಜೂನ್ 4 ಮತ ಎಣಿಕೆ

543 ಒಟ್ಟು ಕ್ಷೇತ್ರಗಳು | **10.5** ಲಕ್ಷ ಮತಗಟ್ಟೆಗಳು | **55** ಲಕ್ಷ ಇವಿಎಂಗಳು

1.5 ಕೋಟಿ, ಮತಗಟ್ಟೆ ಅಧಿಕಾರಿ/ ಭದ್ರತಾ ಸಿಬ್ಬಂದಿ

ಮತದಾರರ ವಿವರ

96.8 ಕೋಟಿ ಒಟ್ಟು ಮತದಾರರು

ಪುರುಷರು 49.7 ಕೋಟಿ

ಮಹಿಳೆಯರು 47.1 ಕೋಟಿ

48 ಸಾವಿರ ಲಿಂಗತ್ವ ಅಲ್ಪಸಂಖ್ಯಾತರು

1.8 ಕೋಟಿ ಮೊದಲ ಬಾರಿಯ ಮತದಾರರು (18–19 ವರ್ಷ)

ಕರ್ನಾಟಕದಲ್ಲಿ ಎರಡು ಹಂತದ ಮತದಾನ

ಮೇ 7	ಏಪ್ರಿಲ್ 26
1.ಚಿಕ್ಕೋಡಿ	15.ಉಡುಪಿ–ಚಿಕ್ಕಮಗಳೂರು
2.ಬೆಳಗಾವಿ	16.ಹಾಸನ
3.ಬಾಗಲಕೋಟೆ	17.ದಕ್ಷಿಣ ಕನ್ನಡ
4.ವಿಜಯಪುರ	18.ಚಿತ್ರದುರ್ಗ
5.ಕಲಬುರ್ಗಿ	19.ತುಮಕೂರು
6.ರಾಯಚೂರು	20.ಮಂಡ್ಯ
7.ಬೀದರ್	21.ಮೈಸೂರು–ಕೊಡಗು
8.ಕೊಪ್ಪಳ	22.ಚಾಮರಾಜನಗರ
9.ಬಳ್ಳಾರಿ	23.ಬೆಂಗಳೂರು ಗ್ರಾಮಾಂತರ
10.ಹಾವೇರಿ	24.ಬೆಂಗಳೂರು ಉತ್ತರ
11.ಧಾರವಾಡ	25.ಬೆಂಗಳೂರು ಕೇಂದ್ರ
12.ಉತ್ತರ ಕನ್ನಡ	26.ಬೆಂಗಳೂರು ದಕ್ಷಿಣ
13.ದಾವಣಗೆರೆ	27.ಚಿಕ್ಕಬಳ್ಳಾಪುರ
14.ಶಿವಮೊಗ್ಗ	28.ಕೋಲಾರ



28 ಒಟ್ಟು ಕ್ಷೇತ್ರಗಳು

ಕರ್ನಾಟಕದ ಮತ ಲೆಕ್ಕಾಚಾರ

5.42 ಕೋಟಿ ಒಟ್ಟು ಮತದಾರರು

ಪುರುಷರು 2.71 ಕೋಟಿ

ಮಹಿಳೆಯರು 2.70 ಕೋಟಿ

4,933 ಲಿಂಗತ್ವ ಅಲ್ಪಸಂಖ್ಯಾತರು | **3,200** ಶತಾಯುಷಿ ಮತದಾರರು

ಪ್ರಜಾವಾಣಿ ಗ್ರಾಫಿಕ್ಸ್

ಇನ್ನಷ್ಟು ಸುದ್ದಿಗಳು 7

ಸುರಪುರ ವಿಧಾನಸಭೆ ಕ್ಷೇತ್ರದ ಉಪಚುನಾವಣೆ ಮೇ 7ಕ್ಕೆ

7ನೇ ವೇತನ ಆಯೋಗದ ಶಿಫಾರಸು

'ಮೂಲವೇತನ ಶೇ 58.5 ಹೆಚ್ಚಿಸಿ'

- ಶೇ 27.5ರಷ್ಟು ಫಿಟ್‌ಮೆಂಟ್, ಶೇ 31ರಷ್ಟು ಡಿಎ ವಿಲೀನ
- ವಾರ್ಷಿಕ ವೇತನ ಬಡ್ತಿ ದರ ಕನಿಷ್ಠ ₹400ರಿಂದ ಗರಿಷ್ಠ ₹650ಕ್ಕೆ, ಕನಿಷ್ಠ ₹3,100ರಿಂದ ₹5 ಸಾವಿರಕ್ಕೆ
- ಸಮವಸ್ತ್ರ ಭತ್ಯೆ, ಪ್ರಯಾಣ ಭತ್ಯೆ, ದಿನಭತ್ಯೆಗಳು ಶೇ 25ರಷ್ಟು ಹೆಚ್ಚಳ
- ಅಂಗವಿಕಲ ಮಕ್ಕಳ ಶೈಕ್ಷಣಿಕ ಭತ್ಯೆ ₹1 ಸಾವಿರದಿಂದ ₹2 ಸಾವಿರಕ್ಕೆ ಹೆಚ್ಚಳ
- ಗೃಹ ನಿರ್ಮಾಣ ಮುಂಗಡ ₹40 ಲಕ್ಷದಿಂದ ₹65 ಲಕ್ಷದವರೆಗೆ ಹೆಚ್ಚಳ
- ಗ್ರೂಪ್ ಸಿ, ಡಿ ವೃಂದದ ವೈದ್ಯಕೀಯ ಭತ್ಯೆ ₹200ರಿಂದ ₹500ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಿದ್ದ ಏಳನೇ ವೇತನ ಆಯೋಗವು ಶೇಕಡ 31ರಷ್ಟು ತುಟ್ಟಿಭತ್ಯೆಯನ್ನು ಮೂಲವೇತನದಲ್ಲಿ ವಿಲೀನಗೊಳಿಸುವ ಜತೆಗೆ, ಶೇ 27.50ರಷ್ಟು ಫಿಟ್‌ಮೆಂಟ್ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಆಯೋಗದ ಅಧ್ಯಕ್ಷರಾದ ನಿವೃತ್ತ ಮುಖ್ಯಕಾರ್ಯದರ್ಶಿ ಕೆ. ಸುಧಾಕರ್ ರಾವ್ ನೇತೃತ್ವದ ಆಯೋಗದ ಸದಸ್ಯರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ಮಾಡಿ 244 ಪುಟಗಳ ವರದಿಯನ್ನು ಸಲ್ಲಿಸಿದರು.

ಆರಂಭಿಕ ವೃಂದದ ನೌಕರರ ಕನಿಷ್ಠ ವೇತನ ತಿಂಗಳಿಗೆ ₹17 ಸಾವಿರ ಇದ್ದು, ಅದನ್ನು ಗರಿಷ್ಠ ₹27 ಸಾವಿರಕ್ಕೆ ಹಾಗೂ ಹಿರಿಯ ಶ್ರೇಣಿ ನೌಕರರ ಆರಂಭಿಕ ಕನಿಷ್ಠ ವೇತನ ಈಗ ₹1,04,600 ಇದ್ದು, ಅದನ್ನು ₹1,67,200ಕ್ಕೆ ಪರಿಷ್ಕರಿಸುವಂತೆ ಶಿಫಾರಸು ಮಾಡಲಾಗಿದೆ. ಪ್ರಸ್ತುತ 1:8.86 ಕನಿಷ್ಠ ಮತ್ತು ಗರಿಷ್ಠ ವೇತನಗಳ ಅನುಪಾತವನ್ನು 1:8.93ಕ್ಕೆ ಹೆಚ್ಚಿಸಲಾಗಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಬೋಧಕೇತರ ನೌಕರರಿಗೂ ಈ ಶಿಫಾರಸು ಅನ್ವಯವಾಗಲಿದ್ದು, 2022ರ ಜೂನ್‌ನಿಂದ ಪೂರ್ವಾನ್ವಯವಾಗುವಂತೆ ಜಾರಿ ಮಾಡುವಂತೆ ಶಿಫಾರಸು ಮಾಡಿದೆ.

> **ವರದಿಯನ್ನು ಆರ್ಥಿಕ ಇಲಾಖೆಗೆ ನೀಡಲಾಗಿದೆ. ಇಲಾಖೆಯ ಅಧಿಕಾರಿಗಳು ನೀಡುವ ಸಲಹೆ ಆಧಾರದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ತಿಂಗಳ ಪಿಂಚಣಿಯನ್ನು ಮೂಲ ವೇತನದ ಶೇ 50ರಷ್ಟು, ಕುಟುಂಬ ಪಿಂಚಣಿಯನ್ನು ಶೇ 30ರಷ್ಟು ಮುಂದುವರಿಸಿದ್ದು, ಪಿಂಚಣಿಯು ಕನಿಷ್ಠ ₹13,500ರಿಂದ ₹1,20,600ವರೆಗೆ ನಿಗದಿ ಮಾಡಿದೆ. 70–80 ವರ್ಷ ವಯಸ್ಸಿನ ಪಿಂಚಣಿದಾರರಿಗೆ ಮೂಲ ಪಿಂಚಣಿಯು ಹೆಚ್ಚುವರಿ ಶೇ 10ರಷ್ಟು ಹೆಚ್ಚಳ ಆಗಬೇಕು ಎಂದು ಶಿಫಾರಸು ಮಾಡಲಾಗಿದೆ.

5ನೇ ಪುಟ ನೋಡಿ

ಉಪಚುನಾವಣೆ ಸುರಪುರ ಸಿದ್ಧ 7

ಒಳ ಪುಟ

123 ಅಡಿ ಉದ್ದದ ಎಂಟಿಆರ್ ದೋಸೆಗೆ ಗಿನ್ನಿಸ್ ಗರಿ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಾಂಗ್ರೆಸ್‌ಗೆ ಭ್ರಷ್ಟಾಚಾರವೇ ಆಕ್ಸಿಜನ್: ಪ್ರಧಾನಿ ಟೀಕೆ

ಪ್ರಚಾರಕ್ಕೆ ಮೋದಿ ಚಾಲನೆ

• ವಿನಾಯಕ ಭಟ್

ಕಲಬುರಗಿ: ಲೋಕಸಭಾ ಚುನಾವಣೆಗೆ ವೇಳಾಪಟ್ಟಿ ಘೋಷಣೆ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು 'ಕಲ್ಯಾಣ ಕರ್ನಾಟಕ'ದಲ್ಲಿ ಮತ್ತೆ 'ಕಮಲ'ವನ್ನು ಅರಳಿಸಲು ಶನಿವಾರ ಪ್ರಚಾರಕ್ಕೆ ಚಾಲನೆ ನೀಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಜಿಲ್ಲೆ ಕಲಬುರಗಿಯಲ್ಲಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಮೋದಿ, ಬಿಸಿಲೂರಿನಲ್ಲಿ ಚುನಾವಣೆಯ ಕಾವೇರಿಸಿದರು. ಬಿಜೆಪಿ ಕಾರ್ಯಕರ್ತರ ಉತ್ಸಾಹವನ್ನು ಹೆಚ್ಚಿಸಿದ ಮೋದಿ, ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಸಂಕಲ್ಪ ಮಾಡಿಸಿದರು.

ಪಕ್ಷ ಇಲ್ಲಿ ಏರ್ಪಡಿಸಿದ್ದ 'ಮತ್ತೊಮ್ಮೆ ಮೋದಿ ಸಂಕಲ್ಪ ಸಮಾವೇಶ'ದಲ್ಲಿ ಮಾತನಾಡಿದ ಅವರು, 'ಕಲ್ಲಿದ್ದಿಲಿನ ಕಪ್ಪು ಬಣ್ಣವಾದರೂ ಬದಲಾಗಬಹುದು; ಆದರೆ, ಕಾಂಗ್ರೆಸ್‌ನಿಂದ ಭ್ರಷ್ಟಾಚಾರ ದೂರವಾಗಲು ಸಾಧ್ಯವೇ ಇಲ್ಲ. ಪರಿವಾರವಾದಿಯಾದ ಕಾಂಗ್ರೆಸ್‌ಗೆ ಭ್ರಷ್ಟಾಚಾರವೇ ಆಕ್ಸಿಜನ್ (ಆಮ್ಲಜನಕ)' ಎಂದು ಟೀಕಿಸಿದರು.

'ಎಷ್ಟೇ ಬಾರಿ ಬಟ್ಟೆ ಬದಲಾಯಿಸಿದರೂ ಕೆಲವರು ಮಾಡುವ ಕೆಲಸದಲ್ಲಿ ಹೇಗೆ ಬದಲಾವಣೆ ಆಗುವುದಿಲ್ಲವೋ ಹಾಗೆ ಕಾಂಗ್ರೆಸ್‌ನ ವೈಖರಿ ಕೂಡ. ಅಲ್ಪಾವಧಿಯಲ್ಲೇ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದೆ. ಇಲ್ಲಿ ಕಾನೂನು ಸುವ್ಯವಸ್ಥೆ ಸ್ಥಿತಿ ಹದಗೆಟ್ಟಿದೆ. ಜನರ ಮನಸ್ಸಿನಲ್ಲಿ ಭಯ ಹುಟ್ಟಿಸಲಾಗುತ್ತಿದೆ. ಜನ ಆ ಚಿಂತೆಯಲ್ಲಿದ್ದರೆ, ಕಾಂಗ್ರೆಸ್ ಲೂಟಿ ಮಾಡುವುದರಲ್ಲೇ ವ್ಯಸ್ತವಾಗಿದೆ' ಎಂದು ಕುಟುಕಿದರು.

'ಚುನಾವಣೆಗೆ ಮುನ್ನ ದೊಡ್ಡ ಘೋಷಣೆ ಮಾಡುವ ಕಾಂಗ್ರೆಸ್ ಪಕ್ಷದವರು, ನಂತರ ಜೇಬು ತುಂಬಿಸಿಕೊಳ್ಳುವುದರಲ್ಲೇ ತಲ್ಲೀನರಾಗಿರುತ್ತಾರೆ. ಕರ್ನಾಟಕದ ಜನ ಪರಿಶ್ರಮದಿಂದ ಗಳಿಸಿದ ಹಣವನ್ನು ಒಂದು ಪಕ್ಷ, ಒಂದು ಕುಟುಂಬದ ಖರ್ಚು ಭರಿಸಲು ಪೂರೈಸಲಾಗುತ್ತಿದೆ. ಕರ್ನಾಟಕದ ಆರ್ಥಿಕ ಸ್ಥಿತಿ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಅರಾಜಕತೆ ಸೃಷ್ಟಿಯಾಗುತ್ತಿದೆ' ಎಂದು ದೂರಿದರು.

6ನೇ ಪುಟ ನೋಡಿ

ಕಲಬುರಗಿಯ ಎನ್‌.ವಿ. ಮೈದಾನದಲ್ಲಿ ಶನಿವಾರ ನಡೆದ 'ಮತ್ತೊಮ್ಮೆ ಮೋದಿ ಸಂಕಲ್ಪ ಸಮಾವೇಶ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಜನರತ್ತ ಕೈ ಬೀಸಿದರು. ಬಿ.ವೈ. ವಿಜಯೇಂದ್ರ, ಭಗವಂತ ಖೂಬಾ, ಬಸವರಾಜ ಮತ್ತಿಮಡು, ಬಿ.ಎಸ್‌. ಯಡಿಯೂರಪ್ಪ, ಶರಣು ಸಲಗರ, ಆರ್‌. ಅಶೋಕ ಹಾಜರಿದ್ದರು
—ಪ್ರಜಾವಾಣಿ ಚಿತ್ರ /ತಾಜುದ್ದೀನ್ ಆಜಾದ್

ಕಾಂಗ್ರೆಸ್‌ನಿಂದ ಮತ್ತೆ 2 'ಗ್ಯಾರಂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತಸೆಳೆಯಲು 'ಶ್ರಮಿಕ ನ್ಯಾಯ' ಹಾಗೂ 'ಹಿಸ್ಸೇದಾರಿ (ಭಾಗಿದಾರರ) ನ್ಯಾಯ' ಎಂಬ ಎರಡು ಹೊಸ ಗ್ಯಾರಂಟಿಗಳನ್ನು ಕಾಂಗ್ರೆಸ್ ಪಕ್ಷ ಶನಿವಾರ ಘೋಷಿಸಿದೆ.

'ರೈತ ನ್ಯಾಯ', 'ಯುವ ನ್ಯಾಯ' ಮತ್ತು 'ನಾರಿ ನ್ಯಾಯ' ಗ್ಯಾರಂಟಿಗಳನ್ನು ಪಕ್ಷವು ಈಗಾಗಲೇ ಘೋಷಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ಸುದ್ದಿಗೋಷ್ಠಿಯಲ್ಲಿ ಎರಡು ಹೊಸ ಗ್ಯಾರಂಟಿಗಳನ್ನು ಘೋಷಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಈ ಎಲ್ಲ ಐದು ಗ್ಯಾರಂಟಿಗಳಲ್ಲಿ ತಲಾ ಐದು ಅಂಶಗಳ ಒಟ್ಟು 25 ಅಂಶಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುತ್ತೇವೆ' ಎಂದು ಭರವಸೆ ನೀಡಿದರು.

'ಶ್ರಮಿಕ ನ್ಯಾಯ'– 5 ಭರವಸೆಗಳು:

- ನರೇಗಾ ಯೋಜನೆ ಅಡಿಯಲ್ಲಿ ದಿನಗೂಲಿ ಮೊತ್ತ ₹400ಕ್ಕೆ ಏರಿಕೆ ಮಾಡಲಾಗುತ್ತದೆ
- ಕಾರ್ಮಿಕರಿಗೆ ಆರೋಗ್ಯ ಹಕ್ಕು ಜಾರಿಗೆ ತಂದು ಉಚಿತ ಔಷಧಿ, ಚಿಕಿತ್ಸೆ, ರೋಗಪತ್ತೆ, ಶಸ್ತ್ರಚಿಕಿತ್ಸೆ ಸೌಲಭ್ಯ ನೀಡಲಾಗುತ್ತದೆ

6ನೇ ಪುಟ ನೋಡಿ

'ಖರ್ಗೆ ಸ್ಪರ್ಧೆ: ರಾಜ್ಯ ನಾಯಕರ ತೀರ್ಮಾನ'

'ನಾನು ಸ್ಪರ್ಧಿಸಬೇಕೇ ಬೇಡವೇ? ಎನ್ನುವುದನ್ನು ಸ್ಥಳೀಯ ನಾಯಕರು ತೀರ್ಮಾನಿಸುತ್ತಾರೆ. ಆ ಬಗ್ಗೆ ಆಮೇಲೆ ನೋಡೋಣ' ಎಂದು ಖರ್ಗೆ ಹೇಳಿದರು.

'ನಿಮ್ಮ ಸ್ಪರ್ಧೆ ಎಲ್ಲಿಂದ?' ಎಂಬ ಪ್ರಶ್ನೆಗೆ, ರಾಜ್ಯದ ಮಟ್ಟಿಗೆ ರಾಜ್ಯ ನಾಯಕರೇ ನಿರ್ಣಯ ಮಾಡಬೇಕು' ಎಂದರು.

'ಈ ಚುನಾವಣೆಯಲ್ಲಿ ನಾವು (ಕಾಂಗ್ರೆಸ್) 'ಇಂಡಿಯಾ' ಮೈತ್ರಿಕೂಟದಡಿ ಸ್ಪರ್ಧಿಸುತ್ತೇವೆ. ಕೆಲವು ರಾಜ್ಯಗಳಲ್ಲಿ ಸೀಟು ಹಂಚಿಕೆಯಾಗಿದೆ' ಎಂದು ಹೇಳಿದರು. 'ತಮಿಳುನಾಡಿನಲ್ಲಿ ನಾವು 10 ಸೀಟು ಪಡೆದಿದ್ದೇವೆ. ದೆಹಲಿಯಲ್ಲಿ ಆಪ್ ಜೊತೆ ಒಪ್ಪಂದ ಆಗಿದೆ. ಉತ್ತರಪ್ರದೇಶದಲ್ಲೂ ಒಪ್ಪಂದ ಮಾಡಿಕೊಂಡಿದ್ದೇವೆ. ಮಹಾರಾಷ್ಟ್ರದಲ್ಲಿ 19 ಸೀಟು ಗೆಲ್ಲುವ ವಿಶ್ವಾಸವಿದೆ. ಕೆಲವು ಕಡೆ ಸ್ವಲ್ಪ ಸಮಸ್ಯೆ ಇದೆ. ಅದನ್ನು ಸರಿಪಡಿಸಿಕೊಳ್ಳುತ್ತೇವೆ' ಎಂದರು.

ಅಪಾರ್ಟ್‌ಮೆಂಟ್‌ಗಳಲ್ಲಿ ಮಳೆನೀರು ಮರುಪೂರಣ ಪದ್ಧತಿ ಅಳವಡಿಕೆ ಪ್ರೋತ್ಸಾಹಿಸಲು ಜಲಮಂಡಳಿ ಕ್ರಮ

ಮರುಪೂರಣ: ಗ್ರೀನ್ ಸ್ಟಾರ್ ರೇಟಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನೀರು ಮರುಪೂರಣ ಪದ್ಧತಿ ಅಳವಡಿಸಿಕೊಳ್ಳುವುದನ್ನು ಪ್ರೋತ್ಸಾಹಿಸಲು ಅಪಾರ್ಟ್‌ಮೆಂಟ್, ವಾಣಿಜ್ಯ ಮಳಿಗೆ, ಕೈಗಾರಿಕೆಗಳಿಗೆ 'ಗ್ರೀನ್ ಸ್ಟಾರ್ ರೇಟಿಂಗ್' ನೀಡುವ ನಿಟ್ಟಿನಲ್ಲಿ ಚಿಂತಿಸಲಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಶನಿವಾರ ಆಯೋಜಿಸಿದ್ದ 'ಸೌತ್ ಜೋನ್' ಸಭೆಯಲ್ಲಿ ಅವರು ನಿವಾಸಿಗಳೊಂದಿಗೆ ಸಂವಾದ ನಡೆಸಿದರು.

'ನಗರ 15 ವರ್ಷಗಳಲ್ಲಿ 50 ವರ್ಷಗಳ ಬೆಳವಣಿಗೆಯನ್ನು ಕಂಡಿದೆ. 1.40 ಕೋಟಿಯಷ್ಟು ಜನಸಂಖ್ಯೆಗೆ ಪ್ರತಿ ದಿನ 145 ಕೋಟಿ ಲೀಟರ್‌ಗಳಷ್ಟು ಕಾವೇರಿ ನೀರು ಒದಗಿಸುತ್ತಿದ್ದೇವೆ. ಇದಲ್ಲದೇ ಬೋರ್‌ವೆಲ್‌ಗಳ ಮೂಲಕ ಜನರು ನೀರಿನ ಅಗತ್ಯವನ್ನು ಪೂರೈಸಿಕೊಳ್ಳುತ್ತಿದ್ದರು. ಆದರೆ ಅಂತರ್ಜಲ ಮಟ್ಟ ಕುಸಿತವಾಗಿರುವುದರಿಂದ ಅವರೆಲ್ಲರೂ ಕಾವೇರಿ ನೀರಿನ ಮೇಲೆ ಅವಲಂಬಿತರಾಗಿದ್ದಾರೆ. ಇದರಿಂದ ನಮ್ಮ ವಿತರಣಾ ವ್ಯವಸ್ಥೆಯ ಮೇಲೆ ಒತ್ತಡ ಬಿದ್ದಿದೆ' ಎಂದರು.

'ಭವಿಷ್ಯದ ಅನುಕೂಲಕ್ಕಾಗಿ, ನಗರದಲ್ಲಿ ಬೀಳುವ ಮಳೆಯ ನೀರನ್ನು ಇಂಗುವಂತೆ ಮಾಡುವುದು ಬಹಳ ಅಗತ್ಯ. ಮಳೆ ನೀರು ಮರುಪೂರಣ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳದೆ ಇರುವುದರಿಂದ ಮಳೆ

ಸಂದರ್ಭದಲ್ಲಿ ನಮ್ಮ ಒಳಚರಂಡಿಗಳ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಇದರಿಂದ ಪ್ರವಾಹ ಪರಿಸ್ಥಿತಿಯೂ ಉಂಟಾಗುತ್ತಿದೆ' ಎಂದರು.

'ಹಲವಾರು ಅಪಾರ್ಟ್‌ಮೆಂಟ್‌ಗಳಲ್ಲಿ ಮಳೆ ನೀರು ಮರುಪೂರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಅಳವಡಿಕೆಯಾಗಿಲ್ಲ. ಈ ಪದ್ಧತಿ ಅಳವಡಿಕೆಯಿಂದ ಜಲಕ್ಷಾಮ ಉಂಟಾಗುವುದಿಲ್ಲ. ಅದಕ್ಕಾಗಿ ಅಪಾರ್ಟ್‌ಮೆಂಟ್‌ಗಳಿಗೆ ಅವುಗಳ ಮಳೆ ಮರುಪೂರಣ ವ್ಯವಸ್ಥೆಯ ಆಧಾರದ ಮೇಲೆ 'ಗ್ರೀನ್ ಸ್ಟಾರ್ ರೇಟಿಂಗ್' ನೀಡಲು ಜಲಮಂಡಳಿ ಚಿಂತನೆ ನಡೆಸಿದೆ' ಎಂದರು.

'ಅಪಾರ್ಟ್‌ಮೆಂಟ್‌ಗಳಲ್ಲಿ ತ್ಯಾಜ್ಯ ಸಂಸ್ಕರಿಸಿದ ನೀರನ್ನು ಬೇರೆಯವರಿಗೆ ನೀಡಲು ಅನುಮತಿ ಕೊಡಲಾಗುತ್ತದೆ. ಮುಖ್ಯಮಂತ್ರಿಯವರು ಆಯವ್ಯಯದಲ್ಲಿ ಈ ಬಗ್ಗೆ ಪ್ರಕಟಿಸಿದ್ದಾರೆ. ಏಪ್ರಿಲ್ 1ರಂದು ಅಧಿಕೃತವಾಗಿ ಸುತ್ತೋಲೆ ಹೊರಡಿಸಲಾಗುವುದು' ಎಂದು ನಿವಾಸಿಗಳ ಪ್ರಶ್ನೆಗೆ ಉತ್ತರಿಸಿದರು.

ಸಂವಾದದಲ್ಲಿ ಫೆಡರೇಷನ್‌ನ ಅಧ್ಯಕ್ಷ ಅರುಣ್‌ಕುಮಾರ್, ಉಪಾಧ್ಯಕ್ಷ ಸತೀಶ್ ಮಲ್ಯ ಉಪಸ್ಥಿತರಿದ್ದರು.

ನೀರು ಪೂರೈಕೆ ವ್ಯವಸ್ಥೆ ಪರಿಶೀಲನೆ

ಬೆಂಗಳೂರು: ಜನರಿಗೆ ಕುಡಿಯುವ ನೀರು ಸಮಸ್ಯೆಯಾಗದಂತೆ ಹಾಗೂ ಪ್ರದೇಶಗಳಲ್ಲಿರುವ ಜನಸಂಖ್ಯೆ ಆಧಾರದ ಮೇಲೆ ನೀರು ಸರಬರಾಜು ಮಾಡಲು ಜಲಮಂಡಳಿ ಅಧಿಕಾರಿಗಳಿಗೆ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಸೂಚಿಸಿದರು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಬಂಡೆಪಾಳ್ಯ ಗ್ರಾಮದಲ್ಲಿ ಶನಿವಾರ ಉಚಿತ ನೀರು ಸರಬರಾಜು ವ್ಯವಸ್ಥೆಯನ್ನು ಪರಿಶೀಲಿಸಿ ಅವರು ಮಾತನಾಡಿದರು.

ಗ್ರಾಮಸ್ಥರೊಂದಿಗೆ ಮಾತನಾಡಿದ ಅವರು, ನೀರಿನ ಸರಬರಾಜು, ಲಭ್ಯತೆ ಹಾಗೂ ನೀರಿನ ಗುಣಮಟ್ಟದ ಬಗ್ಗೆ ಮಹಿಳೆಯರಿಂದ ಮಾಹಿತಿ ಪಡೆದುಕೊಂಡರು.

ಕೆಲವು ಮಹಿಳೆಯರು, 'ಇನ್ನಷ್ಟು ನೀರಿನ ಪೂರೈಕೆ ಮಾಡಬೇಕು' ಎಂದು ಮನವಿ ಮಾಡಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಅಧ್ಯಕ್ಷರು, 'ಜನಸಾಂದ್ರತೆ ಹೆಚ್ಚಿರುವ ಪ್ರದೇಶಗಳಲ್ಲಿ ಹೆಚ್ಚಿನ ಟ್ಯಾಂಕ್‌ಗಳನ್ನು ಅಳವಡಿಸಬೇಕು. ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಟ್ಯಾಂಕ್‌ಗಳಿಗೆ ನೀರು ತುಂಬಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಟ್ಯಾಂಕರ್ ಮೇಲೆ ಸ್ಟಿಕ್ಕರ್ ಇಲ್ಲ': ಜಲಮಂಡಳಿಯ ಅಧ್ಯಕ್ಷ ರಾಮಪ್ರಸಾತ್ ಮನೋಹರ್ ಅವರು ಬಂಡೆಪಾಳ್ಯದಲ್ಲಿ ನೀರಿನ ವಿತರಣೆಯ ಬಗ್ಗೆ ಪರಿಶೀಲನೆ ನಡೆಸುತ್ತಿದ್ದ ಸಂದರ್ಭದಲ್ಲಿ ಉಚಿತ ನೀರಿನ ಟ್ಯಾಂಕರ್ ಮೇಲೆ ಸ್ಟಿಕ್ಕರ್ ಅಂಟಿಸದಿರುವ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. 'ಜಲಮಂಡಳಿ ವತಿಯಿಂದ ಉಚಿತವಾಗಿ ನೀರು ಸರಬರಾಜು ಮಾಡುತ್ತಿರುವ ಟ್ಯಾಂಕರ್ ಮೇಲೆ ಸ್ಟಿಕ್ಕರ್ ಅಂಟಿಸುವುದು ಕಡ್ಡಾಯ. ಈ ಬಗ್ಗೆ ಸೂಚನೆ ನೀಡಲಾಗಿದ್ದರೂ ಪಾಲಿಸದಿರುವುದು ಲೋಪ. ಸ್ಟಿಕ್ಕರ್ ಇಲ್ಲದಿದ್ದರೆ ನೀರಿನ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ. ಅಧಿಕಾರಿಗಳು ಕೂಡಲೇ ಸ್ಟಿಕರ್ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಬೊಮ್ಮನಹಳ್ಳಿಯ ಬಂಡೆಪಾಳ್ಯ ಗ್ರಾಮಕ್ಕೆ ಶನಿವಾರ ಭೇಟಿದ್ದ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು ಸ್ಥಳೀಯ ಮಹಿಳೆಯರೊಂದಿಗೆ ನೀರಿನ ಪೂರೈಕೆ ಬಗ್ಗೆ ಚರ್ಚೆ ನಡೆಸಿದರು.

'1,700 ಟ್ಯಾಂಕರ್ ನೋಂದಣಿ'

'ನೀರಿನ ಟ್ಯಾಂಕರ್‌ಗಳನ್ನು ನೋಂದಾಯಿಸಿಕೊಳ್ಳಲು ನೀಡಲಾಗಿದ್ದ ಗಡುವು ಮುಕ್ತಾಯವಾಗಿದ್ದು, 1,700 ಟ್ಯಾಂಕರ್‌ಗಳು ನೋಂದಣಿ ಮಾಡಿಕೊಂಡಿವೆ' ಎಂದು ರಾಮಪ್ರಸಾತ್ ಮನೋಹರ್ ಮಾಹಿತಿ ನೀಡಿದರು.

'ನೋಂದಣಿಗೊಂಡ ಟ್ಯಾಂಕರ್‌ಗಳ ಮೇಲೆ ನಿಗದಿತ ಸ್ಟಿಕ್ಕರ್ ಅಳವಡಿಸಲಾಗುವುದು. ಪ್ರತಿಯೊಂದಕ್ಕೂ ವಿಶೇಷ ಸಂಖ್ಯೆಯನ್ನು ನೀಡಲಾಗುವುದು. ಜಿಲ್ಲಾಡಳಿತ ನಿಗದಿ ಮಾಡಿರುವ ದರಪಟ್ಟಿ ಹಾಗೂ ದೂರು ಸಂಖ್ಯೆಯನ್ನೂ ಟ್ಯಾಂಕರ್ ಮೇಲೆ ನಮೂದಿಸಲಾಗುವುದು' ಎಂದು ಹೇಳಿದರು.

DH ಎಡ್ಯುವರ್ಸ್ ಪ್ರಜಾವಾಣಿ

ಸಿಇಟಿ ಮತ್ತು ನೀಟ್ ಮಾದರಿ ಪರೀಕ್ಷೆಗಳಿಗೆ ಈಗಲೇ ನೋಂದಣಿ ಮಾಡಿಕೊಳ್ಳಿ ಮತ್ತು ಟಾಪರ್‌ಗಳು ಬಹುಮಾನ ಗೆಲ್ಲಿರಿ!

ಟೆಲಿವಿಷನ್ ಪಾಲುದಾರರು NEWS 1st ನಿರ್ಭೀತಿಯಿಂದ.. ನಿಮ್ಮಪರವಾಗಿ | ಕೋಡ್ ಸ್ಕ್ಯಾನ್ ಮಾಡಿ | ಪ್ರಾಯೋಜಕರು AD6 advertising A Unit of Sri Sairam Enterprises

ಬೆಂಗಳೂರು: 06-07 ಏಪ್ರಿಲ್, 2024 | ತ್ರಿಪುರವಾಸಿನಿ, ಅರಮನೆ ಮೈದಾನ

ಮಂತ್ರಿ ಮಾಲ್‌ಗೆ ಬೀಗ

ಬೆಂಗಳೂರು: ಆಸ್ತಿ ತೆರಿಗೆ ಪಾವತಿಸದ ಮಂತ್ರಿ ಮಾಲ್‌ಗೆ ಬಿಬಿಎಂಪಿ ಅಧಿಕಾರಿಗಳು ಶನಿವಾರ ಬೀಗ ಹಾಕಿದರು.

ಬಿಬಿಎಂಪಿಗೆ 5 ವರ್ಷಗಳಿಂದ ₹ 40 ಕೋಟಿ ತೆರಿಗೆ ಬಾಕಿ ಉಳಿಸಿ ಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟರ್ಫ್ ಕ್ಲಬ್: ₹ 5.15 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಬೆಂಗಳೂರು ಟರ್ಫ್ ಕ್ಲಬ್‌ಗೂ ಬೀಗ ಹಾಕಲು ಬಿಬಿಎಂಪಿ ಅಧಿಕಾರಿಗಳು ಪ್ರಯತ್ನಿಸಿದರು.

ಹೈಕೋರ್ಟ್‌ನಿಂದ ತಂದಿರುವ ಮಧ್ಯಂತರ ತಡೆಯಾಜ್ಞೆ ಯನ್ನು ಟರ್ಫ್ ಕ್ಲಬ್‌ನವರು ತೋರಿಸಿ ದ್ದರಿಂದ ಬಿಬಿಎಂಪಿ ಅಧಿಕಾರಿಗಳು ವಾಪಸ್ ಆದರು.

ಮುಂಬೈ ರೇಸ್

ದಿ ಪ್ಯಾಂಥರ್ ಗೆಲ್ಲುವ ನಿರೀಕ್ಷೆ

ಶಪೂರ್ಜಿ ಪಲ್ಲೊಂಜಿ ಬ್ರೀಡರ್ಸ್ ಜುವೆನೈಲ್ ಕೋಲ್ಟ್ಸ್ ಚಾಂಪಿಯನ್‌ಶಿಪ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ದಿ ಪ್ಯಾಂಥರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4:30ಕ್ಕೆ ಪ್ರಾರಂಭವಾಗಲಿರುದ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜಿಯೊಗ್ರಾಫಿಕ್ 1, ವಿನ್ಸೆಂಟ್ ವ್ಯಾನ್ ಗೋಗ್ 4
2ನೇ ರೇಸ್: ಫಾಸ್ಟ್ ಅಪ್ರೋಚ್ 2, ಸೆಲೆಸ್ಟಿಯಲ್ 1, ಟ್ರಿಗ್ಗರ್ 11
3ನೇ ರೇಸ್: ದಿ ಪ್ಯಾಂಥರ್ 3, ಡೆಸರ್ಟ್ ಕ್ಲಾಸಿಕ್ 4, ಡಿವೈನ್ ಹೋಪ್ 5
4ನೇ ರೇಸ್: ರನ್ನಿಂಗ್ ಸ್ಟಾರ್ 2, ಅರ್ಥ್ 1, ಸ್ಪ್ಯಾನಿಶ್ ಐಸ್ 3
5ನೇ ರೇಸ್: ಬಬ್ಲಿ ಬಾಯ್ 2, ರಫೆಲ್ಲೊ 1, ಜ್ಯಾಂಗೊ 4
6ನೇ ರೇಸ್: ವಾಲ್ಟರ್ 1, ಪ್ರಿನ್ಸ್ ಓ ವಾರ್ 4, ಎಸ್‌ಫೆರ್ 5
7ನೇ ರೇಸ್: ಅಬ್ರಿಟೇಜ್ 4, ರಿಸ್ಟ್ರೆಟ್ಟೊ 6, ಗಾಡೆಸ್ ಆಫ್ ಡಾಪನ್ 2

ಉತ್ತಮ ಬೆಟ್: ಬಬ್ಲಿ ಬಾಯ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ವೃದ್ಧನಿಗೆ 83 ವರ್ಷ ಜೈಲು

ಪಾಲಕ್ಕಾಡ್ (ಕೇರಳ) (ಪಿಟಿಐ): ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ವೃದ್ಧರೊಬ್ಬರಿಗೆ ಕೇರಳ ನ್ಯಾಯಾಲಯವು ಒಟ್ಟಾರೆಯಾಗಿ 83 ವರ್ಷ ಜೈಲು ಶಿಕ್ಷೆ ವಿಧಿಸಿ ಶನಿವಾರ ತೀರ್ಪು ನೀಡಿದೆ.

ಗರಿಷ್ಠ 40 ವರ್ಷಗಳವರೆಗೆ ಮಾತ್ರ ವ್ಯಕ್ತಿಯೊಬ್ಬರು ಜೈಲಿನಲ್ಲಿ ಇರಬಹುದಾಗಿರುವುದರಿಂದ ಈ ಪ್ರಕರಣದ ಅಪರಾಧಿಗೂ ಅದು ಅನ್ವಯವಾಗಲಿದೆ ಎಂದೂ ಹೇಳಿದೆ.

'ಅಪರಾಧಿ 65 ವರ್ಷದ ವೃದ್ಧ ತನ್ನ ಸಂಬಂಧಿ 16 ವರ್ಷದ ಬಾಲಕಿಗೆ ಆಕೆಯ ಮನೆಯಲ್ಲೇ ಪದೇ ಪದೇ ಲೈಂಗಿಕ ಕಿರುಕುಳ ನೀಡುತ್ತಿದ್ದ. ಈ ಬಗ್ಗೆ ಯಾರಿಗೂ ತಿಳಿಸದಂತೆ ಬೆದರಿಕೆ ಒಡ್ಡಿದ್ದ'. 'ಸಂತ್ರಸ್ತ ಬಾಲಕಿಯು ತನ್ನ ಮೇಲೆ ದೌರ್ಜನ್ಯವಾಗಿರುವ ಬಗ್ಗೆ ಶಿಕ್ಷಕಿಯೊಬ್ಬರಿಗೆ ತಿಳಿಸಿದ್ದಳು. ಬಳಿಕ ಮಕ್ಕಳ ಸೇವಾ ಇಲಾಖೆಯ ಅವರ ಮಾಹಿತಿಯ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು' ಎಂದು ಮಾಹಿತಿ ನೀಡಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 10/2024
ದಿನಾಂಕ: 11.03.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರಣೆ: ಒಂದು ಪೆಟ್ಟಿಗೆ ಮತ್ತು 24 ಸಲಕರಣೆಗಳು ಹಾಗೂ ಉಪಕರಣಗಳು ಒಂದು ಸೆಟ್‌ನೊಳಗೆ ಅಡಗಿರುವ ಹಾಗೆ ತುರ್ತು ವೈದ್ಯಕೀಯ ಪೆಟ್ಟಿಗೆ. (ಪರಿಮಾಣ: 10 ಸೆಟ್‌ಗಳು) (ಟೆಂಡರು ಸಂ. L8245363)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.04.2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

PUB/751/AAD/PRB/SWR/2023-24

South Western Railway - SWR | SWRRLY | SWRRLY

Government of India/ Ministry of Home Affairs
Office of the DIGP Group Centre CRPF
Yelahanka, Bengaluru-560064.

TENDER NOTICE

No. A.II-04/2024-25 GC BLR Bldg. Dated 16/03/2024

Sealed tenders for plucking of fruit from plants inside the CRPF Camp premises at Yelahanka, Bengaluru.

1. Mango - 269 Trees, 2. Jack fruit - 76 Trees,
3. Tamarind - 50 Trees, 4. Chiku - 181 Trees,
5. Jamun - 181 Trees, 6. Coconut - 53 Trees

Grand Total:- 810 Trees.

2. Sealed tender will be opened on **29/03/2024 at 1100 Hrs.** Willing Firm/Contractor can participate in the tender by depositing an earnest money of **Rs. 20,000/- only,** After the opening of the tender, the responsibility of taking care of the above trees will be of contractor/firm. The DIGP-Cum-Estate officer has reserves the right to cancel the tender without giving any reason.

3. The Tender forms, details of earnest money with terms and conditions may be obtained from Group Centre CRPF Yelahanka, Bengaluru-560064 **within 07 days** from the date of advertisement

Order By
DIGP, GC CRPF BENGALURU.

पंजाब नैशनल बैंक ...भरोसे का प्रतीक ! | punjab national bank ...the name you can BANK upon !

ವಲಯ ಶಾಸ್ತ್ರ ಕೇಂದ್ರ, ಗುವಾಹಟಿ
ಹೆಮ್ ಬರುವಾ ರಸ್ತೆ, ಪನ್‌ಬಜಾರ್, ಗುವಾಹಟಿ, ಅಸ್ಸಾಂ-781001
ಇಮೇಲ್ : zs8346@pnb.co.in

ಸ್ವಾಧೀನತೆ ಸೂಚನೆ [ನಿಯಮ 8(1)]
ಸಾಲಗಾರರೊಬ್ಬರ ಸ್ಥಿರಾಸ್ತಿ ಸ್ವಾಧೀನತೆ ಬಗ್ಗೆ ಸೂಚನೆ (ಸ್ಥಿರಾಸ್ತಿಗೆ)

ಕೆಳಸಹಿದಾರರು ಪಂಜಾಬ್ ನ್ಯಾಷನಲ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ಮತ್ತು ಸೆಕ್ಷನ್ 13(12)ರ ನಿಯಮ 3 ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರಂತೆ ಅನ್ವಯ ಸಾಲಗಾರ/ಜಾಮೀನುದಾರ/ಅಡಮಾನದಾರರಾದ ಮೆ॥ **ನಾರ್ತ್ ಈಸ್ಟ್ ರೀಜನ್ ಫಿನ್‌ಸರ್ವಿಸಸ್ ಲಿ., ಶ್ರೀ ಕೇಶಿಂಗ್ ಜೇಮ್ಸ್ ಲಾಲ್‌ರಾಂಗ್‌ಬಾಲ್, ಶ್ರೀಮತಿ ಲಾಲ್ ರೆಮ್‌ಸಿಮ್, ಶ್ರೀ ಕೆ ಅಶಾಂಗ್ ಏವಾನ್, ಶ್ರೀ ರಾಮ್ ಲಾಲ್ ಕೇತ್ರಿ ಮತ್ತು ಮೆ॥ ಹಿಲ್ ಪ್ಯಾರಡೈಸ್ ಇಂಟರ್‌ನ್ಯಾಷನಲ್ ಹೋಟೆಲ್ಸ್ ಲಿ.,** ಇವರುಗಳಿಗೆ 14.10.2016 ರಂದು ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸಿನಲ್ಲಿ ತಿಳಿಸಿರುವಂತೆ 30.09.2016ರ ವರೆಗೆ **ಬಾಕಿ ಮೊತ್ತ ರೂ.116,99,59,237.00** (ನೂರ ಹದಿನಾರು ಕೋಟಿ ತೊಂಭತ್ತೊಂಭತ್ತು ಲಕ್ಷ ಐವತ್ತೊಂಭತ್ತು ಸಾವಿರದ ಇನ್ನೂರ ಮೂವತ್ತೇಳು ರೂಪಾಯಿಗಳು ಮಾತ್ರ) ವನ್ನು ಈ ನೋಟೀಸ್ ನೀಡಿದ/ನೋಟೀಸ್ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ನಿರ್ದಿಷ್ಟವಾಗಿ ಸಾಲಗಾರರು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಸೆಕ್ಷನ್ 13 ರ ಸಬ್ ಸೆಕ್ಷನ್ (4)ರ ನಿಯಮ 8ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) 2002ರ ನಿಯಮಗಳ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾರ್ಚ್ 14,2024ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತಿನ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ಇವರಿಗೆ ಬರಬೇಕಾದ ಬಾಕಿ ಹಣ 30.09.2016ರವರೆಗೆ ಬಾಕಿ ಮೊತ್ತ ರೂ.116,99,59,237.00 ಮತ್ತು ನಂತರದ ಬಡ್ಡಿಯನ್ನು ಪಾವತಿಸುವುದಕ್ಕೆ ಒಳಪಡುತ್ತದೆ.

ಸಾಲಗಾರರ/ಜಾಮೀನುದಾರರ ಮತ್ತು ಅಡಮಾನದಾರರ ಗಮನಕ್ಕೆ ತರಲು ಬಯಸುವುದೇನೆಂದರೆ, ಸೆಕ್ಷನ್ 13 ರ ಸಬ್ ಸೆಕ್ಷನ್ (8) ಕಾಯಿದೆ ಅನ್ವಯ ಬಾಕಿ ಉಳಿದಿರುವ ಕಾಲಾವಕಾಶದಲ್ಲಿ ನೀವು ಭದ್ರತಾ ಆಸ್ತಿಗಳನ್ನು ಮರುಪಡೆದುಕೊಳ್ಳಬಹುದಾಗಿದೆ.

ಸ್ಥಿರಾಸ್ತಿಯ ವಿವರ:

ಇಎಂ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಮೂರು ಬೆಡ್ ರೂಂಗಳ ಅಪಾರ್ಟ್‌ಮೆಂಟ್ ಫ್ಲ್ಯಾಟ್ ನಂ. ಜಿ–1, ನೆಲ ಮಹಡಿಯ ಬಹುಮಹಡಿ ಕಟ್ಟಡವನ್ನು ಸಲಾರ್‌ಪುರಿಯ ಲಾವಣ್ಯ ರೆಸಿಡೆನ್ಸಿ ಎಂದು ಕರೆಯಲಾಗುತ್ತಿದ್ದು, ಸೂಪರ್ ಬಿಲ್ಟಪ್ ಪ್ರದೇಶ 2750 ಚ.ಅಡಿ ಜೊತೆಗೆ ತಳಮಹಡಿಯಲ್ಲಿ ಒಂದು ಕಾರು ನಿಲುಗಡೆಗೆ ಸ್ಥಳಾವಕಾಶವಿದ್ದು, ಮತ್ತು 580ಅ.ಡಿಗಳ ಉದ್ಯಾನವನ ಪ್ರದೇಶವಿದ್ದು, ಒಟ್ಟಾಗಿ 15% (1365ಚ.ಅಡಿ)ಗಳ ಪಾಲು ಮಾಡಲಾಗದ ಪಾಲು, ಹಕ್ಕು, ಟೈಟಲ್ ಮತ್ತು ಹಿತಾಸಕ್ತಿಗಳು ಆಸ್ತಿಯಲ್ಲಿದ್ದು, ಇದರ ಮುನ್ಸಿಪಲ್ ನಂ. 5, (ಹಳೆ ನಂ. 6, ಪಾಮ್‌ಗ್ರೂವ್ ರಸ್ತೆ, ವಾರ್ಡ್ ನಂ.76, ಬೆಂಗಳೂರು ಇಲ್ಲಿದ್ದು, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 130 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 70 ಅಡಿ, ಒಟ್ಟು ವಿಸ್ತೀರ್ಣ 9100 ಚ.ಅಡಿಯು ಶ್ರೀ ಕೇಶಿಂಗ್ ಜೇಮ್ಸ್ ಬಿನ್ ಲೇಟ್ ಕೆ ಲೂಯಿಸ್ ರವರ ಮಾಲೀಕತ್ವದಲ್ಲಿದೆ ಮತ್ತು **ಚಕ್ಕುಬಂದಿ:** ಉತ್ತರಕ್ಕೆ: ಆವರಣ ಸಂ. 4, ಪಾಮ್ ಗ್ರೂವ್ ರಸ್ತೆ, ದಕ್ಷಿಣಕ್ಕೆ: ಆವರಣ ಸಂ. 6, ಪಾಮ್ ಗ್ರೂವ್ ರಸ್ತೆ, ಪೂರ್ವಕ್ಕೆ: ವಿಕ್ಟೋರಿಯಾ ರಸ್ತೆ ಲೇಔಟ್, ಪಶ್ಚಿಮಕ್ಕೆ: ಪಾಮ್ ಗ್ರೂವ್ ರಸ್ತೆ. (ಈ ವಿವರಣೆಯು ಕ್ರಯ ಪತ್ರ ಸಂ, 3091/2002 ದಿನಾಂಕ 26.09.2002)

ಸ್ಥಳ : ಬೆಂಗಳೂರು | ಸಹಿ/–
ದಿ: 14.03.2024 | ಅಧಿಕೃತ ಅಧಿಕಾರಿ, ಪಂಜಾಬ್ ನ್ಯಾಷನಲ್ ಬ್ಯಾಂಕ್

ಬಿಜೆಪಿಯ ಬ್ಯಾಂಕ್ ಖಾತೆ ಸ್ಥಗಿತಗೊಳಿಸಿ: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಪ್ರೀಂ ಕೋರ್ಟ್ ಉನ್ನತಾಧಿಕಾರದ ಸಮಿತಿಯನ್ನು ರಚಿಸಿ ಚುನಾವಣಾ ಬಾಂಡ್ ಹಗರಣದ ತನಿಖೆ ನಡೆಸಬೇಕು. ಅಲ್ಲಿಯವರೆಗೆ ಬಿಜೆಪಿಯ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಚುನಾವಣಾ ಬಾಂಡ್ ಎನ್ನುವುದು ಬಿಜೆಪಿಯ ಕೈಯಲ್ಲಿರುವ ರಾಜಕೀಯ ಸುಲಿಗೆಯ ಬ್ರಹ್ಮಾಸ್ತ್ರವೇ' ಎಂದು ಪ್ರಶ್ನಿಸಿರುವ ಸಿದ್ದರಾಮಯ್ಯ, 'ಸಂಪೂರ್ಣ ಮಾಹಿತಿ ನೀಡಲು ಎಸ್‌ಬಿಐ ಯಾಕೆ ಹಿಂಜರಿಯುತ್ತಿದೆ? ಚುನಾವಣಾ ಬಾಂಡ್‌ಗಳ ಮಾರಾಟ ಮತ್ತು ಖರೀದಿ ವ್ಯವಹಾರ ಕಾನೂನುಬದ್ಧವಾಗಿ ನಡೆದಿದ್ದರೆ ಮಾಹಿತಿ ಮುಚ್ಚಿಡಲು ಯಾಕೆ ಪ್ರಯತ್ನಿಸುತ್ತಿದೆ, ಒತ್ತಡ ಹೇರುತ್ತಿರುವವರು ಯಾರು ಎನ್ನುವ ಪ್ರಶ್ನೆಗಳಿಗೆ ಪ್ರಧಾನಿ ಉತ್ತರಿಸಬೇಕು' ಎಂದಿದ್ದಾರೆ.

'ಅತಿ ದೊಡ್ಡ ಭ್ರಷ್ಟಾಚಾರ ಹಗರಣವಾಗಿ ಹೊರಹೊಮ್ಮುತ್ತಿರುವ ಚುನಾವಣಾ ಬಾಂಡ್ ಸುಲಿಗೆ ಬಗ್ಗೆ ಬಿಜೆಪಿ ಯಾಕೆ ಮೌನವಾಗಿದೆ? ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣ ತಂದು ಜನರಿಗೆ ಹಂಚುತ್ತೇವೆ, ನೋಟ್ ಅಮಾನ್ಯ ಮಾಡಿ ಕಪ್ಪುಹಣದ ಮೂಲೋತ್ಪಾಟನೆ ಮಾಡುತ್ತೇವೆ, ದೇಶದ ಸಂಪತ್ತಿಗೆಲ್ಲ ನಾನೇ ಚೌಕಿದಾರ ಎಂದೆಲ್ಲ ಹೇಳಿ 10 ವರ್ಷಗಳಿಂದ ಅಧಿಕಾರದಲ್ಲಿರುವ ಮೋದಿಯವರೇ ಕನಿಷ್ಠ ಚುನಾವಣಾ ಬಾಂಡ್ ಹಗರಣ ಬಗ್ಗೆಯಾದರೂ ಉತ್ತರಿಸಿ' ಎಂದು ಒತ್ತಾಯಿಸಿದ್ದಾರೆ.

'ಉದ್ಯಮಿಗಳ ಮೇಲೆ ನಡೆದಿರುವ ಐ.ಟಿ, ಇ.ಡಿ, ಸಿಬಿಐ ದಾಳಿಗಳ ದಿನಾಂಕ ಮತ್ತು ಆ ಉದ್ಯಮಿಗಳು ಚುನಾವಣಾ ಬಾಂಡ್‌ಗಳನ್ನು ಖರೀದಿಸಿರುವ ದಿನಾಂಕಗಳನ್ನು ನೋಡಿದರೆ ಇದೊಂದು ಪಕ್ಕಾ ಬ್ಲ್ಯಾಕ್‌ಮೇಲ್ ಹಗರಣದಂತೆ ಕಾಣುತ್ತಿದೆ' ಎಂದೂ ಹೇಳಿದ್ದಾರೆ.

ಪ್ರಶಸ್ತಿ ಸಂಗೀತ ಪೋಷಕ ದಿವಂಗತ ಎಸ್.ವಿ. ನಾರಾಯಣಸ್ವಾಮಿ ರಾವ್ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್ ಹಮ್ಮಿಕೊಂಡಿರುವ 'ಎಸ್.ವಿ. ನಾರಾಯಣಸ್ವಾಮಿ ರಾವ್ ವಾರ್ಷಿಕ ಪ್ರಶಸ್ತಿ ಪ್ರದಾನ' ಸಮಾರಂಭದ ಪ್ರಯುಕ್ತ ನೆಟ್ಟಿಗೆರೆಯಲ್ಲಿ ಶನಿವಾರ ಸಂಗೀತೋತ್ಸವ ನಡೆಯಿತು. ಉದ್ಯಮಿ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಕಲಾವಿಮರ್ಶಕ ಎಂ. ಸೂರ್ಯಪ್ರಸಾದ್, ಮೃದಂಗ ವಾದಕ ಯೆಲ್ಲಾ ವೆಂಕಟೇಶ್ವರ ರಾವ್, ಪಿಟೀಲು ವಾದಕ ಮೈಸೂರು ಮಂಜುನಾಥ್, ಮಂಡಳಿ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ರಾಮಪ್ರಸಾದ್, ಖಂಜಿರ ವಾದಕ ಜಿ. ಗುರುಪ್ರಸನ್ನ ಪಾಲ್ಗೊಂಡಿದ್ದರು

'ದೇವೇಗೌಡರು ಸುಳ್ಳನ್ನು ಸತ್ಯವೆಂದು ಬಿಂಬಿಸುತ್ತಿದ್ದಾರೆ'

ಬೆಂಗಳೂರು: 'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಸುಳ್ಳನ್ನು ಸತ್ಯವೆಂದು ಬಿಂಬಿಸಲು ಹೊರಟಿದ್ದಾರೆ. ಮೋದಿ ಪ್ರಧಾನಿಯಾದರೆ ದೇಶ ಬಿಡುತ್ತೇನೆ ಎಂದವರು ಈಗ ಮೋದಿಯನ್ನು ವಿಶ್ವ ಗುರು, ಅವತಾರ ಪುರುಷ ಎಂದು ಕೊಂಡಾಡುತ್ತಿದ್ದಾರೆ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶಿವಣ್ಣ ವ್ಯಂಗ್ಯವಾಡಿದ್ದಾರೆ.

'ಸಿದ್ದರಾಮಯ್ಯ ಅವರನ್ನು ನಂಬಿ ನಾನು ಮೋಸ ಹೋದೆ ಎಂದು ಅನುಕಂಪ ಗಿಟ್ಟಿಸುವ ಮಾತುಗಳನ್ನು ದೇವೇಗೌಡರು ಆಡುತ್ತಿದ್ದಾರೆ. ಆದರೆ, ರಾಮಕೃಷ್ಣ ಹೆಗಡೆ ಮತ್ತು ಜೆ.ಎಚ್. ಪಟೇಲರಿಗೆ ದ್ರೋಹ ಬಗೆದಿದ್ದು ಯಾರು' ಎಂದು ದೇವೇಗೌಡ ಅವರನ್ನು ಶಿವಣ್ಣ ಪ್ರಶ್ನಿಸಿದ್ದಾರೆ.

'ಜನತಾ ಪಕ್ಷ ತ್ಯಜಿಸಿ ಸಮಾಜವಾದಿ ಜನತಾ ಪಕ್ಷ ಎಂಬ ಹೊಸ ಪಕ್ಷ ಕಟ್ಟಿದ ದೇವೇಗೌಡರು, ನಿರಾಶರಾಗಿ ರಾಮಕೃಷ್ಣ ಹೆಗಡೆ ಮತ್ತು ಜೆ.ಎಚ್. ಪಟೇಲರ ಕೈಕಾಲು ಹಿಡಿದು ಜನತಾದಳ ಪಕ್ಷಕ್ಕೆ ಸೇರಿದ್ದರು. ಆದರೆ, ಉಂಡಮನೆಯ ಗಳ ಎಣಿಸುವುದು ದೇವೇಗೌಡರ ಜನ್ಮಜಾತ ಗುಣವಾಗಿತ್ತು. ಮುಖ್ಯಮಂತ್ರಿ ಸ್ಥಾನ ಪಡೆಯಲು ಹೆಗಡೆ ಮತ್ತು ಪಟೇಲರ ಮೇಲೆ ಬಾಡಿಗೆ ಗೂಂಡಾಗಳಿಂದ ಹಲ್ಲೆ ಮಾಡಿಸಿದ್ದರು. ಅಂದು ಸಿದ್ದರಾಮಯ್ಯ ಮತ್ತು ಆರ್.ಎಲ್. ಜಾಲಪ್ಪ ನಿಮ್ಮ ಜೊತೆ ಗಟ್ಟಿಯಾಗಿ ನಿಲ್ಲದೇ ಇದ್ದರೆ ನೀವು ಮುಖ್ಯಮಂತ್ರಿಯಾಗಲು ಸಾಧ್ಯವೇ ಇರಲಿಲ್ಲ. ಈ ಸತ್ಯ ಒಪ್ಪಿಕೊಳ್ಳುವಾಗ ಮಾತ್ರ ಮರೆವಿನ ಸಮಸ್ಯೆ ಕಾಡುತ್ತದೆಯೇ' ಎಂದೂ ಪ್ರಶ್ನಿಸಿದ್ದಾರೆ.

₹ 1.2 ಲಕ್ಷ ಲಂಚ ಸಿಕ್ಕಿಬಿದ್ದ ಪಿಡಿಒ

ಮದ್ದೂರು (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೊಪ್ಪ ಹೋಬಳಿಯ ಹೊಸಕೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜಮ್ಮ ಶನಿವಾರ ಪಂಚಾಯಿತಿ ಕಚೇರಿಯಲ್ಲಿ ₹ 1.2 ಲಕ್ಷ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದರು.

ಮಂಜಮ್ಮ

'ನಿವೇಶನಕ್ಕೆ ಖಾತೆ ಮಾಡಿಕೊಡಲು ಲಂಚ ಕೊಡಬೇಕೆಂದು ಕೊತ್ತನಹಳ್ಳಿಯ ಕೃಷ್ಣೆಗೌಡ ಅವರಿಗೆ ಮಧ್ಯವರ್ತಿ ಅಭಿಷೇಕ್ ಮೂಲಕ ಅಧಿಕಾರಿ ಬೇಡಿಕೆಯಿಟ್ಟಿದ್ದರು. ಈ ಬಗ್ಗೆ ಮಂಡ್ಯ ಲೋಕಾಯುಕ್ತಕ್ಕೆ ದೂರು ನೀಡಲಾಗಿತ್ತು.

ನಗರದಲ್ಲಿ ಇಂದು

ವೋಟ್–ಎ–ಥಾನ್: ಅತಿಥಿಗಳು: ಮನೋಜ್ ಕುಮಾರ್ ಮೀನಾ, ತುಷಾರ್ ಗಿರಿನಾಥ್, ಸೂರ್ಯಸೇನ್ ಎ.ವಿ., ಸೆಲ್ವಮಣಿ ಆರ್., ಪ್ರಣಿತಾ ಸುಭಾಷ್, ಆಯೋಜನೆ: ಬಿಬಿಎಂಪಿ, ಸ್ಥಳ: ಕಾವೇರಿ ಆಸ್ಪತ್ರೆ, ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ, ಬೆಳಿಗ್ಗೆ 6.30

ಪ್ರಣಿತಾ ಸುಭಾಷ್

ತೇರಾಕೋಟಿ ಶ್ರೀರಾಮನಾಮ ಲೇಖನ ಯಜ್ಞ ಸಮಾರೋಪ ಸಮಾರಂಭ: ಉದ್ಘಾಟನೆ: ಶಂಕರ ಭಾರತೀ ಸ್ವಾಮೀಜಿ, ಅತಿಥಿಗಳು: ಎನ್. ಕುಮಾರ್, ಶ್ರೀರಾಮ್ ಪಿ., ಎಸ್. ನರೇಶ್ ಕುಮಾರ್, ಸಿ.ಕೆ. ರಾಮಮೂರ್ತಿ, ಎಂ. ವಸಂತಕುಮಾರ್, ಎಸ್. ಶ್ರೀವತ್ಸ, ಎನ್. ಆರ್. ರಮೇಶ್, ಅಧ್ಯಕ್ಷತೆ: ಆರ್.ಎನ್. ಸ್ವಾಮಿ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, 8ನೇ ಬಡಾವಣೆ, ಬೆಳಿಗ್ಗೆ 7ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅರುಣಿಮಾ ಶ್ರೀಕುಮಾರ್, ಆಯೋಜನೆ: ವೈಷ್ಣವಿ ನಾಟ್ಯಶಾಲಾ, ಸ್ಥಳ: ಎಡಿಎ ರಂಗಮಂದಿರ, ಬೆಳಿಗ್ಗೆ 9.30

ಸಮಾಧಾನ ಆಪ್ತ ಸಲಹಾ ಕೇಂದ್ರದ 17ನೇ ವಾರ್ಷಿಕೋತ್ಸವ, ಡಿ.ಎಸ್. ರಾಜೇಶ್ವರಿ ಅವರ ಪುಣ್ಯಸ್ಮರಣೆ: ಅತಿಥಿ: ಎಸ್.ಎನ್. ಸೇತೂರಾಮ್, ಉಪಸ್ಥಿತಿ: ಪಾವಗಡ ಪ್ರಕಾಶರಾವ್, ಡಾ. ಪ್ರತಿಮಾ ಮೂರ್ತಿ, ಡಾ.ಜಿ. ನಾರಾಯಣ ರೆಡ್ಡಿ, ಗುರುರಾಜ ಕರಜಗಿ, ಡಾ. ನಾ. ಸೋಮೇಶ್ವರ, ಡಾ. ವಸುಂಧರಾ ಭೂಪತಿ, ಎನ್. ಗೋಪಾಲಕೃಷ್ಣ,



ಗುರುರಾಜ ಕರಜಗಿ

ಡಾ.ಸಿ.ಆರ್. ಚಂದ್ರಶೇಖರ್ ಅವರ 'ಆರೋಗ್ಯವಾಗಿ ಆನಂದವಾಗಿರುವುದು ಹೇಗೆ?' ಪುಸ್ತಕ ಬಿಡುಗಡೆ: ಆಯೋಜನೆ: ಸಮಾಧಾನ ಆಪ್ತ ಸಲಹಾ ಕೇಂದ್ರ, ಸ್ಥಳ: ಎಚ್.ಎನ್. ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10

'ವಚನ ಯಾನ–200' ಸಂಭ್ರಮಾಚರಣೆ: ಉದ್ಘಾಟನೆ: ಟಿ.ಜಿ. ಬಸವರಾಜಯ್ಯ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಅತಿಥಿಗಳು: ಪ್ರಮೀಳಾ ಫಾಲನೇತ್ರ, ಚಂದ್ರಿಕಾ ಗುರುಪ್ರಸಾದ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಗು ಬೆಳಕು, ನಂ. 533, 7ನೇ ಮುಖ್ಯರಸ್ತೆ, ಕೆ.ಸಿ.ಎಚ್.ಎಸ್. ಲೇಔಟ್, ದೊಡ್ಡಬಸ್ತಿ ರಸ್ತೆ, ಕೆಂಚನಪುರ ಕ್ರಾಸ್, ಬೆಳಿಗ್ಗೆ 10.30

ಅತಿಥಿ ಶಿಕ್ಷಕರ ವಾರ್ಷಿಕ ರಾಜ್ಯ ಸಮ್ಮೇಳನ: ಉದ್ಘಾಟನೆ: ಮಧು ಬಂಗಾರಪ್ಪ, ಅಧ್ಯಕ್ಷತೆ: ಸತೀಶ್ ಜಾರಕಿಹೊಳಿ, ಅತಿಥಿಗಳು: ಯು.ಟಿ. ಖಾದರ್, ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಟಿ. ಮರೀತಿಬ್ಬೆಗೌಡ, ಪುಟ್ಟಣ್ಣ, ಗಾಲಿ ಜನಾರ್ದನ ರೆಡ್ಡಿ, ರಿಜ್ವಾನ್ ಅರ್ಷದ್, ಜೆ.ಎನ್. ಗಣೇಶ್, ನಾರಾ ಪ್ರತಾಪ್ ರೆಡ್ಡಿ, ಕೆ. ನಾಗೇಶ, ಚಂದ್ರಶೇಖರ ನುಗ್ಲಿ, ಆಯೋಜನೆ: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘ, ಸ್ಥಳ: ಶಿಕ್ಷಕರ ಸದನ, ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 10.30

ದಾಸರಹಳ್ಳಿ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನಾಧ್ಯಕ್ಷ: ಟಿ. ಗೋವಿಂದರಾಜು, ಉದ್ಘಾಟನೆ: ಎಸ್. ಮುನಿರಾಜು, ಅತಿಥಿಗಳು: ಮನು ಬಳಿಗಾರ್, ಎಂ. ಪ್ರಕಾಶಮೂರ್ತಿ, ಲಿಂಗರಾಜು ಎ. ಕಾಳೇನಹಳ್ಳಿ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ, ಸ್ಥಳ: ವಿಜಯಶ್ರೀ ಪಬ್ಲಿಕ್ ಶಾಲೆ, ಮಲ್ಲಸಂದ್ರ, ಬೆಳಿಗ್ಗೆ 10.30

'ತಿಳಿಪದ' ಸೈನ್ಸ್ ಟೆಕ್ನಾಲಜಿ ಪದಗಳಿಗೆ ಮೀಸಲಾದ ಕನ್ನಡ ಆನ್‌ಲೈನ್ ಡಿಕ್ಷನರಿ ಬಿಡುಗಡೆ: ಆಯೋಜನೆ: ಮುನ್ನೋಟ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಧರ್ಮ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ, ನಿಲಯದ ಹಿರಿಯ ವಿದ್ಯಾರ್ಥಿಗಳ ಸಮಾವೇಶ: ಸಾನ್ನಿಧ್ಯ: ಕರಿವೃಷಭ ದೇಶೀಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ಅತಿಥಿ: ಯಶವಂತ್ ವಿ. ಗುರುಕರ್, ಅಧ್ಯಕ್ಷತೆ: ಎಲ್. ರೇವಣಸಿದ್ಧಯ್ಯ, ಆಯೋಜನೆ ಮತ್ತು ಸ್ಥಳ: ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸಂಸ್ಥೆ, ಕೇಂದ್ರ ರೈಲ್ವೆ ನಿಲ್ದಾಣದ ಬಳಿ, ಗುಬ್ಬಿ ತೋಟದಪ್ಪ ರಸ್ತೆ, ಬೆಳಿಗ್ಗೆ 10.30

ಜಯಂತ ಕಾಯ್ಕಿಣಿ ಅವರ 'ತಾರಿ ದಂಡೆ', ಬಿ.ಎ. ವಿವೇಕ ರೈ ಅವರ 'ಬದುಕು ಕಟ್ಟಿದ ಬಗೆಗಳು' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಸುರೇಶ್ ಆನಗಳ್ಳಿ, ವನಮಾಲಾ ವಿಶ್ವನಾಥ್, ನಾ. ದಾಮೋದರ ಶೆಟ್ಟಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬೆಳಿಗ್ಗೆ 10.30

ಪುರುಷೋತ್ತಮ ಬಿಳಿಮಲೆ ಅವರ 'ವರ್ತಮಾನ ಭಾರತ' ಪುಸ್ತಕ ಬಿಡುಗಡೆ: ಜಿ. ರಾಮಕೃಷ್ಣ, ಅಧ್ಯಕ್ಷತೆ: ವಿಜಯಮ್ಮ, ಪುಸ್ತಕದ ಕುರಿತು: ಎ. ನಾರಾಯಣ, ಆಯೋಜನೆ: ಚಿರಂತ್ ಪ್ರಕಾಶನ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ವಿ.ವಿ. ಗೋಪಾಲ್ ಅವರ 'ನಿತ್ಯ ಶಾಕುಂತಳೆ' ಗೇಯಕಾವ್ಯ–ಸಂವಾದ ಗೋಷ್ಠಿ: ಅಧ್ಯಕ್ಷತೆ: ಎಂ. ತಿಮ್ಮಯ್ಯ, ಪುಸ್ತಕ ಪರಿಚಯ: ಕಾ.ವೆಂ. ಶ್ರೀನಿವಾಸಮೂರ್ತಿ, ಸಂವಾದದಲ್ಲಿ ಭಾಗವಹಿಸುವವರು: ಪದ್ಮಿನಿ ನಾಗರಾಜು, ಸುಜಾತ ಲಕ್ಷ್ಮೀಪುರ, ಬೆಳ್ಳಿಬಟ್ಟಲು ರಾಮಚಂದ್ರರಾವ್, ಕೆ.ಎಸ್. ಸುರೇಖಾ, ಆಯೋಜನೆ: ರಾಜರಾಜೇಶ್ವರಿ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಶಿವಕುಮಾರ್ ಅವರ ಆತ್ಮಕಥೆ 'ಶಿವಾನ್ಯ' ಪುಸ್ತಕ ಬಿಡುಗಡೆ: ತ.ಮ. ವಿಜಯಭಾಸ್ಕರ್, ಪುಸ್ತಕದ ಕುರಿತು: ಎ.ವಿ. ಪ್ರಸನ್ನ, ಅಧ್ಯಕ್ಷತೆ: ಕುಪೇಂದ್ರ ರೆಡ್ಡಿ, ಅತಿಥಿಗಳು: ಸತೀಶ್ ರೆಡ್ಡಿ ಎಂ., ಗೋಪಿನಾಥ್ ಎಚ್.ಎಸ್., ಆಯೋಜನೆ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಸಭಾಂಗಣ, ಎಚ್‌ಎಸ್‌ಆರ್ ಲೇಔಟ್, ಬೆಳಿಗ್ಗೆ 10.30

'ಭಾರತೀಯ ಪುರಾತನ ಕಾಲಗಣನೆಯಲ್ಲಿ ಸೂರ್ಯ, ನಕ್ಷತ್ರಗಳ ಪ್ರಾಮುಖ್ಯತೆ', 'ಭಾರತೀಯ ಕಬ್ಬಿಣದ ರಾಕೆಟ್ಟುಗಳ ಇತಿಹಾಸ–16 ಶತಮಾನದಿಂದ 19ನೇ ಶತಮಾನದವರೆಗೆ' ಕುರಿತು ಉಪನ್ಯಾಸ: ಸುಂದರ್ ಚಕ್ರವರ್ತಿ, ಅಜಯ್ ಕುಮಾರ್ ಶರ್ಮಾ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11ರಿಂದ

ಮಹಿಳಾ ದಿನಾಚರಣೆ, ಮಹಿಳಾ ಸಾಧಕರಿಗೆ 'ಚಿ.ನ. ಮಂಗಳ' ಪ್ರಶಸ್ತಿ ಪ್ರದಾನ: ಅತಿಥಿಗಳು: ಎಂ. ಕೃಷ್ಣಪ್ಪ, ಲಕ್ಷ್ಮಿ ಹೆಬ್ಬಾಳ್ಕರ್, ಜಮೀರ್ ಅಹಮದ್ ಖಾನ್, ಆನಂದ್ ನ್ಯಾಮಗೌಡ, ಪ್ರಶಸ್ತಿ ಪುರಸ್ಕೃತರು: ಶರಣಮ್ಮ ಪಿ. ಸಜ್ಜನ, ಪಾರ್ವತಮ್ಮ ಜಿ.ಎಲ್., ಚಿತ್ರರಾವ್ ಜಗತಾಪ್, ಸುಮಂಗಳ ಎಸ್. ಹಾರೋಕೊಪ್ಪ, ಲಕ್ಷ್ಮೀದೇವಮ್ಮ, ವಿದ್ಯಾ ಎಂ.ವಿ., ಸುಮಿತ್ರ ಡಿ., ನಿಶ್ಮಿತ ಬಿ., ಕಲ್ಪನ, ಆಯೋಜನೆ: ಸಮಗ್ರ ಕರ್ನಾಟಕ ಕಾರ್ಮಿಕ ಸಂಘ, ಸ್ಥಳ: ಕುವೆಂಪು ರಂಗಮಂದಿರ, ಗಿರಿನಗರ ಆವಲಹಳ್ಳಿ, ಮಧ್ಯಾಹ್ನ 1

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಶಾಖೆಗಳ ಉದ್ಘಾಟನೆ, ಪದಗ್ರಹಣ ವಿಚಾರಸಂಕಿರಣ: ಉದ್ಘಾಟನೆ: ರಂದೀಪ್ ಡಿ., ಮಹೇಶ್ ಸಿ., ಉಪಸ್ಥಿತಿ: ಅಂಬಣ್ಣ ಬಿ. ಮಹಾಗಾಂವಕರ್, ರಂಜಿತ ಬಿ. ಮಾನಕರ್, ಆಯೋಜನೆ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಸಂಘ, ಸ್ಥಳ: ಆರ್. ಗುಂಡೂರಾವ್ ಕ್ರೀಡಾ ಸಂಕೀರ್ಣ, ಬಿಬಿಎಂಪಿ, ಶೇಷಾದ್ರಿಪುರ, ಬೆಳಿಗ್ಗೆ 11

ಸಮರ್ಪಣಾ ಕಾರ್ಯಕ್ರಮದ ಅಂಗವಾಗಿ ಪ್ರವಚನ: ಸಾಯಿ ಗಿರಿಧರ್, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಸಂಜೆ 4

ಮಹಿಳಾ ಕವಿಗೋಷ್ಠಿ, ಪದ್ಮನಾಭ ಅವರ 'ಛಲಗಾತಿ' ಪುಸ್ತಕ ಬಿಡುಗಡೆ: ಉದ್ಘಾಟನೆ: ಪ್ರೇಮಾ ಭಟ್, ಪುಸ್ತಕ ಬಿಡುಗಡೆ: ದೊಡ್ಡರಂಗೇಗೌಡ, ಅತಿಥಿಗಳು: ಎಸ್. ಷಡಕ್ಷರಿ, ಬಾಲಾಜಿರಾವ್ ಎನ್. ಪುಸ್ತಕ ಪರಿಚಯ: ಹರಿನರಸಿಂಹ ಉಪಾಧ್ಯಾಯ, ಸನ್ಮಾನ: ವರ್ಷಾ ಉಮಾಪತಿ, ಆಯೋಜನೆ: ಮಾತ್ರ ಸೌರಭ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4



ದೊಡ್ಡರಂಗೇ ಗೌಡ

ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮಾರಕ ಸಂಗೀತೋತ್ಸವ, 'ಎಸ್‌ವಿಎನ್ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ–2024: ವೀಣೆ: ಅನುರಾಧ ಮಧುಸೂದನ್, ಮೃದಂಗ: ಸಿ. ಚೆಲುವರಾಜು, ಮೋರ್ಸಿಂಗ್: ಬಿ. ರಾಜಶೇಖರ್, ಪ್ರಶಸ್ತಿ ಪುರಸ್ಕೃತರು: ಟಿ.ಎಚ್. ವಿನಾಯಕರಾಮ್, ಆರ್.ಎನ್. ತ್ಯಾಗರಾಜನ್, ಆರ್.ಎನ್. ತಾರಾನಾಥನ್, ಅತಿಥಿಗಳು: ಕೃಷ್ಣಬೈರೇಗೌಡ, ಕೆ.ಸಿ. ರಾಮಮೂರ್ತಿ, ಸಿ. ಸೋಮಶೇಖರ್, ಕುಮಾರೇಶ್ ರಾಜಗೋಪಾಲನ್, ಆಯೋಜನೆ: ರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ: ಪ್ರೊ.ಎನ್. ಅನಂತಾಚಾರ್ ಸಭಾಂಗಣ, ಎಪಿಎಸ್ ಕಾಲೇಜು, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

ಎಂ.ವಿ.ಎನ್. ಶೆಟ್ಟಿ, ಚನ್ನಕೇಶವ ಶಾಸ್ತ್ರಿ ಅವರ ಸಾರ್ವಜನಿಕ ದತ್ತಿ ಉಪನ್ಯಾಸ: 'ಎದೆ ನೋವು ಮತ್ತು ಹೃದಯಾಘತದ ಚಿಕಿತ್ಸೆ': ಡಾ. ಚಂದ್ರಕಾಂತ್ ಬಿ. ಪಾಟೀಲ್, 'ನಾವು ಎಲ್ಲ ಸಮಯದಲ್ಲೂ ತಪ್ಪಾಗಿ ತಿನ್ನುತ್ತಿದ್ದೇವೆ': ಡಾ. ಆಶಾ ಬೆನಕಪ್ಪ, ಅಧ್ಯಕ್ಷತೆ: ಮಧುಶಂಕರ್ ಎಲ್., ಆಯೋಜನೆ ಮತ್ತು ಸ್ಥಳ: ಭಾರತೀಯ ವೈದ್ಯಕೀಯ ಸಂಘ, ಚಾಮರಾಜಪೇಟೆ, ಸಂಜೆ 4.30

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಇಂಟರ್‌ನ್ಯಾಷನಲ್ ಥೀಮ್ ಪಾರ್ಕ್‌ನ ಲಾಂಛನ ಬಿಡುಗಡೆ: ಉದ್ಘಾಟನೆ: ಜ್ಞಾನಪ್ರಕಾಶ್ ಸ್ವಾಮೀಜಿ, ಅಧ್ಯಕ್ಷತೆ: ವಿನಯ್ ಗುರೂಜಿ, ಅತಿಥಿಗಳು: ಡಿ.ಕೆ. ಸುರೇಶ್, ಇಂದ್ರಜಿತ್ ಲಂಕೇಶ್, ಧ್ರುವ ಸರ್ಜಾ, ಇಕ್ಬಾಲ್ ಹುಸೇನ್, ಹನುಮಂತರಾಯಪ್ಪ, ಪಿ. ಮೂರ್ತಿ, ಬಿ. ಗೋಪಾಲ್, ಮಾವಳ್ಳಿ ಶಂಕರ್, ಆಯೋಜನೆ: ಗೌತಮ ಬುದ್ಧ ಟ್ರಸ್ಟ್, ಸ್ಥಳ: ವಿದ್ಯಾನಿಕೇತನ್ ಸ್ಕೂಲ್ ಹತ್ತಿರ, ಉಲ್ಲಾಳ ಮುಖ್ಯರಸ್ತೆ, ಜ್ಞಾನಭಾರತಿ, ಸಂಜೆ 5

ಡಿವಿಜಿ ಸ್ಮರಣೆ: ಅಧ್ಯಕ್ಷತೆ: ಶ್ರೀರಾಮೇಗೌಡ, ಪುಷ್ಪನಮನ: ಎಲ್. ವೆಂಕಟಪ್ಪ, ಕೆ.ಎಸ್. ನವೀನ್, ಬಿ.ಎಸ್. ನಾರಾಯಣಸ್ವಾಮಿ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಭಾಸ್ಕರ್ ನೀನಾಸಂ, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಲೋಕಸಭಾ ಮಾದರಿ ನೀತಿ ಸಂಹಿತೆ ಜಾರಿ: ಅಧಿಕಾರಿಗಳಿಗೆ ಜಿಲ್ಲಾ ಚುನಾವಣಾಧಿಕಾರಿ ಸೂಚನೆ

ಚುನಾಯಿತ ಪ್ರತಿನಿಧಿಗಳ ಚಿತ್ರ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಾಗಿದ್ದು, ಕೂಡಲೇ ಸರ್ಕಾರಿ ಕಚೇರಿ, ಸರ್ಕಾರಿ ಆಸ್ತಿಗಳು ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಜನಪ್ರತಿನಿಧಿಗಳ ಹೆಸರು, ಭಾವಚಿತ್ರಗಳು ಹಾಗೂ ಜಾಹೀರಾತುಗಳನ್ನು ತೆಗೆಯಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಫ್ಲೆಕ್ಸ್, ಪೋಸ್ಟರ್, ಬ್ಯಾನರ್, ಭಿತ್ತಿಪತ್ರಗಳು, ಗೋಡೆ ಬರಹಗಳು ಇರುವಂತಿಲ್ಲ. ಯಾರಾದರೂ ಪೋಸ್ಟರ್, ಬ್ಯಾನರ್ ಹಾಕಿದರೆ ಸಂಬಂಧಪಟ್ಟವರ ಮೇಲೆ ದೂರು ದಾಖಲಿಸಬೇಕು ಎಂದು ಆದೇಶಿಸಿದರು.

'ಶುದ್ಧ ಕುಡಿಯುವ ನೀರಿನ ಘಟಕ, ಉದ್ಯಾನ ಇನ್ನಿತರೆ ಸ್ಥಳಗಳಲ್ಲಿ ಅಳವಡಿಸಿರುವ ನಾಮಫಲಕಗಳಲ್ಲಿ ಜನಪ್ರತಿನಿಧಿಗಳ ಹೆಸರು, ಭಾವಚಿತ್ರಗಳು ಇರುವಂತಿಲ್ಲ. ರಸ್ತೆ ಬದಿ ನಾಮಫಲಕಗಳಲ್ಲಿ ಜನಪ್ರತಿನಿಧಿಗಳ ಹೆಸರು ತೆಗೆಯಬೇಕು. ಎಲ್ಲೂ ಜನಪ್ರತಿನಿಧಿಗಳ ಹೆಸರಾಗಲಿ, ಸಂಪರ್ಕ ಸಂಖ್ಯೆಯಾಗಲಿ ಇರುವಂತಿಲ್ಲ. ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ಯಾವುದಾದರೂ ಕಾರ್ಯಕ್ರಮ ಆಯೋಜಿಸಿದ್ದಲ್ಲಿ ತತ್‌ಕ್ಷಣ ಅದನ್ನು ರದ್ದುಪಡಿಸಬೇಕು. ಚುನಾವಣೆ ಮುಗಿಯುವವರೆಗೆ ಯಾವುದೇ ಕಾರ್ಯಕ್ರಮ ಆಯೋಜಿಸುವಂತಿಲ್ಲ' ಎಂದು ತಿಳಿಸಿದರು.

24 ಗಂಟೆಗಳ ಒಳಗೆ ಸರ್ಕಾರಿ ಅಧಿಕೃತ ವೆಬ್‌ಸೈಟ್‌ಗಳಲ್ಲಿ ರಾಜಕೀಯ ಪ್ರತಿನಿಧಿಗಳ ಛಾಯಾಚಿತ್ರಗಳನ್ನು ತೆಗೆಯಲು ಸೂಚನೆ ನೀಡಿದರು.

ನಿಯಂತ್ರಣ ಕೊಠಡಿ ಸ್ಥಾಪನೆ: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ (ಆರ್‌ಒ), ಮತದಾರ ನೋಂದಣಾಧಿಕಾರಿ (ಎಆರ್‌ಒ) ಕಚೇರಿಗಳಲ್ಲಿ 24 ಗಂಟೆಯೊಳಗಾಗಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಬೇಕು ಎಂದು ತುಷಾರ್ ಗಿರಿನಾಥ್ ಸೂಚಿಸಿದರು.

ಚೆಕ್ ಪೋಸ್ಟ್: ಮಾದರಿ ನೀತಿ ಸಂಹಿತೆ (ಎಂಸಿಸಿ) ಉಲ್ಲಂಘನೆಗಳ ಮೇಲೆ ನಿಗಾವಹಿಸಲು ಎಫ್‌ಎಸ್‌ಟಿ, ಎಸ್‌ಎಸ್‌ಟಿ ಸೇರಿದಂತೆ ವಿವಿಧ ತಂಡಗಳನ್ನು ಸಕ್ರಿಯಗೊಳಿಸಬೇಕು. ಜೊತೆಗೆ ಪ್ರಮುಖ ಸ್ಥಳಗಳಲ್ಲಿ ಕೂಡಲೇ ಚೆಕ್‌ಪೋಸ್ಟ್‌ಗಳನ್ನು ಅಳವಡಿಸಬೇಕೆಂದು ಹೇಳಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತೆ ಸೆಲ್ವಮಣಿ, ಎಂಸಿಸಿ ನೋಡಲ್ ಅಧಿಕಾರಿ ಮುನೀಶ್ ಮೌದ್ಗಿಲ್, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ಕೆ. ಹರೀಶ್ ಕುಮಾರ್, ಕೆ. ದಯಾನಂದ್, ವಿನೋತ್ ಪ್ರಿಯಾ, ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮಾತನಾಡಿದರು. ಎಂಸಿಸಿ ನೋಡಲ್ ಅಧಿಕಾರಿ ಮುನೀಶ್ ಮೌದ್ಗಿಲ್, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ. ಹರೀಶ್ ಕುಮಾರ್ ಇದ್ದರು

6.22 ಲಕ್ಷ ಮತದಾರರ ಹೆಚ್ಚಳ

ಬೆಂಗಳೂರು ಉತ್ತರ, ಕೇಂದ್ರ ಹಾಗೂ ದಕ್ಷಿಣ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 2019ಕ್ಕೆ ಹೋಲಿಸಿದರೆ 6.22 ಲಕ್ಷ ಮತದಾರರು ಹೆಚ್ಚಾಗಿದ್ದಾರೆ. ಈ ಮೂರು ಕ್ಷೇತ್ರಗಳಲ್ಲಿ 2019ರಲ್ಲಿ 72,68,433 ಮತದಾರರಿದ್ದು, 2024ರ ಅಂತಿಮ ಮತದಾರರ ಪಟ್ಟಿಯಂತೆ 78,90,480 ಮತದಾರರಿದ್ದಾರೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ 24 ವಿಧಾನಸಭೆ ಕ್ಷೇತ್ರಗಳು ಈ ಮೂರು ಲೋಕಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿವೆ.

ಯಲಹಂಕ, ರಾಜರಾಜೇಶ್ವರಿನಗರ, ಬೆಂಗಳೂರು ದಕ್ಷಿಣ ಹಾಗೂ ಆನೇಕಲ್ ವಿಧಾನಸಭೆ ಕ್ಷೇತ್ರಗಳು ಬೆಂಗಳೂರು ಗ್ರಾಮಾಂತರ ಲೋಕಸಭೆ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ.

ಲೋಕಸಭೆ ಕ್ಷೇತ್ರಗಳ ಮತದಾರರ ವಿವರ

ಕ್ಷೇತ್ರ	ಪುರುಷರು,	ಮಹಿಳೆಯರು	ಇತರೆ	ಒಟ್ಟು
ಬೆಂಗಳೂರು ಉತ್ತರ	16,29,089	15,44,415	594	31,74,098
ಬೆಂಗಳೂರು ಕೇಂದ್ರ	12,36,897	11,61,548	465	23,98,910
ಬೆಂಗಳೂರು ದಕ್ಷಿಣ	11,95,285	11,21,788	399	23,17,472
ಒಟ್ಟು	40,61,271	38,27,751	1,458	78,90,480

ಮಾದರಿ ನೀತಿ ಸಂಹಿತೆ ನಿರ್ವಹಣೆ ತಂಡ

104 ಚೆಕ್‌ಪೋಸ್ಟ್

679 ಸೆಕ್ಟರ್ ಆಫೀಸರ್

297 ಫ್ಲೈಯಿಂಗ್ ಸ್ಕ್ವಾಡ್

226 ವಿಡಿಯೊ ಸರ್ವೆಲನ್ಸ್ ತಂಡ (ವಿಎಸ್‌ಟಿ)

339 ಸ್ಟ್ಯಾಟಿಕ್ ಸರ್ವೆಲನ್ಸ್ ತಂಡ (ಎಸ್‌ಎಸ್‌ಟಿ)

ಮತಗಟ್ಟೆ

ಬೆಂಗಳೂರು ಉತ್ತರ 2,911

ಬೆಂಗಳೂರು ಕೇಂದ್ರ 2,125

ಬೆಂಗಳೂರು ದಕ್ಷಿಣ 2,118



'ಚುನಾವಣೆ ಬಳಿಕ ಸಾರಿಗೆ ಆ್ಯಪ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಸಾರಿಗೆಗಳಿಗೆ ಅನುಕೂಲ ಆಗುವಂತೆ ಆ್ಯಪ್ ತಯಾರಿಸಲಾಗಿದ್ದು, ಪರಿಶೀಲನೆಯ ಹಂತದಲ್ಲಿದೆ. ಚುನಾವಣೆ ಮುಗಿದ ಕೂಡಲೇ ಜಾರಿಗೊಳಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಶನಿವಾರ ಹಮ್ಮಿಕೊಂಡಿದ್ದ ಚಾಲಕರ ಸಮಾವೇಶದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

'ಎಲ್ಲ ಖಾಸಗಿ ಸಾರಿಗೆಗಳು ಈ ಆ್ಯಪ್ ಅಡಿಯಲ್ಲಿ ನೋಂದಣಿಯಾದರೆ, ಆ್ಯಪ್ ಆಧಾರಿತ ಅಗ್ರಿಗೇಟ್ ಸಂಸ್ಥೆಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ' ಎಂದರು.

'30 ಬೇಡಿಕೆಗಳನ್ನು ಈಡೇರಿಸಬೇಕು ಎಂದು ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಪ್ರತಿಭಟನೆ ನಡೆಸಿತ್ತು. ಸಾಧ್ಯ ಇರುವ ಎಲ್ಲ ಬೇಡಿಕೆಗಳನ್ನು ಪೂರೈಸಲಾಗುವುದು ಎಂದು ಆಗ ಭರವಸೆ ನೀಡಿದ್ದೆ. ಕೇವಲ ಆರು ತಿಂಗಳಲ್ಲಿ 20 ಬೇಡಿಕೆಗಳನ್ನು ಪೂರೈಸಲಾಗಿದೆ' ಎಂದು ವಿವರ ನೀಡಿದರು.

'ಚಾಲಕರ ಅಭಿವೃದ್ಧಿ ಮಂಡಳಿ ಘೋಷಣೆ ಮಾಡಲಾಗಿದೆ. ಅದಕ್ಕೆ ನಿಧಿಗಾಗಿ ನಾನು ಮತ್ತು ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೇರಿ ಒಂದು ಯೋಜನೆ ರೂಪಿಸಿದ್ದೆವು. ಅದನ್ನು ಮುಖ್ಯಮಂತ್ರಿ ಒಪ್ಪದೇ ಇದ್ದಾಗ, ಸೆಸ್ ಸಂಗ್ರಹ ಮಾಡಲು ನಿರ್ಧರಿಸಲಾಯಿತು. ಇದಲ್ಲದೇ ಮಂಡಳಿಯಲ್ಲಿ ಕನಿಷ್ಠ ₹ 500 ಕೋಟಿ ನಿಧಿ ಇರುವಂತೆ ಮಾಡಲು ಹೊಸ ಯೋಜನೆ ಇದೆ. ಚುನಾವಣೆ ಬಳಿಕ ಅನುಷ್ಠಾನಕ್ಕೆ ಬರಲಿದೆ' ಎಂದು ತಿಳಿಸಿದರು.

'2017ರವರೆಗೆ ನಾನು ಸಾರಿಗೆ ಸಚಿವನಾಗಿದ್ದೆ. ಆಗ ಯಾವುದೇ ಸಮಸ್ಯೆಗಳಿರಲಿಲ್ಲ. ಆನಂತರ ಬಂದ ಸರ್ಕಾರ ಇ-ಬೈಕ್‌ಗಳಿಗೆ ಅವಕಾಶ ನೀಡಿತು. ಒಂದೊಂದೇ ಸಮಸ್ಯೆಗಳು ಉದ್ಭವವಾದವು. ಅವುಗಳನ್ನು ಪರಿಹರಿಸಲು ಪ್ರಯತ್ನಿಸದ ಕಾರಣ ಗುಡ್ಡೆಯಾಗಿ ಬಿದ್ದಿದ್ದವು. ಈಗ ಪರಿಹರಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ' ಎಂದು ಹೇಳಿದರು.

ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ವಿ. ಪ್ರಸಾದ್, ಸಾರಿಗೆ ಆಯುಕ್ತ ಎ.ಎಂ. ಯೋಗೀಶ್, ಹೆಚ್ಚುವರಿ ಸಾರಿಗೆ ಆಯುಕ್ತರಾದ ಉಮಾಶಂಕರ್, ಮಲ್ಲಿಕಾರ್ಜುನ, ಜ್ಞಾನೇಂದ್ರ ಕುಮಾರ್, ವಿವಿಧ 32 ಖಾಸಗಿ ಸಾರಿಗೆ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟವು ಶನಿವಾರ ಆಯೋಜಿಸಿದ್ದ ಚಾಲಕರ ಸಮಾವೇಶದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಬೆಳ್ಳಿ ಕಿರೀಟ ತೊಡಿಸಿ ಸನ್ಮಾನಿಸಲಾಯಿತು — ಪ್ರಜಾವಾಣಿ ಚಿತ್ರ.

ನನ್ನ ಋಣದಲ್ಲಿ ಶ್ರೀರಾಮುಲು, ಅಶೋಕ: ಶರ್ಮ

'ಹಿಂದೆ ಸಾರಿಗೆ ಸಚಿವರಾಗಿದ್ದವರ ಋಣದಲ್ಲಿ ನಾನು ಇಲ್ಲ. ನನ್ನ ಋಣದಲ್ಲಿ ಶ್ರೀರಾಮುಲು, ಆರ್. ಅಶೋಕ ಇದ್ದಾರೆ' ಎಂದು ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ತಿಳಿಸಿದರು.

'ಶ್ರೀರಾಮುಲು ಸ್ಥಾಪಿಸಿದ್ದ ಬಿಎಸ್‌ಆರ್ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಸೋತು ಹೋಗಿತ್ತು. ಬಿಜೆಪಿಗೆ ಸೇರ್ಪಡೆಯಾಗಲು ಬಯಸಿದ್ದ ಶ್ರೀರಾಮುಲು ಅವರನ್ನು ಸುಷ್ಮಾ ಸ್ವರಾಜ್ ಮನೆಯೊಳಗೆ ಬಿಟ್ಟಿರಲಿಲ್ಲ. ನಾನು ರಾಷ್ಟ್ರೀಯ ನಾಯಕರ ಬಳಿ ಮಾತನಾಡಿದ್ದೆ. ಅವರು ಮತ್ತೆ ಬಿಜೆಪಿಗೆ ಬರಲು ನನ್ನ ಪಾತ್ರವೂ ಇದೆ' ಎಂದು ವಿವರಿಸಿದರು.

'ಆರ್. ಅಶೋಕ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಇಲ್ಲ ಎಂದು ಗೊತ್ತಾದಾಗ ಟಿವಿ ಪತ್ರಕರ್ತರೊಬ್ಬರನ್ನು ನನ್ನ ಮನೆಗೆ ಕಳುಹಿಸಿದ್ದರು. ನಾನು ವಿವಿಧ ನಾಯಕರ ಹತ್ತಿರ ಮಾತನಾಡಿದ್ದೆ. ಅವರು ಉಪಮುಖ್ಯಮಂತ್ರಿ ಆಗಲು ನಾನು ಕೂಡ ಕಾರಣ' ಎಂದರು.

ನವನೀತ್ ಕುಮಾರ್ ಸೆಹಗಲ್ ಪ್ರಸಾರ ಭಾರತಿ ನೂತನ ಅಧ್ಯಕ್ಷ

ನವದೆಹಲಿ (ಪಿಟಿಐ): ನಿವೃತ್ತ ಐಎಎಸ್ ಅಧಿಕಾರಿ ನವನೀತ್ ಕುಮಾರ್ ಸೆಹಗಲ್ ಅವರನ್ನು ಪ್ರಸಾರ ಭಾರತಿಯ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಪ್ರಸಾರ ಭಾರತಿ ಅಧ್ಯಕ್ಷರಾಗಿದ್ದ ಎ. ಸೂರ್ಯಪ್ರಕಾಶ್ ಅವರ ಕರ್ತವ್ಯಾವಧಿಯು 2020ರ ಫೆಬ್ರುವರಿಯಲ್ಲಿ ಮುಕ್ತಾಯವಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ನಾಲ್ಕು ವರ್ಷ ಆ ಹುದ್ದೆ ಖಾಲಿ ಇತ್ತು.

ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವನೀತ್ ಕುಮಾರ್ ಸೆಹಗಲ್ ಅವರನ್ನು ಪ್ರಸಾರ ಭಾರತಿ ಮಂಡಳಿಯ ಮುಖ್ಯಸ್ಥರಾಗಿ ನೇಮಕ ಮಾಡಿದ್ದಾರೆ.

ಬಿಐಸಿಯಲ್ಲಿ 'ಅನುಭವ ಕಥನ' ಇಂದು

ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ (ಬಿಐಸಿ) ಭಾನುವಾರ ಬೆಳಿಗ್ಗೆ 11 ಗಂಟೆಗೆ 'ಅನುಭವ ಕಥನ' ಶೀರ್ಷಿಕೆಯಡಿ ಮೊಗಳ್ಳಿ ಗಣೇಶ್ ಅವರ ಆತ್ಮಕಥೆ 'ನಾನೆಂಬುದು ಕಿಂಚಿತ್ತು' ಕೃತಿಯ ಬಗ್ಗೆ ಸಂವಾದ ಹಮ್ಮಿಕೊಳ್ಳಲಾಗಿದೆ.

ಈ ಸಂವಾದದಲ್ಲಿ ಕಥೆಗಾರ ಮೊಗಳ್ಳಿ ಗಣೇಶ್ ಅವರ ಜತೆಗೆ ವಿಮರ್ಶಕ ಎಚ್. ದಂಡಪ್ಪ, ಪ್ರಾಧ್ಯಾಪಕ ಸುರೇಶ್ ನಾಗಲಮಡಿಕೆ, ವಿಮರ್ಶಕ ಎನ್. ಮನು ಚಕ್ರವರ್ತಿ ಹಾಗೂ ವಿಮರ್ಶಕಿ ಎಂ.ಎಸ್. ಆಶಾದೇವಿ ಪಾಲ್ಗೊಳ್ಳಲಿದ್ದಾರೆ. ಬರಹಗಾರ ಚಂದನ್ ಗೌಡ ಅವರು ಸಂವಾದವನ್ನು ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೊಗಳ್ಳಿ ಗಣೇಶ್

ಸೇನಾ ತರಬೇತಿ ಪಡೆದವರಿಗೆ ಪುನರ್ವಸತಿ ಸೌಲಭ್ಯ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಿಲಿಟರಿ ತರಬೇತಿಯ ಸಂದರ್ಭದಲ್ಲಿ ಗಾಯಗೊಂಡ ಕಾರಣದಿಂದಾಗಿ ಮಿಲಿಟರಿ ಸೇವೆಗೆ ಸೇರಲು ಅನರ್ಹರಾಗುವವರಿಗೆ ಪುನರ್ವಸತಿ ಸೌಲಭ್ಯವನ್ನು ವಿಸ್ತರಿಸುವ ಪ್ರಸ್ತಾವಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಒಪ್ಪಿಗೆ ನೀಡಿದ್ದಾರೆ.

ಗಾಯಗೊಂಡ ಪರಿಣಾಮವಾಗಿ ಸೇನೆಗೆ ಸೇರಲು ಆಗದವರಿಗೆ ಪುನರ್ವಸತಿ ಸೌಲಭ್ಯವನ್ನು ವಿಸ್ತರಿಸಬೇಕು ಎಂಬ ಬೇಡಿಕೆಯು ಸೇನೆಯ ಕಡೆಯಿಂದಲೂ ಇತ್ತು.

'ಸಶಸ್ತ್ರ ಪಡೆಗಳಿಗೆ ಅಧಿಕಾರಿಗಳಾಗಿ ಸೇರುವ ಉದ್ದೇಶದೊಂದಿಗೆ ಮಿಲಿಟರಿಗೆ ಅಕಾಡೆಮಿಗಳಿಗೆ ಕಿರಿಯ ವಯಸ್ಸಿನಲ್ಲಿ ಸೇರುವವರು ಸೇನಾ ಸಮವಸ್ತ್ರದಲ್ಲಿ ದೇಶಕ್ಕೆ ಸೇವೆ ಸಲ್ಲಿಸುವ ಬದ್ಧತೆಯನ್ನು ತೋರಿರುತ್ತಾರೆ. ಆದರೆ ದುರದೃಷ್ಟವಶಾತ್ ಅನರ್ಹಗೊಳ್ಳುತ್ತಾರೆ. ಹೀಗಾಗಿ ಇವರಿಗೆ ಸೌಲಭ್ಯಗಳನ್ನು ವಿಸ್ತರಿಸುವ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ರಕ್ಷಣಾ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪುನರ್ವಸತಿ ಅವಕಾಶವನ್ನು ಕಲ್ಪಿಸಬೇಕು ಎಂದು ತರಬೇತಿ ನಿರತರು ಹಾಗೂ ಅವರ ಪಾಲಕರು ದಶಕಗಳಿಂದ ಬೇಡಿಕೆ ಸಲ್ಲಿಸುತ್ತಿದ್ದರು ಎಂದು ಸಚಿವಾಲಯ ಹೇಳಿದೆ. ವೈದ್ಯಕೀಯ ಕಾರಣಗಳಿಂದಾಗಿ ಪ್ರತಿ ವರ್ಷ ಅಂದಾಜು 10ರಿಂದ 20 ಮಂದಿ ಅನರ್ಹಗೊಳ್ಳುತ್ತಾರೆ.

'ಜ್ಞಾನ, ಸಂಸ್ಕಾರ ಆನುವಂಶೀಯವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜ್ಞಾನ, ಸಂಸ್ಕಾರಗಳು ಆನುವಂಶೀಯ ಬಳುವಳಿಯಲ್ಲ, ಅವು ನಮ್ಮ ಪರಿಶ್ರಮ, ನಡವಳಿಕೆಯಿಂದ ರೂಪುಗೊಳ್ಳುತ್ತವೆ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ನಗರದಲ್ಲಿ ಶನಿವಾರ ಮಾನವ ಬಂಧುತ್ವ ವೇದಿಕೆ - ಕರ್ನಾಟಕ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಆರ್. ಜಯಕುಮಾರ್ ಅವರ 'ಗಾಂಧಿ ಮರೆತ ನಾಡಿನಲ್ಲಿ' ಹಾಗೂ 'ಕಾಡು ಹಾದಿಯ ಬೆಳಕಿನ ಜಾಡು' ಕೃತಿಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಮ್ಮ ಮನೆತನದಲ್ಲೂ ಯಾರು ಸಂಗೀತ ಕಲಿತವರಿಲ್ಲ. ಹವ್ಯಾಸ, ಆಸಕ್ತಿ, ಶ್ರಮದಿಂದ ಕಲಿತೆ. ಜನರ ಪ್ರೀತಿ, ಪ್ರೋತ್ಸಾಹದಿಂದ ಇಲ್ಲಿಯವರೆಗೂ ಸಾಗಿದೆ. ನಾನೊಬ್ಬ ಶಾಪಗ್ರಸ್ತ ಗಂಧರ್ವ' ಎಂದರು.

'ಕಾಡು ಹಾದಿಯ ಬೆಳಕಿನ ಜಾಡು' ಕೃತಿ ಕುರಿತು ಮಾತನಾಡಿದ ಸಾಹಿತಿ ಪುರುಷೋತ್ತಮ ಬಿಳಿಮಲೆ, 'ಜಯಕುಮಾರ್ ಅವರ ತಾಯಿ ಸಾಮಾಜಿಕ ಸಂಕಷ್ಟದಿಂದ ಕೇರಳದ ಪಾಲಕ್ಕಾಡ್‌ನಿಂದ ಮಡಕೇರಿವರೆಗೂ ಕಾಡಹಾದಿಯಲ್ಲಿ ನಡೆದಿದ್ದರು. ಇಂತಹ ಘಟನೆ ನಾವು ಕೋವಿಡ್ ಸಮಯದಲ್ಲಿ ನೋಡಿದೆವು. ಬಡವರು, ಶೋಷಿತರಿಗೆ ಎಲ್ಲ ಸಮಯವೂ ಕೋವಿಡ್ ರೀತಿಯೆ ಇರುತ್ತದೆ' ಎಂದು ಹೇಳಿದರು.

'ಗಾಂಧಿ ಮರೆತ ನಾಡಿನಲ್ಲಿ' ಕುರಿತು ಮಾತನಾಡಿದ ಸಾಮಾಜಿಕ ಚಿಂತಕ ಸಿದ್ದನಗೌಡ ಪಾಟೀಲ, ಗಾಂಧಿ ಕೊಂದು ಶಾಪಗ್ರಸ್ತವಾಗಿದ್ದ ಆರ್‌ಎಸ್‌ಎಸ್, ತುರ್ತು ಪರಿಸ್ಥಿತಿಯ ಸಮಯದಲ್ಲಿ ಗಾಂಧಿ ಶಿಷ್ಯ ಜೆಪಿಯಿಂದ ಶಾಪವಿಮೋಚನೆ ಪಡೆಯಿತು. ಅಂದು ಇಂದಿರಾ ಸಾಮಾಜಿಕ ಕಾರ್ಯ ಅನುಷ್ಠಾನಕ್ಕಾಗಿ ತುರ್ತು ಪರಿಸ್ಥಿತಿ ಘೋಷಿಸಿದ್ದರು. ಇಂದಿನ ಅಘೋಷಿತ ತುರ್ತು ಪರಿಸ್ಥಿತಿ ಕಾರ್ಪೋರೇಟ್ ಕಂಪನಿಗಳಿಗೆ ವರವಾಗಿದೆ' ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಿದ್ದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ. ಶಿವರಾಂ, ಪತ್ರಕರ್ತೆ ಶಾಂತಲಾ ಧರ್ಮರಾಜ್, ಚಿಂತಕಿ ಲೀಲಾ ಸಂಪಿಗೆ, ಬುಡಕಟ್ಟು ಚಳವಳಿಯ ಮುಖಂಡ ಎಸ್.ವೈ. ಗುರುಶಾಂತ್ ಉಪಸ್ಥಿತರಿದ್ದರು.

ನಗರದದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆರ್.ಜಯಕುಮಾರ್ ಅವರ 'ಕಾಡು ಹಾದಿಯ ಬೆಳಕಿನ ಜಾಡು' ಮತ್ತು 'ಗಾಂಧಿ ಮರೆತ ನಾಡಿನಲ್ಲಿ' ಪುಸ್ತಕವನ್ನು ಸಂಗೀತ ನಿರ್ದೇಶಕ ಹಂಸಲೇಖ ಬಿಡುಗಡೆ ಮಾಡಿದರು. ಸಿದ್ದನಗೌಡ ಪಾಟೀಲ್, ಎಸ್.ಜಿ.ಸಿದ್ದರಾಮಯ್ಯ, ಪುರುಷೋತ್ತಮ ಬಿಳಿಮಲೆ, ಆರ್. ಜಯಕುಮಾರ್, ಬಿ.ಕೆ.ಶಿವರಾಂ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಶೇಷಗಿರಿರಾವ್ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯದ ಶ್ರೇಷ್ಠ ವಿಮರ್ಶಕರಾಗಿದ್ದ ಪ್ರೊ.ಎಲ್.ಎಸ್. ಶೇಷಗಿರಿ ರಾವ್ ಅವರ ಹೆಸರಿನಲ್ಲಿ ರಾಜ್ಯ ಸರ್ಕಾರ ಪ್ರಶಸ್ತಿ ಸ್ಥಾಪಿಸಬೇಕು' ಎಂದು ಕರ್ನಾಟಕ ವಿಕಾಸರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಆಗ್ರಹಿಸಿದರು.

ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ-15' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈ ವರ್ಷ ಶೇಷಗಿರಿ ರಾವ್ ಅವರ ಜನ್ಮಶತಮಾನೋತ್ಸವದ ವರ್ಷವಾಗಿದೆ. ಆದ್ದರಿಂದ ಸರ್ಕಾರವು ಅವರ ಹೆಸರಿನಲ್ಲಿ ಪ್ರತಿ ವರ್ಷ ನಾಡಿನ ವಿಮರ್ಶಕರೊಬ್ಬರಿಗೆ ಪ್ರಶಸ್ತಿ ನೀಡಿ, ಸ್ಮರಿಸುವ ಕಾರ್ಯ ಮಾಡಬೇಕು' ಎಂದರು.

ಕನ್ನಡ ಗಣಕ ಪರಿಷತ್ತಿನ ಕಾರ್ಯದರ್ಶಿ ಜಿ.ಎನ್. ನರಸಿಂಹಮೂರ್ತಿ, 'ರಾವ್ ಅವರು ಕನ್ನಡ ಚಳವಳಿಗೆ ಮೌಲ್ಯ ತಂದುಕೊಟ್ಟಿದ್ದರು. ಕನ್ನಡಪರ ಹೋರಾಟಗಳಲ್ಲಿ ಪಾಲ್ಗೊಂಡು, ನಾಡು-ನುಡಿಯ ಶ್ರೇಯೋಭಿವೃದ್ಧಿಗೆ ದುಡಿದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿ.ಎನ್. ನರಸಿಂಹಮೂರ್ತಿ ಮಾತನಾಡಿದರು. ವ.ಚ. ಚನ್ನೇಗೌಡ, ಬಾ.ಹ. ಉಪೇಂದ್ರ, ಭಾರತಿ ಶೇಷಗಿರಿರಾವ್ ಹಾಗೂ ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಪಾಲ್ಗೊಂಡಿದ್ದರು





ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

House

Jayanagar

JAYANAGAR 5TH Block, 35x65 corner, J.P.Nagar 50x80 old house North facing residential Good Location. -9845232711

J P Nagar

J.P.NAGAR 6TH PHASE 22x30 NORTH X 40 BEDROOM TRIPLEX HOUSE SALE 1,40,00,000/- NEGOTIABLE 9845069739, 9740183922, 9380613718

Multiple Locations

RAJAJINAGAR MULTISTOREYED Building Four Floors in 2175 Sqft, Vijayanagar 30x40, 40x60 Nagarbhavi 30x45, 30x60:- 9886112385

Nagarabhavi

"BRAND-NEW 4BHK Triplex House GF 1shop, 2car parking, fully furnished,all amenities,Sale, RHCS Layout Annapooneshwari-Nagar, N/E.Corner, Both'Side 40'Feet-Road. 9845463951"

"NAGARABHAVI 30X40 West facing 5BHK Newly Duplex House for Sale with Lift & Complete All Fittings. Contact: 9901405391"

Uttarahalli

SPACIOUS DUPLEX HOUSE IN MARUTI LAYOUT VASANTHAPURA FOR SALE. FOR MORE DETAILS CONTACT OWNER- 9591299944

Vasanth Nagar

HOUSE FOR sale in Vasanth Nagar near MCC contact Kushal 8105838503 or Thejus 8105569606.

Mysore

"SALE CORNER South-East Muda House 40x55 Lalithmahal Nagara/Alanahalli Layout 8500/- P.sq.ft negotiable. 7899708676"

Flat

Basaveshwaranagar

"MAGADI MAIN-ROAD 1165 Sqft West door, Vastu,Rs.79,00,000/- with occupancy certificate 'A'katha covered Car park. "Sri.Ganesh Estate"- 9845286505"

Hebbal

NEW 3 BHK Building Parking Sale 1500 Sft Hebbal 'A' Katha, Vastu, Parking, Lift ANANTH: 93437-33415

Hanumanthnagar

SALE 3BHK FURNISHED FLAT Rs. 1.30 crore, Ashok Nagar12.9389N, 77.5610E Rental income 32K 9945455503

Kengeri

1 BHK BDA Flat for Sale at Kengeri East facing Rs. 15 lakhs. Lokesh- 9886201690.

Mysore Road

AVAILABLE LEASE 3BHK APARTMENT FLAT MYSORE ROAD OCCUPENCY 31ST MARCH 2024 RUPEES. 25 LAKHS: 9738223432

Sites

Anjanapura

BDA SITE For Sale, Anjanapura 5th G Block 30×40 North Facing, 10th Block 30×40 East Facing. Contact: 9008844447

ANJANAPURA 7TH Block Site Sale, 40x60 South, Near 80 feet Road, Rs. 7700/- CALL: 9845286583

ANJANAPURA 2ND Block 50x80 North facing Plot for SALE, 20×30, 30 Feet ROAD, Call: 8088799686

SALE BDA Anjanapura 5th G Block 30x40 south facing 95lakh also 20x30 East facing 2nd Block 55 lakh, Contact 9620041313/ 9945373839

BDA Allotted site for sale 60x40 north facing Anjanapura 5th block call Raju 9980493495/ 9483754853

Banashankari

BANASHANKARI 2ND Stage, 30x40 FOUR BHK DUPLEX HOUSE, PADMANABHANAGAR 30×40 W/F, INDIVIDUAL HOUSE and R.R. NAGAR, BHEL LAYOUT, RESIDENTIAL SITES 30×40, 40×60 E/W/N. 9448684258

2400 SFT BDA Site for Sale in Banashankari 6th Stage 4th 'B' Block Bangalore Rs.1.92 Crore.Contact- -9341226696. (Brokers Excuse)

BANASHANKARI 6TH Stage 4th B Block 30×40 North Facing BDA Site For Sale Close to Shobha Forest View Apartment Contact: 9845298419

BANASHANKARI 6TH Stage, BDA 30X40, North Facing Site For Sale Contact : 9916809188 9606226222

SALE BSK 6th Stage 4th H Block 30x40 west facing 95 lakh also 40x60 facing 6th Block 1.72Cr Negotiable, all owners site 9945373839, 9620041313

BSK 1ST Stage 40x60 E/F, 30x45 W/F. BSK 2nd Stage 40x60 N/E Commercial. 9243132082/ 9742816994.

BTM Layout

SALE BDA BTM STAG2 MICO-LAYOUT INDEPENDENT HOUSE 30'×50 BEST FOR FUTURE DEVELOPMENT INVESTMENT 3.75CR +918660563308.

Devanahalli

30X40 30X50 DC Converted CUDA Approved Plots Sale Chikkaballapur, 30 Minutes From Airport: 9945569909 7676900174

Hebbal

M.S.RAMAIAH NORTH City Behind Elements Mall, 40x60 West facing A Katha site sale Rs.12,500 psqft: 9886679696

Hanumanthnagar

"30X40 EAST-FACING Site-Sale BBMP 'A'KATHA Nagendra Block_near PES.College, Hanumanthnagar 15,500/-P.Sft Negotiable. "AVM.REAL_ESTATE" 9945783334/ 9513666788"

HRBR Layout

ARKAVATHY LAYOUT BDA SITE SALE 30X40 19TH BLOCK 30 FEET ROAD RS 12500 SFT: 9886633233

Jigani

LAND FOR Sale, 65000 sqft. 1400/- psft. Koppa Ramasandra Road, Near Nirman Layout, Jigani Hobli, Bengaluru. 9845204368, 9945143615

Jayanagar

JAYANAGAR 2ND BLOCK 2BHK Flat 1414 Sft 1.60 Cr, 5th BLOCK Residential 45x90 West Facing 16Cr negotiate. Contact: ESHWERI ENTERPRISES 98454-97163

45/40 WEST facing Jayanagar 1st Block, Near Ashoka Pillar, Rs.6.30 Crore, KK REALTORS KRISHNA 9741437555, 6366623666

Kengeri

40X60 SITE for sale near Raghavendra Swamy Matta, Kengeri Rs. 12500/- East facing. Lokesh- 9886201690.

Mallathahalli

SITE FOR SALE NGEF MALLATHALLI 45x36 EAST FACING GOOD LOCATION CONTACT: 9980433004/ 8217392686

Nelamangala

"NELAMANGALA RASHI Developers 30x50 site for sale close to D.Mart Tumkur highway please Contact: 9845268611"

Kumaraswamy Layout

BDA N/F 40x60 Site Sale #543 69th Cross 1st Stage Kumarswamy Layout. Near Vasavi Hospital & Bus Stand: 9844009086/ 9845344754

Kanakapura Road

SITE FOR Sale at Kanakapura Road 40x51 West, South Corner A-Khatha Gated Community Layout, Good Location, attached to Bank Officer Layout, walkable distance from Doddakallasandra Metro Station 1km from Prestige Falcon City-Forum Mall Konanakunte. Contact: 9964557280

SALE NARAYANA Nagar 1st Block 40x60 South facing 500 metres Metro station, Kanakapura Road, Contact: 9945373839/ 9620041313

30X40, 40X60 East BBMP Akatha Kendriya Layout Opposite Shona Arena Near Thalagatpura Metro Station: 9341238064

Kempegowda Layout

*SEMI-COMMERCIAL*SITE SALE,NADAPRABHU KEMPEGOWDA LAYOUT 8th Block,'D' Sector, 55X100,W/F BDA,NOC, NNA,Conversion land,Leagal Docuents,₹5250/-sqft. Ph:9686469799

BDA APPROVED SITES SALE @ 4750 ARE ATTACHED TO 300FT ROAD KEMPEGOWDA LAYOUT: 9538330089/ 9538332103

Nagarabhavi

NGEF LAYOUT, Mallathahalli (Ullal Main Road)30x48 East facing Site No.589, opp BDA Park 11,000/-sft. 9845059328

"SALE 30X40, 40x60, 50x80 SITE NEGF LAYOUT, MALLATHAHALLI, GOOD LOCATION, GENUINE BUYERS CONTACT: 7760388034/ 9242135834"

"NAGARABHAVI BDA COMPLEX 6th BLOCK 40x60 WEST 40 FEET ROAD IMMEDIATE REGISTRATION 80% WHITE. 9448432633"

Rajajinagar

SALE 30X50, North Facing, Rajajinagar 2nd Stage, Near Kuvempu Metro Station, Empty Plot + Borewell, Clear title, 20500/Sqft, Brokers excuse. Call 9880962888

Vidyaranyapura

SITE WITH Flats for Sale. 7000 sqft, Eight Apartments, a Good Water Supply, a Prime Site next to 1200 acres GKVK's Pristine Lungspace on the 6th Block of Vidyaranyapura, Bangalore. 9611293671.

Arkavathi Layout

ARKAVATHI LAYOUT 20x30 East, 20x30 West 2nd Block, 27x30 Corner 7th block, USR 7019770736/ 8951614989.

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

Vishweshwariah Layout

"30X40 NORTH-FACING BDA Site No.25,sale 40ft Road (Vishveshwaraiah Layout) BEL-Layout attached near Magadi Road, Good location. 7795531787"

BDA PLOT 60x40 SALE Rs. 12600/- Psft 40 Feet Road 1st Block Visweshwaraiah Layout SF: 9840793664/ 9790777639

30X40 BDA Site Sale Vishweshwariah Layout 2nd Block 8400 Negotiable, 4th Block 40x60 South 6800 Negotiable: 8892901567

AVAILABLE/ WANTED BDA Sites Vishweshwariah Layout 50x80, 40X60, 30X40, 20X30 Genuine Buyers And Sellers: 9743381719

VISVESWARAIAH 7TH Block Attach BBMP A Katha 20x40 (East) 6800000/- Negotiable, Near Eastwest College: 9845550606

"40X60 BDA East facing Site sale Vishveshwaraiah Layout Behind KLE Law College 60ft Road. 7795531787"

AVAILABLE 20X30 Vishweshwariah Layout 6th Block BDA Site For Sale Rate. 47 Lakhs Contact: 9844603127

VISVESWARAIAH BDA 1st Block 30x40 Near 100ft Road and SMV 4th Block BDA 6750/-: 9964971895

VISVESWARIAH LAYOUT 5th BLock near KLE College & 100 feet Rd BDA West facing 30X40 Site for immediate sale. HN 9900339878/ 9844093978.

"VISHVESHWARAIAH 1ST Block 30x40 site 40ft Road,South facing, Good Location, for-sale. 9886294610, Brokers Excuse"

Bannerghatta Road

SALE DC CONVERTED

30x40 BBMP 'A' Khata

30x40 East, West 39x21 Near Vijaya Bank Layout RTO, Avani Shringeri Nagar 35x60 Rs. 9250/- psft Agents Excuse. **Call : 9343361697**

AKSHAYA NAGAR (AKSHAYA GARDEN) PRIME LOCATION RESIDENTIAL 40x60 EAST FACING SITE SALE, 9500/- 9845069739, 9740183922

DH Classifieds
DECCAN HERALD
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS

www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

AUTOMOTIVE

Four Wheelers Selling

BUS

INSTITUTION BUS FOR SALE. Model-LYNX Ashok Leyland BSIII, Mfg. Date-2011. Bus Type-EIBUS Educational Institute Bus. Name of Reg-The Principal Vogue Institute of Art and Design. Contact:8277043824

OTHERS

For Sale

OWNER LEAVING IMMEDIATE SALE Leather Sofa Cots Dining Fridge Cupboard Lot's More. Contact: 9845414482/ 7975436976

SALE- IMPORTED Gym (4 Stations integrated Training Machine) and other gym equipments, party going out of station. Contact:- 9845765559/ 9845043282

Shopping

LATHA AGENCIES :Manufactures & Supplier of : School Belts, Ties, Socks,& Sweaters Contact:9343386870/ 7483206772

JOB OPPORTUNITIES

Teachers/ Professors

GANGA INTERNATIONAL SCHOOL
(Affiliated to ICSE; Grade-I to X & State: Grade-VIII to X)
GANGA PU COLLEGE
(Affiliated to ISC & State: PU-I & II - Science & Commerce)

POSITIONS VACANT

1) Principal - M.A/M.Sc with B.Ed having experience of minimum of 5 years in ICSE school.
2) Nursery Teacher - NTT+3 years experience.
3) PRT (Primary Teacher)
4) TGT (Trained Graduate Teacher) Physics, Chemistry, Biology, Computer Science, English & Physical Education.
5) PGT (Post Graduate Teacher) Physics, Chemistry, Biology, Computer Science, Accountancy, English & Physical Education.

FRESHERS ALSO CAN APPLY FOR TEACHER ROLE.
Walk-in for Interview & Demo during the working days between 10:30 am to 2:30 pm at the below mentioned address.
GANGA INTERNATIONAL SCHOOL & PU COLLEGE,
Nagaraja Farm, Gruhalakshmi Layout, Nelagadaranahalli, Bengaluru-560073.
Mob: 9241147487/9448087026/8277359000
You can also forward your resume to email ID: gangacareers@gmail.com
Scan QR for applying

ACADEMIC SUPERVISOR with 5 years Experience required. Also Trained Teachers to handle Nursery, Primary, High-School and Receptionist for Academic Year 2024-25. Qualification: NTT, D.Ed, B.A/B.Sc,B.Ed, M.A/M.Sc.,M.Ed. Only English Medium Candidates need apply. Max Muller Public School, Mahalakshmi Layout, B'lore-96. Ph: 23376049/23376050. E-mail: maxmullerpublicschool .mlayout@gmail.com

HOLY ANGEL'S High School Hampinagar, Vijayanagar, Bengaluru-560104. Phone: 23404465/ 23202042 holyangels.highschoolr pclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed, M.A/M.Sc.,M.Ed, N.T.T, CP.Ed. Only English medium candidates need to apply.

SIR. M. Visvheshwaraiah Vidyaniketan, Shettihalli, T.Dasarahalli, Bangalore-57 requires Qualified, Experienced, dedicated Teachers to Teach English, Kannada, Hindi Computer Science for Nursery, Primary and High School. Contact 9731841931 9243464624 9980906909 smvvschool18@gmail. com

YASHAS VIDYA Kendra Somashettihalli, Chikkabanavara, Bengaluru-560090, Required qualified, experienced, dedicated TEACHERS to teach all subjects (need fluency in English) & Office staff. WhatsApp CV: 7829814447, 6360136106, 9880451326. Email: yashasvidyakendra@gmail.c om

REQUIRED EXPERIENCED Teachers for CBSE and State Board PRE-KG to Grade 10 All Subjects NTT/ DTT/ UG/ PG with B.Ed. Lecturers for PU Science and Commerce: PHYSICS, CHEMISTRY MATHS, CS, ECO, B/S, ACCOUNTS, STATISTICS, HISTORY, KANNADA ENGLISH, HINDI PG with B.Ed CET/NEET level for Science MAHADEVA GROUP OF INSTITUTIONS Hoskote. 9986018815/ 9901070140/ 9740177907. Forward your resume to srisaieducationtrust2015@g mail.com

NIRMAN INTERNATIONAL PUBLIC SCHOOL- CBSE,7th Block, Vishweshwaraiah Layout, Bangalore-91 Requires qualified TEACHERS for all Subjects from Nursery to Grade-X. Contact: 8123030731/ 9986055970.

SURANA VIDYALAYA
(Affiliated to CBSE, New Delhi up to Senior Secondary Level)
Surana Vidyalaya, one of the leading CBSE schools is looking for Passionate, qualified and committed faculty members for the following posts
Grade 1 to 10 (TGT/PGT) English, Mathematics, Science, Hindi, Sanskrit, Fitness, Vocal, Skating, Special Educator & Counseling
Grade 11 to 12 / PUC (Science) (PGT) Mathematics
Grade 11 to 12 / PUC (Commerce) (PGT) Accountancy, Business Studies, Statistics
Grade 11 to 12 / PUC (Humanities) (PGT) Psychology
SALARY as per Industry Standards.
Note: Bachelor's degree with B.Ed. for (TGT) Master's with B.Ed. for (PGT) is a must.
Please send an email to hr@suranavidyalaya.org on or before 31st March, 2024 mentioning the job type preferred in the subject.
91080 29846/47

SREE VENKATESHWARA ENGLISH SCHOOL #1 VS Layout Krishnarajapura Bangalore-560036. Wanted TEACHERS B.Sc B.Ed (Mathematics, Science) B.A,B.Ed (Social,English, Kannada,Hindi) NTT TCH D.Ed B.P.Ed M.P.Ed COMPUTER TEACHER Clerks B.Lib, Attractive salary, Contact: 080-25611873, 7411135627 Email- svs.krp.bangalore@ gmail.com

REQUIRED WELL Experienced, Qualified ENGLISH TEACHER for High School. 'EVERSHINE ENGLISH SCHOOL', Kalidasa Layout, Srinagar, Bangalore-50. Contact: 9845907518

WANTED HEAD MISTRESS, Clerk with Computer knowledge, Teachers for all subjects, PT/Yoga, primary/High School, J.P.Nagar'3rd Phase, 9845042249/ 080-26590773

WANTED QUALIFIED TEACHERS For Primary and High School, PMS Public School, Bettahalasur, Bangalore 9632329017/ 9880113895.

WANTED TEACHERS ENGLISH, SCIENCE, MATHS, "L.R. CAMBRIDGE HIGHER PRIMARY & HIGH SCHOOL" Wilson Garden: 9743497065

ST.TERESA'S ENGLISH HIGHER PRIMARY SCHOOL Chamarajpet, Bengaluru-18. TEACHERS: MATHS, SCIENCE, and COMPUTER. Qualification BA B.Sc B.Ed D.Ed with Experience BA with English Major Fluency in Language stteresaenghig@gmail.com 9611647903 080-26707884

Multiple Vacancy

ELECTRONICS CITY INDUSTRIAL TOWNSHIP AUTHORITY
ELCITA
No. 7 (P), West Phase, Electronics City, Bengaluru - 560 100
Website : www.elcita.in Phone : 080- 4660 2222

ELCITA invites applications from suitable candidates for the following positions: **Assistant Manager –Security.**
Candidate should be a graduate with 5 years of experience in managing security and transport in industry or ex-serviceman with 15 years of relevant experience. Knowledge of Kannada and English are essential. Candidates with suitable experience in armed forces will be preferred.
Accounts Officer
Candidate should be B.Com/M.Com with 4 years of experience in book-keeping, general ledger, TDS, accounts-payable, accounts-receivable and budgeting. Must be familiar with advanced features of accounting software like Tally and Excel. Knowledge of Kannada and English are essential.
For details refer to : www.elcita.in
Last date for receipt of applications along with CV and ELCITA Biodata form: 31-3-2024 before 5PM
Email id : harshana.r@elcita.in
Email id : harshana.r@elcita.in

General

EMPLOYEE NEEDED! Business Development Officer for property developer company No investment, age above 30 years No experienced required. Earning Rs. 50,000/- per month Retired persons are eligible. Contact:- 9845334751.

A Bright Future Awaits you
ALBERT DAVID
In pursuant to our ambitious growth strategy, we intend to recruit talents across all the levels of all Strategic Business Units.
We are looking for experienced candidates in Gynaecology & Orthopaedic segment- TBMs/Product Specialists/ BDOs/FLMs/SLMs/TLMs across Karnataka

Apply if you are...	Salient Benefits...
Young & Dynamic Sales & Mkt. Executive	Attractive remuneration
Preferably Science Graduate / B Pharm	Better career growth
Good Communication skills & Personality	Rewards and incentives
Preferably experienced	Health benefits

Those who are ready to join us for a bright future, are requested to send their resume on ashish.thakur@adlindia.in OR Walk in with your resume to the address mentioned below

VENUE	TIMING	CONTACT
KANDALA DISTRIBUTORS, No.37/4, "Kandala Towers", South cross Rd, Basavanagudi (Nr Yediyur Lk), Bangalore- 560004	9:00 AM onwards on 20th - 22th March, 2024	9741944875

Engg/ Production Technical

HIRING
MOUNT ROOFING AND STRUCTURES PVT. LTD.
SENIOR CIVIL ENGINEERS
Min. 4 Yrs. experience Industrial Civil Projects.
Contact:
+91 9606075865
+91 9606905672
info@mountpeb.com
hr@mountpeb.com

REQUIRED CIVIL Engineer for Nivara Group a reputed real-estate developer. Candidates must be Civil with 3 years of experience in Villa and general construction. Contact: 9743477977, 9292159333

Accounts & Finance

WANTED 5 to 10 Years Experienced Accountant with Knowledge of MS Word, MS Excel, MS Office, Updated tally Version & Typing for the Reputed Electrical Contractors firm at Mahalakshmi Layout. Residents of Vijayanagar, M.L. Layout, MWM, Laggere, Basaveshwarnagar, Rajajinagar Preferred. Contact: 8884568192/ 9741024447

SENIOR ACCOUNTANT Wanted with 3-4 yearsExperience in Tally and accounting for a Food & Bakery Products manufacturing company.Contact: 6360449923

Cook

WANTED BRAHAMIN Cook lady/gent/ part/full time for Brahamin family J.P.Nagar 2nd Phase. 9845042249/ 9704288388

Part-Time Jobs

PART TIME Job SMS Typing work Laptop Sellphone Simcard Company Provide (Fee 1099): 7505708776/ 9389525534

Marketing & Sales

A REPUTED Security Agency Requires Field Officers, EX-Servicemen/ Civilians in Bengaluru. Ph No. 9900074600

Security & Detectives

WANTED FIELD OFFICER and OPERATION MANAGER for security company for White Field, Electronic City area. salary depends on experience- 9980911233,9980311233

HRD & Admin

ADMIN STAFF Required any Graduate for Office work at:Hulimavu, Bannerghatta Road, Bangalore. Send biodata-to: chinwik@gmail.com for walk-in interview Call:9448088666.

MORE Classifieds IN SUPPLEMENT

PUBLIC NOTICE

KARNATAKA SMALL SCALE INDUSTRIES ASSOCIATION

ಆಸಕ್ತಿ ವ್ಯಕ್ತಪಡಿಸುವಿಕೆ

ಕಾಸಿಯಾ, ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಗ್ರಗಣ್ಯ ಸಂಸ್ಥೆಯಾಗಿದ್ದು, ದಾಬಸ್‌ಪೇಟ್‌ಯಲ್ಲಿ ನಿರ್ಮಿಸುತ್ತಿರುವ ಕಾಸಿಯಾ ಶ್ರೇಷ್ಠತೆ ಮತ್ತು ನಾವಿನ್ಯತೆ ಕೇಂದ್ರ (ಕೆ.ಸಿ.ಒ&ಇ) ಯೋಜನೆಗೆ ಸಿವಿಲ್ ಮತ್ತು ಕಾರ್ಮಿಕ ಗುತ್ತಿಗೆದಾರರು ಹಾಗೂ ಸಾಮಗ್ರಿಗಳ ಪೂರೈಕೆದಾರರನ್ನು ಆಹ್ವಾನಿಸುತ್ತದೆ. ಕೆಲಸವು ಸಿವಿಲ್, ಪ್ಲಂಬಿಂಗ್ ಮತ್ತು ಸ್ಯಾನಿಟರಿ ಕೆಲಸ, ಪಿಇಬಿ, ಎಲೆಕ್ಟ್ರಿಕಲ್, ಲ್ಯಾಂಡ್‌ಸ್ಕೇಪ್, ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಗುತ್ತಿಗೆದಾರರು ಈ ಕ್ಷೇತ್ರದಲ್ಲಿ 10 ವರ್ಷಗಳ ಅನುಭವವನ್ನು ಹೊಂದಿರಬೇಕು. ಆಸಕ್ತ ಗುತ್ತಿಗೆದಾರರು/ಸಾಮಗ್ರಿಗಳ ಪೂರೈಕೆದಾರರು e.mail: presidentkassia@gmail.com ಮೂಲಕ ಅಥವಾ ಕಾಸಿಯಾ, ನಂ. 2/106, 17ನೇ ಕ್ರಾಸ್, ಎಂ.ಸಿ. ರಸ್ತೆ, ವಿಜಯನಗರ, ಬೆಂಗಳೂರು-560 040 ಗೆ 7 ದಿನಗಳೊಳಗೆ ಪತ್ರ ಮುಖೇನ ತಮ್ಮ ವಿವರಗಳನ್ನು ಸಲ್ಲಿಸಬಹುದಾಗಿದೆ.

MATRIMONIAL

Brides Wanted

SC/ ST

BRIDE WANTED
Well Settled Bangalore, Tamil Adi Dravida Scheduled Caste. Thirty Four years, Postgraduate MD Doctor, Seeking Suitable Bride. Caste No bar.
Contact: 81052 78145

Grooms Wanted

Brahmin

WANTED
Suitable Match for Brahmin Girl MD Pediatrics, 1988 born, 5'4". Preference Doctor, IT, IAS, PCS & Gazetted Officer. Preferred Location Bangalore.
Contact: 77529 51777

Hindu

GROOM REQUIRED
Tamil Girl, 28,5ft 5inch, Slim, Wheatish SC(AD), BE, MBA, Pursuing Course in IIM (Indore) & Working as Business Development Manager in MNC Company Bengaluru. Seeks Groom from Tamil / Caste & Language no bar. Contact : 9449061967 8105279188

Matrimonial Bureaus

ವಧು-ವರರ ಅನ್ವೇಷಣೆ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು-ವರರ ಅಂತರ್ಜಾಲ ತಾಣ.
http://www.hoysalakarnatakabrahmins.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ : 9886908152

PERSONAL

Change of Name

I,PAVITHRA K.S Resi/at 25,"Sumaithi Nilaya",7th Cross,5th Main,Srinidhi Layout, Konanakunte, Bangalore-62 have Changed my Name to PAVITHRA V BAYARI Vide Affidavit Dtd:16.03.2024 sworn before Notary G.R.Rajanna, Bangalore

I, VIJAYENDRA Resi/at 25,"Sumaithi Nilaya",7th Cross,5th Main,Srinidhi Layout, Konanakunte, Bangalore-62 have Changed my Name to VIJAYENDRA V BAYARI Vide Affidavit Dtd:16.03.2024 sworn before Notary G.R.Rajanna, Bangalore

I, AKTHARUNNISA W/o Late Syed Anwar, aged about 65 years, resident of No 108A, Near ITI College, Khadripura, Kolar 563101. Have changed my name to Akhtar Unnisa vide affidavit dated 08.12.2023 before Notary K.M Vijaya Kumar Kolar. Henceforth I shall be called as Akhtar Unnisa only.

Announcements

ANNOUNCEMENT
This is to bring to the notice that surname of **THEJAVATHY** D/o G.V Venkatesh residing at No.599, 1st Floor, 17th A Cross, Indiranagar 2nd stage , Bangalore-38 was inadvertently entered as Masimukku sasidhar in passport instead of Gudibanda Venkatesh which is the correct name as per PAN card, Aadhar Card, Driving License, Income tax department and Bank accounts. Henceforth, my surname will be **Gudibanda Venkatesh** and I will be addressed as **Gudibanda Venkatesh Thejavathy** sworn in by me in the affidavit dated 15/3/2024 attested by Advocate &Notary V. Rajashekara.

Moham Capital Pvt Ltd
RBI Regd. NBFC
J P Nagar, Bangalore
ಚಿನ್ನದ ಮೇಲೆ ಸಾಲ ಆಕರ್ಷಕ ಮಾಸಿಕ ಬಡ್ಡಿ ದರ @65* ಪೈಸಾ (ಷರತ್ತು ಮತ್ತು ನಿಬಂಧನೆಗಳು ಅನ್ವಯ)
* ಇಂದು ಒಂದು ಸಣ್ಣ ಉಳಿತಾಯ ಮುಂದಿನ ಕನಸಿಗೆ ಅಡಿಪಾಯ
ಸಂಪರ್ಕಿಸಿ:
9945007334, 8792488620
8792488624, 9739479102

ದೇಶದಲ್ಲೇ ಅತಿ ಉದ್ದದ ಯು–ಗರ್ಡರ್ ನಿರ್ಮಾಣ ವೀಕ್ಷಿಸಿದ ಸಚಿವ ಎಂ.ಬಿ ಪಾಟೀಲ

‘2025ಕ್ಕೆ ಉಪನಗರ ರೈಲು ಸಂಚಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್–2ರಲ್ಲಿ ಆರಂಭಿಕ ಹಂತವಾಗಿ ಚಿಕ್ಕಬಾಣಾವರ–ಯಶವಂತಪುರ ನಡುವೆ 2025ರ ಡಿಸೆಂಬರ್ ಒಳಗೆ ರೈಲು ಸಂಚಾರ ಆರಂಭವಾಗಲಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ದೇವನಹಳ್ಳಿ ಬಳಿಯ ಗೊಲ್ಲಹಳ್ಳಿಯ ಕ್ಯಾಸ್ಟಿಂಗ್ ಕಾರ್ಯಾಗಾರದಲ್ಲಿ ದೇಶದಲ್ಲೇ ಅತಿ ಉದ್ದದ (100 ಅಡಿ ಅಥವಾ 31 ಮೀಟರ್) ಯು-ಗರ್ಡರ್ ನಿರ್ಮಾಣ ಪ್ರಕ್ರಿಯೆಯನ್ನು ಶನಿವಾರ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು.

ಕಾರಿಡಾರ್–2 ಚಿಕ್ಕಬಾಣಾವರ–ಬೆನ್ನಿಗಾನಹಳ್ಳಿ ಮಾರ್ಗವು (ಮಲ್ಲಿಗೆ ಮಾರ್ಗ) 25 ಕಿ.ಮೀ. ದೂರವನ್ನು ಹೊಂದಿದೆ. ಅದರಲ್ಲಿ 16.5 ಕಿ.ಮೀ. ನೆಲಮಟ್ಟದಲ್ಲಿ ಇರಲಿದೆ. ಹೆಬ್ಬಾಳದಿಂದ ಯಶವಂತಪುರದವರೆಗೆ 8.5 ಕಿ.ಮೀ. ನಷ್ಟು ಎತ್ತರಿಸಿದ (ಎಲಿವೇಟೆಡ್) ಮಾರ್ಗ ನಿರ್ಮಾಣಗೊಳ್ಳಲಿದೆ. ಚಿಕ್ಕಬಾಣಾವರ–ಯಶವಂತಪುರ ನಡುವಿನ 7.4 ಕಿ.ಮೀ. ಮಾರ್ಗದಲ್ಲಿ ಮೊದಲು ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

31 ಮೀಟರ್ ಯು-ಗರ್ಡರ್ ಅನ್ನು ದೇಶದಲ್ಲಿ ಇದೇ ಮೊದಲ ಬಾರಿಗೆ ಬಿಎಸ್‌ಆರ್‌ಪಿಯಲ್ಲಿ ಬಳಸಲಾಗುತ್ತಿದೆ. ಇಂಥ 450 ಯು- ಗರ್ಡರ್ ಅಳವಡಿಸಲಾಗುವುದು. ಬೇರೆ ರೈಲ್ವೆ ಯೋಜನೆಗಳಲ್ಲಿ 28 ಮೀಟರ್ ಬಳಸಲಾಗುತ್ತಿತ್ತು ಎಂದು ವಿವರಿಸಿದರು.

ಎಲ್ ಆ್ಯಂಡ್ ಟಿ ಕ್ಯಾಸ್ಟಿಂಗ್ (ನಿರ್ಮಾಣ) ಯಾರ್ಡ್‌ನಲ್ಲಿ ಯು–ಗರ್ಡರ್ ಅಲ್ಲದೇ ಐ-ಗರ್ಡರ್ ಮತ್ತು ಪೈಯರ್ ಕ್ಯಾಪ್‌ಗಳನ್ನು ಕೂಡ ಕ್ಯಾಸ್ಟಿಂಗ್ ಮಾಡಲಾಗುತ್ತದೆ. ಮೇಲಿನ ಮಾರ್ಗದಲ್ಲಿ ಇಂತಹ 323 ಐ-ಗರ್ಡರ್, 283 ಪೈಯರ್ ಕ್ಯಾಪ್‌ಗಳನ್ನು ಬಳಸಲಾಗುತ್ತದೆ. ಇದರಿಂದ ವಯಾಡಕ್ಟ್ ಕೂರಿಸಲು ಹಿಡಿಯುವ ಸಮಯ ಕಡಿಮೆಗೊಳ್ಳಲಿದೆ. ಬಾಳಿಕೆಯ ಅವಧಿ ಹೆಚ್ಚುತ್ತದೆ ಹಾಗೂ ಹಣ ಉಳಿತಾಯವೂ ಆಗುತ್ತದೆ ಎಂದು ವಿವರಿಸಿದರು.

ಕಾರಿಡಾರ್ - 2ರಲ್ಲಿ ಉತ್ತಮವಾಗಿ ಕೆಲಸ ನಡೆಯುತ್ತಿದೆ. ನಾಗರಿಕ ಸೇವೆಗಳನ್ನು ಸ್ಥಳಾಂತರಿಸುವ ಬಗ್ಗೆ ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬೆಸ್ಕಾಂ, ಬಿಎಸ್‌ಎನ್‌ಎಲ್ ಹಾಗೂ ಇನ್ನಿತರ ಖಾಸಗಿ ಸಂಸ್ಥೆಗಳ ಜೊತೆ ಮಾತುಕತೆ ನಡೆಯುತ್ತಿದೆ ಎಂದು ಹೇಳಿದರು.

ಜಾಗದ ಸಮಸ್ಯೆ: ಕೆಂಗೇರಿ- ವೈಟ್‌ಫೀಲ್ಡ್ ಕಾರಿಡಾರ್‌ನಲ್ಲಿ ಕೆಂಗೇರಿ-ಕಂಟೋನ್ಮೆಂಟ್ ನಡುವೆ ಉಪನಗರ ಯೋಜನೆ ಜಾರಿಗೆ ಯಾವ ಸಮಸ್ಯೆಯೂ ಇಲ್ಲ. ಆದರೆ ಕಂಟೋನ್ಮೆಂಟ್- ವೈಟ್‌ಫೀಲ್ಡ್ ನಡುವೆ ಜಾಗದ ಸಮಸ್ಯೆ ಇದ್ದು, ಇಲ್ಲಿ ಎತ್ತರಿಸಿದ ಮಾರ್ಗ ನಿರ್ಮಿಸಬೇಕೆ ಅಥವಾ ಬೇರೆ ಯೋಜನೆ ರೂಪಿಸಬೇಕೇ ಎಂಬ ಬಗ್ಗೆ ರೈಲ್ವೆ ಇಲಾಖೆ ಜತೆ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು ಎಂದು ಎಂ.ಬಿ. ಪಾಟೀಲ ತಿಳಿಸಿದರು.

ಕೆ- ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್.ಮಂಜುಳಾ ಉಪಸ್ಥಿತರಿದ್ದರು.

ದೇವನಹಳ್ಳಿ ಬಳಿಯ ಗೊಲ್ಲಹಳ್ಳಿಯ ಕ್ಯಾಸ್ಟಿಂಗ್ ಕಾರ್ಯಾಗಾರದಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಗೆ ತಯಾರಾಗುತ್ತಿರುವ ಯು–ಗರ್ಡರ್ ನಿರ್ಮಾಣ ಪ್ರಕ್ರಿಯೆಯನ್ನು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ವೀಕ್ಷಿಸಿದರು. ಕೆ ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಉಪಸ್ಥಿತರಿದ್ದರು

ಅಂಕಿ ಅಂಶಗಳು

20% ಈವರೆಗೆ ಮುಗಿದಿರುವ ಬಿಎಸ್‌ಆರ್‌ಪಿ ಕಾಮಗಾರಿ	**119.18** ಎಕರೆ ಕಾರಿಡಾರ್–2ಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನು
1.26 ಎಕರೆ ಕಾರಿಡಾರ್–2ಕ್ಕೆ ಸ್ವಾಧೀನವಾಗಬೇಕಿರುವ ಜಮೀನು	**₹15,677** ಕೋಟಿ ಕಾರಿಡಾರ್–2ಕ್ಕೆ ಸ್ವಾಧೀನವಾಗಬೇಕಿರುವ ಜಮೀನು
148.17 ಕಿ.ಮೀ. ನಾಲ್ಕು ಕಾರಿಡಾರ್‌ಗಳ ಉದ್ದ	

ರೈಲ್ವೆ ಅಭಿಪ್ರಾಯಕ್ಕೆ ಆಕ್ಷೇಪ

ಉಪನಗರ ರೈಲು ಯೋಜನೆಯಂತಹ ದೊಡ್ಡ ಯೋಜನೆಗಳನ್ನು ಕಾರ್ಯಗತಗೊಳಿಸಲು ಬೇಕಾದ ತಾಂತ್ರಿಕ ಪರಿಣತಿ ಕೆ-ರೈಡ್ ಬಳಿ ಇಲ್ಲ ಎಂಬ ರೈಲ್ವೆ ಅಧಿಕಾರಿಗಳ ಅಭಿಪ್ರಾಯದಲ್ಲಿ ಸತ್ಯಾಂಶ ಇಲ್ಲ ಎಂದು ಎಂ.ಬಿ. ಪಾಟೀಲ ಆಕ್ಷೇಪ ವ್ಯಕ್ತಪಡಿಸಿದರು.

‘ಉಪನಗರ ರೈಲು ಯೋಜನೆ, ರೈಲ್ವೆ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಡಿ ನಡೆಯುತ್ತಿದ್ದಾಗ ಕೆಲಸ ಹಿಂದೆ ಬಿದ್ದಿತ್ತು. ಈಗ ಕೆ-ರೈಡ್ ಕೆಲಸವನ್ನು ಚುರುಕುಗೊಳಿಸಿ, ಸಮರ್ಥವಾಗಿ ನಿರ್ವಹಿಸುತ್ತಿದೆ. ನಮ್ಮಲ್ಲಿ ತಾಂತ್ರಿಕ ತಜ್ಞರು ಹಾಗೂ ಅನುಭವಿಗಳು ಇದ್ದಾರೆ. ರೈಲ್ವೆ ಅಧಿಕಾರಿಗಳ ಹೇಳಿಕೆ ಯೋಜನೆಯ ವಿಷಯವನ್ನು ರಾಜಕೀಯ ಕಾರಣಗೊಳಿಸುವ ದುರುದ್ದೇಶ ಹೊಂದಿದೆ. ಯಾವುದೇ ಕೆಸರೆರಚಾಟಕ್ಕೆ ರೈಲ್ವೆ ಆಸ್ಪದ ಕೊಡಬಾರದು’ ಎಂದು ಕೋರಿದರು.

‘ಪದ್ಮಶ್ರೀ: ಆಧುನಿಕ ಕೌಶಲಕ್ಕೆ ಆದ್ಯತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದ್ಮಶ್ರೀ ವಿದ್ಯಾಲಯವು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ 21ನೇ ಶತಮಾನಕ್ಕೆ ಅಗತ್ಯವಿರುವ ಕೌಶಲಗಳನ್ನು ಮೈಗೂಡಿಸಲು ಆದ್ಯತೆ ನೀಡುತ್ತಿರುವುದು ಅನುಕರಣೀಯ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ.ಜಯಕರ ಶ್ಲಾಘಿಸಿದರು.

‘ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸಸ್’ ನ್ಯಾಕ್ ಎ++ ಮಾನ್ಯತೆ ಪಡೆದು ಸ್ವಾಯತ್ತ ಶಿಕ್ಷಣ ಸಂಸ್ಥೆ ಸ್ಥಾನಮಾನಕ್ಕೆ ಪದಾರ್ಪಣೆ ಮಾಡಿದ ಪ್ರಯುಕ್ತ ಕೊಮ್ಮಘಟ್ಟದಲ್ಲಿರುವ ಕ್ಯಾಂಪಸ್‌ನಲ್ಲಿ ಶನಿವಾರ ಏರ್ಪಡಿಸಲಾಗಿದ್ದ ‘ನವೋತ್ಥಾನ’ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು ಮಾತನಾಡಿದರು.

ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ‘ಸಂಸ್ಥೆಯ ಬೋಧಕ ಸಿಬ್ಬಂದಿಯ ಪರಿಶ್ರಮ ಹಾಗೂ ಕಾಳಜಿಯಿಂದಾಗಿ ಈ ಸ್ಥಾನಮಾನ ಸಿಕ್ಕಿದೆ’ ಎಂದು ತಿಳಿಸಿದರು.

ಸಂಸ್ಥೆಯ ಪ್ರಾಂಶುಪಾಲರಾದ ಅನುರಾಧಾ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಟಿ.ಕೆ. ನಾರಾಯಣಪ್ಪ, ಅಧ್ಯಕ್ಷ ಸತೀಶ್, ನಿರ್ದೇಶಕರಾದ ರಾಜೇಶ್ ಶೆಣೈ, ಶಿವಪ್ರಸಾದ್, ಶ್ಯಾಮ್, ರಾಜಣ್ಣ ಪಾಲ್ಗೊಂಡಿದ್ದರು.

‘ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸಸ್’ ಕ್ಯಾಂಪಸ್‌ನಲ್ಲಿ ಶನಿವಾರ ಏರ್ಪಡಿಸಲಾಗಿದ್ದ ‘ನವೋತ್ಥಾನ’ ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ, ಶಾಸಕ ಸಿ.ಎನ್. ಅಶ್ವತ್ಥನಾರಾಯಣ, ಸಂಸ್ಥೆಯ ಪ್ರಾಂಶುಪಾಲರಾದ ಅನುರಾಧಾ, ವ್ಯವಸ್ಥಾಪಕ ನಿರ್ದೇಶಕ ಟಿ.ಕೆ. ನಾರಾಯಣಪ್ಪ, ಅಧ್ಯಕ್ಷ ಸತೀಶ್ ಪಾಲ್ಗೊಂಡಿದ್ದರು

ಗೌರಿ ಲಂಕೇಶ್ ಹತ್ಯೆ ಪ್ರಕರಣ: 13ನೇ ಆರೋಪಿಗೆ ಜಾಮೀನು ನಿರಾಕರಿಸಿದ ಸೆಷನ್ಸ್ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿನ 13ನೇ ಆರೋಪಿಯಾಗಿರುವ ಸುಜಿತ್ ಕುಮಾರ್‌ಗೆ ಬೆಂಗಳೂರಿನ ಸೆಷನ್ಸ್ ನ್ಯಾಯಾಲಯವು ಜಾಮೀನು ನಿರಾಕರಿಸಿದೆ.

ಪ್ರಕರಣದಲ್ಲಿ 11ನೇ ಆರೋಪಿಯಾಗಿರುವ ಮೋಹನ್ ನಾಯಕ್‌ಗೆ ಹೈಕೋರ್ಟ್ ಈಚೆಗೆ ಜಾಮೀನು ಮಂಜೂರು ಮಾಡಿತ್ತು. ಅದರ ಆಧಾರದಲ್ಲಿ ಜಾಮೀನು ಕೋರಿ ಶಿವಮೊಗ್ಗದ ಶಿಕಾರಿಪುರ ತಾಲ್ಲೂಕಿನ ಕಪ್ಪನಹಳ್ಳಿಯ ಸುಜಿತ್ ಸಲ್ಲಿಸಿದ್ದ ಅರ್ಜಿಯನ್ನು ಬೆಂಗಳೂರಿನ ಪ್ರಧಾನ ಸಿಟಿ ಸಿವಿಲ್ ಮತ್ತು ಸೆಷನ್ಸ್ (ವಿಶೇಷ) ನ್ಯಾಯಾಲಯದ ನ್ಯಾಯಾಧೀಶ ಮುರಳೀಧರ್ ಪೈ ಬಿ. ಅವರು ತಿರಸ್ಕರಿಸಿದ್ದಾರೆ.

‘ಆರೋಪಿ ಸುಜಿತ್ ಅವರು 2010ರಿಂದಲೂ ಸಂಘಟಿತ ಅಪರಾಧ ಸಂಘದ ಸದಸ್ಯನಾಗಿದ್ದು, ಗೌರಿ ಲಂಕೇಶ್ ಹತ್ಯೆ ಪ್ರಕರಣದ ಇತರೆ ಆರೋಪಿಗಳೊಂದಿಗೆ ಸಂಪರ್ಕದಲ್ಲಿದ್ದ. ಹೀಗಾಗಿ, ಆತನ ವಿರುದ್ಧ ಮೇಲ್ನೋಟಕ್ಕೆ ದಾಖಲೆಗಳಿವೆ’ ಎಂದು ಆದೇಶದಲ್ಲಿ ಹೇಳಲಾಗಿದೆ.

‘ಸುಜಿತ್ ವಿರುದ್ಧ ಉಪ್ಪಾರಪೇಟೆ, ಮಹಾರಾಷ್ಟ್ರದ ಕಾಳಚೌಕಿ, ದಾವಣಗೆರೆ ಲೇಔಟ್, ಉಡುಪಿ ನಗರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿವೆ. ಇಲ್ಲಿನ ಕೆಲವು ಪ್ರಕರಣಗಳಲ್ಲಿ ಆತ ಸ್ಫೋಟಕಗಳ ಕಾಯಿದೆ ಮತ್ತು ಶಸ್ತ್ರಾಸ್ತ್ರ ಕಾಯಿದೆ ಅಡಿ ಆರೋಪಿಯಾಗಿದ್ದಾನೆ. ಹೀಗಾಗಿ, ಮೋಹನ್ ನಾಯಕ್ ಪ್ರಕರಣಕ್ಕಿಂತ ಸುಜಿತ್ ಪ್ರಕರಣ ಭಿನ್ನವಾಗಿದೆ’ ಎಂದು ನ್ಯಾಯಾಲಯವು ಆದೇಶದಲ್ಲಿ ಹೇಳಿದೆ.

‘2022ರ ಜುಲೈ 4ರಂದು ಪ್ರಕರಣದ ವಿಚಾರಣೆ ಆರಂಭವಾಗಿದ್ದು, ಇಲ್ಲಿಯವರೆಗೆ 527 ಸಾಕ್ಷಿಗಳ ಪೈಕಿ ಪ್ರಾಸಿಕ್ಯೂಷನ್ 119 ಸಾಕ್ಷಿಗಳ ವಿಚಾರಣೆ ನಡೆಸಿದೆ. ಹಾಲಿ ಪ್ರಕರಣವನ್ನು ತುರ್ತಾಗಿ ನಿರ್ಧರಿಸುವ ಸಂಬಂಧ ರಾಜ್ಯ ಸರ್ಕಾರವು ವಿಶೇಷ ನ್ಯಾಯಾಲಯ ಆರಂಭಿಸುವ ಪ್ರಕ್ರಿಯೆ ಆರಂಭಿಸಿದೆ. ಹೀಗಾಗಿ, ಪ್ರಕರಣದ ಗಂಭೀರತೆ ಅರಿತು ಜಾಮೀನು ನೀಡಲು ವಿಚಾರಣೆ ಮುಕ್ತಾಯಗೊಳ್ಳುವುದು ವಿಳಂಬವಾಗಲಿದೆ ಎಂಬ ಆಧಾರವನ್ನು ಒಪ್ಪಲಾಗದು’ ಎಂದು ನ್ಯಾಯಾಲಯ ಹೇಳಿದೆ.

‘ಗಂಭೀರ ಕಾಯಿಲೆಯಿಂದ ಬಳಲುತ್ತಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಅಥವಾ ಜೈಲಿನಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಆರೋಪಿ ಸಲ್ಲಿಸಿಲ್ಲ. ಹೀಗಾಗಿ, ಯಾವುದೇ ಸಕಾರಣ ಇಲ್ಲದಿರುವುದರಿಂದ ಸುಜಿತ್ ಅರ್ಜಿಯನ್ನು ವಜಾ ಮಾಡಲಾಗಿದೆ’ ಎಂದು ನ್ಯಾಯಾಲಯ ಆದೇಶದಲ್ಲಿ ಹೇಳಿದೆ.

ಮೆಟ್ರೊ: ಏಜೆನ್ಸಿ ಮಾಲೀಕ ಎಎಸ್‌ಒ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸಿಬ್ಬಂದಿಗೆ ಲೈಂಗಿಕ ಕಿರುಕುಳದ ನೀಡಿದ ಆರೋಪದ ಮೇರೆಗೆ ‘ನಮ್ಮ ಮೆಟ್ರೊ’ ರಾಜಾಜಿನಗರ ನಿಲ್ದಾಣದ ಸಹಾಯಕ ಸೆಕ್ಷನ್ ಅಧಿಕಾರಿ (ಎಎಸ್‌ಒ) ಪಿ.ಗಜೇಂದ್ರ ಹಾಗೂ ದೂರು ನೀಡಿದರೂ ಕ್ರಮ ಕೈಗೊಳ್ಳದ ‘ವಿಸಿಡಂ ಏಜೆನ್ಸಿ’ ಮಾಲೀಕ ಪ್ರಕಾಶ್ ನಿಟ್ಟೂರು ವಿರುದ್ಧ ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ನಮ್ಮ ಮೆಟ್ರೊ’ದ ನಿಲ್ದಾಣದ ಮಹಿಳಾ ಸಿಬ್ಬಂದಿಯೊಬ್ಬರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಏನಿದು ಪ್ರಕರಣ?: ‘ಗಜೇಂದ್ರ ಅವರು ಮಹಿಳಾ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಮಹಿಳಾ ಸಿಬ್ಬಂದಿಯೊಬ್ಬರ ಮೈ-ಕೈ ಮುಟ್ಟಿ ಅಶ್ಲೀಲವಾಗಿ ಮಾತನಾಡಿಸುತ್ತಿದ್ದರು. ಅಲ್ಲದೇ ಬೇರೆ ಸ್ಟೇಷನ್‌ಗೆ ವರ್ಗಾವಣೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ವಿಸಿಡಂ ಏಜೆನ್ಸಿ ಮಾಲೀಕ ಪ್ರಕಾಶ್ ಅವರಿಗೆ ಮಾಹಿತಿ ನೀಡಿದ್ದರೂ ಅವರು ಗಜೇಂದ್ರ ವಿರುದ್ಧ ಕ್ರಮ ಕೈಗೊಂಡಿರಲಿಲ್ಲ. ಅವರೊಂದಿಗೆ ಸಹಕರಿಸಿ. ಇಲ್ಲದಿದ್ದರೆ ಕೆಲಸ ಬಿಟ್ಟು ಹೋಗಿ. ನಿಮಗಾಗಿ ಅಧಿಕಾರಿಯನ್ನು ಎದುರು ಹಾಕಿಕೊಳ್ಳಲು ಸಾಧ್ಯವಿಲ್ಲ. ನಿಮ್ಮನ್ನೇ ಕೆಲಸದಿಂದ ತೆಗೆದು ಹಾಕುತ್ತೇನೆಂದು ಬೆದರಿಕೆ ಹಾಕಿದ್ದರು’ ಎಂದು ದೂರಿನಲ್ಲಿ ಹೇಳಲಾಗಿದೆ.

ಸಂತ್ರಸ್ತ ಮಹಿಳಾ ಸಿಬ್ಬಂದಿ ರಾಜ್ಯ ಮಹಿಳಾ ಆಯೋಗಕ್ಕೂ ದೂರು ನೀಡಿದ್ದರು. ದೂರು ಆಧರಿಸಿ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಆಯೋಗದ ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

ಅಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ, ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ನೇತೃತ್ವದಲ್ಲಿ ಮೆಟ್ರೊ ಮಹಿಳಾ ಸಿಬ್ಬಂದಿ ಕಳೆದ ವಾರ ಪ್ರತಿಭಟನೆ ನಡೆಸಿದ್ದರು.

ಕಳವು: 85 ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲಿಸಿ ಆರೋಪಿಗಳ ಪತ್ತೆ

ಅಪರಾಧ ಸುದ್ದಿ

ಬೆಂಗಳೂರು: ರಸ್ತೆಯಲ್ಲಿ ಮಹಿಳೆಯರನ್ನು ಅಡ್ಡಗಟ್ಟಿ ಚಿನ್ನಾಭರಣ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ದಕ್ಷಿಣ ವಿಭಾಗ ವ್ಯಾಪ್ತಿಯ ತಲಘಟ್ಟಪುರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಓಜೇನಹಳ್ಳಿ ಗ್ರಾಮದ ಪ್ರಸನ್ನಕುಮಾರ್ (38) ಅಲಿಯಾಸ್ ಪ್ರಸನ್ನ ಹಾಗೂ ಜೆ.ಪಿ.ನಗರದ ಕೊತ್ತನೂರು ದಿಣ್ಣೆ ಮುಖ್ಯರಸ್ತೆಯ ನಿವಾಸಿ ದಯಾನಂದ್ (39) ಬಂಧಿತರು.

‘ಬಂಧಿತರಿಂದ ₹2.75 ಲಕ್ಷ ಮೌಲ್ಯದ 44 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿಕೊಂಡಿದ್ದ ಬೈಕ್‌ವೊಂದನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಾರ್ಚ್ 12ರಂದು ಬೆಳಿಗ್ಗೆ ಮಹಿಳೆಯೊಬ್ಬರು ರಸ್ತೆ ಬದಿಯಲ್ಲಿ ನಡೆದು ಹೋಗುತ್ತಿದ್ದರು. ಅವರನ್ನು ಅಡಗಟ್ಟಿದ ಇಬ್ಬರು ಅಪರಿಚಿತರು ಚಿನ್ನದ ಸರ ಕಸಿದು ಪರಾರಿಯಾಗಿದ್ದರು. ಮಹಿಳೆ ನೀಡಿದ್ದ ದೂರು ಆಧರಿಸಿ ತನಿಖಾ ತಂಡ ರಚಿಸಲಾಗಿತ್ತು. ಕೃತ್ಯ ನಡೆದ ಸ್ಥಳದಿಂದ 20 ಕಿ.ಮೀ. ಅಂತರದಲ್ಲಿ ಅಳವಡಿಸಲಾಗಿರುವ 85 ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿ, ಈ ಇಬ್ಬರು ಆರೋಪಿಗಳನ್ನು ಬಂಧಿಸಲಾಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿಕ್ಕಿ: ನಿಮ್ಹಾನ್ಸ್ ಉದ್ಯೋಗಿ ಸಾವು

ಬೆಂಗಳೂರು: ರಸ್ತೆ ಬದಿಯಲ್ಲಿ ನಿಲುಗಡೆ ಮಾಡಲಾಗಿದ್ದ ಕಾರಿನ ಡೋರ್ ಅನ್ನು ಏಕಾಏಕಿ ತೆಗೆದ ಪರಿಣಾಮ, ಡೋರಿಗೆ ಬೈಕ್ ಡಿಕ್ಕಿ ಹೊಡೆದು ನಿಮ್ಹಾನ್ಸ್ ಉದ್ಯೋಗಿ ವೆಂಕಟೇಶ್ (50) ಮೃತಪಟ್ಟಿದ್ದಾರೆ.

‘ತಿಲಕ್‌ನಗರ ಮುಖ್ಯರಸ್ತೆಯ ನಿಮ್ಹಾನ್ಸ್ ಆಸ್ಪತ್ರೆಯ ಸಮೀಪ ರಸ್ತೆಬದಿಯಲ್ಲಿ ಕಾರನ್ನು ನಿಲುಗಡೆ ಮಾಡಲಾಗಿತ್ತು. ರಾತ್ರಿ 8 ಗಂಟೆ ಸುಮಾರಿಗೆ ವೆಂಕಟೇಶ್, ಕಾರು ನಿಲುಗಡೆ ಮಾಡಿದ ಮಾರ್ಗದಲ್ಲೇ ತೆರಳುತ್ತಿದ್ದರು. ಕಾರಿನಲ್ಲಿದ್ದವರು ಏಕಾಏಕಿಯಾಗಿ ಡೋರ್ ತೆಗೆದಿದ್ದರಿಂದ ಬೈಕ್ ಸವಾರನಿಗೆ ತಗುಲಿ ಅವರು ಕೆಳಕ್ಕೆ ಬಿದ್ದಿದ್ದರು. ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು’ ಎಂದು ಪೊಲೀಸರು ಹೇಳಿದರು.

ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕಬ್ಬು ನುರಿಸುವ ಗಾಡಿ ಕಳ್ಳತನ: ಇಬ್ಬರ ಬಂಧನ

ಬೆಂಗಳೂರು: ಮೋಟರ್ ಚಾಲಿತ ಕಬ್ಬು ನುರಿಸಿ ಹಾಲು ತಯಾರಿಸುವ ಗಾಡಿಯನ್ನು ಕಳವು ಮಾಡಿದ್ದ ಇಬ್ಬರು ಕಳ್ಳರನ್ನು ದಕ್ಷಿಣ ವಿಭಾಗದ ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಂಜನಾಪುರ ಆವಲಹಳ್ಳಿಯ ನಿವಾಸಿಗಳಾದ ವಿಜಯಕುಮಾರ್ ಹಾಗೂ ಮನ್ಸೂರ್ ಪಾಷಾ ಬಂಧಿತ ಆರೋಪಿಗಳು.

ಬಂಧಿತರಿಂದ ₹1 ಲಕ್ಷ ಮೌಲ್ಯದ ಮೋಟರ್ ಚಾಲಿತ ಕಬ್ಬು ನುರಿಸುವ ಗಾಡಿಯನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಸೈಯದ್ ನಫೀರುಖ್ ಅವರು ನೀಡಿದ ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯ ಅಂಜನಾಪುರ ಕೆರೆಯ ಬಳಿ ಸೈಯದ್ ನಫೀರುಖ್ ಕಬ್ಬಿನ ಹಾಲು ತಯಾರಿಸಿ, ಮಾರಾಟ ಮಾಡುತ್ತಿದ್ದರು. ಅಲ್ಲಿದ್ದ ಯಂತ್ರವನ್ನು ಮಾರ್ಚ್ 2ರಂದು ಇಬ್ಬರು ಕಳವು ಮಾಡಿದ್ದರು. ಕಳವು ಮಾಡಿದ ಯಂತ್ರವನ್ನು ಕಬ್ಬಿಣ ಖರೀದಿಸುವ ವ್ಯಾಪಾರಿಗೆ ಮಾರಾಟ ಮಾಡಿ ₹30 ಸಾವಿರ ಪಡೆದುಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಕೆ.ಎನ್. ಬಾಲಕೃಷ್ಣ

ಬೆಂಗಳೂರು: ಗಿರಿನಗರ ನಿವಾಸಿ ಹಾಗೂ ‘ಗಾಂಧಿ ಬಜಾರ್’ ಪತ್ರಿಕೆಯ ಸಂಪಾದಕರಾಗಿದ್ದ ಕೆ.ಎನ್. ಬಾಲಕೃಷ್ಣ (ಬಾಕಿನ) (81) ಅವರು ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ. ಅಂತ್ಯಕ್ರಿಯೆ ಮಂಗಳವಾರವೇ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಅಡುಗೆ ಅನಿಲ ಸಿಲಿಂಡರ್ ಸ್ಫೋಟ: ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡುಗೆ ಅನಿಲ ಸೋರಿಕೆಯಿಂದ ಸಂಭವಿಸಿದ ಸಿಲಿಂಡರ್ ಸ್ಫೋಟದಲ್ಲಿ ನಾಲ್ವರು ಗಾಯಗೊಂಡ ಘಟನೆ ಬಾಗಲೂರು ಪೊಲೀಸ್ ಠಾಣೆ ವ್ಯಾಪ್ತಿಯ ಬೆಳ್ಳಹಳ್ಳಿ ಜಂಕ್ಷನ್‌ನಲ್ಲಿ ನಡೆದಿದೆ.

ಗಾಯಾಳು, ಹೆಗಡೆನಗರ ನಿವಾಸಿ ಶೇಕ್ ನವೀದ್ ನೀಡಿದ ದೂರಿನ ಮೇರೆಗೆ ತಳ್ಳುವ ಗಾಡಿ ಮಾಲೀಕ ಇನಾಯತ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಇನಾಯತ್, ಬೆಳ್ಳಹಳ್ಳಿ ಜಂಕ್ಷನ್‌ನಲ್ಲಿ ತಳ್ಳುವ ಗಾಡಿಯಲ್ಲಿ ಫಾಸ್ಟ್ ಫುಡ್ ವ್ಯಾಪಾರ ನಡೆಸುತ್ತಿದ್ದಾರೆ. ಮಾರ್ಚ್ 12ರ ಬೆಳಿಗ್ಗೆ ಅಡುಗೆ ಅನಿಲದ ಸಿಲಿಂಡರ್ ತಂದು ತಮ್ಮ ಗಾಡಿ ಪಕ್ಕದಲ್ಲಿ ಇರಿಸಿ ಇನ್ನೊಂದು ಸಿಲಿಂಡರ್ ತರಲು ತೆರಳಿದ್ದರು. ಇದೇ ಸಮಯಕ್ಕೆ ಶೇಕ್ ನವೀದ್ ತಮ್ಮ ದ್ವಿಚಕ್ರ ವಾಹನದಲ್ಲಿ ಜಂಕ್ಷನ್ ಕಡೆಯಿಂದ ಹೆಗಡೆನಗರದ ಕಡೆಗೆ ತೆರಳುತ್ತಿದ್ದರು. ಈ ವೇಳೆ, ತಳ್ಳುವ ಗಾಡಿ ಬಳಿ ಬೆಂಕಿ ಹೊತ್ತಿಕೊಂಡು ಉರಿಯುತ್ತಿರುವುದು ಕಾಣಿಸಿದೆ. ತಕ್ಷಣ ಬೈಕ್ ನಿಲ್ಲಿಸಿ, ಮ್ಯಾಟ್ ತೆಗೆದುಕೊಂಡು ಬೆಂಕಿ ನಂದಿಸಲು ಮುಂದಾಗಿದ್ದಾರೆ.

ಆಗ ಪಕ್ಕದಲ್ಲಿದ್ದ ಅಡುಗೆ ಅನಿಲ ಸಿಲಿಂಡರ್‌ಗೆ ಬೆಂಕಿ ತಗುಲಿ, ಸಿಲಿಂಡರ್ ಸ್ಫೋಟಗೊಂಡಿದೆ. ಸ್ಫೋಟದ ರಭಸಕ್ಕೆ ಶೇಕ್ ನವೀದ್ ಸೇರಿದಂತೆ ಸಮೀಪದಲ್ಲಿದ್ದ ಮೂವರು ಗಾಯಗೊಂಡಿದ್ದಾರೆ. ಪಕ್ಕದಲ್ಲಿದ್ದ ಕಾರಿಗೂ ಹಾನಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರಣ ನಿಗೂಢ: ಏಕಾಏಕಿ ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ತಿಳಿದು ಬಂದಿಲ್ಲ. ಪಾದಚಾರಿ ಮಾರ್ಗದಲ್ಲಿ ತಳ್ಳುವ ಗಾಡಿ ನಿಲ್ಲಿಸಿ, ಯಾವುದೇ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳದೆ ಅಡುಗೆ ಅನಿಲ ಸಿಲಿಂಡರ್ ಇರಿಸಿದ್ದ ಮಾಲೀಕನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಗಾಯಾಳು ಶೇಕ್ ನವೀದ್ ಅವರು ದೂರು ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕ ವಶಕ್ಕೆ

ಬೆಂಗಳೂರು: ಏಕಮುಖ ರಸ್ತೆಯಲ್ಲಿ ನಿಯಮ ಉಲ್ಲಂಘಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಬೈಕ್ ಸವಾರನ ಮೇಲೆ ಹಲ್ಲೆ ನಡೆಸಿದ್ದ ಕಾರು ಚಾಲಕನನ್ನು ಮಹದೇವಪುರ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ವೈಟ್‌ಫೀಲ್ಡ್ ಬಳಿಯ ಜಂಕ್ಷನ್‌ನಲ್ಲಿ ಶುಕ್ರವಾರ ಏಕಮುಖ ರಸ್ತೆಯಲ್ಲಿ ಆರೋಪಿ ಸುನೀಲ್(37) ಕಾರು ಚಲಾಯಿಸಿಕೊಂಡು ಬರುತ್ತಿದ್ದರು. ಅದೇ ಮಾರ್ಗದಲ್ಲಿ ಎದುರು ಬಂದ ಬೈಕ್ ಸವಾರ ಪ್ರಶ್ನಿಸಿದ್ದಾರೆ. ಇದರಿಂದ ಕೋಪಗೊಂಡ ಆರೋಪಿ, ಏಕಾಏಕಿ ಬೈಕ್ ಸವಾರನ ಮೇಲೆ ಹಲ್ಲೆ ನಡೆಸಿದ್ದಾನೆ. ಈ ದೃಶ್ಯವನ್ನು ಸ್ಥಳೀಯರೊಬ್ಬರು ಸೆರೆ ಹಿಡಿದು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಹಾಕಿದ್ದರು. ವಿಡಿಯೊ ಆಧರಿಸಿ, ಕಾರು ಚಾಲಕ ಸುನೀಲ್‌ನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಅವಳ ಸಾಧನೆ ಸಂಭ್ರಮ

SPORT UTILITY VEHICLES
mahindra
presents
ಪ್ರಜಾವಾಣಿ
ಸಾಧಕಿಯರು

ಕ್ಯಾನ್ಸರ್ ಕೂಡ ಒಂದು ಕಾಯಿಲೆ. ಇದಕ್ಕೆ ಯಾರೂ ಹೆದರಬಾರದು. ಗುಣಮುಖರಾಗಬಹುದು. ಇದರ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದ್ದೇನೆ. ಈ ಪ್ರಶಸ್ತಿ ಸಿಕ್ಕಿದ್ದರಿಂದ ಮತ್ತಷ್ಟು ಜವಾಬ್ದಾರಿ ಹೆಚ್ಚಾಗಿದೆ. ಹುಮ್ಮಸ್ಸಿನಿಂದ ಕೆಲಸ ಮಾಡುವೆ

ವಿಜಯಲಕ್ಷ್ಮಿ ದೇಶಮಾನೆ, ಕ್ಯಾನ್ಸರ್ ತಜ್ಞೆ

ಅಂಧತ್ವದ ಮಧ್ಯೆ ವಿದೇಶಕ್ಕೆ ಹೋಗಿ, ದೊಡ್ಡ ಸಾಧನೆ ಮಾಡುವ ಮೂಲಕ ಭಾರತದ ಹೆಸರು ಬೆಳಗಬೇಕೆಂಬ ಆಸೆಯಿತ್ತು. ಈ ಪ್ರಶಸ್ತಿ ಸಮಾಜದಲ್ಲಿ ಮತ್ತಷ್ಟು ಗೌರವ ಹೆಚ್ಚಿಸಿದೆ. ಈ ಪ್ರಶಸ್ತಿಯನ್ನು ನನ್ನ ಕುಟುಂಬಕ್ಕೆ ಅರ್ಪಿಸುತ್ತೇನೆ

ಯು. ವರ್ಷಾ, ಕ್ರಿಕೆಟ್ ಆಟಗಾರ್ತಿ

ಮಹಿಳೆಯರು ಎಷ್ಟೇ ಸಾಧನೆ ಮಾಡಿದರೂ ಗುರುತಿಸಿ, ಪ್ರೋತ್ಸಾಹಿಸುವವರ ಸಂಖ್ಯೆ ಕಡಿಮೆ. ಹಳ್ಳಿಯಲ್ಲಿ ಇರುವ ನಮ್ಮನ್ನೂ 'ಪ್ರಜಾವಾಣಿ' ಗುರುತಿಸಿದೆ. ಇದೇ ನಮಗೆ ದೊಡ್ಡ ಪ್ರಶಸ್ತಿ. ನಮ್ಮೆಲ್ಲಾ ನೋವು, ಅವಮಾನಗಳನ್ನು ಮರೆಸಿದೆ

ಸುಜಾತಾ ಮತ್ತು ರೂಪಾ ಮರಡಿ, ಕೃಷಿಕರು

ನಾನು ಮಾಡುವ ವೃತ್ತಿ ಕಠಿಣವಾದದ್ದು. ಹೆಣ್ಣಾಗಿ ಈ ವೃತ್ತಿ ಮಾಡುವಾಗ ಸಾಕಷ್ಟು ಅವಮಾನಕ್ಕೆ ಒಳಪಟ್ಟಿದ್ದೇನೆ. ಈ ಪ್ರಶಸ್ತಿ ಸಿಕ್ಕಿದ್ದರಿಂದ ನನಗೆ ಮತ್ತಷ್ಟು ಹುಮ್ಮಸ್ಸು ದೊರೆತಿದೆ. ಹೆಣ್ಣುಮಕ್ಕಳು ಕಷ್ಟಗಳನ್ನು ಮೆಟ್ಟಿ ನಿಲ್ಲಬೇಕು

ಶಾರದಾ ಬಡಿಗೇರ, ಲಾರಿ ಕವಚ ಕಟ್ಟುವವರು

ನನ್ನ ಸೇವೆಯನ್ನು ಗುರುತಿಸಿ 'ಪ್ರಜಾವಾಣಿ' ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ. ಈ ಪ್ರಶಸ್ತಿಯು ಚಳವಳಿಯಲ್ಲಿ ಭಾಗವಹಿಸುವಂತಹ ಎಲ್ಲರಿಗೂ ಸಂದ ಪುರಸ್ಕಾರವಾಗಿದೆ. ದಲಿತ ಚಳವಳಿಗೆ ಬಲ ತುಂಬಿದಂತೆ ಆಗಿದೆ

ಕೆ.ಪಿ.ಅಶ್ವಿನಿ, ದಲಿತ ಹೋರಾಟಗಾರ್ತಿ

'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿ ಪುರಸ್ಕೃತರೊಂದಿಗೆ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮತ್ತು ನಟಿ ತಾರಾ ಅನೂರಾಧಾ

ಸಾಧನೆಗೆ ನೀವೇ ಸ್ಫೂರ್ತಿ...

ಮೂರು ಗಂಟೆಗೂ ಹೆಚ್ಚು ಹೊತ್ತು ನಡೆದ ಸಾಧಕಿಯರ ಕಾರ್ಯಕ್ರಮವು ಎಲ್ಲರನ್ನೂ ಭಾವಪೂರ್ಣಗೊಳಿಸಿತು. ಸಾಧಕಿಯರ ಜೊತೆ ಬಂದ ಕುಟುಂಬ ಸದಸ್ಯರು, ಸ್ನೇಹಿತರು ಮತ್ತು ಸಂಗಡಿಗರು ಅಲ್ಲದೇ ವಿವಿಧ ಕ್ಷೇತ್ರಗಳಿಂದ ಬಂದ ಪ್ರಮುಖರು, ಸಂಘಸಂಸ್ಥೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹರ್ಷ ವ್ಯಕ್ತಪಡಿಸಿದರು.

ಸಾಧಕಿಯರ ಕುರಿತು ಒಂದೊಂದು ವಿಡಿಯೊ ಪ್ರಸಾರವಾದಾಗ ಮತ್ತು ಸಾಧನೆಯ ವಿವರ ಹೇಳುವಾಗ, ಎಲ್ಲರೂ ಆಸಕ್ತಿಯಿಂದ ನೋಡಿದರು ಮತ್ತು ಆಲಿಸಿದರು. ಕಷ್ಟಪಟ್ಟು ಸಮಾಜಕ್ಕೆ ಕೊಡುಗೆ ನೀಡಿದವರನ್ನು ಮತ್ತು ವಿಶಿಷ್ಟ ರೀತಿಯಲ್ಲಿ ಸಾಧನೆ ಮಾಡಿದವರನ್ನೇ ಆಯ್ಕೆ ಮಾಡಲಾಗಿದೆ ಎಂದು ಹಲವರು ಹೇಳಿದರು. ಕಾರ್ಯಕ್ರಮಕ್ಕೆ ಬಂದವರೆಲ್ಲರೂ ಸಾಧಕಿಯರನ್ನು ಮಾತನಾಡಿಸಿದರು. 'ನಿಮ್ಮ ಸಾಧನೆಯೇ ನಮಗೆಲ್ಲರಿಗೂ ಸ್ಫೂರ್ತಿ' ಎಂದು ಹಲವರು ಹೇಳಿ, ಅಭಿನಂದಿಸಿದರು. ಹಲವರು ಸೆಲ್ಫಿ ಕ್ಲಿಕ್ಕಿಸಿಕೊಂಡರು.

ದೊಡ್ಡ ವೇದಿಕೆಯಲ್ಲಿ 'ಸಾಧಕಿ' ಎಂದು ಪ್ರಶಸ್ತಿ ಪಡೆದಿದ್ದು ನನಗೆ ಖುಷಿ ತಂದಿದೆ. ಇದು ನನ್ನ ಬದುಕಿನ ದೊಡ್ಡ ಪ್ರಶಸ್ತಿ. ನನ್ನ ಜವಾಬ್ದಾರಿ ಇನ್ನಷ್ಟು ಹೆಚ್ಚಿಸಿದೆ. ಇನ್ನಷ್ಟು ಉತ್ತಮ ಕೆಲಸ ಮಾಡಲು ಪ್ರೇರಣೆ, ಪ್ರೋತ್ಸಾಹ ನೀಡಿದೆ

ಗೌರಿ ಶಿವಯೋಗಿ, ಪಕ್ಷಿ ರಕ್ಷಕಿ

ಎಲೆಮರೆಯಲ್ಲಿ ಇದ್ದವರನ್ನು ಗುರುತಿಸಿ 'ಪ್ರಜಾವಾಣಿ' ಪ್ರಶಸ್ತಿ ನೀಡಿದ್ದು ಶ್ಲಾಘನೀಯ. ಗ್ರಾಮೀಣ ಭಾಗದ ಸಾಧಕಿಯರನ್ನು ಮುಖ್ಯವಾಹಿನಿಗೆ ಕರೆತರುವ ಪ್ರಯತ್ನ ಹಾಗೂ ಸ್ಫೂರ್ತಿ ತುಂಬುವ ಪತ್ರಿಕೆಯ ಕಾರ್ಯ ಮೆಚ್ಚುವಂಥದ್ದು

ಎಂ.ಶೀಲಾರಾಣಿ, ಮುಖ್ಯ ಶಿಕ್ಷಕಿ

ನಮ್ಮದು ಕುಗ್ರಾಮ. ನನ್ನ ಸೇವೆ ಯಾರೂ ಗುರುತಿಸಿರಲಿಲ್ಲ. ಮಗು ನಾಮಕರಣ ಕಾರ್ಯಕ್ರಮದಲ್ಲಿ ನನ್ನ ಬಗ್ಗೆ ಹೆಮ್ಮೆಯಿಂದ ಹೇಳುತ್ತಿದ್ದರು. ಮೊದಲ ಬಾರಿಗೆ ಇಂತಹ ದೊಡ್ಡ ಪ್ರಶಸ್ತಿ ಸಿಕ್ಕಿರುವುದು ನನಗೆ ಸಂತಸ ಉಂಟು ಮಾಡಿದೆ

ಶಿವಲಿಂಗಮ್ಮ, ಸೂಲಗಿತ್ತಿ

ಈ ಪ್ರಶಸ್ತಿಯನ್ನು ನಾನು ಸಾಂಕೇತಿಕವಾಗಿ ಸ್ವೀಕರಿಸಿರಬಹುದು. ಆದರೆ, ಎಲ್ಲ ಬುದ್ಧಿಮಾಂದ್ಯ ಮಕ್ಕಳಿಗೆ 'ಪ್ರಜಾವಾಣಿ' ಸಲ್ಲಿಸಿದ ವಿಶೇಷ ಗೌರವವಿದು. ಬುದ್ಧಿಮಾಂದ್ಯ ಮಕ್ಕಳಿಗೆ ಹೆಚ್ಚು ಕರುಣೆ, ಪ್ರೀತಿ ತೋರುವುದು ಅಗತ್ಯವಿದೆ

ಅಮೃತವಲ್ಲಿ, ಬುದ್ಧಿಮಾಂದ್ಯ ಮಕ್ಕಳ ಶಿಕ್ಷಕಿ

ಯಾವುದೇ ಪ್ರಚಾರ, ಸನ್ಮಾನಕ್ಕೆ ಒತ್ತುಕೊಡದೇ ಬಡಜನರ ಸೇವೆ ಮಾಡುತ್ತಾ ಬಂದಿರುವ ನನಗೆ 'ಪ್ರಜಾವಾಣಿ' ನೀಡಿದ ಪ್ರಶಸ್ತಿ ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ. ಇನ್ನಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡಲು ಪ್ರೇರಣೆ ನೀಡಿದೆ

ಸಿಸ್ಟರ್ ಶೋಭನಾ, ಸಮಾಜ ಸೇವಕಿ

ಹರಿದ ಯಶೋಗಾಥೆಗಳ ಹೊನಲು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅಲ್ಲಿ ನೆರವೇರಿದ್ದು ಭಾವುಕ ಕ್ಷಣಗಳ ಅರ್ಥಪೂರ್ಣ ಮೆರವಣಿಗೆ. ಸಾಧಕರ ಮೊಗದಲ್ಲಿ ಸಂಭ್ರಮವಿದ್ದರೆ, ಅವರೊಡನೆ ಬಂದವರ ಮನಸ್ಸಿನಲ್ಲಿ ಹೆಮ್ಮೆಯ ಭಾವವಿತ್ತು. 'ನಾವು ಅವರಂತೆಯೇ ಸಾಧನೆ ಮಾಡಬೇಕು' ಎಂದು ಕೆಲವರು ಪಣತೊಟ್ಟರೆ, ಇನ್ನೂ ಕೆಲವರು, 'ಅಂಥ ಸಾಧಕರೊಂದಿಗೆ ನಾವು ಸದಾ ಜೊತೆಗೆ ಇರುತ್ತೇವೆ' ಎಂದು ದೃಢವಾಗಿ ಹೇಳಿದರು. ಒಟ್ಟಾರೆ ಆವರಣವು ಸ್ಫೂರ್ತಿದಾಯಕವಾಗಿತ್ತು.

ಇವೆಲ್ಲವೂ ಕಂಡು ಬಂದಿದ್ದು ನಗರದ ಫೇರ್‌ಫೀಲ್ಡ್ ಮ್ಯಾರಿಯಟ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಪ್ರಜಾವಾಣಿ ಸಾಧಕಿಯರು' ಕಾರ್ಯಕ್ರಮದಲ್ಲಿ. ರಾಜ್ಯದ ವಿವಿಧ ಭಾಗಗಳಿಂದ ಆಯ್ಕೆಯಾದ 10 ಸಾಧಕಿಯರನ್ನು ಸತ್ಕರಿಸುವ ಸಂದರ್ಭದಲ್ಲಿ ಎಲ್ಲರ ಕರತಾಡನ ಮುಗಿಲು ಮುಟ್ಟಿತು.

ಸಮಾಜದ ಪರಿವರ್ತನೆಗೆ ಕಾರಣರಾದ ಹಾಗೂ ಎಲೆ ಮರೆಯ ಕಾಯಿಗಳಂತೆ ಸದ್ದಿಲ್ಲದೆ ಸಮಾಜಕ್ಕೆ ಕೊಡುಗೆ ನೀಡಿದ ಮತ್ತು ವಿಶಿಷ್ಟ ರೀತಿಯಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ 'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು.

ಬ್ರಿಟಿಷರ ವಿರುದ್ಧ ಹೋರಾಡಿದ ಧೀರೆಯ ಪುಣ್ಯನೆಲದಲ್ಲಿ ಪ್ರಶಸ್ತಿ ಸ್ವೀಕರಿಸಿದ್ದು ಹೆಮ್ಮೆ ಎನ್ನಿಸುತ್ತದೆ ಎಂಬ ಮಾತುಗಳು ಸಾಧಕಿಯರ ಮನದಲ್ಲಿ ಮೂಡಿದವು. ಪ್ರತಿಯೊಬ್ಬ ಸಾಧಕಿಯು ತಾನು ಬೆಳೆದು ಬಂದ ಹಾದಿ, ಎದುರಿಸಿದ ಸಂಕಷ್ಟಗಳನ್ನು ಹೇಳುತ್ತಾ ಹೋದಂತೆ ನೆರೆದ ನೂರಾರು ಮಹಿಳೆಯರ ಕಣ್ಣಂಚಿನಲ್ಲಿ ನೀರ ಹನಿ ಜಿನುಗಿತು.

ಪ್ರಜಾವಾಣಿ ಸಾಧಕಿಯರು ಪ್ರಶಸ್ತಿ ಪ್ರದಾನ

ನಟಿ ತಾರಾ ಅನೂರಾಧಾ ಮತ್ತು ಮಹಿಂದ್ರಾ ಸಂಸ್ಥೆಯ ಸಚಿನ್ ಶಾ ಅವರು ಯು.ವರ್ಷಾ, ಅಮೃತವಲ್ಲಿ, ಸಿಸ್ಟರ್ ಶೋಭನಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ಅವರು ಕೆ.ಪಿ.ಅಶ್ವಿನಿ, ಶಿವಲಿಂಗಮ್ಮ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಅವರು ಡಾ.ವಿಜಯಲಕ್ಷ್ಮಿ ದೇಶಮಾನೆ, ಎ.ಶೀಲಾರಾಣಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರೆ, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಶಾರದಾ ಬಡಿಗೇರ, ರೂಪಾ ಮರಡಿ ಮತ್ತು ಸುಜಾತಾ ಮರಡಿ ಅವರಿಗೆ ಪ್ರಶಸ್ತಿ ವಿತರಿಸಿದರು.

ಎಲ್ಲರನ್ನೂ ಸ್ವಾಗತಿಸಿದ ಟಿಪಿಎಂಎಲ್ ಸಂಸ್ಥೆಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಸೀತಾರಾಮನ್ ಶಂಕರ್ ಮಾತನಾಡಿ, 'ಪ್ರಶಸ್ತಿಗೆ ಆಯ್ಕೆಯಾಗಿರುವ ಪ್ರತಿ ಸಾಧಕಿಯರ ಸೇವೆ ಸ್ಫೂರ್ತಿದಾಯಕ. ಇಂತಹ ಸಾಧಕರ ಸಂಖ್ಯೆ ಹೆಚ್ಚಾಗಬೇಕು' ಎಂದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪ್ರಾಸ್ತಾವಿಕವಾಗಿ ಮಾತನಾಡಿ, 'ಬೆಳಗಾವಿಯನ್ನು ಕುಂದಾನಗರ ಎಂದು ಕರೆಯುತ್ತಾರೆ. ಯಾವ ವಿಷಯದಲ್ಲಿಯೂ ಇಲ್ಲಿಯ ಜನರು ಕುಂದುವುದಿಲ್ಲ' ಎಂದರು.

'76 ವರ್ಷಗಳಿಂದ ಪ್ರಜಾವಾಣಿಯು ಮಹಿಳೆಯರಿಗೆ ಆದ್ಯತೆ ನೀಡಿದೆ. ಮಹಿಳೆಯರ ಕುರಿತ ಮೊದಲ ಪುರವಣಿ ಹೊರತಂದಿತು. ಮೊದಲ ಜಿಲ್ಲಾ ವರದಿಗಾರರನ್ನಾಗಿ ಮಾಡಿದ್ದು ಪ್ರಜಾವಾಣಿ' ಎಂದರು. ಕಾರ್ಯಕ್ರಮವನ್ನು ನಿಕಿತಾ ಅವರು ನಿರ್ವಹಿಸಿದರು.

ಟಿಪಿಎಂಎಲ್ ಜಾಹೀರಾತು ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಆನಂದ ಬಿಲ್ಡಿಕರ್ ಉಪಸ್ಥಿತರಿದ್ದರು. ಮಹೀಂದ್ರಾ ಸಂಸ್ಥೆ, ಗೋಲ್ಡ್ ವಿನ್ನರ್, ರೀಚ್ ರೂಟ್, ಕೆಂಟ್ ಮಿನರಲ್ ಆರ್‌ಒ, ವಿಕ್ಕೊ, 100 ಎಂಸಿಬಿಎಲ್, ಹರ್ಷ ಶುಗರ್ಸ್ ಮತ್ತು ವಿಸ್ತಾರ ಸಂಸ್ಥೆ ಸಹ ಪ್ರಾಯೋಜಕತ್ವದಲ್ಲಿ ಕಾರ್ಯಕ್ರಮ ನಡೆಯಿತು. ❖

ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಅಪರೂಪದ ಸಾಧನೆಗಳನ್ನು ಮಾಡಿರುವ ಮಹಿಳೆಯರನ್ನು ಗುರುತಿಸಿ, ಪ್ರೋತ್ಸಾಹಿಸುವ ಕಾರ್ಯ ಪ್ರಜಾವಾಣಿಯಿಂದ ನಡೆಯುತ್ತಿರುವುದು ಶ್ಲಾಘನೀಯ. ಪತ್ರಿಕೆಯ ಇಂತಹ ಕಾರ್ಯ ನಿರಂತರವಿರಲಿ.

ಸಚಿನ್ ಶಾ, ಮಹೀಂದ್ರ ಕಂಪನಿಯ ಪಾಲುದಾರ, ಸುತಾರಿಯಾ ಆಟೊ ಕೇಂದ್ರ, ಹುಬ್ಬಳ್ಳಿ



ಪ್ರಶಸ್ತಿಗಳೆಂದರೆ ದುಡ್ಡು, ವೈಭವ ಎಂದೆಲ್ಲ ಇರುತ್ತದೆ. ಆದರೆ, ಪ್ರಜಾವಾಣಿಯವರು ಹಳ್ಳಿಗಳ ಬೇರುಮಟ್ಟಕ್ಕೆ ಹೋಗಿ ಅತ್ಯಂತ ಅಮೂಲ್ಯ 11 ರತ್ನಗಳನ್ನು ಹೆಕ್ಕಿ ತೆಗೆದಿದ್ದಾರೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಹೆಮ್ಮೆ ಮೂಡಿಸಿದೆ.

ಈರಣ್ಣ ಕಡಾಡಿ, ರಾಜ್ಯಸಭೆ ಸದಸ್ಯ

ಅತ್ಯಂತ ವಿಶ್ವಾಸಾರ್ಹವಾದ 'ಪ್ರಜಾವಾಣಿ'ಯು ಕೊಟ್ಟ ಪ್ರಶಸ್ತಿಗಳು ವಿಶೇಷವಾಗಿವೆ. ಇಲ್ಲಿನ ಸಾಧಕಿಯರನ್ನು ನೋಡಿದರೆ, ಜಾಗತಿಕ ಮಟ್ಟದಲ್ಲಿ ಎಷ್ಟೆಲ್ಲ ಮುಂದುವರೆದಿದ್ದಾರೆ ಎಂಬುದು ಗೊತ್ತಾಗುತ್ತದೆ.

ಶಶಿಕಲಾ ಜೊಲ್ಲೆ, ಶಾಸಕಿ, ನಿಪ್ಪಾಣಿ

ತಾರಕ್ ಡಾನ್ಸ್ ಅಕಾಡೆಮಿ ಪ್ರದರ್ಶಿಸಿದ ನೃತ್ಯರೂಪಕದ ದೃಶ್ಯ

ಕಣ್ಣಾಲಿ ತೇವಗೊಳಿಸಿದ ನೃತ್ಯ

ಮಹಿಳೆಯರು ಅನುಭವಿಸುವ ನೋವು ಮತ್ತು ಸಾಧನೆ ಕುರಿತು ತಾರಕ್ ಡಾನ್ಸ್ ಅಕಾಡೆಮಿ ಪ್ರದರ್ಶಿಸಿದ ನೃತ್ಯವು ಸಭಿಕರ ಕಣ್ಣಾಲಿಗಳನ್ನು ತೇವಗೊಳಿಸಿತು. ಗರ್ಭದಲ್ಲಿದ್ದ ಹೆಣ್ಣು ಮಗು, ಹೊರಜಗತ್ತಿಗೆ ಕಾಲಿಟ್ಟು ನಾನಾ ರೂಪದಲ್ಲಿ ಬೆಳವಣಿಗೆ ಹೊಂದುವವರೆಗಿನ ಸನ್ನಿವೇಶಗಳನ್ನು ನೃತ್ಯರೂಪಕದ ಮೂಲಕ ಮನೋಜ್ಞವಾಗಿ ತಿಳಿಸಿ ಕೊಡಲಾಯಿತು.

'ಹೆಣ್ಣು ಅಬಲೆಯಲ್ಲ, ಸಬಲೆ. ತಾಳ್ಮೆ ಕಳೆದುಕೊಂಡರೆ, ರಣಚಂಡಿಯೂ ಆಗುತ್ತಾಳೆ' ಎಂಬ ಸನ್ನಿವೇಶ ನೆರೆದಿದ್ದವರನ್ನು ರೋಮಾಂಚನಗೊಳಿಸಿತು. ವೇದಿಕೆಯ ಅಷ್ಟದಿಕ್ಕುಗಳಿಂದ ಹೊರಹೊಮ್ಮಿದ ಸಂಗೀತದ ಝಲಕ್ ಕಾರ್ಯಕ್ರಮಕ್ಕೆ ಮೆರುಗು ತಂದುಕೊಟ್ಟಿತು. ಧ್ವನಿ–ಬೆಳಕಿನ ಆಟ ಮನಸೂರೆಗೊಂಡಿತು.

'ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಅವಶ್ಯ'

'ಮಹಿಳೆ ಅಶಕ್ತೆ, ಸಾಮರ್ಥ್ಯ ಕಡಿಮೆ ಎಂಬ ಕಾರಣಕ್ಕೆ ಮೀಸಲಾತಿ ನೀಡುವುದಕ್ಕಿಂತ ಆಕೆ ಸಮರ್ಥಳು, ಎಲ್ಲವನ್ನೂ ನಿಭಾಯಿಸುವ ಛಲಗಾತಿ ಎಂಬುದನ್ನು ಅರಿತು ರಾಜಕೀಯದಲ್ಲಿ ಅವಕಾಶ ಕಲ್ಪಿಸಬೇಕು. ಇಲ್ಲಸಲ್ಲದ ಕಾರಣಗಳನ್ನು ಹೇಳಿ, ಹೀಯಾಳಿಸುವ ಬದಲು ಆಕೆಯ ಜಾಣ್ಮೆ, ಪ್ರತಿಭೆ, ಸಹನೆ ಮತ್ತು ಚಾಕಚಕ್ಯತೆಯನ್ನು ಪ್ರೋತ್ಸಾಹಿಸುವ ಗುಣ ಬೆಳೆಸಿಕೊಳ್ಳಬೇಕು'

ಸಾಧಕಿಯರ ಸನ್ಮಾನ ಸಮಾರಂಭದಲ್ಲಿ ಶನಿವಾರ ಏರ್ಪಡಿಸಿದ್ದ ಮಹಿಳೆ, ರಾಜಕೀಯ ಮೀಸಲಾತಿ ಮತ್ತು ಸಾಮರ್ಥ್ಯದ ಕುರಿತ ಸಂವಾದದಲ್ಲಿ ವ್ಯಕ್ತವಾದ ಅಭಿಪ್ರಾಯವಿದು. ಪತ್ರಕರ್ತೆ ಪ್ರೀತಿ ನಾಗರಾಜ ಅವರು ನಡೆಸಿಕೊಟ್ಟ ಸಂವಾದದಲ್ಲಿ ಹಲವು ವಿಷಯಗಳು ಚಿಂತನೆಗೆ ಆಸ್ಪದ ಮಾಡಿಕೊಟ್ಟವು. ಮಹಿಳೆಯ ಸ್ಥಿತಿ ಮತ್ತು ಸಮಾಜದ ವಾಸ್ತವಾಂಶ ಕಳವಳ ಮೂಡಿಸಿತು. ರಾಜಕೀಯ ಮೀಸಲಾತಿಯ ಸಂಕಷ್ಟ, ಸವಾಲುಗಳ ಬಗ್ಗೆ ಚರ್ಚೆಯಾಯಿತು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ, ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಮತ್ತು ಸಾಹಿತಿ ವಿನಯಾ ಒಕ್ಕುಂದ ಚರ್ಚೆಯಲ್ಲಿ ಪಾಲ್ಗೊಂಡರು.

'ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಮಹಿಳೆ ಮುಖದ ಮೇಲೆ ಪರದೆ ಹಾಕಿಕೊಂಡಿದ್ದಳು. ರಾಜಕೀಯದಲ್ಲಿ ಸ್ಥಾನಮಾನ ಇರಲಿಲ್ಲ. ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ ಆಕೆಯನ್ನು ಮನೆಯಲ್ಲಿ ಬಂಧಿಸಿತ್ತು. ಈಗ ಚೌಕಟ್ಟು ಮೀರಿ ಹೊರಗೆ ಬಂದಿದ್ದಾಳೆ. ಆದರೆ, ರಾಜಕೀಯದಲ್ಲಿ ಮಾತ್ರ ಸೂಕ್ತ ಸ್ಥಾನ ಸಿಕ್ಕಿಲ್ಲ. ರಾಜಕೀಯವಾಗಿ ನಾವು ಹಿಂದೆ ಇದ್ದೇವೆ. ರಾಜಕೀಯದಲ್ಲಿ ಕಾನೂನು ಆಗುವವರೆಗೂ ಮಹಿಳೆಯರಿಗೆ ಸಮಾನ ಸ್ಥಾನ ಸಿಗುವುದು ಕಷ್ಟ' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಕಳವಳ ವ್ಯಕ್ತಪಡಿಸಿದರು.

'ಮಹಿಳೆ ಯಾವ ಕ್ಷೇತ್ರದಲ್ಲೂ ಕಡಿಮೆಯಿಲ್ಲ. ಆದರೂ ಸಮಾನತೆಯಿಲ್ಲ ಎಂಬ ಕೊರಗು ಇದೆ. ರಾಜಕೀಯದಲ್ಲಿ ಮಹಿಳೆಯರಿಗೆ ಮೀಸಲಾತಿ ಅಗತ್ಯವಿದೆ. ಮೀಸಲಾತಿ ಸೌಲಭ್ಯ ಕಲ್ಪಿಸಿದ್ದಲ್ಲಿ, ಮಹಿಳೆಗೆ ರಾಜಕೀಯದಲ್ಲಿ ಪ್ರಾತಿನಿಧ್ಯ ಸಿಗುತ್ತದೆ. ಉತ್ತಮ ಕೆಲಸ ಮಾಡಲು ಸಾಧ್ಯವಾಗುತ್ತದೆ. ರಾಜಕೀಯದಲ್ಲಿ ಆರೋಪಗಳು ಸಾಮಾನ್ಯ. ಬೇಸರವಾದರೂ ಎಲ್ಲವನ್ನೂ ದಿಟ್ಟವಾಗಿ ಎದುರಿಸಬೇಕು. ಆರೋಪ ಬಂದಾಗ ಧೈರ್ಯವಾಗಿ ಮುನ್ನಡೆಯಬೇಕು. ಸತ್ಯಕ್ಕೆ ಸೋಲಿಲ್ಲ ಎಂಬುದು ನೆನಪಿನಲ್ಲಿ ಇರಬೇಕು. ಎಲ್ಲವನ್ನೂ ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು' ಎಂದು ಶಾಸಕಿ ಶಶಿಕಲಾ ಜೊಲ್ಲೆ ತಿಳಿಸಿದರು.

'ರಾಜಕೀಯ ಪ್ರಾತಿನಿಧ್ಯ ಸಿಗದಿದ್ದರೆ, ಮಹಿಳೆಗೆ ಸೂಕ್ತ ಸ್ಥಾನ ಪಡೆಯಲು ಸಾಧ್ಯವಾಗುವುದಿಲ್ಲ. ಇದಕ್ಕೆ ನಮ್ಮ ಪರಂಪರೆಯೇ ಸಾಕ್ಷಿ. ಭಾರತೀಯ ಸಂವಿಧಾನ ಮಹಿಳೆಗೆ ದೊಡ್ಡ ಹಕ್ಕು, ಗೌರವ ನೀಡಿದೆ. ಅಂಬೇಡ್ಕರ್ ಅವರ ಸ್ತ್ರೀ ಪರವಾದ ನಿಲುವು ನಮ್ಮನ್ನು ಇಲ್ಲಿವರೆಗೆ ತಂದು ನಿಲ್ಲಿಸಿದೆ. ಮಹಿಳೆ ದುರ್ಬಲೆ ಎಂದು ಭಾವಿಸುವುದು ತಪ್ಪು. ಮಹಿಳೆ ಸಬಲೆಯಾಗಿದ್ದಾಳೆ. ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಶೇ 14ರಷ್ಟು ಮಾತ್ರ ಇದೆ. ನಿರ್ಣಾಯಕದ ಸ್ಥಿತಿಯಲ್ಲಿ ಹೆಣ್ಣನ್ನು ಉದ್ದೇಶಪೂರ್ವಕವಾಗಿ ದೂರ ಇಡಲಾಗುತ್ತಿದೆ ಎಂಬುದೇ ಬೇಸರದ ಸಂಗತಿ' ಎಂದು ಸಾಹಿತಿ ವಿನಯಾ ಒಕ್ಕುಂದ ತಿಳಿಸಿದರು. ❖

'ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಹಾಗೂ ಮೀಸಲಾತಿ' ಕುರಿತು ಸಂವಾದದಲ್ಲಿ ಸಾಹಿತಿ ವಿನಯಾ ಒಕ್ಕುಂದ, ಪತ್ರಕರ್ತೆ ಪ್ರೀತಿ ನಾಗರಾಜ, ಶಾಸಕಿ ಶಶಿಕಲಾ ಜೊಲ್ಲೆ ಮತ್ತು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಪಾಲ್ಗೊಂಡಿದ್ದರು

ಸಾಧಕಿಯರ ಗುರುತಿಸಿ, ಸತ್ಕರಿಸಿದ ಪತ್ರಿಕೆಯ ಕಾರ್ಯಕ್ಕೆ ಶ್ಲಾಘನೆ

ನಂಬಿಕೆಗೆ ಅರ್ಹವಾದ ಪತ್ರಿಕೆ 'ಪ್ರಜಾವಾಣಿ'

'ಒಂದು ದಿನಪತ್ರಿಕೆ 75 ವರ್ಷದ ಪಯಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವುದು ಸುಲಭದ ಮಾತಲ್ಲ. ಇಷ್ಟು ಸುದೀರ್ಘ ಕಾಲದಿಂದ ಪತ್ರಿಕೆ ಯಶಸ್ವಿಯಾಗಿ ಮುನ್ನಡೆದಿದೆ ಎಂದರೆ ಅದಕ್ಕೆ ಓದುಗರ ನಂಬಿಕೆ ಮತ್ತು ವಿಶ್ವಾಸವೇ ಕಾರಣ. ಪ್ರಜಾವಾಣಿ ನಂಬಿಕೆಗೆ ಅರ್ಹವಾದ ದಿನಪತ್ರಿಕೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಶ್ಲಾಘಿಸಿದರು.

'ರಾಜಕಾರಣದಲ್ಲಿ ನಾವು ಪ್ರತಿನಿಧಿಸುವ ಪಕ್ಷಗಳು ಬೇರೆ ಬೇರೆಯಾಗಿದ್ದರೂ ಸಮಾಜಸೇವೆ ಮುಖ್ಯ. ತುಳಿತಕ್ಕೆ ಒಳಗಾದವರಿಗೆ ನ್ಯಾಯ ನೀಡಬೇಕು ಎಂಬುದೇ ನಮ್ಮ ಆಶಯ. ನಾವು ಭ್ರೂಣದಲ್ಲಿದ್ದಾಗಲೇ ಹೋರಾಟ ಆರಂಭವಾಗುತ್ತದೆ. ಮಹಿಳೆಗೆ ಧೈರ್ಯ ಹೆಚ್ಚು. ನಾವು ಗುರಿ ಮುಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡುವುದು ಅಗತ್ಯ ಮತ್ತು ಅನಿವಾರ್ಯ' ಎಂದು ಅವರು ತಿಳಿಸಿದರು.

'ನಾವು ಅಧಿಕಾರ ಸಿಕ್ಕಾಗ ಹಿಗ್ಗಬಾರದು. ಜನರ ಬವಣೆ ಅರ್ಥ ಮಾಡಿಕೊಳ್ಳಬೇಕು. ಒಬ್ಬ ಮಹಿಳೆ ಬೆಳಿಗ್ಗೆ ದೈನಂದಿನ ಕೆಲಸ ಮಾಡಿ, ನರೇಗಾ ಕೆಲಸಕ್ಕೆ ಹೋಗುತ್ತಾಳೆ. ಮನೆ ಮತ್ತು ಹೊರಗಿನ ಕೆಲಸದ ಜೊತೆ ಜವಾಬ್ದಾರಿ ಸಹ ನಿಭಾಯಿಸುತ್ತಾಳೆ. ನಾನು ಸಹ ಕಷ್ಟದ ಹಾದಿಯಲ್ಲೇ ಬೆಳೆದು ಬಂದವಳು. ಹೀಗಾಗಿ ಬಿಡುವಿದ್ದಾಗ, ನರೇಗಾ ಯೋಜನೆಯಡಿ ನಡೆಯುವ ಕಾಮಗಾರಿ ಸ್ಥಳಕ್ಕೆ ಹೋಗಿ ಕಾರ್ಮಿಕರ ಸಂಕಷ್ಟ ಆಲಿಸುತ್ತೇನೆ. ಅವಮಾನ, ಸನ್ಮಾನಗಳನ್ನೆಲ್ಲ ಎದುರಿಸುತ್ತ, 26 ವರ್ಷ ಶ್ರಮಿಸಿ ಈಗ ಸಚಿವೆಯಾಗಿದ್ದೇನೆ' ಎಂದು ಅವರು ತಿಳಿಸಿದರು.

ಸಾಧಕಿಯರನ್ನು ಗುರುತಿಸಿ, ಪ್ರೋತ್ಸಾಹಿಸಿದ್ದು ಶ್ಲಾಘನೀಯ: ನ್ಯಾ. ಮಂಜುಳಾ ಚೆಲ್ಲೂರ್

'ನ್ಯಾಯ ಎಂಬ ಪದ ನ್ಯಾಯಾಲಯಕ್ಕೆ ಸೀಮಿತವಾಗಿಲ್ಲ. ಸಮಾಜದ ಪ್ರತಿ ಕಾರ್ಯ, ಚಟುವಟಿಕೆಯಲ್ಲೂ ನ್ಯಾಯ ಇರುವಂತೆ ನೋಡಿಕೊಳ್ಳಬೇಕು. ನ್ಯಾಯವಿಲ್ಲದೇ ನಾವು ಬದುಕಲು ಸಾಧ್ಯವಿಲ್ಲ. ಪ್ರತಿಯೊಬ್ಬರನ್ನೂ ಗೌರವಿಸಿ, ಪ್ರೋತ್ಸಾಹಿಸುವುದು ಸಹ ನ್ಯಾಯ. ಇಂತಹ ದೊಡ್ಡ ನ್ಯಾಯಯುತ ಕಾರ್ಯವನ್ನು 'ಪ್ರಜಾವಾಣಿ' ಪತ್ರಿಕೆ ಮಾಡಿದ್ದು ಶ್ಲಾಘನೀಯ' ಎಂದು ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್ ಹೇಳಿದರು.

'ಸಮಾಜದಲ್ಲಿ ಸಾಧನೆ ಮಾಡಿದ, ಎಲೆಮರೆ ಕಾಯಿಗಳಂತೆ ಕೆಲಸ ಮಾಡುತ್ತಿರುವ ಮಹಿಳೆಯರನ್ನು 'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿಗೆ ಆಯ್ಕೆ ಮಾಡಬೇಕು ಎಂಬ ಕೋರಿಕೆ ಬಂದಾಗ, ಯಾರಿಗೂ ಕಾಣದ ಮತ್ತು ಉಳಿದವರಿಗೆ ಸ್ಫೂರ್ತಿ ನೀಡುವಂತಹ ಮಹಿಳೆಯರನ್ನು ಆಯ್ಕೆ ಮಾಡುವುದು ನಮ್ಮ ಧ್ಯೇಯವಾಗಿತ್ತು. ಈ ಕೆಲಸವನ್ನು ನಾವು ಯಾವುದೇ ಅಡಚಣೆ ಇಲ್ಲದೇ ಮಾಡಿದ್ದೇವೆ' ಎಂದು ಅವರು ಹೇಳಿದರು.

'ನಾವು ಪುರುಷರ ಜೊತೆ ಸಮಾನಾಂತರವಾಗಿ ಹೋರಾಟ ಮಾಡಬೇಕು. ಅವರಂತೆಯೇ ಸಮಾಜದಲ್ಲಿ ಗುರುತಿಸಿಕೊಳ್ಳಬೇಕು ಎಂಬ ಹುಮ್ಮಸ್ಸು ನಮ್ಮಲ್ಲಿ ಇರುತ್ತದೆ. ಆದರೆ, ನಾವು ಹೆಣ್ಣು ಎನ್ನುವುದನ್ನು ಮರೆಯುತ್ತೇವೆ. ನಾವು ಯಾವಾಗಲೂ ಇತರರಿಗೆ ಮಾದರಿಯಾಗಬೇಕು. ಮಹಿಳೆಯರ ಸ್ಥಾನಕ್ಕೆ ಬೆಲೆ ಕಟ್ಟಲಾಗದು. ಸಮಾಜಕ್ಕೆ ಶಕ್ತಿ ನೀಡಿ, ದಾರಿ ತೋರಬೇಕು. ಉನ್ನತ ದಾರಿಯಲ್ಲಿ ನಡೆದು ಉನ್ನತ ಸಮಾಜ ಕಟ್ಟಬೇಕು. ಆಗ ದೇಶವೇ ಚಂದ ಕಾಣುತ್ತದೆ' ಎಂದು ಹೇಳಿದರು.

ಮಹಿಳೆಯ ಸಾಧನೆಗೆ ಮಿತಿ ಇಲ್ಲ: ತಾರಾ

'ಮಹಿಳೆಯಾಗಿ ಹುಟ್ಟುವುದೇ ದೊಡ್ಡ ಸಾಧನೆ. ಹಲವು ಸಂಕಷ್ಟ, ಸವಾಲು, ಏರುಪೇರುಗಳ ನಡುವೆ ಎಲ್ಲವನ್ನೂ ನಿಭಾಯಿಸುತ್ತ ಬದುಕು ಕಟ್ಟಿಕೊಳ್ಳಬೇಕು. ಹಲವು ಹಂತಗಳಲ್ಲಿ ವಿವಿಧ ಸ್ವರೂಪಗಳಲ್ಲಿ ಸಾಧನೆ ಮಾಡುತ್ತ ಮಹಿಳೆ ಬದುಕು ಕಟ್ಟಿಕೊಳ್ಳುತ್ತಾಳೆ ಎಂಬುದೇ ಹೆಮ್ಮೆಯ ವಿಷಯ' ಎಂದು ರಾಷ್ಟ್ರಪ್ರಶಸ್ತಿ ಪುರಸ್ಕೃತ ನಟಿ ತಾರಾ ಅನೂರಾಧಾ ಹೇಳಿದರು.

'ನಾಡಿನ ವಿವಿಧೆಡೆ ಇರುವ ಸಾಧಕಿಯರನ್ನು ಗುರುತಿಸುವುದು ಸವಾಲಿನಿಂದ ಕೂಡಿತ್ತು. ಅಷ್ಟೇ ಖುಷಿ ನೀಡಿತು. ಸಾಧಕಿಯರ ಬದುಕು, ಅವರ ಜೀವನಮೌಲ್ಯ ನಮಗೆ ಪ್ರೇರಣೆ ನೀಡಿದೆ. ಯಾವುದೇ ಪ್ರತಿಫಲಾಪೇಕ್ಷೆ ಬಯಸದೇ ಶ್ರಮಿಸುತ್ತಿರುವ ವಿವಿಧ ಸ್ತರಗಳ ಮಹಿಳೆಯರು ಎಲ್ಲರಿಗೂ ಸ್ಫೂರ್ತಿಯಾಗಿದ್ದಾರೆ' ಎಂದು ಅವರು ತಿಳಿಸಿದರು.

'ಪ್ರಜಾವಾಣಿ' ಪತ್ರಿಕೆಯು ಕುಟುಂಬದ ಸದಸ್ಯನಾಗಿದೆ. ಪತ್ರಿಕೆಯನ್ನು ತಾತನ ಕಾಲದಿಂದಲೂ ಓದುತ್ತಿರುವೆ. ತಾಯಿಗಿಂತ ಸಾಧಕಿಯರಿಲ್ಲ. ಮಹಿಳೆಯ ಸಾಧನೆಗೆ ಯಾವುದೇ ಮಿತಿ ಎಂಬುದು ಇಲ್ಲ. ಯಾರು ಸ್ತ್ರೀಯನ್ನು ನೆನಪಿಸಿಕೊಳ್ಳುತ್ತಾರೋ, ಅಲ್ಲಿ ತಾಯಿ ನೆಲೆಸಿರುತ್ತಾರೆ. ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ. ಈ ಕಾರ್ಯಕ್ರಮ ಸದಾ ಮುಂದುವರಿಯಲಿ ಎಂದು ಹೇಳಿದರು.

IN ASSOCIATION WITH
Gold Winner
AMRITH NONI REACH ROOT Premium HAIR OIL
100 MCBL
VICCO TRUSTED AYURVEDA SINCE 1952
Harsha Sugars
KENT Mineral RO Water Purifiers
TV PARTNER
VISTARA NEWS

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಯರ 429ನೇ ವರ್ಧಂತಿ ಉತ್ಸವ

ಪ್ರಜಾವಾಣಿ ವಾರ್ತೆ

ರಾಯಚೂರು: ಶ್ರೀ ರಾಘವೇಂದ್ರ ಸ್ವಾಮಿಗಳ 429ನೇ ವರ್ಧಂತಿ ಉತ್ಸವದ ಪ್ರಯುಕ್ತ ಮಂತ್ರಾಲಯ ಮಠದ ಆವರಣದಲ್ಲಿ ಶನಿವಾರ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ತಿರುಮಲ ತಿರುಪತಿ ದೇವಸ್ಥಾನದ ಜೆಇಒ ವೀರಬ್ರಹ್ಮಮ್ ಅವರು ತಿರುಮಲ ತಿರುಪತಿ ದೇವಸ್ಥಾನದಿಂದ ತಂದ ಪವಿತ್ರ ಶ್ರೀವಾರಿ ಶೇಷ ವಸ್ತ್ರವನ್ನು ಮಠದ ಅಧಿಕಾರಿಗಳು ಗೌರವದಿಂದ ಸ್ವೀಕರಿಸಿದರು. ನಂತರ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ಮಠದ ಪೀಠಾಧೀಶರಾದ ಸುಬುಧೇಂದ್ರ ತೀರ್ಥ ಸ್ವಾಮೀಜಿ ವಿಧ್ಯುಕ್ತವಾಗಿ ಶ್ರೀವಾರಿ ವಸ್ತ್ರವನ್ನು ಅರ್ಪಿಸಿದರು.

ರಾಯರ ಭಕ್ತರಾದ ಶ್ರೀನಿವಾಸ ಮೂರ್ತಿಯವರು ಶ್ರೀ ಬ್ರಹ್ಮ ಕರಾರ್ಚಿತ ಶ್ರೀಮೂಲ ರಾಮದೇವರಿಗೆ 'ವೈಜಯಂತಿ ವನಮಾಲಾ' ದಾನ ಮಾಡಿದರು.

ಶ್ರೀ ರಾಘವೇಂದ್ರ ಸ್ವಾಮಿಗಳ 429ನೇ ವರ್ಧಂತಿ ಉತ್ಸವದ ಪ್ರಯುಕ್ತ ಮಂತ್ರಾಲಯ ಮಠದ ಆವರಣದಲ್ಲಿ ರಥೋತ್ಸವ ನಡೆಯಿತು

ಬಳಿಕ ಮೂಲ ಬೃಂದಾವನಕ್ಕೆ ಮಹಾ ಪಂಚಾಮೃತಾಭಿಷೇಕ, ನವರತ್ನ ರಥಕ್ಕೆ ಮಂಗಳಾರತಿ ಮಾಡಿದರು.

ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ನಾದಹರಂ ಟ್ರಸ್ಟ್‌ನ 350 ಕಲಾವಿದರು ರಾಯರಿಗೆ ನಾದಹರ ಸೇವೆ ಸಲ್ಲಿಸಿದರು. ನೆರೆದಿದ್ದ ಅಪಾರ ಭಕ್ತರ ತನ್ಮನ ಪುಳಕಿತಗೊಳಿಸಿದರು.

ಶ್ರೀ ರಾಘವೇಂದ್ರ ಸ್ವಾಮಿಗಳ 429ನೇ ವರ್ಧಂತಿ ಉತ್ಸವದಲ್ಲಿ ಪಾಲ್ಗೊಂಡಿದ್ದ ನಟ ಜಗ್ಗೇಶ ಅವರಿಗೆ ಶ್ರೀ ಸುಬುಧೇಂದ್ರ ತೀರ್ಥರು ಶಾಲು ಹೊದಿಸಿ ಗೌರವಿಸಿದರು.

ಪ್ರಶಸ್ತಿ ಪ್ರದಾನ: ವಿಜಯವಾಡದ ವಿರೂಪಾಕ್ಷಂ ಶ್ಯಾವಶ್ವ ಮಹರ್ಷಿ, ಟಿಟಿಡಿ ವಿಶೇಷ ಅಧಿಕಾರಿ ಆಕೆಲ್ಲ ವಿಭೀಷಣ ಶರ್ಮಾ, ಬೆಂಗಳೂರಿನ ಮಧುಮೇಹ ತಜ್ಞ ಡಾ.ಸಂಜಯ್ ಅನಂತ ಕೃಷ್ಣ, ನವದೆಹಲಿಯ ಮಾಧ್ವ ಸಂಘದ ಅಧ್ಯಕ್ಷ ಮಧುಸೂದನ್ ರಾವ್, ಮುಂಬೈನ ಸಾಮಾಜಿಕ ಕಾರ್ಯಕರ್ತೆ ಅರುಣಾ ಆಚಾರ್ಯ, ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ಕೆ.ಸುರೇಶಕುಮಾರ, ಪರಿಮಳ ಗೆಳೆಯರ ಬಳಗದ ಎಸ್. ಜಯಸಿಂಹ ಅವರಿಗೆ ಶ್ರೀಮಠದಿಂದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂತರ ಸಂಪ್ರತಿ ಮೋಹನ್ ಮತ್ತು ತಂಡದಿಂದ ದಾಸವಾಣಿ, ಮೆಟ್ಟೂರು ಸಹೋದರರಿಂದ ಕರ್ನಾಟಕ ಗಾಯನ, ವಿದುಷಿ ಆಶಿಕಾ ಅವರಿಂದ ಸೇಲಂ ಮತ್ತು ಭರತನಾಟ್ಯ ಪ್ರದರ್ಶನ ನಡೆಯಿತು. ಭಕ್ತರು ಭಾರಿ ಸಂಖ್ಯೆಯಲ್ಲಿದ್ದರು. ತುಂಗಭದ್ರಾ ನದಿ ಬತ್ತಿದ್ದರಿಂದ ಸ್ವಲ್ಪತೊಂದರೆ ಆಯಿತು.

ಗುಬ್ಬಿ ಶಾಸಕ ಶ್ರೀನಿವಾಸ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ತುಮಕೂರು: ಗುತ್ತಿಗೆದಾರ ಹಾಗೂ ಕಾಂಗ್ರೆಸ್ ಮುಖಂಡ ರಾಯಸಂದ್ರ ರವಿಕುಮಾರ್ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ಗುಬ್ಬಿ ಕಾಂಗ್ರೆಸ್ ಶಾಸಕ ಹಾಗೂ ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್ ವಿರುದ್ಧ ಶನಿವಾರ ಪ್ರಕರಣ ದಾಖಲಾಗಿದೆ.

ಎಸ್‌ಆರ್ ಶ್ರೀನಿವಾಸ್

ಐಪಿಸಿ ಕಲಂ 506 (ಪ್ರಾಣ ಬೆದರಿಕೆ), 363 (ಅಪಹರಣ) ಹಾಗೂ ಇತರ ಕಲಂ ಅಡಿ ನಗರದ ತಿಲಕ್‌ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಟೆಂಡರ್‌ನಲ್ಲಿ ಅನ್ಯಾಯವಾಗಿದೆ ಎಂದು ನಗರದ ಲೋಕೋಪಯೋಗಿ ಇಲಾಖೆಯ ಕಚೇರಿ ಮುಂಭಾಗ ಮಾರ್ಚ್ 14ರಂದು ರಾತ್ರಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದೆ. ರಾತ್ರಿ 10.30ಕ್ಕೆ ಸ್ಥಳಕ್ಕೆ ಬಂದ ಶ್ರೀನಿವಾಸ್, ಬೆಂಬಲಿಗರು ಏಕಾಏಕಿ ಹಲ್ಲೆ ನಡೆಸಿದ್ದಾರೆ' ಎಂದು ರವಿಕುಮಾರ್ ದೂರು ನೀಡಿದ್ದಾರೆ. ದೂರಿನ ಮೇರೆಗೆ ಶ್ರೀನಿವಾಸ್ ಹಾಗೂ ಇತರ ಹತ್ತು ಜನರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಘಟನೆ ನಡೆದ 24 ತಾಸಿನ ನಂತರ ಪ್ರಕರಣ ದಾಖಲಿಸಲಾಗಿದೆ. ಶನಿವಾರ ಮಧ್ಯಾಹ್ನ 3 ಗಂಟೆಯಿಂದ ತಿಲಕ್ ಪಾರ್ಕ್ ಠಾಣೆಯಲ್ಲಿ ಕುಳಿತಿದ್ದೆ. ರಾತ್ರಿ 8.30ಕ್ಕೆ ಪ್ರಕರಣ ದಾಖಲಿಸಿದ್ದಾರೆ. ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು' ಎಂದು ರವಿಕುಮಾರ್ ಒತ್ತಾಯಿಸಿದ್ದಾರೆ.

420 ನಂಬರ್‌ನವರ ಗುರಿ 400: ಪ್ರಕಾಶ್ ರಾಜ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: '420 ನಂಬರ್‌ನವರು ಲೋಕಸಭೆ ಚುನಾವಣೆಯಲ್ಲಿ 400 ಸೀಟುಗಳನ್ನು ಪಡೆಯುವುದಾಗಿ ಮಾತನಾಡುತ್ತಿದ್ದಾರೆ, ಏನ್ ಮಾಡೊದು' ಎಂದು ನಟ ಪ್ರಕಾಶ್ ರಾಜ್ ಲೇವಡಿ ಮಾಡಿದರು.

ಚಿಕ್ಕಮಗಳೂರು ಪ್ರೆಸ್‌ಕ್ಲಬ್ ಆಯೋಜಿಸಿದ್ದ ತಿಂಗಳ ಅತಿಥಿ ಕಾರ್ಯಕ್ರಮದಲ್ಲಿ ಸುದ್ದಿಗಾರರಿಗೆ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಪಕ್ಷವಾಗಲಿ ಇಷ್ಟೇ ಸೀಟು ಗೆಲ್ಲುತ್ತೇವೆ ಎಂಬುದು ಅಹಂಕಾರವಾಗುತ್ತದೆ. ಜನ ಕೊಟ್ಟರೆ ತೆಗೆದುಕೊಳ್ಳಬೇಕು' ಎಂದರು.

'ಈಗಿರುವ ಎರಡು ಪಕ್ಷಗಳಲ್ಲಿ ಅಷ್ಟೇನು ಭಿನ್ನತೆ ಇಲ್ಲ. ಆ ಪಕ್ಷದವರು ಈ ಪಕ್ಷಕ್ಕೆ ಹೋಗುತ್ತಾರೆ, ಬಟ್ಟೆಯ ಬಣ್ಣ ಬದಲಿಸುತ್ತಾರೆ ಅಷ್ಟೆ. ಹಣಬಲವೇ ಚುನಾವಣೆಯಲ್ಲಿ ಗೆಲ್ಲುತ್ತಿದೆ ಎಂದರೆ ಪ್ರಜಾಪ್ರಭುತ್ವ ಸೋಲುತ್ತಿದೆ. ಸಾಮಾನ್ಯ ಜನರು ಪ್ರತಿ ಚುನಾವಣೆಯಲ್ಲಿ ಸೋಲುತ್ತಿದ್ದೇವೆ ಎಂದೇ ಅರ್ಥ' ಎಂದರು.

'ಇಂದಿರಾ ಗಾಂಧಿ ಕಾಲದಲ್ಲಿ ಘೋಷಿತ ಸರ್ವಾಧಿಕಾರಿ ಆಡಳಿತ ಇತ್ತು. ಈಗ ಅಘೋಷಿತ ಸರ್ವಾಧಿಕಾರಿ ಆಡಳಿತ ಇದೆ. ಆಗ ಮಾಧ್ಯಮಗಳು ಸರ್ವಾಧಿಕಾರದ ವಿರುದ್ಧ ಇದ್ದವು, ಈಗ ಮಾರಿಕೊಂಡು ಸರ್ವಾಧಿಕಾರದ ಪರ ಇವೆ. ಈ ಚುನಾವಣೆಯಲ್ಲಿ ಸರ್ವಾಧಿಕಾರ ಬದಲಾಗುವ ನಂಬಿಕೆ ಇದೆ' ಎಂದರು.

ಪ್ರಾದೇಶಿಕ ಪಕ್ಷಗಳನ್ನು ಒಡೆಯುವ ಕೆಲಸ ಮಾಡಲಾಗಿದೆ. ಉದಾಹರಣೆಗೆ ಆಂಧ್ರ ಪ್ರದೇಶಲ್ಲಿ ಮೂರು ಪಕ್ಷಗಳ ಹಿಂದೆ ಮಹಾಪ್ರಭುಗಳೇ (ನರೇಂದ್ರ ಮೋದಿ) ಇದ್ದಾರೆ' ಎಂದು ವಿಶ್ಲೇಷಿಸಿದರು.

'ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್‌ನಿಂದ (ಎಂಇಐಎಲ್) ₹1200 ಕೋಟಿ ದೇಣಿಗೆಯನ್ನು ಕೇಂದ್ರದ ಆಡಳಿತ ಪಕ್ಷ ಪಡೆದಿದೆ. ಈ ಪಕ್ಷದ ಕಚೇರಿ ಮೇಲೆ ಇ.ಡಿ, ಐ.ಟಿ ದಾಳಿ ನಡೆಯಬೇಕಲ್ಲವೇ' ಎಂದು ಪ್ರಶ್ನಿಸಿದರು.

ಮೂಲವೇತನ ಶೇ 58.5 ಹೆಚ್ಚಿಸಿ

ಒಂದನೇ ಪುಟದಿಂದ

ಪಿಂಚಣಿದಾರರು ಮರಣ ಹೊಂದಿದರೆ ₹10 ಸಾವಿರ ಶವ ಸಂಸ್ಕಾರ ಮೊತ್ತ ನಿಗದಿ ಮಾಡಲಾಗಿದೆ.

ಶಿಫಾರಸುಗಳನ್ನು ರಾಜ್ಯ ಸರ್ಕಾರ ಯಥಾವತ್ತಾಗಿ ಜಾರಿ ಮಾಡಿದರೆ ₹17,440.15 ಕೋಟಿ ಹೆಚ್ಚುವರಿ ಆರ್ಥಿಕ ಹೊರೆ ಭರಿಸಬೇಕಾಗುತ್ತದೆ. ವರದಿ ಸ್ವೀಕರಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ, 'ವರದಿಯನ್ನು ಆರ್ಥಿಕ ಇಲಾಖೆಗೆ ನೀಡಲಾಗುವುದು. ಕೂಲಂಕಷವಾಗಿ ಪರಿಶೀಲಿಸಿದ ನಂತರ ವೇತನ ಹೆಚ್ಚಳ ಕುರಿತು ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ' ಎಂದರು.

ವೇತನ ಆಯೋಗದ ಅವಧಿಯನ್ನು ಮೂರು ತಿಂಗಳು ವಿಸ್ತರಿಸಲಾಗಿತ್ತು. ಈ ಅವಧಿಯು ಮಾರ್ಚ್ 15ರಂದು ಮುಗಿದಿದೆ. ವೇತನ ಪರಿಷ್ಕರಣೆ ವರೆಗೆ ಈಗಾಗಲೇ ನೀಡಿರುವ ಶೇ 17ರಷ್ಟು ಮಧ್ಯಂತರ ಪರಿಹಾರ ಮುಂದುವರಿಯಲಿದೆ ಎಂದು ಹೇಳಿದರು.

ಆಯೋಗದ ಸದಸ್ಯರಾದ ಪಿ.ಬಿ. ರಾಮಮೂರ್ತಿ, ಶ್ರೀಕಾಂತ್ ವನಹಳ್ಳಿ, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೆ.ವಿ. ತ್ರಿಲೋಕಚಂದ್ರ, ಹಣಕಾಸು ಇಲಾಖೆ ಕಾರ್ಯದರ್ಶಿ ಪಿ.ಸಿ. ಜಾಫರ್, ವೇತನ ಆಯೋಗದ ಸದಸ್ಯ ಕಾರ್ಯದರ್ಶಿ ಹೆಪ್ಸಿಬಾರಾಣಿ ಕೊರ್ಲಪಾಟಿ ಇದ್ದರು.

ಮೂಲವೇತನದ ವಿವಿಧ ಹಂತಗಳು

ಪ್ರಸ್ತುತ ಶ್ರೇಣಿ ಕನಿಷ್ಠ	ಪ್ರಸ್ತುತ ಶ್ರೇಣಿ ಗರಿಷ್ಠ	ಶಿಫಾರಸು ಮಾಡಿದ ಶ್ರೇಣಿ ಕನಿಷ್ಠ	ಶಿಫಾರಸು ಮಾಡಿದ ಶ್ರೇಣಿ ಗರಿಷ್ಠ	ಪ್ರಸ್ತುತ ಶ್ರೇಣಿ ಕನಿಷ್ಠ	ಪ್ರಸ್ತುತ ಶ್ರೇಣಿ ಗರಿಷ್ಠ	ಶಿಫಾರಸು ಮಾಡಿದ ಶ್ರೇಣಿ ಕನಿಷ್ಠ	ಶಿಫಾರಸು ಮಾಡಿದ ಶ್ರೇಣಿ ಗರಿಷ್ಠ
17,000	28,950	27,000	46,675	43,100	83,900	69,250	1,34,200
18,600	32,600	29,600	52,800	45,300	88,300	72,550	1,41,200
19,950	37,900	31,775	61,300	48,900	92,700	78,000	1,48,200
21400	42,000	34,100	67,600	52,650	97,100	83,700	1,55,200
23,500	47,650	37,500	76,100	56,800	99,600	90,200	1,59,200
25,800	51,400	41,300	81.800	61,150	1,02,100	97,100	1,63,200
27,650	52,650	44,425	83,700	67,550	1,04,600	1,07,500	1,67,200
30,350	58,250	49,050	92,500	70,850	1,07,100	1,12,900	1,71,200
33,450	62,600	54,175	99,400	74,400	1,09,600	1,18,700	1,75,200
36,000	67,550	58,300	10,7500	82,000	1,17,700	1,31,100	1,88,200
37,900	70,850	61,300	1,12,900	90,500	1,23,300	1,44,700	1,97,200
40,900	78,200	65,950	1,24,900	97,100	1,41,300	1,55,200	2,26,200
				1,04,600	1,50,600	1,67,200	2,41,200

ವೇತನ- ಮುಖ್ಯ ಶ್ರೇಣಿ (₹ಗಳಲ್ಲಿ)

ಪ್ರಸ್ತುತ: 17,000-400-18,600-450-20,400-500-22,400-550-24,600-600-27,000-650-29,600-750-32,600-850-36,000-950- 39,800-1,100-46,400-1,250-53,900-1,450-62,600-1,650-72,500-1,900-83,900-2,200-97,100-2,500-1,12,100-2,800-1,28,900-3,100-1,50,600

ಶಿಫಾರಸು: 27,000-650-29,600-725-32,500-800-35,700-900-39,300-1,000-43,300-1,125-47,800-1,250-52,800-1,375-58,300-1,500-64,300-1,650-74,200-1,900-85,600-2,300-99,400-2,700-1,15,600-3,100-1,34,200-3,500-1,55,200-4,000-1,79,200-4,500-2,06,200-5,000-2,41,200

ಕನಿಷ್ಠ: 17,000 ಗರಿಷ್ಠ: 1,50,600 | ಕನಿಷ್ಠ: 27,000 ಗರಿಷ್ಠ: 2,41,200

ಕೇಂದ್ರ ವೇತನ ರಚನೆಯ ಆಧರಿಸಿ ರಾಜ್ಯ ಸರ್ಕಾರವೂ ತನ್ನ ನೌಕರರಿಗೆ ವೇತನ ನೀಡಲು ಅನುಕೂಲವಾಗುವ ಕಾರ್ಯತಂತ್ರದ ಶಿಫಾರಸುಗಳನ್ನು ಮಾಡಿದ್ದೇವೆ
-ಕೆ.ಸುಧಾಕರ ರಾವ್, ಅಧ್ಯಕ್ಷ, 7ನೇ ವೇತನ ಆಯೋಗ

ಜೀವನ ವೆಚ್ಚ ಆಧರಿಸಿ ವೇತನ ಹೆಚ್ಚಳಕ್ಕೆ ಆಯೋಗ ಶಿಫಾರಸು ಮಾಡಿರುವುದು ಭರವಸೆ ತಂದಿದೆ. ರಾಜ್ಯ ಸರ್ಕಾರವು 2022ರ ಜುಲೈನಿಂದಲೇ ಅನ್ವಯವಾಗುವಂತೆ ವರದಿ ಎಲ್ಲ ಶಿಫಾರಸುಗಳನ್ನು ಯಥಾವತ್ ಜಾರಿ ಮಾಡಬೇಕು
-ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ.

ಮನೆ ಬಾಡಿಗೆ ಭತ್ಯೆ ಇಳಿಕೆ

ಮನೆ ಬಾಡಿಗೆ ಭತ್ಯೆ ಎ-ವರ್ಗದ ನಗರಗಳಿಗೆ ಮೂಲ ವೇತನದ ಶೇ 20, ಬಿ-ವರ್ಗದ ನಗರಗಳಿಗೆ ಶೇ 15 ಹಾಗೂ ಸಿ-ವರ್ಗದ ಪ್ರದೇಶಕ್ಕೆ ಶೇ 7.5ರಷ್ಟು ನೀಡುವಂತೆ ಶಿಫಾರಸು ಮಾಡಿದೆ.

ಪರಿಷ್ಕರಣೆ ಹೇಗೆ?

ಒಬ್ಬ ನೌಕರ ಪ್ರಸ್ತುತ ಪಡೆಯುತ್ತಿರುವ ಮೂಲವೇತನಕ್ಕೆ 2022 ಜುಲೈನಲ್ಲಿದ್ದ ಶೇ 31 ತುಟ್ಟಿ ಭತ್ಯೆ ಹಾಗೂ ಶಿಫಾರಸು ಮಾಡಿದ ಶೇ 27.50 ಫಿಟ್‌ಮೆಂಟ್ ಸೇರಿಸಿದರೆ ಒಟ್ಟು ಮೂಲ ವೇತನದಲ್ಲಿ ಶೇ 58.50ರಷ್ಟನ್ನು ಹೆಚ್ಚಳವಾಗುತ್ತದೆ. ಈಗ ತುಟ್ಟಿಭತ್ಯೆಯ ಮೊತ್ತ ಶೇ 42.50ರಷ್ಟಿದ್ದು, ಅದರಲ್ಲಿ ಶೇ 31 ಅನ್ನು ಕಳೆದರೆ, ಶೇ 11.50 ಉಳಿಯಲಿದೆ. ಕೇಂದ್ರ ಸರ್ಕಾರ ಶೇ 1ರಷ್ಟು ತುಟ್ಟಿಭತ್ಯೆ ಘೋಷಿಸಿದರೆ, ಅದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ಶೇ 0.722ರಷ್ಟು ತುಟ್ಟಿಭತ್ಯೆ ನೀಡಬೇಕೆಂದು ಶಿಫಾರಸು ಹೇಳಿದೆ. ಮೂಲವೇತನಕ್ಕೆ ವಿಲೀನದ ಬಳಿಕ ಉಳಿಯುವ ತುಟ್ಟಿಭತ್ಯೆ ಸರಿಸುಮಾರು ಶೇ 8 ಹಾಗೂ ಆಯಾ ನೌಕರರ ವೃಂದಕ್ಕೆ ಅನುಗುಣವಾಗಿ ನಿಗದಿಯಾಗುವ ಮನೆಬಾಡಿಗೆ ಭತ್ಯೆ (ಶೇ 7.5, ಶೇ 15, ಶೇ 20) ಜತೆಗೆ, ವಿಶೇಷ ಭತ್ಯೆಗಳು ವೇತನದ ಭಾಗವಾಗಲಿವೆ.

ವಾರಕ್ಕೆ ಐದು ದಿನ ಕೆಲಸ

ಸರ್ಕಾರಿ ನೌಕರರ ಕೆಲಸ, ವಿರಾಮದ ಸಮತೋಲನ, ಕಾರ್ಯಕ್ಷಮತೆಯ ಗುಣಮಟ್ಟ ಕಾಯ್ದುಕೊಳ್ಳಲು ವಾರದಲ್ಲಿ ಐದು ದಿನಗಳ ಕೆಲಸದ ಅವಧಿ ನಿಗದಿ ಮಾಡಲು ಆಯೋಗ ಶಿಫಾರಸು ಮಾಡಿದೆ.

ಸರ್ಕಾರಿ ನೌಕರರ ವಿವಿಧ ಸಂಘಟನೆಗಳು, ಹಾಗೂ ಇಲಾಖೆ ನೌಕರರು ಐದು ದಿನಗಳ ಕಾಲಾವಕಾಶದ ಕೋರಿಕೆ ಸಲ್ಲಿಸಿದ್ದಾರೆ. ಇತರೆ ದೇಶಗಳಲ್ಲಿನ ಸರ್ಕಾರಿ ನೌಕರರ ಕೆಲಸದ ಅವಧಿಯನ್ನೂ ಗಮನಿಸಲಾಗಿದೆ. ದೇಶದ ಕೆಲ ರಾಜ್ಯಗಳಲ್ಲೂ ವಾರದಲ್ಲಿ ಐದು ದಿನಗಳು ಕೆಲಸದ ಅವಧಿ ನಿಗದಿ ಮಾಡಿದ್ದು, ಅಲ್ಲಿನ ನೌಕರರ ಕೆಲಸದ ಗುಣಮಟ್ಟ ವೃದ್ಧಿಸಿದೆ. ವಹಿಸಿದ ಕಾರ್ಯವನ್ನು ತ್ವರಿತವಾಗಿ ಪೂರೈಸಲು ಸಹಕಾರಿಯಾಗಿದೆ ಎಂದು ಆಯೋಗ ವಿವರಿಸಿದೆ.

ನಿಧನ ವಾರ್ತೆ

ಮಾಜಿ ಸಚಿವೆ ನಾಗಮ್ಮ ಕೇಶವಮೂರ್ತಿ

ದಾವಣಗೆರೆ: ದಾವಣಗೆರೆಯ 'ಮದರ್ ಥೆರೇಸಾ' ಎಂದೇ ಹೆಸರಾಗಿದ್ದ ಮಾಜಿ ಸಚಿವೆ ನಾಗಮ್ಮ ಕೇಶವಮೂರ್ತಿ (90) ಶನಿವಾರ ನಿಧನರಾದರು.

ಮೃತರಿಗೆ ಪುತ್ರ ಡಾ.ಜಯಂತ್, ಸೊಸೆ ಹಾಗೂ ಮೊಮ್ಮಗಳು ಇದ್ದಾರೆ. ಪಿ.ಜೆ.ಬಡಾವಣೆಯ ಅವರ ನಿವಾಸದಲ್ಲಿ ಭಾನುವಾರ ಮಧ್ಯಾಹ್ನ 3 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಬಳಿಕ ವೈಕುಂಠಧಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ದಾವಣಗೆರೆ ಹಾಗೂ ಮಾಯಕೊಂಡ ಕ್ಷೇತ್ರದಿಂದ 3 ಬಾರಿ ಶಾಸಕಿಯಾಗಿದ್ದ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವೆಯಾಗಿದ್ದರು. ಶಿಕ್ಷಣ ಸಚಿವೆಯಾಗಿ 1ರಿಂದ 4ನೇ ತರಗತಿವರೆಗೆ ಕನ್ನಡ ಮಾಧ್ಯಮ ಕಡ್ಡಾಯ ಮಾಡಿದ್ದರು.

ಬೆಂಗಳೂರಿನ ಎಂ.ಎನ್. ರಾಮನ್ ಮತ್ತು ಸಾಕಮ್ಮ ದಂಪತಿಯ ಪುತ್ರಿಯಾದ ನಾಗಮ್ಮ, 1951ರಲ್ಲಿ ದಾವಣಗೆರೆಯ ಉದ್ಯಮಿ, ಚನ್ನಗಿರಿ ರಂಗಪ್ಪನವರ ಪುತ್ರ ಸಿ.ಕೇಶವಮೂರ್ತಿ ಅವರನ್ನು ವಿವಾಹವಾಗಿದ್ದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಜಿಲ್ಲಾ ಅಧಿಕಾರಿಗಳ ಕಚೇರಿ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು-01.
ದೂರವಾಣಿ: 080-22867628
ಇ-ಮೇಲ್: dobcmbengaluruurban1@gmail.com

ತಿದ್ದುಪಡಿ ಪ್ರಕಟಣೆ

ದಿನಾಂಕ 14.03.2024 ರ ಈ ಪತ್ರಿಕೆಯಲ್ಲಿ ಸಂಖ್ಯೆ:ಡಿಬಿಸಿ/ಬೆನಂ/ಸನಿಶಾ/ಸಿಆರ್-37/2023-24, ದಿನಾಂಕ 11.03.2024ರ ಅಡಿಯಲ್ಲಿ ಪ್ರಕಟಗೊಂಡ ಜಿಲ್ಲಾ ಮಟ್ಟದ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ **"ಟೆಂಡರ್‌ಗಿಟ್ಟ ಅಂದಾಜು ಮೊತ್ತ: ರೂ.497.00 ಕೋಟಿ"** ಎಂದು ತಪ್ಪಾಗಿ ಪ್ರಕಟವಾಗಿದ್ದು, ಅದನ್ನು **"ಟೆಂಡರ್‌ಗಿಟ್ಟ ಅಂದಾಜು ಮೊತ್ತ: ರೂ.497.00 ಲಕ್ಷ"** ಎಂದು ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ. ಉಳಿದಂತೆ ಪ್ರಕಟಿತ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಕರ್ನಾಟಕ ಸರ್ಕಾರ
ಉಪ ಕೃಷಿ ನಿರ್ದೇಶಕರ ಕಛೇರಿ-1, ಕೃಷಿ ಇಲಾಖೆ, ಆರ್.ಎಂ.ಸಿ. ಯಾರ್ಡ್ ರಸ್ತೆ, ಚಿತ್ರದುರ್ಗ-577501
ಇ-ಮೇಲ್ ವಿಳಾಸ :dda1cta@gmail.com
ಸಂ:ಉಕೃನಿ-1/ಚಿದು/ತಾಂ/ಇ-ಟೆಂ/RKVY-RPS/2023-24 ದಿ: 15.03.2024

ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲೆಗೆ RKVY-RPS ಯೋಜನೆಯಡಿ ಸಮಸ್ಯಾತ್ಮಕ ಮಣ್ಣು ಸುಧಾರಣೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಇ-ಟೆಂಡರ್ ಕರೆಯಲಾಗಿರುತ್ತದೆ. ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಪಡೆಯಬಹುದಾಗಿದೆ.
ಟಿ. ನಾಗೇನಹಳ್ಳಿ, ಹಿರಿಯೂರು ತಾಲ್ಲೂಕು ಟೆಂಡರ್‌ನ ಮೊತ್ತ ರೂ. **22,72,696/-** ಇ.ಎಂ.ಡಿ. ಮೊತ್ತ ರೂ. **45,500/-** (1) ಟೆಂಡರ್ ಮಾಹಿತಿಯನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ದಿನಾಂಕ:15-03-2024 ರಿಂದ ವೀಕ್ಷಿಸಬಹುದು. (2) ಟೆಂಡರ್ ಸಲ್ಲಿಸಲು ಕೊನೆಯ ದಿ:22-03-2024 (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 25-03-2024 ರಂದು ಬೆಳಿಗ್ಗೆ 11:00 ಗಂಟೆಗೆ
ಸಹಿ/- ಉಪ ಕೃಷಿ ನಿರ್ದೇಶಕರು-1, ಚಿತ್ರದುರ್ಗ.
DIPR/CTA/KSMCA/724/2023-24

ಕರ್ನಾಟಕ ಸರ್ಕಾರ
ಉಪ ಕೃಷಿ ನಿರ್ದೇಶಕರ ಕಛೇರಿ-1, ಕೃಷಿ ಇಲಾಖೆ, ಆರ್.ಎಂ.ಸಿ. ಯಾರ್ಡ್ ರಸ್ತೆ, ಚಿತ್ರದುರ್ಗ-577501
ಇ-ಮೇಲ್ ವಿಳಾಸ :dda1cta@gmail.com
ಸಂ:ಉಕೃನಿ-1/ಚಿದು/ತಾಂ/ಇ-ಟೆಂ/RKVY-RPS/2023-24 ದಿ: 15.03.2024

ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲೆಗೆ RKVY-RPS ಯೋಜನೆಯಡಿ ಸಮಸ್ಯಾತ್ಮಕ ಮಣ್ಣು ಸುಧಾರಣೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಇ-ಟೆಂಡರ್ ಕರೆಯಲಾಗಿರುತ್ತದೆ. ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಪಡೆಯಬಹುದಾಗಿದೆ.
ಸಮುದ್ರದಹಳ್ಳಿ, ಹಿರಿಯೂರು ತಾಲ್ಲೂಕು ಟೆಂಡರ್‌ನ ಮೊತ್ತ ರೂ. **15,57,932/-** ಇ.ಎಂ.ಡಿ. ಮೊತ್ತ ರೂ. **31,500/-** (1) ಟೆಂಡರ್ ಮಾಹಿತಿಯನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ದಿನಾಂಕ:15-03-2024 ರಿಂದ ವೀಕ್ಷಿಸಬಹುದು. (2) ಟೆಂಡರ್ ಸಲ್ಲಿಸಲು ಕೊನೆಯ ದಿ:23-03-2024 (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 25-03-2024 ರಂದು ಬೆಳಿಗ್ಗೆ 11:00 ಗಂಟೆಗೆ
ಸಹಿ/- ಉಪ ಕೃಷಿ ನಿರ್ದೇಶಕರು-1, ಚಿತ್ರದುರ್ಗ.
DIPR/CTA/KSMCA/718/2023-24

ನಗರಸಭಾ ಕಾರ್ಯಾಲಯ, ರಾಣೇಬೆನ್ನೂರು-581115
ಜಿಲ್ಲೆ: ಹಾವೇರಿ ರಾಜ್ಯ: ಕರ್ನಾಟಕ
Phone: 08373-266466 Helpline: 08373-260266 Fax: 08373-266475
Website: http://www.ranebennurcity.mrc.gov.in Email : itstaff_ulb_ranebennur@yahoo.co.in
ನಂ: CMC/RNR/SWM/DOT&LHT/CR-01/2023-24 ದಿನಾಂಕ: 15-03-2024

ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ ರಾಣೇಬೆನ್ನೂರು ನಗರಸಭೆಯ ಆರೋಗ್ಯ ವಿಭಾಗದ ತ್ಯಾಜ್ಯ ನಿರ್ವಹಣಾ ವಾಹನಗಳಿಗೆ ಚಾಲಕರು ಮತ್ತು ಆಪರೇಟರ್‌ಗಳನ್ನು ಹಾಗೂ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಅವಶ್ಯವಿರುವ ಹೆಲ್ಪರ್ ಹಾಗೂ ಲೋಡರ್‌ಗಳನ್ನು ಹೊರಗುತ್ತಿಗೆ ಮೇಲೆ ಒಂದು ವರ್ಷದ ಅವಧಿಗೆ ಪೂರೈಸಲು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಕಾರ್ಮಿಕ ಇಲಾಖೆಯ ಲೇಬರ್ ಪೂರೈಕೆ ಲೈಸನ್ಸ್ ಹೊಂದಿದ ಹಾಗೂ ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರಮೆಂಟ್ ದಾಖಲೆಗಾಗಿ ಇಲಾಖಾ ವೆಬ್‌ಸೈಟ್ http://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ರಾಣೇಬೆನ್ನೂರು ನಗರಸಭೆಯ ಆರೋಗ್ಯ ವಿಭಾಗದಲ್ಲಿ ಪಡೆಯಬಹುದಾಗಿದೆ.

ಅ. ನಂ.	ಇಂಡೆಂಟ್ ಸಂಖ್ಯೆ	ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ಗೆ ಇಟ್ಟ ಇ.ಎಂ.ಡಿ ಮೊತ್ತ
1	DMA/2023-24 /SE2835	ಆರೋಗ್ಯ ವಿಭಾಗದ ತ್ಯಾಜ್ಯ ನಿರ್ವಹಣಾ ವಾಹನಗಳಿಗೆ 37 ಚಾಲಕರು ಹಾಗೂ 05 ಚಾಲಕ.ಕಂ ಆಪೇಟರ್‌ಗಳನ್ನು ಪೂರೈಸುವುದು.	98.62	ರೂ. 1,98,000=00
2	DMA/2023-24 /SE2836	ಆರೋಗ್ಯ ವಿಭಾಗದ ತ್ಯಾಜ್ಯ ವಾಹನಗಳಿಗೆ 09ಜನ ಲೋಡರ್ ಮತ್ತು ತ್ಯಾಜ್ಯ ನಿರ್ವಹಣಾ ಘಟಕಕ್ಕೆ 10 ಜನ ಹೆಲ್ಪರ್‌ಗಳನ್ನು ಪೂರೈಸುವುದು	50.12	ರೂ. 1,01,000=00

ಟೆಂಡರ್ ಸಂಬಂಧಿತ ದಿನಾಂಕಗಳನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದು.
ಸಹಿ/- ಪೌರಾಯುಕ್ತರು, ನಗರಸಭೆ, ರಾಣೇಬೆನ್ನೂರು

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with A++ GRADE
ಯು.ಜಿ.ಸಿ. ಮಾನ್ಯತೆ, ನ್ಯಾಕ್ 'ಎ++' ಶ್ರೇಣಿ, ಮತ್ತು ಎನ್.ಐ.ಆರ್.ಎಫ್ 64 ನೇ ರ್‍ಯಾಂಕ್ ಪಡೆದಿದೆ.
ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ಕೇಂದ್ರ
ಜ್ಞಾನಭಾರತಿ ಆವರಣ, ಬೆಂಗಳೂರು-560056, ದೂರವಾಣಿ: 080-22961261, 46807810,
ಇ-ಮೇಲ್ : dccbub@gmail.com,
admission@ddebubonline.in
ನಿರಂತರ ಕಲಿಕೆಗೆ ಅದ್ಭುತ ಅವಕಾಶ
ಬೆಂಗಳೂರು ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯವು
ಅನುಭವೀ ಪರಿಣಿತರ ಹಾಗೂ ಸುಸಜ್ಜಿತ ತಾಂತ್ರಿಕ ತಂಡದೊಂದಿಗೆ ನಿಮ್ಮ ಮನೆ ಬಾಗಿಲಿಗೆ.
ಸಂಖ್ಯೆ: ಬಿ.ಯು/ಡಿಡಿಇ/ಆನ್-ಲೈನ್/2023-24 ದಿನಾಂಕ: 11.03.2024

ಪ್ರವೇಶಾತಿ ಅಧಿಸೂಚನೆ

ಆನ್‌ಲೈನ್ ಶಿಕ್ಷಣದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ
ಸದರಿ ಪದವಿಗಳು ಯು.ಜಿ.ಸಿ ಯ (ದೂರ ಶಿಕ್ಷಣ ಮತ್ತು ಮುಕ್ತ ಕಾರ್ಯಕ್ರಮಗಳ ಮತ್ತು ಆನ್ ಲೈನ್ ಕಾರ್ಯಕ್ರಮಗಳ) ನಿಯಮಾವಳಿಗಳು, 2020 ರ ನಿಬಂಧನೆ 3(ಬಿ) (ಎ)ರ ಅನುಸಾರ ಯು.ಜಿ.ಸಿ. ಯ ಮಾನ್ಯತೆ ಪಡೆದಿದೆ.
ಬಿ.ಕಾಂ.: 3 ವರ್ಷಗಳು / 6 ಸೆಮಿಸ್ಟರ್‌ಗಳು
ಎಂ.ಎ.: (4 ಸೆಮಿಸ್ಟರ್‌ಗಳು) • ಕನ್ನಡ • ಇಂಗ್ಲೀಷ್ • ಹಿಂದಿ • ಅರ್ಥಶಾಸ್ತ್ರ • ಇತಿಹಾಸ • ಸಮಾಜಶಾಸ್ತ್ರ • ರಾಜ್ಯಶಾಸ್ತ್ರ
ಎಂ.ಕಾಂ.: (4 ಸೆಮಿಸ್ಟರ್‌ಗಳು) ಎಂ.ಎಸ್‌ಸಿ (ಗಣಿತ ಶಾಸ್ತ್ರ), (4 ಸೆಮಿಸ್ಟರ್‌ಗಳು)
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 31.03.2024
ಪ್ರವೇಶಾತಿಯ ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್ ಮುಖಾಂತರ ನಡೆಯಲಿದೆ
ಹೆಚ್ಚಿನ ವಿವರಗಳಿಗೆ ಅಂತರ್ಜಾಲ:
www.bangaloreuniversity.karnataka.gov.in / www.ddebubonline.in
ಬೆಂಗಳೂರು ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದಿಂದ ನೀಡಲಾಗುವ ಆನ್‌ಲೈನ್ ಕೋರ್ಸ್‌ಗಳಿಗೆ ರಾಜ್ಯ/ದೇಶದ/ವಿದೇಶದ ಯಾವುದೇ ಭಾಗದ ಆಸಕ್ತ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದಾಗಿದೆ.
ಸಹಿ/-
ಕುಲಸಚಿವರು

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.
ದೂ.ಸಂಖ್ಯೆ:08172-234839 E-mail: pdhassandudc@gmail.com
ನಂ.ಸಿ.ಎ.ಎಲ್(ಬರ)/2023-24 ದಿನಾಂಕ 16-03-2024

ಟೆಂಡರ್ ಪ್ರಕಟಣೆ

ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರು 2023-24 ನೇ ಸಾಲಿಗೆ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿರುವ ಜಿಲ್ಲೆಯ ಎಲ್ಲಾ 8 ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾದಲ್ಲಿ ಜಾನುವಾರು ಶಿಬಿರಗಳನ್ನು/ಮೇವು ಬ್ಯಾಂಕ್ ಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಸದರಿ ಶಿಬಿರಗಳಿಗೆ / ಮೇವು ಬ್ಯಾಂಕ್‌ಗಳಿಗೆ ಒಣ ಭತ್ತ ಹಾಗೂ ರಾಗಿ ಮೇವನ್ನು ಸರಬರಾಜು ಮಾಡುವ ಟೆಂಡರ್ ವಿವರ ಈ ಕೆಳಕಂಡಂತಿದೆ. ಕ್ರ.ಸಂ.1)ಐಟಂನ ವಿವರ ಒಣ ಭತ್ತದ ಹುಲ್ಲು ಹಾಗೂ ಒಣ ರಾಗಿ ಹುಲ್ಲು ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)1,33,00,000/- ಇ.ಎಂ.ಡಿ ಮೊತ್ತ 2,00,000/- ಟೆಂಡರ್‌ನ ಅವಧಿ ಜಾನುವಾರು ಶಿಬಿರಗಳಿಗೆ /ಮೇವು ಬ್ಯಾಂಕ್‌ಗಳ ಪ್ರಾರಂಭದಿಂದ 90 ದಿನಗಳ ಅವಧಿಗೆ ಅಥವಾ ಸರ್ಕಾರದಿಂದ ಮುಂದಿನ ಆದೇಶದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ 2)ಮೇವು ಸಾಗಾಣ ವೆಚ್ಚ ಪ್ರತಿ ಟನ್ ಗೆ ಪ್ರತಿ ಕಿ.ಮೀ ಗೆ ರೂ.17.50 ಆಸಕ್ತ ಮತ್ತು ಅರ್ಹ ಟೆಂಡರ್‌ದಾರರು/ ಬಿಡ್‌ದಾರರು ನಿಗಧಿಪಡಿಸಿದ ಮರು ಪಾವತಿಯಾಗದೇ ಇರುವ ಟೆಂಡರ್ ಮೊತ್ತವನ್ನು ಆನ್‌ಲೈನ್ ಮೂಲಕ ಜಮೆ ಮಾಡಿ, ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್ ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಪ್ರಕಟಣೆ ದಾಖಲಾತಿಯನ್ನು ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಜಾಲತಾಣ https://kppp.karnataka.gov.in/ Indent No. DMA/2023-24/IND1815 ರಲ್ಲಿ ಟೆಂಡರ್‌ದಾರರ ಲಾಗಿನ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-ಎಸ್.ಧರ್ಮಪಾಲ್ ಕೆ.ಎ.ಎಸ್.(ಹಿ.ಶ್ರೇ)
ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ.
ವಾಸಾಸಂಇ/ಹಿಸನಿ/ಹಾಸನ/936/ಕೆಎಸ್‌ಎಂಸಿಎ/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಬಳ್ಳಾರಿ,
ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ,
ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರ, ಡಿ.ದೇವರಾಜ ಅರಸು ಭವನ, ಬಳ್ಳಾರಿ. ಜಿಲ್ಲೆ:ಬಳ್ಳಾರಿ.
E-mail: dobcmbellery@gmail.com Phone No: 08392-275751
ಸಂಖ್ಯೆ:ಹಿಂವಕಇ/ಬ/ಆ.ಸಾ.ಸ.ಟೆಂಡರ್/ಸಿಆರ್-01/2023-24 ದಿನಾಂಕ:14-03-2024

ಇ-ಟೆಂಡರ್ ಪ್ರಕಟಣೆ

2024-25 ಮತ್ತು 2025-26ನೇ ಸಾಲಿನ ಎರಡು ವರ್ಷಗಳ ಅವಧಿಗೆ ಬಳ್ಳಾರಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ/ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಹಾಗೂ ಇತರೆ ಸಾಮಾಗ್ರಿಗಳನ್ನು ಜಿಲ್ಲಾ ಮಟ್ಟದಲ್ಲಿ ಖರೀದಿಸಲು e-Procurement portal ಮುಖಾಂತರ ಇ-ಟೆಂಡರ್‌ನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

1	Tender Reference No and date	ಸಂಖ್ಯೆ:ಹಿಂವಕಇ/ಬ/ಆ.ಸಾ.ಸ.ಟೆಂಡರ್/ಸಿಆರ್-01/2023-24, ದಿನಾಂಕ:14-03-2024		
2	Tender Notification Date	14-03-2024		
3	Commencement of download of E-tender Form from website	18-03-2024		
4	Amount put to Tender Amount and EMD Amount	District	Tender Amount (in Lakhs)	EMD Amount (in Rupees)
		Ballari	2386.00	23,86,000
5	Pre Bid meeting Date and Time	25-04-2024, 11.00 A.M.		
6	Last date & Time for submission of Tender	15-05-2024, 5.00 P.M.		
7	Date & Time of opening of Technical bid	20-05-2024 , 11.00 A.M.		
8	Sample submission date and time	23-05-2024, 11.00 A.M.		
9	Date & Time of opening of Financial Bid	27-05-2024, 11.00 A.M.		
10	Venue of opening of tenders & address for communication	District Officer, Backward Classes Welfare Department, D.DEVARAJ URS BHAVAN, NEAR JOLADHARASHI DODDANAGOWDA RANGAMANDIRA, BALLARI. Phone No.08392-275751		

Interested eligible Registered in e-procurement portal bidders can down load the bid documents with visiting the web site http://e-proc.karnataka.gov.in
ಡಿಐಪಿಆರ್/ಬಳ್ಳಾರಿ/1008/ಕೆಎಸ್‌ಎಂಸಿಎ/2023-24 Sd/- District Officer, Backward Clasess Welfare Department, Ballari Dist, Ballari.

ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾವೇರಿ
ಜಿಲ್ಲಾಡಳಿತ ಭವನ, 'ಬಿ' ಬ್ಲಾಕ್, 2ನೇ ಮಹಡಿ, ಕೊಠಡಿ ಸಂಖ್ಯೆ-26, ದೇವಗಿರಿ-ಹಾವೇರಿ
ಇ-ಮೇಲ್-dobcmhaveri@gmail.com ದೂರವಾಣಿ ಸಂ. 08375-249008
ಸಂಡಿಬಿಸಹಾ/ವಿನಿ.ಆಹಾರ ಟೆಂಡರ್/ಸಿಆರ್-50/2023-24 ದಿನಾಂಕ:15.03.2024

ಇ-ಪ್ರಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 499 ಬಿಎಂಎಸ್ 2023, ಬೆಂಗಳೂರು ದಿನಾಂಕ:22.01.2024 ಸೂಚಿಸಿದಂತೆ 2024-25 ಮತ್ತು 2025-26ನೇ ಸಾಲಿನ ಎರಡು ವರ್ಷಗಳ ಅವಧಿಗೆ ಹಾವೇರಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥ ಹಾಗೂ ಇತರೆ ಸಾಮಗ್ರಿಗಳ ಪ್ರಮಾಣವನ್ನು ಐಟಂವಾರು ಲೆಕ್ಕಹಾಕಿ, ಅನುಬಂಧದಲ್ಲಿ ತೋರಿಸಿದಂತೆ ದ್ವಿ-ಲಕೋಟೆ ಪದ್ಧತಿ ಪ್ರಕಾರ ಅರ್ಹ ನೋಂದಾಯಿತ ಏಜೆನ್ಸಿ/ಸಂಸ್ಥೆಗಳಿಂದ ನಿಬಂಧನೆಗಳಿಗೆ ಒಳಪಟ್ಟು, ಟೆಂಡರ್ ಸಲ್ಲಿಸಲು ಸೂಚಿಸುತ್ತಾ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

1. ಟೆಂಡರ್ ಪ್ರಕಟಣೆ ದಿನಾಂಕ	:	15.03.2024
2. ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	:	ರೂ.29,39,00.000/-
3. ಟೆಂಡರ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	:	15.03.2024
4. ಫ್ರಿ ಬಿಡ್ ಮೀಟಿಂಗ್ ದಿನಾಂಕ ಮತ್ತು ಸ್ಥಳ	:	30.03.2024 ಜಿಲ್ಲಾ ಅಧಿಕಾರಿಗಳ ಕಛೇರಿ ಹಿ.ವ.ಕ.ಇ ಹಾವೇರಿ ಬೆಳಿಗ್ಗೆ 11.30
5. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	:	15.05.2024 ಸಂಜೆ 5.00
6. ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ (ದಿನಾಂಕ ಮತ್ತು ಸಮಯ ಬದಲಾವಣೆಗೆ ಒಳಪಟ್ಟಿರುತ್ತದೆ)	:	ಜಿಲ್ಲಾ ಅಧಿಕಾರಿಗಳ ಕಛೇರಿ ಹಿ.ವ.ಕ.ಇ.ಹಾವೇರಿ.\ ಬೆಳಿಗ್ಗೆ 11.30 17.05.2024
7. ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ (ದಿನಾಂಕ ಮತ್ತು ಸಮಯ ಬದಲಾವಣೆಗೆ ಒಳಪಟ್ಟಿರುತ್ತದೆ)	:	ಜಿಲ್ಲಾ ಅಧಿಕಾರಿಗಳ ಕಛೇರಿ ಹಿಂ.ವ.ಕ.ಇ. ಹಾವೇರಿ ಬೆಳಿಗ್ಗೆ 11.30 22.05.2024
8. ಪಾವತಿಸಬೇಕಾದ ಇ.ಎಂ.ಡಿ. ಮೊತ್ತ	:	ರೂ. 29,39,000/-
9. ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ	:	ಜಿಲ್ಲಾ ಅಧಿಕಾರಿಗಳ ಕಛೇರಿ ಹಿಂ.ವ.ಕ.ಇ. ರೂಂ.ನಂ26, ಬಿ-ಬ್ಲಾಕ್ ಜಿಲ್ಲಾ ಆಡಳಿತ ಭವನ ಹಾವೇರಿ 08375-249008

ಟೆಂಡರ್ ತಪಶೀಲುಗಳಿಗಾಗಿ NEFT (Online) ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರು ನಿಗಧಿಪಡಿಸಿದ ದಿನಾಂಕಕ್ಕೆ ಅರ್ಜಿಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು (Website:https://kppp.karnataka.gov.in) ವೆಬ್ ಸೈಟ್‌ನಲ್ಲಿ ನೋಡಬಹುದು.

ಸಹಿ/- ಜಿಲ್ಲಾಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾವೇರಿ
ವಾ.ಸಾ.ಇ./ಹಾವೇರಿ/544/ದೇಶಪಾಂಡೆಪಬ್ಲಿಸಿಟಿ/2023-24

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/2023-24/3723 ದಿ:-15.03.2024

ಅಲ್ಪಾವಧಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THESE WORK ARE RESERVED FOR SC CATOGERY					
1	PWD/2023-24/RD/WORK_INDENT10601	100.00	2	PWD/2023-24/BD/WORK_INDENT10674	3.00
THIS WORK IS RESERVED FOR ST CATOGERY					
3	PWD/2023-24/BD/WORK_INDENT10686	4.99	4	PWD/2023-24/BD/WORK_INDENT9545/Call-2	49.56
GENERAL WORKS					
5	PWD/2023-24/RD/WORK_INDENT10622	100.00	9	PWD/2023-24/BR/WORK_INDENT10570	200.00
6	PWD/2023-24/RD/WORK_INDENT10603	60.00	10	PWD/2023-24/RD/WORK_INDENT9092	256.87
7	PWD/2023-24/BD/WORK_INDENT8497	7.80	11	PWD/2023-24/RD/WORK_INDENT9209	440.00
8	PWD/2023-24/BD/WORK_INDENT9233/Call-2	2.50			

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ **Kppp Portal** ನಲ್ಲಿ ಇರುವಂತೆ. 2.ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ **25/03/2024 (16.00 ಗಂಟೆಗೆ)**. 3.ಇ-ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ **26/03/2024 (16.30 ಗಂಟೆಗೆ)**. 4 ಆರ್ಥಿಕ ಬಿಡ್ ತೆರೆಯುವ ದಿನಾಂಕ: **Kppp Portal** ನಲ್ಲಿ ಇರುವಂತೆ
NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು kppp Portal ನಲ್ಲಿ ನೊಡಿಕೊಳ್ಳಬಹುದು
ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.
ಡಿಐಪಿಆರ್/ವಿಜಯನಗರ/521/ಕೆಎಸ್‌ಎಂಸಿಎ/2023-24

ಸಾಂಸ್ಕೃತಿಕ ಅಕಾಡೆಮಿಗಳಿಗೆ ಕೊನೆಗೂ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯ ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳಿಗೆ ಅಧ್ಯಕ್ಷ, ಸದಸ್ಯರನ್ನು ನೇಮಿಸಿ ಕಡೆಗೂ ಆದೇಶ ಹೊರಡಿಸಲಾಗಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ ರಚನೆಯಾಗಿ ಹತ್ತು ತಿಂಗಳಾದ ಬಳಿಕ ಈ ನೇಮಕಾತಿ ನಡೆದಿದೆ. ಲೋಕಸಭೆ ಚುನಾವಣೆ ನೀತಿ ಸಂಹಿತೆ ಜಾರಿ ಕಾರಣ ಶುಕ್ರವಾರವೇ ಪಟ್ಟಿಯನ್ನು ಅಂತಿಮಗೊಳಿಸಿ, ಆದೇಶಿಸಲಾಗಿದೆ. ಈ ಪಟ್ಟಿಯನ್ನು ಇಲಾಖೆ ಶನಿವಾರ ಬಿಡುಗಡೆ ಮಾಡಿದೆ. 2022ರ ಅ.15ರಂದೇ ಕಳೆದ ಕಾರ್ಯಕಾರಿ ಸಮಿತಿಯ ಅವಧಿ ಮುಕ್ತಾಯಗೊಂಡಿತ್ತು. ಇದರಿಂದಾಗಿ ಅಕಾಡೆಮಿ, ಪ್ರಾಧಿಕಾರಗಳಿಗೆ ಇಲಾಖೆಯ ಜಂಟಿ ನಿರ್ದೇಶಕರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡಿ, ಆದೇಶಿಸಲಾಗಿತ್ತು. ನೂತನ ಸರ್ಕಾರ ರಚನೆಯಾದ ಬಳಿಕ ಅಕಾಡೆಮಿ–ಪ್ರಾಧಿಕಾರಗಳ ಅಧ್ಯಕ್ಷ ಸ್ಥಾನಕ್ಕೆ ಲಾಬಿ ಹೆಚ್ಚಿದ್ದ ಕಾರಣ ಸಾಹಿತಿಗಳನ್ನೊಳಗೊಂಡ ಶೋಧನಾ ಸಮಿತಿಯನ್ನು ಸರ್ಕಾರ ರಚಿಸಿತ್ತು. ಆ ಸಮಿತಿಯ ಶಿಫಾರಸಿನ ಆಧಾರದಲ್ಲಿ ನೇಮಕ ಮಾಡಲಾಗಿದೆ.

14 ಅಕಾಡೆಮಿಗಳು, 4 ಪ್ರಾಧಿಕಾರಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಲಾಗಿದೆ. ರಂಗಸಮಾಜಕ್ಕೆ ಏಳು ಮಂದಿಯನ್ನು ನೇಮಿಸಲಾಗಿದೆ. ಈ ನೇಮಕಾತಿಯು ಮುಂದಿನ ಆದೇಶ ಅಥವಾ ಮೂರು ವರ್ಷಗಳ ಅವಧಿಗೆ ಜಾರಿಯಲ್ಲಿ ಇರಲಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಹೆಚ್ಚಿನ ಲಾಬಿ ನಡೆದಿತ್ತು. ಈ ಸ್ಥಾನಕ್ಕೆ ದೆಹಲಿಯ ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ, ಸುಳ್ಯದವರಾದ ಪುರುಷೋತ್ತಮ ಬಿಳಿಮಲೆ ಅವರನ್ನು ನೇಮಿಸಲಾಗಿದೆ.

ಕೆಲದಿನಗಳ ಹಿಂದಷ್ಟೇ ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ಉಡುಪಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ 'ಕಾಂಗ್ರೆಸ್ ಕಟ್ಟಾಳು, ಪಕ್ಷದ ಬಾವುಟ ಹಿಡಿದು ದುಡಿದವರಿಗೆ ಅಕಾಡೆಮಿಗಳಲ್ಲಿ ಅವಕಾಶ ಕಲ್ಪಿಸಲಾಗುವುದು' ಎಂದು ಭರವಸೆ ನೀಡಿದ್ದರು. ಇದರ ಬೆನ್ನಲ್ಲಿಯೇ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಶಿಗ್ಗಾವಿಯ ಕಾಂಗ್ರೆಸ್ ಮುಖಂಡ ಸೋಮಣ್ಣ ಬೇವಿನಮರದ ಅವರನ್ನು ಸರ್ಕಾರ ಕಳೆದ ತಿಂಗಳು ನೇಮಿಸಿ ಆದೇಶ ಹೊರಡಿಸಿತ್ತು. ಈಗ ಸದಸ್ಯರನ್ನು ನೇಮಕ ಮಾಡಲಾಗಿದೆ.

ಯಕ್ಷಗಾನ ಅಕಾಡೆಮಿ:ದಕ್ಷಿಣ ಕನ್ನಡಮಯ

ಕರ್ನಾಟಕ ಯಕ್ಷಗಾನ ಅಕಾಡೆಮಿಗೆ ಈ ಬಾರಿ ನೇಮಿಸಲಾದ 10 ಸದಸ್ಯರಲ್ಲಿ ಎಲ್ಲರೂ ದಕ್ಷಿಣ ಕನ್ನಡದವರಾಗಿದ್ದಾರೆ. ಉಡುಪಿ ಜಿಲ್ಲೆಯ ಒಬ್ಬರಿಗೆ ಅಧ್ಯಕ್ಷ ಸ್ಥಾನ ಸಿಕ್ಕಿದ್ದರೆ, ಉತ್ತರ ಕನ್ನಡ ಜಿಲ್ಲೆಯ ಒಬ್ಬರಿಗೂ ಸದಸ್ಯ ಸ್ಥಾನ ಸಿಕ್ಕಿಲ್ಲ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ



ಪುರುಷೋತ್ತಮ ಬಿಳಿಮಲೆ (ನವದೆಹಲಿ), ಅಧ್ಯಕ್ಷ

ಸದಸ್ಯರು: ರಾಮಚಂದ್ರಪ್ಪ (ದಾವಣಗೆರೆ), ವಿ.ಪಿ. ನಿರಂಜನಾರಾಧ್ಯ (ಬೆಂಗಳೂರು), ಟಿ.ಗುರುರಾಜ್ (ಮೈಸೂರು), ರವಿಕುಮಾರ್ ನೀಹ (ತುಮಕೂರು), ದಾಕ್ಷಾಯಿಣಿ ಹುಡೇದ (ವಿಜಯಪುರ), ಯಾಕೂಬ್ ಖಾದರ್ (ಕುಂದಾಪುರ), ವಿರೂಪಣ್ಣ ಕಲ್ಲೂರು (ಕೊಪ್ಪಳ)

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಚನ್ನಪ್ಪ ಕಟ್ಟಿ (ವಿಜಯಪುರ) ಅಧ್ಯಕ್ಷ

ಸದಸ್ಯರು: ಎಂ.ಎಸ್.ಶೇಖರ್ (ಹಾಸನ), ವಿಜಯಲಕ್ಷ್ಮಿ ಕೌಟಗಿ (ಬೀದರ್), ನಾರಾಯಣ್ ಹೊಡಘಟ್ಟ (ರಾಮನಗರ), ಶಾಕಿರಾ ಬಾನು (ಬೆಂಗಳೂರು), ಪಿ. ಭಾರತಿ ದೇವಿ (ದಕ್ಷಿಣ ಕನ್ನಡ), ಎಸ್. ಗಂಗಾಧರಯ್ಯ (ತುಮಕೂರು), ಕರಿಯಪ್ಪ ಮಾಳಗಿ (ಚಿತ್ರದುರ್ಗ), ಚಿತ್ತಯ್ಯ ಪೂಜಾರ್ (ಬೆಂಗಳೂರು), ಜಾಜಿ ದೇವೇಂದ್ರಪ್ಪ (ಕೊಪ್ಪಳ)

ಕನ್ನಡ ಪುಸ್ತಕ ಪ್ರಾಧಿಕಾರ

ಮಾನಸ (ಮೈಸೂರು) ಅಧ್ಯಕ್ಷ

ಸದಸ್ಯರು: ಲಕ್ಷ್ಮಣ ಕೊಡಸೆ (ಶಿವಮೊಗ್ಗ), ಶರಣಪ್ಪ ಬಸಪ್ಪ ಕೊಲ್ಕಾರ್ (ಕೊಪ್ಪಳ), ಕುಶಾಲ ಬರಗೂರು (ಹಾಸನ), ಎಚ್.ಬಿ.ನೀರಗುಡಿ (ಕಲಬುರಗಿ), ಅಕ್ಷತಾ ಹುಂಚದಕಟ್ಟೆ (ಶಿವಮೊಗ್ಗ)

ಕರ್ನಾಟಕ ಸಾಹಿತ್ಯ ಅಕಾಡೆಮಿ

ಎಲ್.ಎನ್. ಮುಕುಂದರಾಜ್ (ತುಮಕೂರು), ಅಧ್ಯಕ್ಷ

ಸದಸ್ಯರು: ಸಿದ್ದಪ್ಪ ಹೊನಕಲ್ (ಕಲಬುರಗಿ), ಅರ್ಜುನ ಗೋಳಸಂಗಿ (ಗದಗ), ಎಚ್.ಜಯಪ್ರಕಾಶ್ ಶೆಟ್ಟಿ (ಉಡುಪಿ), ಚಂದ್ರಕಲಾ ಬಿದರಿ (ಕಲಬುರಗಿ), ಚಿಲಕ್ ರಾಗಿ (ಕೊಪ್ಪಳ), ಗಣೇಶ್ (ಚಿಕ್ಕಮಗಳೂರು), ಸುಮಾ ಸತೀಶ್ (ಬೆಂಗಳೂರು), ಎಚ್.ಆರ್. ಸುಜಾತ (ಹಾಸನ), ಅಕ್ಕೈ ಪದ್ಮಸಾಲಿ (ಬೆಂಗಳೂರು), ಪಿ.ಚಂದ್ರಿಕಾ (ಬೆಂಗಳೂರು), ಪ್ರಕಾಶ್ ರಾಜ್ ಮೇಹು (ಚಾಮರಾಜನಗರ), ಮಲ್ಲಿಕಾರ್ಜುನ ಮಾನ್ಪಡೆ (ವಿಜಯನಗರ), ಅಜಮೀರ್ ನಂದಾಪುರ (ಕೊಪ್ಪಳ), ಚಂದ್ರ ಕಿರಣ (ಮೈಸೂರು), ಮಹದೇವ ಬಸರಕೋಡ (ಬಾಗಲಕೋಟೆ

ಕರ್ನಾಟಕ ನಾಟಕ ಅಕಾಡೆಮಿ

ಕೆ.ವಿ.ನಾಗರಾಜ ಮೂರ್ತಿ (ಬೆಂಗಳೂರು ಗ್ರಾಮಾಂತರ),ಅಧ್ಯಕ್ಷ

ಸದಸ್ಯರು: ಜೇವರ್ಗಿ ರಾಜಣ್ಣ (ಕಲಬುರಗಿ), ಜೆಪಿಓ ಚಂದ್ರು (ಮಂಡ್ಯ), ಅಮಾಸ (ಚಿಕ್ಕಬಳ್ಳಾಪುರ), ಮಾಲೂರು ವಿಜಿ (ಕೋಲಾರ), ಷಾಹಿ ಜಾಹಿದಾ (ಮಡಿಕೇರಿ), ಎಸ್.ರಾಮು (ಮೈಸೂರು), ಜ್ಯೋತಿ ಮಂಗಳೂರು (ಕೊಪ್ಪಳ), ಗೀತಾ ಸಿದ್ದಿ (ಕಾರವಾರ), ಬಾಬು ವಿ. ಕುಂಬಾರ (ರಾಮನಗರ), ಗಾಯತ್ರಿ ಹಡಪದ (ಧಾರವಾಡ), ಲವಕುಮಾರ (ಬೆಂಗಳೂರು ಗ್ರಾಮಾಂತರ), ಕೆ.ಎ.ಬನಟ್ಟಿ (ಬಾಗಲಕೋಟೆ), ಉಗಮ ಶ್ರೀನಿವಾಸ (ತುಮಕೂರು), ಬಾಬಾ ಸಾಹೇಬ್ ಕಾಂಬ್ಳೆ (ಬೆಳಗಾವಿ), ಚಾಂದ್ ಪಾಷಾ ಬಾಬು ಸಾಬ್ ಕಿಲ್ಲೇದಾರ್ (ಕೊಪ್ಪಳ)

ಕರ್ನಾಟಕ ಸಂಗೀತ, ನೃತ್ಯ ಅಕಾಡೆಮಿ

ಕೃಪಾ ಫಡ್ಕೆ (ಮೈಸೂರು), ಅಧ್ಯಕ್ಷೆ

ಸದಸ್ಯರು: ವೆಂಕಟರಾಘವನ್ (ಮೈಸೂರು), ಖಾಸಿಂ ಮಲ್ಲಿಗೆ ಮಡು (ರಾಯಚೂರು), ಬಿ.ವಿ.ಶ್ರೀನಿವಾಸ್ (ಚಾಮರಾಜನಗರ), ರಮೇಶ್ ಗಬ್ಬೂರು (ಕೊಪ್ಪಳ), ಸತ್ಯವತಿ ರಾಮನಾಥ್ (ರಾಮನಗರ), ಸವಿತಾ ಅಮರೇಶ್ ನುಗಡೋಣಿ (ವಿಜಯನಗರ), ಹರಿದೋಗ್ರಾ (ಮಂಗಳೂರು), ಬಸಪ್ಪ ಎಚ್. ಭಜಂತ್ರಿ (ಬಾಗಲಕೋಟೆ), ಗೀತಾ (ಶಿವಮೊಗ್ಗ), ಉಷಾ (ಬೆಂಗಳೂರು), ನಿರ್ಮಲಾ (ಕೋಲಾರ), ಶಂಕರ್ ಹೂಗಾರ (ಕಲಬುರಗಿ), ಮೃತ್ಯುಂಜಯ ದೊಡ್ಡವಾಡ (ಧಾರವಾಡ), ಹುಸೇನ್ ಸಾಬ್ (ಕೊಪ್ಪಳ), ಪದ ದೇವರಾಜ್ (ಬೆಂಗಳೂರು)

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಎಂ.ಸಿ.ರಮೇಶ್ (ರಾಮನಗರ), ಅಧ್ಯಕ್ಷ

ಸದಸ್ಯರು: ರಾಮಮೂರ್ತಿ (ಉತ್ತರ ಕನ್ನಡ), ಬಸಮ್ಮ ನರಗುಂದ (ನರಗುಂದ), ಹರೀಶ್ ಮಾಳಪ್ಪನವರ್ (ಹಾವೇರಿ), ಬಿ.ಸಿ.ಶಿವಕುಮಾರ್ (ಮಂಡ್ಯ), ನಾಗರಾಜ್ ಶಿಲ್ಪಿ (ಕಲಬುರಗಿ), ವಿಶಾಲ್ (ಶಿವಮೊಗ್ಗ), ಹನುಮಂತ ಬಾಡದ (ಯಾದಗಿರಿ), ಗೋಪಾಲ ಕಮ್ಮಾರ (ಬೆಳಗಾವಿ), ಭಾರತಿ ಸಂಕಣ್ಣಾಚಾರ್ (ಬಾಗಲಕೋಟೆ), ವೈ.ಕುಮಾರ (ದಾವಣಗೆರೆ)

ಕರ್ನಾಟಕ ಲಲಿತಕಲಾ ಅಕಾಡೆಮಿ

ಪ.ಸ.ಕುಮಾರ್ (ಬೆಂಗಳೂರು), ಅಧ್ಯಕ್ಷ

ಸದಸ್ಯರು: ಬಸವರಾಜ್ ಎಸ್. ಜಾನೆ (ಕಲಬುರಗಿ), ರಾ. ಸೂರಿ (ಬೆಂಗಳೂರು), ಕರಿಯಪ್ಪ ಹಂಚಿನಮನಿ (ಹಾವೇರಿ), ಮನು ಚಕ್ರವರ್ತಿ (ತುಮಕೂರು), ಪಿ.ಮಹಮ್ಮದ್ (ಉಡುಪಿ), ಶಾಂತಾ ಕೊಳ್ಳಿ (ಜೋಯಿಡಾ), ಅನಿತಾ ನಟರಾಜ್ ಹುಲಿಯಾರ್ (ಬೆಂಗಳೂರು), ಚಂದ್ರಕಾಂತ್ ಸರೋದೆ (ಬಾಗಲಕೋಟೆ), ಬಸವರಾಜ ಕಲೆಗಾರ (ಯಾದಗಿರಿ), ಆಶಾರಾಣಿ (ಬೆಳಗಾವಿ), ಮಹದೇವ ಶೆಟ್ಟಿ (ಮೈಸೂರು), ಫಾತಿಮಾ (ದಾವಣಗೆರೆ), ಆರ್.ಶಂಕರ್ (ಧಾರವಾಡ), ರಾಜೇಶ್ವರಿ ಮೋಪಗಾರ (ವಿಜಯಪುರ), ವೆಂಕಟೇಶ್ ಬಡಿಗೇರ (ಬಾಗಲಕೋಟೆ)

ಕರ್ನಾಟಕ ಯಕ್ಷಗಾನ ಅಕಾಡೆಮಿ

ತಲ್ಲೂರು ಶಿವರಾಮ ಶೆಟ್ಟಿ (ಉಡುಪಿ), ಅಧ್ಯಕ್ಷ

ಸದಸ್ಯರು: ರಾಘವ ಎಚ್ (ದಕ್ಷಿಣ ಕನ್ನಡ), ಕೃಷ್ಣಪ್ಪ ಪೂಜಾರಿ (ದಕ್ಷಿಣ ಕನ್ನಡ), ಗುರುರಾಜ್ ಭಟ್ (ದಕ್ಷಿಣ ಕನ್ನಡ), ವಿನಯ್ ಕುಮಾರ್ ಶೆಟ್ಟಿ (ದಕ್ಷಿಣ ಕನ್ನಡ), ವಿಜಯ್ ಕುಮಾರ್ ಶೆಟ್ಟಿ ಮುಲ್ಕಿ (ದಕ್ಷಿಣ ಕನ್ನಡ), ಮೋಹನ್ ಕೊಪ್ಪಾಳ್ (ದಕ್ಷಿಣ ಕನ್ನಡ), ಸತೀಶ್ ಅಡ್ಡಪ್ಪ ಸಂಕಬೈಲ್ (ಕಾಸರಗೋಡು), ರಾಜೇಶ್ ಕಳ್ಳೆ (ದಕ್ಷಿಣ ಕನ್ನಡ), ದಯಾನಂದ ಪಿ (ದಕ್ಷಿಣ ಕನ್ನಡ), ಜಿ.ವಿ.ಎಸ್. ಉಳ್ಳಾಲ್ (ದಕ್ಷಿಣ ಕನ್ನಡ)

ಕರ್ನಾಟಕ ಜಾನಪದ ಅಕಾಡೆಮಿ

ಶಿವಪ್ರಸಾದ್ ಗೊಲ್ಲಹಳ್ಳಿ (ಚಿಕ್ಕಬಳ್ಳಾಪುರ), ಅಧ್ಯಕ್ಷ

ಸದಸ್ಯರು: ಮಲ್ಲಿಕಾರ್ಜುನ ಕಲಮರಹಳ್ಳಿ (ದಾವಣಗೆರೆ), ಉಮೇಶ್ (ಚಾಮರಾಜನಗರ), ಜಮೀರುಲ್ಲ ಷರೀಫ್ (ಉತ್ತರ ಕನ್ನಡ), ಮಂಜುನಾಥ್ ರಾಮಣ್ಣ (ಚಿಕ್ಕಮಗಳೂರು), ಸಂಕರಣ್ಣ ಸಂಗಣ್ಣನವರ್ (ಗದಗ), ರಂಗಪ್ಪ ಮಾಸ್ತರ (ರಾಯಚೂರು), ಗುರುರಾಜ್ (ಮೈಸೂರು), ಕೆಂಪಮ್ಮ (ಮಂಡ್ಯ), ಎಂ.ಎಂ. ಪಡಶೆಟ್ಟಿ (ವಿಜಯಪುರ), ದೇವಾನಂದ ವರಪ್ರಸಾದ್ (ಹಾಸನ), ನಿಂಗಣ್ಣ ಮುದೇನೂರು (ಧಾರವಾಡ), ಕೆಂಕೆರೆ ಮಲ್ಲಿಕಾರ್ಜುನ (ತುಮಕೂರು), ಜೀವನ್ ಸಾಬ್ ವಾಲೀಕಾರ್ (ಕೊಪ್ಪಳ), ಶಿವಮೂರ್ತಿ ತನಿಖೆದಾರ್ (ಯಾದಗಿರಿ), ಮೆಹಬೂಬ್‌ಸಾಬ್ ಕಿಲ್ಲೇದಾರ್ (ಕೊಪ್ಪಳ).

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತಾರಾನಾಥ್ ಗಟ್ಟಿ ಕಾಪಿಕಾಡ್ (ದಕ್ಷಿಣ ಕನ್ನಡ), ಅಧ್ಯಕ್ಷ

ಸದಸ್ಯರು: ಪೃಥ್ವಿರಾಜ್ (ದಕ್ಷಿಣ ಕನ್ನಡ), ಕುಂಬ್ರ ದುರ್ಗಾಪ್ರಸಾದ್ ರೈ (ದಕ್ಷಿಣ ಕನ್ನಡ), ಮೋಹನ್‌ದಾಸ್ ಕೊಟ್ಟಾರಿ (ದಕ್ಷಿಣ ಕನ್ನಡ), ಅಕ್ಷಯ್ ಆರ್. ಶೆಟ್ಟಿ (ದಕ್ಷಿಣ ಕನ್ನಡ), ಶೈಲೇಶ್ ಬೋಜ ಸುವರ್ಣ (ದಕ್ಷಿಣ ಕನ್ನಡ), ಕಿಶೋರ್ ಗುಡ್ಡಪ್ಪಗೌಡ (ದಕ್ಷಿಣ ಕನ್ನಡ), ಬೂಬ ಪೂಜಾರಿ (ದಕ್ಷಿಣ ಕನ್ನಡ), ರೋಹಿತಾಶ್ವ ಯು. ಕಾಪಿಕಾಡ್ (ದಕ್ಷಿಣ ಕನ್ನಡ), ನಾಗೇಶ್ ಕುಮಾರ್ ಉದ್ಯಾವರ (ದಕ್ಷಿಣ ಕನ್ನಡ), ಸಂತೋಷ್ ಶೆಟ್ಟಿ (ಉಡುಪಿ)

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ

ಸದಸ್ಯರು: ಅಶೋಕ್ ಚಂದರಗಿ (ಬೆಳಗಾವಿ), ಎಂ.ಎಸ್.ಮದಬಾವಿ (ವಿಜಯಪುರ), ಜಾಣಗೆರೆ ವೆಂಕಟರಾಮಯ್ಯ (ತುಮಕೂರು), ಭಗತರಾಜ್ (ರಾಯಚೂರು), ಎ.ಆರ್. ಸುಬ್ಬಯ್ಯಕಟ್ಟೆ (ಕಾಸರಗೋಡು), ಸಂಜೀವ ಕುಮಾರ್ ಅತಿವಾಡೆ (ಬೀದರ್), ಶಿವರೆಡ್ಡಿ ಹಡೇದ್ (ಕೊಪ್ಪಳ)

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ

ಜೊಕಿಂ ಸ್ಟ್ಯಾನ್ಲಿ ಅಲ್ವಾರಿಸ್ (ದಕ್ಷಿಣ ಕನ್ನಡ), ಅಧ್ಯಕ್ಷ

ಸದಸ್ಯರು: ವಂ. ಪ್ರಕಾಶ್ ಮಾಡ್ತಾ ಎಸ್.ಜೆ. (ಬೆಂಗಳೂರು), ರೊನಾಲ್ಡ ಕ್ರಾಸ್ತಾ (ದಕ್ಷಿಣ ಕನ್ನಡ), ವಿಜಯಲಕ್ಷ್ಮಿ ನಾಯಕ್ (ದಕ್ಷಿಣ ಕನ್ನಡ), ನವೀನ್ ಲೋಬೋ (ದಕ್ಷಿಣ ಕನ್ನಡ), ಸಪ್ನಾ ಮೇ ಕ್ರಾಸ್ತಾ (ದಕ್ಷಿಣ ಕನ್ನಡ), ಸಮರ್ಥ ಭಟ್ (ದಕ್ಷಿಣ ಕನ್ನಡ), ಸುನಿಲ್ ಸಿದ್ದಿ (ಯಲ್ಲಾಪುರ), ಜೇಮ್ಸ್ ಲೋಪಿಸ್ (ಉತ್ತರ ಕನ್ನಡ), ದಯಾನಂದ ಮುಡ್ಕೇಕರ್ (ಕಾರ್ಕಳ), ಪ್ರಮೋದ್ ಪಿಂಟೋ (ಚಿಕ್ಕಮಗಳೂರು)

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ

ಉಮರ್ ಯು.ಎಚ್. (ದಕ್ಷಿಣ ಕನ್ನಡ), ಅಧ್ಯಕ್ಷ

ಸದಸ್ಯರು: ಬಿ.ಎಸ್. ಮೊಹಮದ್ (ಚಿಕ್ಕಮಗಳೂರು), ಹಫ್ಸಾ ಬಾನು (ಬೆಂಗಳೂರು), ಸಾರಾ ಅಲಿ ಪರ್ಲಡ (ದಕ್ಷಿಣ ಕನ್ನಡ), ಶಮೀರಾ ಜಹಾನ್ (ದಕ್ಷಿಣ ಕನ್ನಡ), ಯು.ಎಚ್. ಖಾಲಿದ್ ಉಜಿರ್ (ದಕ್ಷಿಣ ಕನ್ನಡ), ತಾಜುದ್ದೀನ್ (ದಕ್ಷಿಣ ಕನ್ನಡ), ಅಬೂಬಕರ್ ಅನಿಲ ಕಟ್ಟೆ (ದಕ್ಷಿಣ ಕನ್ನಡ), ಅಬ್ದುಲ್ ಶರೀಫ್ (ದಕ್ಷಿಣ ಕನ್ನಡ), ಅಮೀದ್ ಹಸನ್ ಮಾಡೂರು (ದಕ್ಷಿಣ ಕನ್ನಡ), ಶಮೀರ್ ಮುಲ್ಕಿ (ಉಡುಪಿ).

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಸದಾನಂದ ಮಾವಜಿ (ದಕ್ಷಿಣ ಕನ್ನಡ), ಅಧ್ಯಕ್ಷ

ಸದಸ್ಯರು: ಚಂದ್ರಶೇಖರ್ ಪೇರಾಲು (ದಕ್ಷಿಣ ಕನ್ನಡ), ತೇಜಕುಮಾರ್ ಕುಡೆಕಲ್ಲು (ದಕ್ಷಿಣ ಕನ್ನಡ), ಚಂದ್ರಾವತಿ ಬಡ್ಡಡ್ಕ (ದಕ್ಷಿಣ ಕನ್ನಡ), ಲತಾ ಕುದ್ವಾಜೆ (ದಕ್ಷಿಣ ಕನ್ನಡ), ಪಿ.ಎಸ್. ಕಾರ್ಯಪ್ಪ (ದಕ್ಷಿಣ ಕನ್ನಡ), ಎನ್.ಎ. ಜ್ಞಾನೇಶ್ (ದಕ್ಷಿಣ ಕನ್ನಡ).

ಕರ್ನಾಟಕ ಬಯಲಾಟ ಅಕಾಡೆಮಿ

ಪ್ರೊ.ದುರ್ಗಾದಾಸ್ (ಬಳ್ಳಾರಿ), ಅಧ್ಯಕ್ಷ

ಸದಸ್ಯರು: ಬಿ. ಪರಶುರಾಮ್ (ಬಳ್ಳಾರಿ), ಅನಸೂಯ ವಡ್ಡರ್ (ವಿಜಯಪುರ), ಚಂದ್ರು ಕಾಳೇನಹಳ್ಳಿ (ಹಾಸನ), ಭೀಮಪ್ಪ ರಾಮಪ್ಪ ಹುದ್ದಾರ್, ಮಲ್ಲಮ್ಮ ಸಾಲಹಳ್ಳಿ (ಬೆಳಗಾವಿ), ಮಾರನಾಯಕ (ಚಿತ್ರದುರ್ಗ), ಲಿಂಗಪ್ಪ ತೋರಣಗಟ್ಟಿ (ದಾವಣಗೆರೆ), ಯಲ್ಲಪ್ಪ ಮಾಸ್ತರ ನವಲಕಲ್ (ರಾಯಚೂರು), ಸುಜಾತ ಹಳಿಹಾಳ (ಹಳಿಯಾಳ), ಡಿ. ಫಾಲಾಕ್ಷಯ್ಯ (ವಿಜಯನಗರ).

ಕರ್ನಾಟಕ ಬಂಜಾರ ಅಕಾಡೆಮಿ



ಎ.ಆರ್. ಗೋವಿಂದಸ್ವಾಮಿ (ರಾಮನಗರ), ಅಧ್ಯಕ್ಷ

ಸದಸ್ಯರು: ಶಾಂತಾ ನಾಯಕ್ ಶಿರಗಾನಹಳ್ಳಿ (ಬಳ್ಳಾರಿ), ಭಾರತಿ ಬಾಯಿ ಕೂಬಾ (ಬೀದರ್), ಪಳನಿಸ್ವಾಮಿ ಜಾಗೇರಿ (ಚಾಮರಾಜನಗರ), ಆರ್.ಬಿ. ನಾಯ್ಕ (ವಿಜಯಪುರ), ಶೇಖರಪ್ಪ ಜೇಮಪ್ಪ ಲಮಾಣಿ (ಧಾರವಾಡ), ರವಿ ನಾಯ್ಕ (ಶಿವಮೊಗ್ಗ), ಸಾವಿತ್ರಿ ಬಾಯಿ (ಗದಗ), ಅಣ್ಣಾರಾಯ್ ರಾಠೋಡ್ (ಕಲಬುರಗಿ), ಸುರೇಖಾ ಲಮಾಣಿ (ವಿಜಯಪುರ), ಕುಮಾರ್ ತಾರೊನಾಥ್ ರಾಠೋಡ್ (ಕೊಪ್ಪಳ)

ರಂಗ ಸಮಾಜ

ಸದಸ್ಯರು: ರಾಮಕೃಷ್ಣಯ್ಯ (ಬೆಂಗಳೂರು), ರಾಜಪ್ಪ ದಳವಾಯಿ (ಚಿಕ್ಕಮಗಳೂರು), ಲಕ್ಷ್ಮಿ ಚಂದ್ರಶೇಖರ್ (ಬೆಂಗಳೂರು), ಶಶಿಧರ್ ಬಾರಿಘಾಟ್ (ಹಾಸನ), ಡಿಂಗ್ರಿ ನರೇಶ್ (ರಾಯಚೂರು), ಮಹಂತೇಶ್ ಗಜೇಂದ್ರಘಡ (ಬಾಗಲಕೋಟೆ), ಸುರೇಶ್ ಬಾಬು (ಮಂಡ್ಯ)

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ



ಅಜ್ಜಿನಕೊಂಡ ಮಹೇಶ ನಾಚಯ್ಯ (ಕೊಡಗು), ಅಧ್ಯಕ್ಷ

ಪ್ರಚಾರಕ್ಕೆ ಮೋದಿ ಚಾಲನೆ

ಒಂದನೇ ಪುಟದಿಂದ

'ದೇಶದ ಜನ ಮೋದಿಯನ್ನು ಮತ್ತೆ ಪ್ರಧಾನಿ ಮಾಡುವ ಸಂಕಲ್ಪ ಮಾಡಿದ್ದಾರೆ. ರಾಜ್ಯದ 28 ಕ್ಷೇತ್ರಗಳಲ್ಲಿ ಒಂದು ಕ್ಷೇತ್ರದಲ್ಲಾದರೂ ಕಾಂಗ್ರೆಸ್ ಗೆದ್ದು ತೋರಿಸಲಿ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌ಯಡಿಯೂರಪ್ಪ, ಸವಾಲು ಹಾಕಿದರು. 'ಎಲ್ಲ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಉಳಿಯದು' ಎಂದು ಹೇಳಿದರು.

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಭಗವಂತ ಖೂಬಾ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ, ಸಂಸದ ಉಮೇಶ ಜಾಧವ ಸೇರಿ ಹಲವು ಮುಖಂಡರು ಪಾಲ್ಗೊಂಡಿದ್ದರು. ಕಲಬುರಗಿ–ಬೀದರ್ ಜಿಲ್ಲೆಗಳಿಂದ ಕಾರ್ಯಕರ್ತರು ಬಂದಿದ್ದರು.

ಮೋದಿಗೆ ಗ್ಯಾರಂಟಿ ಕೊಡಿ

'ಕರ್ನಾಟಕದಲ್ಲಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂದು ಗೊತ್ತಿರುವುದರಿಂದಲೇ, ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಈಗಲೇ ಲೂಟಿ ಮಾಡಲು ಕಾಂಗ್ರೆಸ್ ಮುಂದಾಗಿದೆ. ಇದು ನಿಲ್ಲಬೇಕಾದರೆ ಸಂಸತ್ತಿನಲ್ಲಿ ನನಗೆ ರಕ್ಷಾ ಕವಚ ನಿರ್ಮಿಸಿಕೊಡಬೇಕು. ಆಗ ಭ್ರಷ್ಟ ಕಾಂಗ್ರೆಸ್ ಮುಖಂಡರ ಮೇಲೆ ನಿಗಾ ಇಟ್ಟು ಜನರ ಹಣ ಲೂಟಿ ತಡೆಯಲು ಕೇಂದ್ರಕ್ಕೆ ಸಾಧ್ಯ' ಎಂದು ಪ್ರಧಾನಿ ಹೇಳಿದರು.

'ಹೆಚ್ಚಿನ ಸಂಖ್ಯೆಯ ಬಿಜೆಪಿ ಸಂಸದರು ಆಯ್ಕೆಯಾದರೆ ಮೋದಿಗೆ ಮಾಹಿತಿ ತಲುಪೀತು ಎಂಬ ಭಯದಿಂದ ಅಕ್ರಮ ಮಾಡುವ ಮೊದಲು ಏಳು ಬಾರಿ ಯೋಚಿಸುತ್ತಾರೆ. ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲಿಸುವ ಮೂಲಕ ಕಾಂಗ್ರೆಸ್ ಪಕ್ಷವು ಖಾತೆ ತೆರೆಯದಂತೆ ಮಾಡುವುದಾಗಿ ನನಗೆ ಗ್ಯಾರಂಟಿ ಕೊಡಿ' ಎಂದು ಮೋದಿ ಮನವಿ ಮಾಡಿದರು.

'ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿಗೆ ಗೆಲುವು ತಂದುಕೊಟ್ಟರೆ ಕರ್ನಾಟಕವನ್ನು ಕೃಷಿ ಹಾಗೂ ಕೈಗಾರಿಕೆಯ ಹಬ್ ಆಗಿ ಅಭಿವೃದ್ಧಿ ಪಡಿಸುತ್ತೇನೆ. ಇದು ಮೋದಿಯ ಗ್ಯಾರಂಟಿ' ಎಂದು ಭರವಸೆ ನೀಡಿದರು.

ಕನ್ನಡಿಗರಿಗಾಗಿ 'ನಮೋ ಕನ್ನಡ' ಖಾತೆ

'ಕರ್ನಾಟಕದ ಸಂಸ್ಕೃತಿ ಹಾಗೂ ಕನ್ನಡ ಭಾಷೆಯ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಕನ್ನಡಿಗರು ನನ್ನ ಮಾತುಗಳನ್ನು ಕನ್ನಡದಲ್ಲೇ ಕೇಳಿಸಿಕೊಳ್ಳಲು ಆಗುವಂತೆ ಎಕ್ಸ್ ಜಾಲತಾಣದಲ್ಲಿ 'ನಮೋ ಕನ್ನಡ' ಹೆಸರಿನ ಖಾತೆ ತೆರೆದಿದ್ದೇವೆ. ನನ್ನ ಭಾಷಣಗಳ ವಿಡಿಯೊ ಎಐ ತಂತ್ರಜ್ಞಾನದಿಂದ ಕನ್ನಡಕ್ಕೆ ಅನುವಾದಗೊಳ್ಳಲಿದೆ. ಇನ್ನುಮುಂದೆ ಮೋದಿ ನಿಮ್ಮ ಕಿಸೆಯಲ್ಲೇ ಇರುತ್ತಾನೆ' ಎಂದು ನರೇಂದ್ರ ಮೋದಿ ಹೇಳಿದರು.

ಕನ್ನಡ ಭಾಷೆಗೆ ಗೌರವ ನೀಡಲು ಮೊಬೈಲ್ ಫೋನ್‌ನಲ್ಲಿನ ಟಾರ್ಚ್ ಬೆಳಗಿಸಲು ಮೋದಿ ಕೋರಿದಾಗ, ಕಾರ್ಯಕರ್ತರು ಮೊಬೈಲ್ ಫೋನ್‌ನಲ್ಲಿ ಟಾರ್ಚ್ ಬೆಳಗಿಸಿ ಸಂಭ್ರಮಿಸಿದರು.

ಕಾಂಗ್ರೆಸ್‌ನಿಂದ ಮತ್ತೆ 2 'ಗ್ಯಾರಂಟಿ'

ಒಂದನೇ ಪುಟದಿಂದ

- ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತಂದು, ಸಾರ್ವಜನಿಕ ಮೂಲಸೌಕರ್ಯ ನಿರ್ಮಾಣ ಹಾಗೂ ನಗರಗಳಲ್ಲಿ ಹವಾಮಾನ ವೈಪರೀತ್ಯ ನಿಯಂತ್ರಣ, ಸಾಮಾಜಿಕ ಸೇವೆಗಳ ಅಂತರ ಕಡಿಮೆ ಮಾಡಲಾಗುತ್ತದೆ
- ಅಸಂಘಟಿತ ವಲಯದ ಕಾರ್ಮಿಕರಿಗೆ ಜೀವ ವಿಮೆ, ಅಪಘಾತ ವಿಮೆ ಸೇರಿದಂತೆ ಸಾಮಾಜಿಕ ಭದ್ರತೆ ಒದಗಿಸಲಾಗುತ್ತದೆ
- ನರೇಂದ್ರ ಮೋದಿ ನೇತೃತ್ವದ ಸರ್ಕಾರ ಜಾರಿಗೆ ತಂದಿರುವ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಹಿಂಪಡೆದು ಕಾರ್ಮಿಕರ ಹಕ್ಕು ಮರುಸ್ಥಾಪನೆ ಮಾಡಲಾಗುತ್ತದೆ

'ಹಿಸ್ಸೇದಾರಿ ನ್ಯಾಯ'– 5 ಭರವಸೆಗಳು

- ರಾಷ್ಟ್ರ ಮಟ್ಟದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ ನಡೆಸಿ ದೇಶದ ಸಂಪತ್ತಿನ ಸಮಾನ ಹಂಚಿಕೆ. ಆಡಳಿತದಲ್ಲಿ ಎಲ್ಲ ವರ್ಗದವರ ಪ್ರಾತಿನಿಧ್ಯಕ್ಕೆ ಅವಕಾಶ ನೀಡಲಾಗುತ್ತದೆ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಹೆಚ್ಚಳಕ್ಕೆ ಅಡ್ಡಿಯಾಗಿರುವ ಶೇ 50 ಮಿಸಲಾತಿ ಮಿತಿಯನ್ನು ತಿದ್ದುಪಡಿ ಮೂಲಕ ಏರಿಕೆ ಮಾಡಲಾಗುತ್ತದೆ
- ಆದಿವಾಸಿಗಳಿಗೆ ಅರಣ್ಯ ಹಕ್ಕು ರಕ್ಷಣೆ. ಬಾಕಿ ಇರುವ ಅರಣ್ಯ ಹಕ್ಕು ಕಾಯ್ದೆಯ ಬೇಡಿಕೆ ಒಂದು ವರ್ಷದಲ್ಲಿ ಪೂರ್ಣಗೊಳಿಸಲಾಗುತ್ತದೆ
- ಅರಣ್ಯದ ಕಿರು ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ವಿಸ್ತರಣೆ. ಅರಣ್ಯ ಸಂರಕ್ಷಣೆ ಕಾಯ್ದೆ ಹೆಸರಿನಲ್ಲಿ ಮಾಡಲಾಗಿರುವ ಬುಡಕಟ್ಟು ವಿರೋಧಿ ತಿದ್ದುಪಡಿಗಳನ್ನು ರದ್ದುಗೊಳಿಸಲಾಗುತ್ತದೆ
- ಆದಿವಾಸಿಗಳಿಗೆ ಸ್ವಯಂ ಆಡಳಿತ ಹಾಗೂ ಸಂಸ್ಕೃತಿ ರಕ್ಷಣೆ ಹಕ್ಕು ನೀಡಲಾಗುತ್ತದೆ

'ಜಾತಿ ಗಣತಿ: ಪಕ್ಷದ ನಿರ್ಣಯ ಪಾಲಿಸಿ'

'ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಯಾರೇ ಇರಲಿ ಪಕ್ಷದ ನಿರ್ಣಯವನ್ನು ಎಲ್ಲರೂ ಪಾಲಿಸಬೇಕು. ಎಐಸಿಸಿ ಮಟ್ಟದಿಂದ ನಾನು ಈ ಮಾತು ಹೇಳುತ್ತಿದ್ದೇನೆ' ಎಂದು ಖರ್ಗೆ ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ಜಾತಿ ಗಣತಿಗೆ ಸ್ವಪಕ್ಷೀಯರೇ ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

125 ವರ್ಷದ ದೈತ್ಯ ಆಮೆ ಸಾವು

ಹೈದರಾಬಾದ್ (ಪಿಟಿಐ): ವಯೋಸಹಜ ಅನಾರೋಗ್ಯದಿಂದ ಸುಮಾರು 125 ವಯಸ್ಸಿನ ಗ್ಯಾಲಪಗೋಸ್ ದೈತ್ಯ ಆಮೆಯು ಇಲ್ಲಿನ ನೆಹರೂ ಜೈವಿಕ ಉದ್ಯಾನದಲ್ಲಿ ಮೃತಪಟ್ಟಿದೆ ಎಂದು ಮೃಗಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ — ಬುಧವಾರ, 17-3-1999

● ಭಾಗವತ್ ಆರೋಪ: ಮತ್ತೆ ಸಂಸತ್ ಕಲಾಪ ಮುಂದಕ್ಕೆ

ನವದೆಹಲಿ, ಮಾ. 16– ನೌಕಾಪಡೆಯ ಮುಖ್ಯಸ್ಥ ಸ್ಥಾನದಿಂದ ವಜಾ ಆದ ಅಡ್ಮಿರಲ್ ಜನರಲ್ ವಿಷ್ಣು ಭಾಗವತ್ ಶಸ್ತ್ರಾಸ್ತ್ರ ಖರೀದಿಯ ಬಗೆಗೆ ಮಾಡಿರುವ ಗಂಭೀರ ಆರೋಪಗಳ ತನಿಖೆಗೆ ಜಂಟಿ ಸಂಸತ್ ಸಮಿತಿ ರಚಿಸಬೇಕೆಂದು ಸಂಸತ್‌ನ ಉಭಯ ಸದನಗಳಲ್ಲೂ ಇಂದು ಪ್ರತಿಪಕ್ಷಗಳು ಒತ್ತಾಯಿಸಿದ್ದರಿಂದ ಗದ್ದಲ ಉಂಟಾಗಿ ಎರಡು ಬಾರಿ ಕಲಾಪ ಮುಂದೂಡಿದ ಪ್ರಸಂಗ ನಡೆಯಿತು.

ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳ ಸದಸ್ಯರು ಶೂನ್ಯವೇಳೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದಾಗ ಸದನ ಕೋಲಾಹಲದಲ್ಲಿ ಮುಳುಗಿತು.

50 ವರ್ಷಗಳ ಹಿಂದೆ — ಭಾನುವಾರ, 17-3-1974

● ರಾಷ್ಟ್ರದ ಬೃಹತ್ ಉಕ್ಕು ಕಾರ್ಖಾನೆಗಳ ಆಡಳಿತ ವ್ಯವಸ್ಥೆಯ ಪರಿವರ್ತನೆ

ನವದೆಹಲಿ ಮಾ. 16– ಬೃಹತ್ ಗಾತ್ರದ ಹಿಂದೂಸ್ತಾನ್ ಉಕ್ಕಿನ ಕಾರ್ಖಾನೆಯನ್ನು (ಎಚ್.ಎಸ್.ಎಲ್) ಪುನರ್‌ರೂಪಿಸುವುದು ಮತ್ತು ಬೋಕಾರೋ, ಭಿಲೈ, ರೂರ್ಕೆಲಾ, ದುರ್ಗಾಪು ಉಕ್ಕಿನ ಕಾರ್ಖಾನೆಗಳನ್ನು ಪ್ರತ್ಯೇಕ ಡೈರೆಕ್ಟರುಗಳ ಮಂಡಲಿ ಇರುವ ಕಾನೂನುಬದ್ಧ ಸ್ವತಂತ್ರ ಸಂಸ್ಥೆಗಳನ್ನಾಗಿ ಮಾರ್ಪಡಿಸುವ ಸಲಹೆಗಳನ್ನು ಉಕ್ಕು ಮತ್ತು ಗಣಿ ಸಚಿವ ಖಾತೆ ಪರಿಶೀಲಿಸುತ್ತಿದೆ.

ಈ ಸಲಹೆಗಳ ಬಗ್ಗೆ ಶೀಘ್ರವೇ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆಯೂ ಇದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮಾರ್ಚ್ 17, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಅಷ್ಟಮಿ ಗಂ. 21-54 **ನಕ್ಷತ್ರ:** ಮೃಗಶಿರಾ ಗಂ. 16-47 **ಯೋಗ:** ಆಯುಷ್ಮಾನ್ ಗಂ. 17-05
ಕರಣ: ವಿಷ್ಟಿ ಗಂ. 09-41, ಮೀನ ಮಾಸದ 03 ನೇ ದಿನ, **ಮಳೆನಕ್ಷತ್ರ:** ಪೂರ್ವಾಭಾದ್ರ 4
ರಾಹುಕಾಲ: ಸಾಯಂಕಾಲ 04-30 - 06-00
ಸೂರ್ಯೋದಯ: 06-40 **ಸೂರ್ಯಾಸ್ತ:** 06-38
ಮುಸ್ಲಿಂ ದಿನಾಂಕ: 06 ರಂಜಾನ್
ಅದೃಷ್ಟ ಸಂಖ್ಯೆ: 4, 6

ಮೇಷ: ಯೋಜನೆಯ ಬೆಳವಣಿಗೆಯಲ್ಲಿ ಸಂಬಂಧಿಸಿದವರೊಂದಿಗೆ ಚರ್ಚೆ ನಡೆಸದೇ ಯಾವ ತೀರ್ಮಾನಗಳಿಗೂ ಬರುವುದು ಸರಿಯಲ್ಲ. ಕಾರ್ಯಗಳ ಒತ್ತಡದ ನಡುವೆಯೂ ಕುಟುಂಬದ ಸಮಸ್ಯೆಯತ್ತ ಗಮನ ನೀಡಿ.

ವೃಷಭ: ವಿವಿಧ ಧಾರ್ಮಿಕ ಕಾರ್ಯಕ್ರಮ ಮಾಡುವುದರಿಂದ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ ಇದೆ.

ಮಿಥುನ: ವಾಕ್ಚಾತುರ್ಯದಿಂದ ಕೆಲಸ ಕಾರ್ಯಗಳನ್ನು ಸಂಪೂರ್ಣವಾಗಿ ನೆರವೇರಿಸಿಕೊಳ್ಳುವಿರಿ. ಕಾರ್ಯಭಾರದ ಒತ್ತಡ ಕಡಿಮೆಯಾಗುವುದು. ಔಷಧ ಖರೀದಿಗೆ ಯೋಚಿಸಬೇಡಿ, ಹಣಕ್ಕಿಂತ ಆರೋಗ್ಯವೇ ಮುಖ್ಯ.

ಕರ್ಕಾಟಕ: ವ್ಯಾಪಾರಸ್ಥರು ಹೊಸ ತರದ ಯೋಜನೆ ರೂಪಿಸಿಕೊಳ್ಳುವುದರಿಂದ ಹೆಚ್ಚಿನ ಗ್ರಾಹಕರ ಪರಿಚಯ ಪಡೆಯಬಹುದು. ಮದುವೆ ಸಿದ್ಧತೆಗಳು ಸಮರ್ಪಕವಾಗಿ ನಡೆಯುತ್ತವೆ. ಸಂಗೀತ ಕ್ಷೇತ್ರದಲ್ಲಿ ಹೆಚ್ಚು ಪ್ರೋತ್ಸಾಹ.

ಸಿಂಹ: ಯಾರ ನೆರವೂ ಇಲ್ಲದೆ ನಿಮ್ಮೆಲ್ಲ ಕಾರ್ಯಗಳನ್ನು ನೀವೇ ನಿರ್ವಹಿಸುವಂತಾಗಲಿದೆ. ಜಾಣ್ಮೆ ತೋರಿದಲ್ಲಿ ಅದೃಷ್ಟ ನಿಮ್ಮದಾಗಲಿದೆ. ಪತ್ರಕರ್ತರಿಗೆ ಗಣ್ಯ ವ್ಯಕ್ತಿಗಳ ಭೇಟಿ ಹಾಗೂ ಅವರ ಸಂದರ್ಶನ ನಡೆಸುವ ಅವಕಾಶ ದೊರೆಯಲಿದೆ.

ಕನ್ಯಾ: ವೃತ್ತಿ ತರಬೇತಿ ಹೊಂದಿರುವವರಿಗೆ ಈ ದಿನ ಒಂದು ಹಂತದ ಕೆಲಸ ಸಿಗುವ ಸೂಚನೆ ದೊರೆಯಲಿದೆ. ಮಾನಸಿಕ ಸಮತೋಲನದಿಂದ ನಿಮ್ಮ ಪಾಲಿಗೆ ಈ ದಿನ ಶುಭ ಮತ್ತು ಅಭಿವೃದ್ಧಿದಾಯಕವಾಗಲಿದೆ.

ತುಲಾ: ಮನೆಗೆ ಸೋದರಿಯರ ಆಗಮನ ಅಥವಾ ಸೋದರಿಯ ಭೇಟಿಯು ಸಂತಸ, ಹಬ್ಬದ ವಾತಾವರಣವನ್ನು ತರುತ್ತದೆ. ನಿಮ್ಮ ನೆಚ್ಚಿನ ಕ್ಷೇತ್ರದಲ್ಲಿ ಅಭೂತಪೂರ್ವ ಸ್ಪರ್ಧೆಗಳನ್ನು ಎದುರಿಸುವ ಕಾಲ ಈ ದಿನವಾಗಲಿದೆ.

ವೃಶ್ಚಿಕ: ಕ್ರೀಡಾಪಟುಗಳಿಗೆ ಇಂದು ಶುಭದಾಯಕವಾದ ದಿನ. ಕೆಲವು ನಿಗೂಢ ಸಂಗತಿಗಳನ್ನು ಬಯಲಿಗೆ ತರುವ ಪ್ರಯತ್ನ ನಿಮ್ಮಿಂದ ನಡೆಯಲಿದೆ. ಕಲಾವಿದರಿಗೆ ಮುಂಬರುವ ಸ್ಪರ್ಧೆಗಳಿಗೆ ತಯಾರಿ ಮಾಡಿಕೊಳ್ಳಲು ಶುಭದಿನ.

ಧನು: ಹೊಸ ಜವಾಬ್ದಾರಿಗಳನ್ನು ಪೂರ್ಣೈಸುವತ್ತ ಗಮನಾರ್ಹ ಹೆಜ್ಜೆಯಿಡುವ ಮೂಲಕ ಅಚ್ಚರಿಯ ಫಲಿತಾಂಶಗಳನ್ನು ಕಾಣುವಿರಿ. ಶೀತ ಬಾಧೆಯನ್ನು ಹೋಗಲಾಡಿಸಿಕೊಳ್ಳಲು ಆಯುರ್ವೇದದ ಮೊರೆಹೋಗುವುದು ಉತ್ತಮ.

ಮಕರ: ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ನಿಮಗೆ ಹೆಚ್ಚು ಆನಂದ ಸಿಗಬಹುದು. ಧನಾಗಮನಕ್ಕೆ ಅನುಕೂಲವಾಗುತ್ತದೆ. ಜವಳಿ ವ್ಯಾಪಾರಿಗಳಿಗೆ ಲಾಭವಾಗುತ್ತದೆ.

ಕುಂಭ: ನಿಮ್ಮ ಕೆಲಸ ಕಾರ್ಯದಲ್ಲಿ ಪದೇ ಪದೇ ತೋರಿ ಬರುತ್ತಿದ್ದ ಅಡ್ಡಿ ಆತಂಕಗಳು ದೂರಾಗಲಿವೆ. ನಿಮ್ಮ ಕೆಲಸಗಳಿಗೆ ಆತ್ಮಸ್ಥೈರ್ಯ ಬಹಳ ಅಗತ್ಯವಾಗುವುದು. ಮಗನ ವಿದ್ಯಾಭ್ಯಾಸದ ವಿಚಾರಕ್ಕಾಗಿ ಶಾರದಾಂಬೆಯನ್ನು ಪ್ರಾರ್ಥಿಸಿ.

ಮೀನ: ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಸಂಪಾದನೆ ಹೆಚ್ಚಲಿದೆ. ಹವಮಾನದ ವ್ಯತ್ಯಾಸದಿಂದಾಗಿ ಅನಾರೋಗ್ಯದ ಭೀತಿ ಉಂಟಾಗುವುದು. ನಿಶ್ಚಿತ ಕಾರ್ಯಗಳಿಗೆ ಹಣದ ಹರಿವು ಸರಾಗವಾಗಿರುವುದು.

ಪದಬಂಧ 5623

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಾಜ ಕಾಲಾಳುಗಳಿಂದ ಆಡುವ ಒಳಾಂಗಣ ಆಟ (4)
3.ಮನಸ್ಸಿನ ಕಾಯಿಲೆ (4)
5.ಬೇಡುವವನು ಇಲ್ಲಿದ್ದಾನೆ (3)
6.ನೇಸರನ ಇನ್ನೊಂದು ಹೆಸರು (4)
8.ರತ್ನಗಳಿಗೆ ಆಕರವಾದುದು (4)
10.ಸುಳಿಯುತ್ತಾ ಹತ್ತಿರ ಬಂದು ಹೀಗೆ ನುಂಗು! (4)
12.ಎಣಿಕೆಗೆ ಮೀರಿದುದು (4)
14.ಈತ ದಪ್ಪನೆಯ ಮನುಷ್ಯ (3)
15.ಜೈನ ತೀರ್ಥಂಕರರಲ್ಲಿ ಕೊನೆಯವನು (4)
16.ತರತರದ ಕಾಯಿಪಲ್ಲೆ (4)

ಮೇಲಿಂದ ಕೆಳಕ್ಕೆ
1.ನಾಲ್ಕು ಕಾಲುಗಳನ್ನುಳ್ಳದ್ದು (4)
2.ಕಾಲಸೂಚಕ ಯಂತ್ರ (4)
3.ಮರದಲ್ಲಿ ಕಾಣುತ್ತಿರುವ ತುಂಬಿ (4)
4.ಅನ್ಯಮಾರ್ಗವಿದು (4)
7.ಭವನದ ಹತ್ತಿರವಿರುವ ಮುಸಲ್ಮಾನ ದೊರೆ (3)
9.ಮೆಟ್ಟಿಲುಗಳಿರುವ ಕೊಳ (3)
10.ವರನಿಗೆ ಕೇಳಿಸುತ್ತಿರುವುದು ಮಧುರವಾದ ಧ್ವನಿ (4)
11.ವಿಷ್ಣುವಿನ ಕೈಯಲ್ಲಿರುವ ಚಕ್ರಾಯುಧ (4)
12.ಆಯಾಳು ಹಿಡಿದಿರುವ ಸೂಜಿಗಲ್ಲು (4)
13.ತೆಳುವಾದ ಉದರದವಳು (4)



5622ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾತಾವರಣ 3.ಕಡಸು
5.ವಿಧಾನಸಭೆ 7.ಸಮಾಪ್ತಿ
8.ಹೊಸಬದುಕು 11.ಕನಸು
12.ವನಪಾಲಕ 14.ಮೆದುಳು
15.ಆಮ್ಲಜನಕ

ಮೇಲಿಂದ ಕೆಳಕ್ಕೆ:
1.ವಾಸ್ತವಿಕ 2.ವಪನ
4.ಸುಷುಪ್ತಿ 6.ಸಮಾಸ
7.ಸರಕು 8.ಹೊಲಸು
9.ದುರ್ದಾನ 10.ಅಕಳಂಕ
11.ಕಡಿಮೆ 13.ಪಾರಜ

ಸುಡೊಕು 6008

			8		1	9		
	8						3	1
3		1	2		9		5	6
	1	7			8	3		
				2			8	4
8		3	9				6	
1			7		2	4		3
		8		4			1	
	3		1		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6007 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಲೋಕಸಭಾ ಚುನಾವಣೆ: 12 ರಾಜ್ಯಗಳಲ್ಲಿ ಪುರುಷರಿಗಿಂತ ಮಹಿಳಾ ಮತದಾರರ ಸಂಖ್ಯೆ ಹೆಚ್ಚು • ಅಂಗವಿಕಲರಿಗೆ ಮನೆಯಿಂದಲೇ ಮತದಾನದ ಅವಕಾಶ

80 ದಿನಗಳ ದೀರ್ಘ ಅವಧಿಗೆ ನೀತಿಸಂಹಿತೆ ಜಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ, ನಾಲ್ಕು ರಾಜ್ಯಗಳ ವಿಧಾನಸಭೆ ಮತ್ತು ವಿವಿಧ ರಾಜ್ಯಗಳ 26 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಚುನಾವಣಾ ಆಯೋಗ ಶನಿವಾರ ವೇಳಾಪಟ್ಟಿ ಪ್ರಕಟಿಸಿದೆ. ದೇಶದಲ್ಲಿ ಏಳು ಹಂತಗಳಲ್ಲಿ ಹಾಗೂ ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ವೇಳಾಪಟ್ಟಿ ಪ್ರಕಟಿಸಿದರು. ಚುನಾವಣಾ ನೀತಿಸಂಹಿತೆ ಶನಿವಾರದಿಂದಲೇ ಜಾರಿಗೆ ಬಂದಿದೆ. ನೀತಿಸಂಹಿತೆ 80 ದಿನಗಳವರೆಗೆ ಜಾರಿಯಲ್ಲಿರಲಿದೆ. ಇದು ದೇಶದ ಚುನಾವಣಾ ಇತಿಹಾಸದಲ್ಲೇ ಸುದೀರ್ಘವಾಗಿದೆ.

ಏಪ್ರಿಲ್ 19ರಿಂದ ಜೂನ್ 1ರವರೆಗೆ ಏಳು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಜೂನ್ 4ರಂದು ಮತ ಎಣಿಕೆ ಆಗಲಿದೆ ಎಂದರು. ಉತ್ತರ ಪ್ರದೇಶ, ಬಿಹಾರ ಹಾಗೂ ಪಶ್ಚಿಮ ಬಂಗಾಳದಲ್ಲಿ ಏಳು ಹಂತಗಳಲ್ಲಿ ಮತದಾನ ಜರುಗಲಿದೆ. ಈ ಚುನಾವಣೆಯಲ್ಲಿ 97 ಕೋಟಿಗೂ ಅಧಿಕ ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರು ಎಂದರು.

ಅರುಣಾಚಲ ಪ್ರದೇಶ ಹಾಗೂ ಸಿಕ್ಕಿಂ ವಿಧಾನಸಭೆಗಳಿಗೆ ಏಪ್ರಿಲ್ 19ರಂದು, ಆಂಧ್ರಪ್ರದೇಶ ವಿಧಾನಸಭೆಗೆ ಮೇ 13ರಂದು ಹಾಗೂ ಒಡಿಶಾ ವಿಧಾನಸಭೆಗೆ ನಾಲ್ಕು ಹಂತಗಳಲ್ಲಿ (ಮೇ 13, ಮೇ 20, ಮೇ 25 ಹಾಗೂ ಜೂನ್ 1) ಮತದಾನ ನಡೆಯಲಿದೆ.

ರಾಜಕೀಯ ಪಕ್ಷಗಳು ಮಾದರಿ ನೀತಿಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಾಕೀತು ಮಾಡಿದ ರಾಜೀವ್ ಕುಮಾರ್, ತಾರಾ ಪ್ರಚಾರಕರು ಸೇರಿದಂತೆ ಅಭ್ಯರ್ಥಿಯ ಪರ ಪ್ರಚಾರ ಮಾಡುವ ಎಲ್ಲರೂ ಸಭ್ಯತೆಯ ಎಲ್ಲೆ ಮೀರಬಾರದು ಎಂದರು. ವೈಯಕ್ತಿಕ ನಿಂದನೆಗಳಿಂದ ದೂರವಿರಬೇಕೆಂದು ನಾನು ರಾಜಕೀಯ ಪಕ್ಷಗಳಿಗೆ ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಚುನಾವಣಾ ಪ್ರಚಾರಕ್ಕೆ ಮಕ್ಕಳನ್ನು ಬಳಸಿಕೊಳ್ಳಬಾರದು ಎಂದು ಅವರು ಸೂಚಿಸಿದರು. 85 ವರ್ಷ ದಾಟಿದ ವೃದ್ಧರು ಹಾಗೂ ನಿಗದಿತ ಮಿತಿಯಂತೆ ಶೇ 40ರಷ್ಟು ಅಂಗವಿಕಲತೆ ಹೊಂದಿರುವವರು ಮನೆಯಿಂದಲೇ ಮತ ಚಲಾಯಿಸಬಹುದು. ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಈ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ವಿವರ ನೀಡಿದರು. ಸೂರ್ಯಾಸ್ತದ ನಂತರ ಬ್ಯಾಂಕ್ ವಾಹನಗಳಲ್ಲಿ ನಗದು ಸಾಗಣೆಗೆ ಅವಕಾಶ ಇಲ್ಲ ಎಂದು ಅವರು ಹೇಳಿದರು. ಪ್ರತಿ ಅಭ್ಯರ್ಥಿ ಗರಿಷ್ಠ ₹80 ಲಕ್ಷ ಚುನಾವಣಾ ವೆಚ್ಚ ಮಾಡಬಹುದು ಎಂದರು.

ತೋಳ್ಬಲ, ಹಣದ ಶಕ್ತಿ, ಸುಳ್ಳು ಹಾಗೂ ತಪ್ಪು ಮಾಹಿತಿ, ಮಾದರಿ ನೀತಿ ಸಂಹಿತೆ ಉಲ್ಲಂಘನೆಯ ಸವಾಲುಗಳನ್ನು ಎದುರಿಸಲು ಚುನಾವಣಾ ಆಯೋಗ ಸನ್ನದ್ಧವಾಗಿದೆ ಎಂದು ಅವರು ತಿಳಿಸಿದರು.

ಮತದಾರರಲ್ಲಿ ಲಿಂಗ ಅನುಪಾತವು 948 ಕ್ಕೆ ಏರಿಕೆ. ಇದೊಂದು ಸಕಾರಾತ್ಮಕ ಬೆಳವಣಿಗೆ. ಪುರುಷರಿಗಿಂತ ಹೆಚ್ಚು ಮಹಿಳಾ ಮತದಾರರನ್ನು ಹೊಂದಿರುವ 12 ರಾಜ್ಯಗಳಿವೆ ಎಂದು ಅವರು ಹೇಳಿದರು.

ಆಯೋಗವು 17 ಲೋಕಸಭಾ ಚುನಾವಣೆಗಳು, 16 ರಾಷ್ಟ್ರಪತಿ ಚುನಾವಣೆಗಳು ಮತ್ತು 400ಕ್ಕೂ ಹೆಚ್ಚು ವಿಧಾನಸಭಾ ಚುನಾವಣೆಗಳನ್ನು ನಡೆಸಿದೆ ಎಂದು ಕುಮಾರ್ ಹೇಳಿದರು.

ಚುನಾವಣಾ ವೇಳಾಪಟ್ಟಿ

ಪ್ರಕ್ರಿಯೆ	ರಾಜ್ಯದಲ್ಲಿ ಮೊದಲನೇ ಹಂತ	ಎರಡನೇ ಹಂತ
ಅಧಿಸೂಚನೆ	ಮಾರ್ಚ್ 28	ಏಪ್ರಿಲ್ 12
ನಾಮಪತ್ರ ಸಲ್ಲಿಸಲು ಕೊನೆ ದಿನ	ಏಪ್ರಿಲ್ 4	ಏಪ್ರಿಲ್ 19
ನಾಮಪತ್ರ ಪರಿಶೀಲನೆ	ಏಪ್ರಿಲ್ 5	ಏಪ್ರಿಲ್ 20
ನಾಮಪತ್ರ ವಾಪಸ್‌ಗೆ ಕೊನೆ ದಿನ	ಏಪ್ರಿಲ್ 8	ಏಪ್ರಿಲ್ 22
ಮತದಾನ	ಏಪ್ರಿಲ್ 26	ಮೇ 7

‘ಜಮ್ಮು ಮತ್ತು ಕಾಶ್ಮೀರಕ್ಕೆ ಚುನಾವಣೆ’

ಲೋಕಸಭಾ ಚುನಾವಣೆಯ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಚುನಾವಣೆ ನಡೆಸಲಾಗುವುದು ಎಂದು ರಾಜೀವ್ ಕುಮಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಭದ್ರತಾ ಕಾರಣಗಳಿಂದಾಗಿ ಲೋಕಸಭೆಯೊಂದಿಗೆ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಚುನಾವಣೆ ನಡೆಸಲು ಸಾಧ್ಯವಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಲೋಕಸಭಾ ಚುನಾವಣೆಯ ಸಿದ್ಧತೆ ಪರಿಶೀಲಿಸಲು ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದೆವು. ಲೋಕಸಭೆ ಹಾಗೂ ವಿಧಾನಸಭೆಗೆ ಏಕಕಾಲಕ್ಕೆ ಚುನಾವಣೆ ನಡೆಸುವಂತೆ ರಾಜಕೀಯ ಪಕ್ಷಗಳು ಮನವಿ ಸಲ್ಲಿಸಿದ್ದವು. ನಾವು ಅದನ್ನು ಗೌರವಿಸುತ್ತೇವೆ. ಆದರೆ, ಇಡೀ ಆಡಳಿತಯಂತ್ರವು ಈ ಪರಿಕಲ್ಪನೆಗೆ ವಿರುದ್ಧವಾಗಿತ್ತು. ಚುನಾವಣಾ ಸಂದರ್ಭದಲ್ಲಿ ಭದ್ರತಾ ಪಡೆಗಳನ್ನು ದೊಡ್ಡ ಮಟ್ಟದಲ್ಲಿ ನಿಯೋಜನೆ ಮಾಡಬೇಕಾಗುತ್ತದೆ. ದೇಶದಾದ್ಯಂತ ಚುನಾವಣೆ ನಡೆಯುವ ಸಂದರ್ಭದಲ್ಲಿ ಇದು ಕಾರ್ಯಸಾಧುವಲ್ಲ’ ಎಂದು ಅವರು ಹೇಳಿದರು.

ಶಿಬಿರದಿಂದ ಮತ ಚಲಾಯಿಸಲು ಅವಕಾಶ

ಜನಾಂಗೀಯ ಹಿಂಸಾಚಾರದಿಂದ ನಲುಗಿರುವ ಮಣಿಪುರದಲ್ಲಿ ಎರಡು ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಆದರೆ, ಒಂದು ಲೋಕಸಭಾ ಕ್ಷೇತ್ರದಲ್ಲಿ ಎರಡು ದಿನಗಳಲ್ಲಿ ಮತದಾನ ನಡೆಯಲಿದೆ.

ಜತೆಗೆ, ಇಲ್ಲಿನ ನಿರಾಶ್ರಿತ ಶಿಬಿರಗಳಲ್ಲಿ ನೆಲೆಸಿರುವ ಜನರಿಗೆ ತಮ್ಮ ಶಿಬಿರಗಳಿಂದಲೇ ಮತ ಚಲಾಯಿಸಲು ಅವಕಾಶ ನೀಡಲಾಗುವುದು ಎಂದು ಚುನಾವಣಾ ಆಯೋಗ ಶನಿವಾರ ಪ್ರಕಟಿಸಿದೆ.

ಇವಿಎಂ ಟೀಕೆಗೆ ವ್ಯಂಗ್ಯದ ಉತ್ತರ: ವಿದ್ಯುನ್ಮಾನ ಮತ ಯಂತ್ರಗಳ (ಇವಿಎಂ) ಕಾರ್ಯನಿರ್ವಹಣೆಯಲ್ಲಿ ಲೋಪ ಇದೆ ಎಂಬ ವಿಪಕ್ಷಗಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ನ್ಯಾಯಾಲಯವು 40 ಬಾರಿ ಇವಿಎಂಗಳ ಕುರಿತ ವಿವಿಧ ದೂರುಗಳನ್ನು ಪರಿಶೀಲಿಸಿದೆ ಮತ್ತು ಎಲ್ಲವನ್ನೂ ವಜಾಗೊಳಿಸಿದೆ. ಇವಿಎಂಗಳು ಮತದಾನವನ್ನು ನ್ಯಾಯಯುತ ಮತ್ತು ಉತ್ತಮವಾಗಿಸಿದೆ ಎಂಬುದನ್ನು ಎಲ್ಲ ಪಕ್ಷಗಳು ಮನಸ್ಸಿನಲ್ಲೇ ಒಪ್ಪಿಕೊಂಡಿವೆ. ಅದೇ ಇವಿಎಂಗಳ ಬಳಕೆಯಿಂದ ಆಡಳಿತ ಪಕ್ಷಗಳು ಕೂಡ ಅಧಿಕಾರ ಕಳೆದುಕೊಂಡಿವೆ. ಇವಿಎಂ ತಿರುಚಲು ಸಾಧ್ಯವಿಲ್ಲ’ ಎಂದರು. ಕವನವೊಂದನ್ನು ವಾಚಿಸಿ ಇವಿಎಂಗಳ ಟೀಕಾಕಾರರನ್ನು ಚುಚ್ಚಿದರು.

ಆಯೋಗದಲ್ಲಿ ಭಿನ್ನಾಭಿಪ್ರಾಯ ಸಹಜ: ರಾಜೀವ್

ಚುನಾವಣಾ ಆಯುಕ್ತರಾಗಿದ್ದ ಅರುಣ್ ಗೋಯಲ್ ರಾಜೀನಾಮೆ ಕುರಿತ ಪ್ರಶ್ನೆಗೆ ರಾಜೀವ್ ಕುಮಾರ್ ನೇರ ಉತ್ತರ ನೀಡಲಿಲ್ಲ.

ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ‘ಅರುಣ್ ಅವರು ನಮ್ಮ ತಂಡದ ಅತ್ಯಂತ ಗೌರವಾನ್ವಿತ ಸದಸ್ಯರಾಗಿದ್ದರು’ ಎಂದು ಬಣ್ಣಿಸಿದರು. ‘ಭಾರತೀಯ ಚುನಾವಣಾ ಆಯೋಗದಲ್ಲಿ ಯಾವಾಗಲೂ ಭಿನ್ನಾಭಿಪ್ರಾಯಗಳಿರುತ್ತವೆ’ ಎಂದೂ ಅವರು ಹೇಳಿದರು.

‘ನಮ್ಮಲ್ಲಿ ಒಂದು ಉತ್ತಮ ಪದ್ಧತಿಯಿದೆ. ಆಯೋಗದೊಳಗಿನ ಭಿನ್ನಾಭಿಪ್ರಾಯಗಳನ್ನು ನಾವು ಉತ್ತೇಜಿಸುತ್ತೇವೆ. ಇದು ಕಠಿಣ ಕೆಲಸವಾದ್ದರಿಂದ ಒಬ್ಬರಿಗಿಂತ ಮೂರು ಮನಸ್ಸುಗಳು ಉತ್ತಮ. ನಾವು ವಿಚಾರ ಮಂಥನ ಮಾಡುತ್ತೇವೆ. ನಾವು ವಿಶ್ಲೇಷಿಸುತ್ತೇವೆ’ ಎಂದರು.

‘ಅವರೊಂದಿಗೆ ಕೆಲಸ ಮಾಡುವುದನ್ನು ಆನಂದಿಸಿದ್ದೇನೆ. ಆದರೆ, ಪ್ರತಿ ಸಂಸ್ಥೆಯಲ್ಲೂ ಪ್ರತಿಯೊಬ್ಬರಿಗೂ ವೈಯಕ್ತಿಕ ಜಾಗವನ್ನು ನೀಡಬೇಕು ಮತ್ತು ಸಂವೇದನಾರಹಿತವಾದ ವೈಯಕ್ತಿಕ ಪ್ರಶ್ನೆಗಳನ್ನು ಕೇಳಬಾರದು’ ಎಂದರು. ವೈಯಕ್ತಿಕ ಕಾರಣದಿಂದ ಅವರು ರಾಜೀನಾಮೆ ನೀಡಿದ್ದರೆ ಅದನ್ನು ನಾವು ಗೌರವಿಸಬೇಕು ಎಂದರು.

ಕುಮಾರ್ ಜೊತೆಗಿನ ಭಿನ್ನಾಭಿಪ್ರಾಯದಿಂದಾಗಿ ಗೋಯೆಲ್ ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿಗಳು ಹಬ್ಬಿದ್ದವು. 2027ರ ಡಿಸೆಂಬರ್ ವರೆಗೆ ಅಧಿಕಾರಾವಧಿ ಹೊಂದಿದ್ದ ಗೋಯಲ್ ಅವರು ಕಳೆದ ಶನಿವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.

ದೇಣಿಗೆಗಳ ಮೇಲೆ ನಿಗಾ ಅಗತ್ಯ

ಚುನಾವಣಾ ಬಾಂಡ್‌ಗಳ ಸುತ್ತ ಎದ್ದಿರುವ ಇತ್ತೀಚಿನ ವಿವಾದಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ರಾಜೀವ್ ಕುಮಾರ್, ‘ದಾನಿಗಳ ಗೋಪ್ಯತೆಯನ್ನು ಕಾಪಾಡುವ ಜೊತೆಗೆ, ಲೆಕ್ಕಕ್ಕೆ ಸಿಗದ ರಾಜಕೀಯ ದೇಣಿಗೆಗಳ ಮೇಲೆ ನಿಗಾ ವಹಿಸುವ ಅಗತ್ಯ ಇದೆ’ ಎಂದು ಪ್ರತಿಪಾದಿಸಿದರು.

‘ಆಯೋಗವೂ ಯಾವಾಗಲೂ ಪಾರದರ್ಶಕತೆಗೆ ಒತ್ತು ನೀಡುತ್ತದೆ. ಪ್ರಜಾಪ್ರಭುತ್ವದಲ್ಲಿ ವಿಷಯಗಳನ್ನು ಗೋಪ್ಯವಾಗಿರಿಸಲು ಅವಕಾಶವಿಲ್ಲ. ನಾವೆಲ್ಲರೂ ಪಾರದರ್ಶಕತೆಗಾಗಿ ಶ್ರಮಿಸುತ್ತಿದ್ದೇವೆ. ದೇಶದ ಜನರು ಈಗ ಸೂಕ್ತ ವೇದಿಕೆಗಳ ಮೂಲಕ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆದುಕೊಳ್ಳಬಹುದು’ ಎಂದರು.

‘ಚುನಾವಣೆಯ ಸಂದರ್ಭದಲ್ಲಿ ಲೆಕ್ಕಕ್ಕೆ ಸಿಗದ ಹಣದ ಬಳಕೆಗೆ ಕಡಿವಾಣ ಹಾಕಲು ನಾವು ಆದ್ಯತೆ ನೀಡುತ್ತಿದ್ದೇವೆ. ಆದರೆ, ಲೆಕ್ಕಕ್ಕೆ ಸಿಗದ ದೇಣಿಗೆಯನ್ನು ತಡೆಯುವುದು ಹೇಗೆ ಎಂಬುದರ ಕುರಿತು ಇಡೀ ದೇಶದ ಜನರು ಒಟ್ಟಾಗಿ ಕೆಲಸ ಮಾಡಬೇಕಿದೆ’ ಎಂದು ಅವರು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ 5.42 ಕೋಟಿ ಮತದಾರರು

ಪ್ರಜಾವಾಣಿ ವಾರ್ತೆ

ಮನೋಜ್ ಕುಮಾರ್ ಮೀನಾ

ಬೆಂಗಳೂರು: ರಾಜ್ಯದಲ್ಲಿ ಎರಡು ಹಂತಗಳಲ್ಲಿ ನಡೆಯುವ ಲೋಕಸಭಾ ಚುನಾವಣೆಯಲ್ಲಿ 5.42 ಕೋಟಿ ಮತದಾರರು ಮತ ಚಲಾಯಿಸುವ ಅರ್ಹತೆ ಹೊಂದಿದ್ದು, 2019ರ ಚುನಾವಣೆಗೆ ಹೋಲಿಸಿದರೆ ಮತದಾರರ ಸಂಖ್ಯೆಯಲ್ಲಿ 31.55 ಲಕ್ಷದಷ್ಟು ಹೆಚ್ಚಳವಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಒಟ್ಟು ಮತದಾರರ ಸಂಖ್ಯೆಯಲ್ಲಿ ಶೇಕಡ 6.18ರಷ್ಟು ಹೆಚ್ಚಳವಾಗಿದೆ. ಈ ಪೈಕಿ ಪುರುಷ ಮತದಾರರ ಸಂಖ್ಯೆಯಲ್ಲಿ ಶೇ 5.12ರಷ್ಟು, ಮಹಿಳಾ ಮತದಾರರ ಸಂಖ್ಯೆಯಲ್ಲಿ ಶೇ 7.26ರಷ್ಟು ಮತ್ತು ಲಿಂಗತ್ವ ಅಲ್ಪಸಂಖ್ಯಾತ ಮತದಾರರ ಸಂಖ್ಯೆಯಲ್ಲಿ ಶೇ 1.94ರಷ್ಟು ಏರಿಕೆಯಾಗಿದೆ’ ಎಂದು ವಿವರ ನೀಡಿದರು.

ರಾಜ್ಯದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಶೇ 70.28ರಷ್ಟು ಮಂದಿ ಮತದಾನದ ಅರ್ಹತೆ ಹೊಂದಿದ್ದಾರೆ. 18ರಿಂದ 19 ವರ್ಷ ವಯಸ್ಸಿನ 11.24 ಲಕ್ಷ ಮತದಾರರಿದ್ದಾರೆ ಎಂದು ಮಾಹಿತಿ ನೀಡಿದರು.

2024ರ ಜನವರಿ 1ರಂದು ಪ್ರಕಟಿಸಿದ್ದ ಅಂತಿಮ ಮತದಾರರ ಪಟ್ಟಿಗೆ ಹೋಲಿಸಿದರೆ ಈಗ 4.22 ಲಕ್ಷ ಮತದಾರರು ಹೊಸದಾಗಿ ನೋಂದಣಿ ಮಾಡಿಸಿಕೊಂಡಿದ್ದಾರೆ. ನಾಮಪತ್ರ ಸಲ್ಲಿಕೆ ಅವಧಿ ಮುಕ್ತಾಯವಾಗುವ ದಿನದ ಹತ್ತು ದಿನಗಳ ಮೊದಲಿನವರೆಗೂ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು, ತಿದ್ದುಪಡಿ ಮಾಡಿಸಲು ಅವಕಾಶ ಇದೆ ಎಂದರು.

58,834 ಮತಗಟ್ಟೆಗಳು: ಒಟ್ಟು 58,834 ಮತಗಟ್ಟೆಗಳನ್ನು ತೆರೆಯಲಾಗುತ್ತದೆ. ಈ ಪೈಕಿ 21,595 ಮತಗಟ್ಟೆಗಳು ನಗರ ಪ್ರದೇಶಗಳಲ್ಲಿ, 37,239 ಮತಗಟ್ಟೆಗಳು ಗ್ರಾಮೀಣ ಪ್ರದೇಶಗಳಲ್ಲಿ ಇರಲಿವೆ. ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಅತ್ಯಧಿಕ (2,911) ಮತಗಟ್ಟೆಗಳಿರಲಿವೆ, ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಅತಿ ಕಡಿಮೆ (1,842) ಮತಗಟ್ಟೆಗಳಿರಲಿವೆ ಎಂದು ಮೀನಾ ತಿಳಿಸಿದರು.

2.79 ಲಕ್ಷ ಮತಗಟ್ಟೆ ಸಿಬ್ಬಂದಿಯ ಅಗತ್ಯವಿದೆ. 3.51 ಲಕ್ಷ ಮತಗಟ್ಟೆ ಸಿಬ್ಬಂದಿ ಚುನಾವಣಾ ಕರ್ತವ್ಯಕ್ಕೆ ಲಭ್ಯವಿದ್ದಾರೆ. 28 ಲೋಕಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾ ಅಧಿಕಾರಿಗಳು ಸೇರಿದಂತೆ 1,792 ಅಧಿಕಾರಿಗಳಿಗೆ ತರಬೇತಿ ಪೂರ್ಣಗೊಳಿಸಲಾಗಿದೆ ಎಂದರು.

ನೀತಿಸಂಹಿತೆ ಉಲ್ಲಂಘನೆ ತಡೆ ಮತ್ತು ಚುನಾವಣಾ ಅಕ್ರಮ ತಡೆಗೆ 2,357 ಕ್ಷಿಪ್ರ ಪಡೆಗಳು, 2,669 ಸ್ಥಿರ ಕಣ್ಗಾವಲು ತಂಡಗಳು, 647 ವಿಡಿಯೊ ಕಣ್ಗಾವಲು ತಂಡಗಳು, 258 ಲೆಕ್ಕ-ಪರಿಶೋಧಕ ತಂಡಗಳು ಮತ್ತು 257 ವಿಡಿಯೊ ವೀಕ್ಷಣೆ ತಂಡಗಳನ್ನು ರಚಿಸಲಾಗಿದೆ ಎಂದು ಹೇಳಿದರು.

11,000 ರಾಜ್ಯದಲ್ಲಿ ಶತಾಯುಷಿ ಮತದಾರರು

31,74,098 ಅತಿಹೆಚ್ಚು ಮತದಾರರಿರುವ ಕ್ಷೇತ್ರ–ಬೆಂಗಳೂರು ಉತ್ತರ

15,72,958 ಅತಿ ಕಡಿಮೆ ಮತದಾರರಿರುವ ಕ್ಷೇತ್ರ ಉಡುಪಿ–ಚಿಕ್ಕಮಗಳೂರು

ವಿದ್ಯುನ್ಮಾನ ಮತಯಂತ್ರಗಳ ವಿವರ

1,10,946 ಬ್ಯಾಲೆಟ್ ಯೂನಿಟ್

77,667 ಕಂಟ್ರೋಲ್ ಯೂನಿಟ್

82,575 ವಿವಿಪ್ಯಾಟ್ ಯಂತ್ರಗಳು

₹ 537 ಕೋಟಿ ಮೌಲ್ಯದ ವಸ್ತುಗಳ ವಶ

ಚುನಾವಣಾ ಅಕ್ರಮ ತಡೆಗೆ ಪೊಲೀಸ್, ಆದಾಯ ತೆರಿಗೆ, ಅಬಕಾರಿ, ವಾಣಿಜ್ಯ ತೆರಿಗೆ ಇಲಾಖೆಗಳು ಮತ್ತು ಮಾದಕವಸ್ತು ನಿಯಂತ್ರಣ ಬ್ಯುರೊಗಳು 2023ರ ಆಗಸ್ಟ್‌ನಿಂದಲೇ ನಿಗಾ ವಹಿಸಿದ್ದವು. ಈವರೆಗೆ ಒಟ್ಟು ₹ 537.51 ಕೋಟಿ ಮೌಲ್ಯದ ನಗದು, ಚಿನ್ನಾಭರಣ, ಮದ್ಯ, ಮಾದಕವಸ್ತು ಮತ್ತು ಉಚಿತ ಉಡುಗೊರೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮನೋಜ್ ಕುಮಾರ್ ಮೀನಾ ಮಾಹಿತಿ ನೀಡಿದರು.

₹ 151.6 ಕೋಟಿ ನಗದು, ₹ 42.14 ಕೋಟಿ ಮೌಲ್ಯದ 8.09 ಲಕ್ಷ ಲೀಟರ್ ಮದ್ಯ, ₹ 126.47 ಕೋಟಿ ಮೌಲ್ಯದ 57,767 ಕೆ.ಜಿ. ಮಾದಕವಸ್ತು, ₹ 71.43 ಕೋಟಿ ಮೌಲ್ಯದ 482.67 ಕೆ.ಜಿ. ಚಿನ್ನ, ₹ 93 ಲಕ್ಷ ಮೌಲ್ಯದ 660 ಕೆ.ಜಿ. ಬೆಳ್ಳಿ, ₹ 144.90 ಕೋಟಿ ಮೌಲ್ಯದ ಉಚಿತ ಉಡುಗೊರೆಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ 4,710 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದರು.

ಚುನಾವಣಾ ಅಕ್ರಮ ತಡೆಗೆ ಪೊಲೀಸ್ ಇಲಾಖೆಯಿಂದ 172, ಅಬಕಾರಿ ಇಲಾಖೆಯಿಂದ 40 ತನಿಖಾ ಠಾಣೆಗಳನ್ನು ತೆರೆಯಲಾಗಿದೆ. ಅಂತರರಾಜ್ಯ ಗಡಿಗಳಲ್ಲಿ 29 ತನಿಖಾ ಠಾಣೆಗಳನ್ನು ಆರಂಭಿಸಲಾಗಿದೆ ಎಂದು ವಿವರಿಸಿದರು.

ಮತದಾನ ಹೆಚ್ಚಳಕ್ಕೆ ಉತ್ತೇಜನ

2019ರ ಲೋಕಸಭಾ ಚುನಾವಣೆಯಲ್ಲಿ ಶೇಕಡ 65ರಷ್ಟು ಮತದಾನವಾಗಿತ್ತು. ಈ ಚುನಾವಣೆಯಲ್ಲಿ ಮತದಾನ ಹೆಚ್ಚಳಕ್ಕೆ ಉತ್ತೇಜಿಸಲು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಮನೋಜ್ ಕುಮಾರ್ ಮೀನಾ ಹೇಳಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಬಿಎಂಪಿ ಪ್ರದೇಶ ಮತ್ತು ಕಲ್ಯಾಣ ಕರ್ನಾಟಕದ ಕೆಲವೆಡೆ ಕಡಿಮೆ ಮತದಾನವಾಗಿತ್ತು. ಶೇಕಡ 30ಕ್ಕಿಂತ ಕಡಿಮೆ ಮತದಾನವಾಗಿದ್ದ 5,000 ಮತಗಟ್ಟೆಗಳನ್ನು ಗುರುತಿಸಿದ್ದು, ಅಲ್ಲಿ ಮತದಾನಕ್ಕೆ ಪ್ರೇರೇಪಿಸಲಾಗುವುದು ಎಂದರು.

ಮನೆಯಿಂದ ಮತದಾನಕ್ಕೆ ಅವಕಾಶ: 85 ವರ್ಷಕ್ಕಿಂತ ಹೆಚ್ಚು ವಯಸ್ಸಾದ 5.70 ಲಕ್ಷ ಮತ್ತು 6.12 ಲಕ್ಷ ಅಂಗವಿಕಲ ಮತದಾರರಿದ್ದಾರೆ. ಇವರೆಲ್ಲರಿಗೂ ಮನೆಯಿಂದ ಮತ ಚಲಾಯಿಸಲು ಅವಕಾಶವಿದೆ. ಮನೆಯಿಂದ ಮತದಾನಕ್ಕೆ ಅವಕಾಶ ಕೋರಿ ಮನವಿ ಸಲ್ಲಿಸುವ ಪ್ರಕ್ರಿಯೆ ಭಾನುವಾರದಿಂದಲೇ ಆರಂಭವಾಗಲಿದೆ ಎಂದು ಅವರು ತಿಳಿಸಿದರು.

ಅಭ್ಯರ್ಥಿ ಘೋಷಣೆ: ಬಿಜೆಪಿ ಧೋರಣೆಗೆ ಜೆಡಿಎಸ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ 21 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿರುವ ಬಿಜೆಪಿ ಧೋರಣೆಗೆ ಜೆಡಿಎಸ್ ನಾಯಕರಿಂದ ಅಸಮಾಧಾನ ವ್ಯಕ್ತವಾಗಿದೆ.

ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಅಕ್ಟೋಬರ್‌ನಲ್ಲೇ ಸೇರಿದೆ. ಆರು ತಿಂಗಳು ಕಳೆದರೂ ಉಭಯ ಪಕ್ಷಗಳ ನಡುವಿನ ಸೀಟು ಹಂಚಿಕೆ ಅಂತಿಮಗೊಂಡಿಲ್ಲ. ಸೀಟು ಹಂಚಿಕೆ ಅಂತಿಮಗೊಳ್ಳುವ ಮುನ್ನವೇ ಕಮಲ ಪಾಳಯವು 21 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿದೆ. ಈ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸುವ ಸಂದರ್ಭದಲ್ಲಿ ಸೌಜನ್ಯಕ್ಕಾದರೂ ಜೆಡಿಎಸ್ ನಾಯಕರ ಜತೆಗೆ ಸಮಾಲೋಚನೆ ನಡೆಸಿಲ್ಲ ಎಂಬುದು ದಳ ನಾಯಕರ ತಕರಾರು. ಸೀಟು ಹಂಚಿಕೆಯನ್ನು ಅಂತಿಮಗೊಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಶನಿವಾರ ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ವೇಳೆ, ಕುಮಾರಸ್ವಾಮಿ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಮಂಡ್ಯ, ಹಾಸನ ಹಾಗೂ ಕೋಲಾರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ವರಿಷ್ಠರು ಈ ಹಿಂದೆ ಸಹಮತ ವ್ಯಕ್ತಪಡಿಸಿದ್ದರು. ಬೆಂಗಳೂರು ಗ್ರಾಮಾಂತರ, ತುಮಕೂರಿನಲ್ಲಿ ಅಭ್ಯರ್ಥಿ ಹಾಗೂ ಚಿಹ್ನೆ ವಿನಿಮಯಕ್ಕೆ ಕುಮಾರಸ್ವಾಮಿ ಅವರು ಶಾ ಅವರ ಮುಂದೆ ಪ್ರಸ್ತಾವ ಮುಂದಿಟ್ಟಿದ್ದರು. ಈ ಸೂತ್ರದ ಬಗ್ಗೆ ವಿಸ್ತೃತ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳುವ ಬಗ್ಗೆ ಶಾ ಭರವಸೆ ನೀಡಿದ್ದರು. ಆದರೆ, ಇದೀಗ ಬೆಂಗಳೂರು ಗ್ರಾಮಾಂತರಕ್ಕೆ ದೇವೇಗೌಡರ ಕುಟುಂಬದ ಡಾ.ಸಿ.ಎನ್.ಮಂಜುನಾಥ್ ಅವರು ಬಿಜೆಪಿಯ ಅಭ್ಯರ್ಥಿಯಾಗಿದ್ದಾರೆ. ತುಮಕೂರು ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯ ಹೆಸರನ್ನೇ ಘೋಷಿಸಲಾಗಿದೆ. ಅದನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿಲ್ಲ. ಇದರ ಬಗ್ಗೆ ಜೆಡಿಎಸ್ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕೋಲಾರ ಕ್ಷೇತ್ರದಲ್ಲಿ ಬಿಜೆಪಿಯ ಸಂಸದರಿದ್ದು, ಆ ಕ್ಷೇತ್ರವನ್ನು ಜೆಡಿಎಸ್‌ಗೆ ದಾನ ಮಾಡುವುದು ಸರಿಯಲ್ಲ ಎಂದು ರಾಜ್ಯ ನಾಯಕರು ವರಿಷ್ಠರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಕೋಲಾರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ವರಿಷ್ಠರು ಹೆಚ್ಚಿನ ಒಲವು ಹೊಂದಿಲ್ಲ. ಕೋಲಾರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದಿದ್ದರೆ ಮುಜುಗರ ಅನುಭವಿಸಬೇಕಾಗುತ್ತದೆ. ಮೂರು ಕ್ಷೇತ್ರಗಳನ್ನು ಜೆಡಿಎಸ್‌ಗೆ ನೀಡಲೇಬೇಕು ಎಂದು ಕುಮಾರಸ್ವಾಮಿ ಪಟ್ಟು ಹಿಡಿದಿದ್ದಾರೆ. ಕೋಲಾರವನ್ನು ಬಿಟ್ಟುಕೊಡುವ ಬಗ್ಗೆ ರಾಜ್ಯ ನಾಯಕರ ಜತೆಗೆ ಸಮಾಲೋಚಿಸಿ ಭಾನುವಾರ ನಿಲುವು ತಿಳಿಸುತ್ತೇವೆ ಎಂದು ಶಾ ಅವರು ಕುಮಾರಸ್ವಾಮಿ ಅವರಿಗೆ ತಿಳಿಸಿದರು.

ಮಂಡ್ಯ ಕ್ಷೇತ್ರದಲ್ಲಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸುವ ಕುರಿತು ಜೆಡಿಎಸ್‌ನಲ್ಲಿ ಚರ್ಚೆಗಳು ನಡೆದಿವೆ. ನಿಖಿಲ್ ಬದಲು ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಕುರಿತು ಪರಿಶೀಲನೆ ಮಾಡುವಂತೆ ಕುಮಾರಸ್ವಾಮಿ ಅವರಿಗೆ ಶಾ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ. ಮಂಡ್ಯದಿಂದ ಸ್ಪರ್ಧಿಸಲು ಕುಮಾರಸ್ವಾಮಿ ಒಪ್ಪಲಿಲ್ಲ.

ಜೆಡಿಎಸ್ ರಾಜ್ಯಘಟಕದ ಅಧ್ಯಕ್ಷ ಎಚ್. ಡಿ. ಕುಮಾರಸ್ವಾಮಿ ಅವರು ದೆಹಲಿಯಲ್ಲಿ ಶನಿವಾರ ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು

ದತ್ತ ಪಾದುಕೆ ದರ್ಶನ ಪಡೆದು ಪ್ರಚಾರಕ್ಕೆ ಚಾಲನೆ

ಚಿಕ್ಕಮಗಳೂರು: ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸ ಪೂಜಾರಿ ಅವರು ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾದಲ್ಲಿ ದತ್ತ ಪಾದುಕೆ ದರ್ಶನ ಪಡೆದು ಚುನಾವಣಾ ಪ್ರಚಾರ ಆರಂಭಿಸಿದರು.

ನಗರದ ಹನುಮಂತಪ್ಪ ವೃತ್ತದಲ್ಲಿ ರಸ್ತೆ ಬದಿ ಕ್ಯಾಂಟೀನ್‌ನಲ್ಲಿ ಬನ್ಸ್ ಮತ್ತು ಟೀ ಸವಿದ ಅವರು, ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾಕ್ಕೆ ತೆರಳಿದರು. ಈ ಸಂದರ್ಭ ಮಾತನಾಡಿದ ಅವರು, ‘ದತ್ತ ಪಾದುಕೆ ದರ್ಶನ ಪಡೆದು ಭಾವುಕನಾಗಿದ್ದೇನೆ’ ಎಂದರು.

‘ನಾನು ಹೊರಗಿನವನಲ್ಲ’

ಪ್ರಜಾವಾಣಿ ವಾರ್ತೆ

ತುಮಕೂರು: ‘ನಾನು ಹೊರಗಿನವ ಅಲ್ಲ. ‘ಹೊರಗಿನವರು’ ಎನ್ನುವುದನ್ನು ಇವತ್ತೇ ನಿಲ್ಲಿಸಿ. ಎರಡು ದಿನದಲ್ಲಿ ಇಲ್ಲೇ ಮನೆ ಮಾಡುತ್ತೇನೆ. ತುಮಕೂರನ್ನು ಮಾದರಿ ಜಿಲ್ಲೆ ಮಾಡುತ್ತೇನೆ’ ಎಂದು ತುಮಕೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ಸಿದ್ಧಗಂಗಾ ಆಸ್ಪತ್ರೆಯ ನಿರ್ದೇಶಕ ಡಾ.ಎಸ್.ಪರಮೇಶ್ ಏರ್ಪಡಿಸಿದ್ದ ಹಿತೈಷಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ನನ್ನ ಸ್ಪರ್ಧೆ ಬಗ್ಗೆ ಜಿಲ್ಲೆಯ ಕೆಲವು ಪುಣ್ಯಾತ್ಮರು ಆಡಿದ ಮಾತುಗಳಿಂದ ತುಂಬಾ ನೋವಾಗಿದೆ’ ಎಂದರು.

‘ಲೋಕಸಭಾ ಕ್ಷೇತ್ರದಲ್ಲಿ 16 ಲಕ್ಷ ಮತದಾರರ ಪೈಕಿ 3.45 ಲಕ್ಷ ಮತದಾರರಿರುವ ಒಂದು ಸಮಾಜ ನನ್ನನ್ನು ತುಳಿಯುತ್ತಿದೆ. ಇದರಿಂದ ನನ್ನ ಗತಿ ಏನಾಗಬಹುದು ಎನ್ನುವುದಕ್ಕಿಂತ ನಿಮ್ಮ ಅಸ್ಮಿತೆ ಯಾವ ರೀತಿಯಾಗುತ್ತದೆ ಎಂಬುವುದನ್ನು ಚಿಂತನೆ ಮಾಡಬೇಕು’ ಎಂದು ಅವರು ಹೇಳಿದರು.

‘ಕ್ರಿಯಾಶೀಲ ರಾಜಕಾರಣಿಯನ್ನು ಮನೆಯಲ್ಲಿ ಕೂರಿಸಬಾರದು ಎಂದು ಸ್ಪರ್ಧೆಗೆ ಅನುವು ಮಾಡಿ ಕೊಟ್ಟಿದ್ದಾರೆ. ತುಮಕೂರಿನಿಂದ ಸ್ಪರ್ಧಿಸುವುದು ಬೇಡ ಎಂದು ವರಿಷ್ಠರು ಹೇಳಿದರೆ ತಕ್ಷಣವೇ ಸ್ಪರ್ಧೆಯಿಂದ ಹಿಂದೆ ಸರಿಯುತ್ತೇನೆ’ ಎಂದು ಅವರು ತಿಳಿಸಿದರು.

ಕೆಪಿಸಿಸಿ ವಕ್ತಾರ ನೀರಲಕೇರಿ ರಾಜೀನಾಮೆ

ಧಾರವಾಡ: ಕೆಪಿಸಿಸಿ ರಾಜ್ಯ ವಕ್ತಾರ ಪಿ.ಎಚ್.ನೀರಲಕೇರಿ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ಶನಿವಾರ ರಾಜೀನಾಮೆ ಸಲ್ಲಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ರಾಜೀನಾಮೆ ಪತ್ರವನ್ನು ರವಾನಿಸಿದ್ದಾರೆ. ‘ನಾಯಕರು ಕಡೆಗಣಿಸಿದ್ದರಿಂದ ನೋವಾಗಿದೆ’ ಎಂದು ಹೇಳಿದ್ದಾರೆ.

ಸುರಪುರ: ಉಪಚುನಾವಣೆಗೆ ಸಿದ್ಧ

ರಾಜೂಗೌಡ ಸ್ಪರ್ಧೆ ಖಚಿತ, ಅಂತಿಮಗೊಂಡಿಲ್ಲ ಕಾಂಗ್ರೆಸ್ ಟಿಕೆಟ್

• ಬಿ.ಜಿ.ಪ್ರವೀಣಕುಮಾರ


ರಾಜೂಗೌಡ

ಯಾದಗಿರಿ: ಸುರಪುರ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ರಾಜಾವೆಂಕಟಪ್ಪ ನಾಯಕ ನಿಧನದಿಂದ ತೆರವಾದ ಸ್ಥಾನಕ್ಕೆ ಮೇ 7ರಂದು ಉಪಚುನಾವಣೆ ನಡೆಯಲಿದ್ದು, ಚುನಾವಣಾ ಕಣ ಸಿದ್ಧವಾಗಿದೆ.

ಲೋಕಸಭೆ ಚುನಾವಣೆ ಜೊತೆಗೆ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದೆ. ರಾಜಕೀಯ ಚಟುವಟಿಕೆಗಳು ರಂಗೇರಿವೆ. ಜೂನ್ 4ರಂದು ಫಲಿತಾಂಶ ಪ್ರಕಟವಾಗಲಿದೆ. ರಾಯಚೂರು ಲೋಕಸಭಾ ಕ್ಷೇತ್ರಕ್ಕೆ ಸುರಪುರ ಮತಕ್ಷೇತ್ರ ಒಳಪಟ್ಟಿದೆ. ಕಾಂಗ್ರೆಸ್ ಹಾಗೂ ಬಿಜೆಪಿಗೆ ಉಪಚುನಾವಣೆ ಪ್ರತಿಷ್ಠೆಯಾಗಿ ಪರಿಣಮಿಸಿದೆ.

ಬಿಜೆಪಿಯಿಂದ ಮಾಜಿ ಸಚಿವ ನರಸಿಂಹ ನಾಯಕ (ರಾಜೂಗೌಡ) ಸ್ಪರ್ಧಿಸುವುದು ಖಚಿತವಾಗಿದೆ. ಆದರೆ, ಕಾಂಗ್ರೆಸ್‌ನಿಂದ ಟಿಕೆಟ್ ಯಾರಿಗೆ ಸಿಗಲಿದೆ ಎನ್ನುವುದು ಇನ್ನೂ ಬಹಿರಂಗವಾಗಿಲ್ಲ.

ರಾಜಾ ವೆಂಕಟಪ್ಪ ನಾಯಕ ಅವರ ಪುತ್ರ ರಾಜಾ ವೇಣುಗೋಪಾಲ್ ನಾಯಕ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡುವ ಸಾಧ್ಯತೆ ಇದೆ. ಅಥವಾ ಅವರ ತಾಯಿಗೆ ಟಿಕೆಟ್ ನೀಡಬೇಕು ಎನ್ನುವ ಒತ್ತಾಯ ಕ್ಷೇತ್ರದಲ್ಲಿ ಕೇಳಿಬರುತ್ತಿದೆ. ಕ್ಷೇತ್ರದಲ್ಲಿ ಕುರುಬ, ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ಹಾಗೂ ಅಲ್ಪಸಂಖ್ಯಾತರ ಸಮುದಾಯದ ಮತಗಳು ನಿರ್ಣಾಯಕವಾಗಿವೆ.

ಬಿಜೆಪಿ, ಕಾಂಗ್ರೆಸ್ ನೇರ ಪೈಪೋಟಿ: ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದೆ. ಇದು ತಮ್ಮ ಕೊನೆಯ ಚುನಾವಣೆ. ಸೇವೆ ಸಲ್ಲಿಸಲು ಅವಕಾಶ ನೀಡಿ ಎಂದು ಎಂದು ವೆಂಕಟಪ್ಪ ನಾಯಕ ಪ್ರಚಾರ ಮಾಡಿದ್ದರು.

25 ಸಾವಿರ ಮತಗಳ ಅಂತರದಿಂದ ಕಾಂಗ್ರೆಸ್ ಪಕ್ಷ ಗೆದ್ದಿತ್ತು. ಸಚಿವರಾಗಬೇಕೆನ್ನುವ ಆಸೆ ಇತ್ತು. ಪಕ್ಷದ ನಿಷ್ಠರಾಗಿದ್ದ ಅವರು ಕರ್ನಾಟಕ ಉಗ್ರಾಣ ನಿಗಮದ ಅಧ್ಯಕ್ಷ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದರು.

ರಾಜಾ ವೆಂಕಟಪ್ಪ ನಾಯಕ ಹೃದಯಾಘಾತದಿಂದ ಫೆಬ್ರುವರಿ 25ರಂದು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದರು. ಅವರುನಾಲ್ಕು ಬಾರಿ ಸುರಪುರ ಮತ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ರಾಜ್ಯದ ಬಿಜೆಪಿ ನಾಯಕರ ವಿರುದ್ಧ ಸಂಗಣ್ಣ ಕರಡಿ ಗರಂ

‘ಗುಜರಿ ರಾಜಕಾರಣಿ ಅಂದುಕೊಂಡಿದ್ದೀರಾ?’

ಪ್ರಜಾವಾಣಿ ವಾರ್ತೆ


ಸಂಗಣ್ಣ ಕರಡಿ

ಕೊಪ್ಪಳ: ‘ನನಗೆ ಲೋಕಸಭಾ ಚುನಾವಣೆ ಟಿಕೆಟ್ ತಪ್ಪಿದರೂ ರಾಜ್ಯದ ಒಬ್ಬ ನಾಯಕನೂ ಸೌಜನ್ಯಕ್ಕೂ ಫೋನ್ ಕರೆ ಮಾಡಲಿಲ್ಲ. ಅವರೆಲ್ಲರೂ ನನ್ನನ್ನು ಗುಜರಿ ರಾಜಕಾರಣಿ ಅಂದುಕೊಂಡಿದ್ದಾರೆಯೇ’ ಎಂದು ಕೊಪ್ಪಳ ಕ್ಷೇತ್ರದ ಸಂಸದ ಸಂಗಣ್ಣ ಕರಡಿ ಪ್ರಶ್ನಿಸಿದರು.

ತಾಲ್ಲೂಕಿನ ಗಿಣಿಗೇರಿಯಲ್ಲಿ ಶನಿವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು ವರಿಷ್ಠರ ವಿರುದ್ಧ ಅಸಮಧಾನ ಹೊರಹಾಕಿದರು.

‘ಟಿಕೆಟ್ ತಪ್ಪಿದರೂ ಯಾಕೆ ಒಬ್ಬರೂ ಕರೆ ಮಾಡಿಲ್ಲ. ಯಾಕೆ ಟಿಕೆಟ್ ತಪ್ಪಿಸಲಾಯಿತು ಹಾಗೂ ಯಾರು ತಪ್ಪಿಸಿದರು ಎಂಬ ಪ್ರಶ್ನೆಗಳಿಗೆ ಉತ್ತರ ಬೇಕೇ ಬೇಕು. ಆ ನಂತರವಷ್ಟೇ ಬಿಜೆಪಿ ಅಭ್ಯರ್ಥಿ ಪರ ಪ್ರಚಾರಕ್ಕೆ ಹೋಗುವೆ. ರಾಜಕೀಯವಾಗಿ ನಿವೃತ್ತಿಯಾಗುವುದಿಲ್ಲ’ ಎಂದು ಹೇಳಿದರು.

ಆದರೆ, ತಮ್ಮ ಮುಂದಿನ ನಡೆ ಕುರಿತು ಗುಟ್ಟುಬಿಟ್ಟುಕೊಡಲಿಲ್ಲ.

ಕರೆ ಸ್ವೀಕರಿಸದ ಸಂಗಣ್ಣ: ಈ ಮಧ್ಯೆ ರಾಜ್ಯ ಬಿಜೆಪಿಯ ಕೆಲ ನಾಯಕರು ಶುಕ್ರವಾರ ಅವರಿಗೆ ಫೋನ್ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ, ‘ಮುನಿಸು ಮರೆತು ಪ್ರಚಾರಕ್ಕೆ ಬನ್ನಿ’ ಎಂದು ಕೇಳಿದಾಗಲೂ ಮೂರು ಪ್ರಶ್ನೆಗಳಿಗೆ ಉತ್ತರ ಸಿಕ್ಕ ಬಳಿಕವೇ ಬರುವೆ ಎಂದು ಹೇಳಿ ಕಳುಹಿಸಿದ್ದಾರೆ.

ನಡೆ ನಿಗೂಢ: ಸಂಗಣ್ಣ ಕರಡಿ ಜೊತೆ ಕಾಂಗ್ರೆಸ್ ಕೆಲ ನಾಯಕರು ಸಂಪರ್ಕದಲ್ಲಿದ್ದು ಅವರು ತಮ್ಮ ಮುಂದಿನ ನಡೆ ಬಗ್ಗೆ ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ‘ಸ್ವತಂತ್ರ್ಯವಾಗಿ ಸ್ಪರ್ಧಿಸಲು ಸರಿಯಾದ ಸಮಯ ಇದಲ್ಲ’ ಎಂದರು. ಕೊಪ್ಪಳ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಇನ್ನೂ ಘೋಷಣೆಯಾಗಿಲ್ಲ. ಹೀಗಾಗಿ ಕ್ಷೇತ್ರದ ಮತದಾರರಲ್ಲಿ ಕುತೂಹಲ ಮನೆ ಮಾಡಿದೆ.

ಸಿದ್ಧಾಂತ ಬದ್ಧ ರಾಜಕಾರಣವೇ ದೌರ್ಬಲ್ಯ ಅಲ್ಲ: ಸಿ.ಟಿ. ರವಿ

ಸಿ.ಟಿ. ರವಿ

ಚಿಕ್ಕಮಗಳೂರು: ‘ನಾನು ಸಿದ್ಧಾಂತ ಬದ್ಧ ರಾಜಕಾರಣಿ, ಅದೇ ಕೆಲವರಿಗೆ ದೌರ್ಬಲ್ಯ ಎನಿಸಬಹುದು. ಆದರೆ, ದೌರ್ಬಲ್ಯ ಅಲ್ಲ’ ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಹೇಳಿದರು.

‘ಸಿದ್ಧಾಂತದ ಆಧಾರದಲ್ಲಿ ರಾಜಕಾರಣ ಮಾಡುತ್ತಿರುವುದರಿಂದ ಇವನು ಪಕ್ಷ ಬಿಡುವುದಿಲ್ಲ. ಏನು ಮಾಡಿದರೂ ನಡೆಯುತ್ತದೆ ಎಂಬ ಮನಸ್ಥಿತಿ ಕೆಲವರಿಗಿದೆ. ಸ್ವಾರ್ಥ ರಾಜಕಾರಣ ಮಾಡುವವರು ಪಕ್ಷ ಬಲಿಕೊಡುತ್ತಾರೆ. ನಾನು ಸ್ವಾರ್ಥ ರಾಜಕಾರಣ ಮಾಡಿಲ್ಲ’ ಎಂದು ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಶಿವಮೊಗ್ಗದಲ್ಲಿ ಸ್ಪರ್ಧಿಸುವ ಕುರಿತು ಕೆ.ಎಸ್.ಈಶ್ವರಪ್ಪ ಅವರು ತಮ್ಮ ನಿರ್ಧಾರ ಮರು ಪರಿಶೀಲಿಸಬೇಕು’ ಎಂದು ಕೋರಿದರು.

ಶ್ರೀರಾಮುಲು ವಿರುದ್ಧ ಸ್ಪರ್ಧೆ: ಎಸ್. ತಿಪ್ಪೇಸ್ವಾಮಿ ಘೋಷಣೆ



ಚಿತ್ರದುರ್ಗ: ಬಳ್ಳಾರಿ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಕೈತಪ್ಪಿದ್ದರಿಂದ ಬೇಸರಗೊಂಡಿರುವ ಮೊಳಕಾಲ್ಮುರು ಕ್ಷೇತ್ರದ ಮಾಜಿ ಶಾಸಕ ಎಸ್. ತಿಪ್ಪೇಸ್ವಾಮಿ, ಪಕ್ಷದ ಅಭ್ಯರ್ಥಿ ಬಿ.ಶ್ರೀರಾಮುಲು ವಿರುದ್ಧ ಕಣಕ್ಕಿಳಿಯುವುದಾಗಿ ಘೋಷಿಸಿದ್ದಾರೆ.

‘ಬಳ್ಳಾರಿ ಕ್ಷೇತ್ರದ ಟಿಕೆಟ್ ಕೋರಿದ್ದೆ. ಶ್ರೀರಾಮುಲು ಅವರೇ ಟಿಕೆಟ್ ಕೊಡಿಸುವ ಭರವಸೆ ನೀಡಿದ್ದರು. ಈಗ ತಾವೇ ಪಡೆದಿದ್ದಾರೆ. ಮ್ಯಾಸ ನಾಯಕ ಸಮುದಾಯಕ್ಕಾದ ಅನ್ಯಾಯ ಖಂಡಿಸಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವೆ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಬಳ್ಳಾರಿ ಕ್ಷೇತ್ರ ವ್ಯಾಪ್ತಿಯ ಕೂಡ್ಲಿಗಿ, ಸಂಡೂರು, ಕಂಪ್ಲಿ ಸೇರಿ ಹಲವೆಡೆ ಸಮುದಾಯದವರಿದ್ದಾರೆ. ಮ್ಯಾಸನಾಯಕ ಬುಡಕಟ್ಟು ಸಮುದಾಯಕ್ಕೆ ಟಿಕೆಟ್ ನೀಡಬೇಕಿತ್ತು, ಈಗ ನಿರ್ಲಕ್ಷಿಸಲಾಗಿದೆ. ಇದನ್ನು ಸಹಿಸಲಾಗದು’ ಎಂದರು.

ಎಸ್.ತಿಪ್ಪೇಸ್ವಾಮಿ, ಬಿಆರ್‌ಎಸ್ ಕಾಂಗ್ರೆಸ್ ಪಕ್ಷದಲ್ಲಿ ಶ್ರೀರಾಮುಲು ಜೊತೆಗಿದ್ದರು. ಮೊಳಕಾಲ್ಮುರು ಕ್ಷೇತ್ರದಿಂದ 2013ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿದ್ದರು. 2018ರ ಚುನಾವಣೆಯಲ್ಲಿ ಶ್ರೀರಾಮುಲು, ತಿಪ್ಪೇಸ್ವಾಮಿ ಮುಖಾಮುಖಿಯಾಗಿದ್ದರು. 2023ರಲ್ಲಿ ಬಿಜೆಪಿಗೆ ಮರಳಿದ್ದರು.

ಶೀಘ್ರ ಬಂಡಾಯ ಶಮನ: ಬಿಎಸ್‌ವೈ


ಯಡಿಯೂರಪ್ಪ

ಹುಬ್ಬಳ್ಳಿ: ‘ಲೋಕಸಭೆ ಚುನಾವಣೆಗೆ ಟಿಕೆಟ್ ಸಿಗದೇ ಬಂಡಾಯವೆದ್ದಿರುವವರ ಜೊತೆ ಚರ್ಚೆ ನಡೆದಿದೆ. ಒಂದೆರಡು ದಿನಗಳಲ್ಲಿ ಎಲ್ಲ ಸರಿ ಹೋಗುತ್ತದೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು ಈಶ್ವರಪ್ಪ ಜೊತೆಗೂ ಚರ್ಚೆ ನಡೆದಿದೆ. ಈಗ ದೇಶದಾದ್ಯಂತ ಬಿಜೆಪಿ ಪರ ಅಲೆ ಇದೆ. ರಾಜ್ಯದಿಂದ 25ರಿಂದ 26 ಕ್ಷೇತ್ರ ಗೆದ್ದು ಮೋದಿ ಅವರಿಗೆ ಕೊಡುಗೆ ನೀಡುತ್ತೇವೆ’ ಎದು ತಿಳಿಸಿದರು.

ಎಸ್‌.ಸಿ, ಎಸ್‌.ಟಿ, ಹಿಂದುಳಿದ ವರ್ಗಗಳು ಹಾಗೂ ಯುವಕರ ಕಡೆ ಹೆಚ್ಚು ಗಮನಹರಿಸಲು ಮೋದಿ ಅವರು ಸಲಹೆ ನೀಡಿದ್ದಾರೆ. ಅದರಂತೆ, ಮಾಡುತ್ತೇವೆ ಎಂದು ಹೇಳಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹450
12 ಕ್ಕೆ ₹60
ಮೈಸೂರು
100ಕ್ಕೆ ₹450

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹177
ಆರ್‌ಎಸ್‌ಎಸ್-5 ₹168
ಗುಡ್ ಲಾಟ್ (ಪ್ರತಿ ಕೆ.ಜಿ) ₹158

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹277-430
ದ್ವಿತಳಿ (ಬಿ.ವಿ) ₹275-554

ಎಲ್‌ಐಸಿ ಉದ್ಯೋಗಿಗಳಿಗೆ ವೇತನ ಏರಿಕೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಉದ್ಯೋಗಿಗಳಿಗೆ ಶೇ 17ರಷ್ಟು ವೇತನ ಹೆಚ್ಚಳಕ್ಕೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ.

ಸಾರ್ವಜನಿಕ ವಲಯದ ಬ್ಯಾಂಕ್ ಉದ್ಯೋಗಿಗಳ ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಿದ ಬೆನ್ನಲ್ಲೇ ಎಲ್‌ಐಸಿ ಉದ್ಯೋಗಿಗಳಿಗೂ ಕೇಂದ್ರವು ಸಿಹಿ ಸುದ್ದಿ ನೀಡಿದೆ. 2022ರ ಆಗಸ್ಟ್ 1ರಿಂದ ಪೂರ್ವಾನ್ವಯವಾಗಲಿದೆ. ಇದರಿಂದ 1.10 ಲಕ್ಷ ಉದ್ಯೋಗಿಗಳು ಹಾಗೂ 30 ಸಾವಿರ ಪಿಂಚಣಿದಾರರಿಗೆ ಪ್ರಯೋಜನ ಸಿಗಲಿದೆ.

2010ರ ಏಪ್ರಿಲ್ 1ರಿಂದ ಕೆಲಸಕ್ಕೆ ಸೇರಿದ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆಯಡಿ (ಎನ್‌ಪಿಎಸ್) ಕೊಡುಗೆ ಪ್ರಮಾಣವನ್ನು ಪರಿಷ್ಕರಿಸಿದ್ದು, ಶೇ 10ರಿಂದ ಶೇ 14ಕ್ಕೆ ಹೆಚ್ಚಿಸಲಾಗಿದೆ. 24 ಸಾವಿರ ಉದ್ಯೋಗಿಗಳಿಗೆ ಇದರ ಪ್ರಯೋಜನ ದೊರೆಯಲಿದೆ. ಪಿಂಚಣಿದಾರರಿಗೆ ಒಂದು ಬಾರಿ ಎಕ್ಸ್‌ಗ್ರೇಷಿಯಾ ನೀಡಲಾಗುವುದು ಎಂದು ಕೇಂದ್ರ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

18ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ. ಕೃಷ್ಣ ರೆಡ್ಡಿ (ಮಡಿವಾಳ)
ನಿಮ್ಮ ಸವಿನೆನಪು ನಮ್ಮಲಿ ಚಿರಸ್ಮರಣೆಯಾಗಿ ಉಳಿದಿದೆ.
ಇಂತಿ ದುಃಖತಪ್ತರು ಧರ್ಮಪತ್ನಿ ಮತ್ತು ಮಕ್ಕಳು, ಮೊಮ್ಮಕ್ಕಳು

ಸವಿನೆನಪು

ಶ್ರೀಮತಿ ಶಾರದ
ನಿಧನ: 17-03-2005
ನೀವು ನಮ್ಮನ್ನಗಲಿ ಇಂದಿಗೆ 19 ವರ್ಷಗಳಾದರೂ, ನಿಮ್ಮ ಸವಿನೆನಪು ನಮ್ಮಲ್ಲಿ ಸದಾ ಹಸಿರು, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಸದಾ ಸ್ಮರಿಸುವ
ದುಃಖತಪ್ತ: ಮಗ–ಬಿ.ಎಸ್.ಕೃಷ್ಣ ಮತ್ತು ಕುಟುಂಬದವರು ಸಿಬ್ಬಂದಿ ವರ್ಗ, ಬನಶಂಕರಿ ಗ್ಲಾಸ್ ಅಂಡ್ ಪ್ಲೈವುಡ್ಸ್

ಬೆಂಗಳೂರಿನ ಬೊಮ್ಮಸಂದ್ರದಲ್ಲಿ ಇರುವ ಎಂಟಿಆರ್ ಫ್ಯಾಕ್ಟರಿಯಲ್ಲಿ ಶನಿವಾರ ತಯಾರಿಸಿದ 123 ಅಡಿ ಉದ್ದದ ದೋಸೆ –ಪಿಟಿಐ ಚಿತ್ರ

123 ಅಡಿ ಉದ್ದದ ಎಂಟಿಆರ್ ದೋಸೆಗೆ ಗಿನ್ನಿಸ್ ದಾಖಲೆ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟಿಆರ್ ಫುಡ್ಸ್ ಕಂಪನಿಯು ತನ್ನ ನೂರನೇ ವರ್ಷಾಚರಣೆ ಅಂಗವಾಗಿ ಶನಿವಾರ ಲೋರ್ಮನ್ ಕಿಚನ್ ಸಲಕರಣೆಗಳ ಕಂಪನಿಯ ಸಹಭಾಗಿತ್ವದಡಿ ತಯಾರಿಸಿದ 123 ಅಡಿ ಉದ್ದದ ದೋಸೆಯು ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ.

ನಗರದ ಬೊಮ್ಮಸಂದ್ರದಲ್ಲಿ ಇರುವ ಕಂಪನಿಯ ಫ್ಯಾಕ್ಟರಿಯಲ್ಲಿ ಈ ದೋಸೆ ತಯಾರಿಸಲು ತನ್ನದೇ ಉತ್ಪನ್ನವಾದ ಸಿಗ್ನೇಚರ್ ರೆಡ್ ಬ್ಯಾಟರ್ ಅನ್ನು ಬಳಸಿಕೊಂಡಿದೆ.

ಎಂಟಿಆರ್‌ನ ಕ್ಯುಸಿನ್ ಸೆಂಟರ್ ಆಫ್ ಎಕ್ಸಲೆನ್ಸ್ ಮಾರ್ಗದರ್ಶನದಡಿ ಆಹಾರ ತಜ್ಞರು ಮತ್ತು ಪಾಕಶಾಲೆಯ ಸಿಬ್ಬಂದಿ ಒಳಗೊಂಡ 75 ಬಾಣಸಿಗರ ತಂಡವು ದೋಸೆ ತಯಾರಿಸಿತು. ದಾಖಲೆ ನಿರ್ಮಿಸಿದ ಬಳಿಕ ಎಂಟಿಆರ್ ಉದ್ಯೋಗಿಗಳ ಜೊತೆಗೆ ಸ್ಥಳೀಯ ಶಾಲೆಗಳ ವಿದ್ಯಾರ್ಥಿಗಳು ಮತ್ತು ಸುತ್ತ-ಮುತ್ತಲಿನ ಪ್ರದೇಶದ ಜನರಿಗೆ ಇದನ್ನು ಹಂಚಲಾಯಿತು.

16.68 ಮೀಟರ್ (54 ಅಡಿ 8.69 ಇಂಚು) ಉದ್ದದ ದೋಸೆಯು ಇಲ್ಲಿಯವರೆಗೆ ಗಿನ್ನಿಸ್ ದಾಖಲೆಯಲ್ಲಿ ಸ್ಥಾನ ಪಡೆದಿತ್ತು.

ಈ ವೇಳೆ ಮಾತನಾಡಿದ ಎಂಟಿಆರ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುನಯ್ ಭಾಸಿನ್, 'ನಾವು 100 ಅಡಿ ಉದ್ದದ ದೋಸೆ ತಯಾರಿಸಲು ಪ್ರಯ-ತ್ನಿಸಿದ್ದೆವು. ಅದನ್ನು ಮೀರಿ 123 ಅಡಿ ಉದ್ದದ ದೋಸೆ ತಯಾರಿಸಿದ್ದೇವೆ. ಇದು ಹೆಮ್ಮೆಯ ಕ್ಷಣವಾಗಿದೆ' ಎಂದರು.

ದೋಸೆಯು ಮೊದಲಿನಿಂದಲೂ ಎಂಟಿಆರ್ ಪರಂಪರೆಯ ಭಾಗವಾಗಿದೆ. ಇಂದಿಗೂ ಗ್ರಾಹಕರು ಬಯಸುವ ಕಂಪನಿಯ ಪ್ರಮುಖ ಆಹಾರ ಪದಾರ್ಥಗಳಲ್ಲಿ ಒಂದಾಗಿದೆ. ದಕ್ಷಿಣ ಭಾರತದ ಈ ಖಾದ್ಯವು ವಿಶ್ವದಾದ್ಯಂತ ಗುರುತಿಸಲ್ಪಟ್ಟಿದೆ ಎಂದು ಹೇಳಿದರು.

ಲೋರ್ಮನ್ ಕಿಚನ್ ಎಕ್ವಿಪ್‌ಮೆಂಟ್ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಚಂದ್ರಮೌಳಿ ಮಾತನಾಡಿ, 'ವಿಶ್ವದ ಅತಿ ಉದ್ದನೆಯ ಈ ದೋಸೆ ತಯಾರಿಕೆಗೆ ಕಂಪನಿಯಿಂದ ವಿಶೇಷವಾದ ಇಂಡಕ್ಷನ್ ಸ್ಟೌ ನಿರ್ಮಿಸಲಾಗಿತ್ತು. ಇದು ಲೋರ್ಮನ್ ನಿರ್ಮಿಸಿದ ಅತಿ ಉದ್ದನೆಯ ಸ್ಟೌ ಕೂಡ ಆಗಿದೆ' ಎಂದು ಅವರು ತಿಳಿಸಿದರು.

ಕೆನಡಾ: ಭಾರತೀಯ ಮೂಲದ ದಂಪತಿ, ಪುತ್ರಿ ಸಾವು

ಒಟ್ಟಾವ (ಪಿಟಿಐ): ಇಲ್ಲಿನ ಒಂಟಾರಿಯೊ ಪ್ರಾಂತ್ಯದಲ್ಲಿ 'ಅನುಮಾನಾಸ್ಪದ' ರೀತಿಯಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಭಾರತೀಯ ಮೂಲದ ದಂಪತಿ ಮತ್ತು ಅವರ ಅಪ್ರಾಪ್ತ ವಯಸ್ಸಿನ ಮಗಳು ಸಾವನ್ನಪ್ಪಿದ್ದಾರೆ. ವ್ಯಾನ್ ಕಿರ್ಕ್ ಡ್ರೈವ್ ಪ್ರದೇಶದಲ್ಲಿ ಕುಟುಂಬವು ವಾಸವಿದ್ದ ಮನೆ ಬೆಂಕಿಯಿಂದ ಬಹುತೇಕ ಸುಟ್ಟುಹೋಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರನ್ನು ರಾಜೀವ್ ವರಿಕೂ (51), ಅವರ ಪತ್ನಿ ಶಿಲ್ಪಾ ಕೋತಾ (47) ಮತ್ತು ಮಗಳು ಮಾಹೆಕ್ ವರಿಕೂ (16) ಎಂದು ಗುರುತಿಸಲಾಗಿದೆ. ರಾಜೀವ್ ಒಂಟಾರಿಯೊದ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂಬುದು ಅವರ ಲಿಂಕ್ಡ್ ಇನ್ ಖಾತೆಯಲ್ಲಿ ಉಲ್ಲೇಖವಾಗಿದೆ.

ಪಿಎಂ ಸೂರ್ಯ ಘರ್: ಮುಫ್ತ್ ಬಿಜ್ಲಿ ಯೋಜನೆ

ಕೋಟಿ ಕುಟುಂಬ ನೋಂದಣಿ

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ದೇಶದಲ್ಲಿ ಸೌರ ವಿದ್ಯುತ್ ಬಳಕೆಗೆ ಉತ್ತೇಜನ ನೀಡಲು ಆರಂಭಿಸಿರುವ 'ಪಿಎಂ ಸೂರ್ಯ ಘರ್: ಮುಫ್ತ್ ಬಿಜ್ಲಿ ಯೋಜನೆ'ಯಡಿ ಇಲ್ಲಿಯವರೆಗೆ ಒಂದು ಕೋಟಿ ಕುಟುಂಬಗಳು ಹೆಸರು ನೋಂದಾಯಿಸಿವೆ.

'ಅಸ್ಸಾಂ, ಬಿಹಾರ, ಗುಜರಾತ್, ಮಹಾರಾಷ್ಟ್ರ, ಒಡಿಶಾ, ತಮಿಳುನಾಡು ಹಾಗೂ ಉತ್ತರ ಪ್ರದೇಶದಲ್ಲಿ ಐದು ಲಕ್ಷಕ್ಕೂ ಹೆಚ್ಚು ಕುಟುಂಬಗಳು ಹೆಸರು ನೋಂದಣಿ ಮಾಡಿಕೊಂಡಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು, 'ಎಕ್ಸ್'ನಲ್ಲಿ ಶನಿವಾರ ತಿಳಿಸಿದ್ದಾರೆ.

'ಇನ್ನೂ ನೋಂದಣಿ ಮಾಡಿಕೊಳ್ಳದ ಕುಟುಂಬಗಳು ತ್ವರಿತವಾಗಿ ನೋಂದಾ-ಯಿಸಿಕೊಳ್ಳಬೇಕು. ಪರಿಸರ ಸಂರಕ್ಷಣೆಗೆ ಉತ್ತೇಜನ ನೀಡಲು ಈ ಯೋಜನೆ ರೂಪಿಸಲಾಗಿದೆ. ಭೂಮಂಡಲಕ್ಕೆ ಉತ್ತಮ ಕೊಡುಗೆ ನೀಡುವುದೇ ಇದರ ಉದ್ದೇಶವಾಗಿದೆ' ಎಂದು ಹೇಳಿದ್ದಾರೆ.

ಯೋಜನೆಯ ಒಟ್ಟು ಮೊತ್ತ ₹75,021 ಕೋಟಿ. ಯೋಜನೆಯಡಿ ಒಂದು ಕೋಟಿ ಮನೆಗಳಿಗೆ ಪ್ರತಿ ತಿಂಗಳು ತಲಾ 300 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಸುವ ಗುರಿ ಹೊಂದಲಾಗಿದೆ. ಮನೆಯ ತಾರಸಿ ಮೇಲೆ ಸೌರ ವಿದ್ಯುತ್ ಫಲಕ ಅಳವಡಿಸಿಕೊಳ್ಳುವ ಪ್ರತಿ ಕುಟುಂಬಕ್ಕೆ ಸಬ್ಸಿಡಿ ಸೌಲಭ್ಯ ಸಿಗಲಿದೆ. ಒಂದು ಕಿಲೋವಾಟ್‌ಗೆ ₹30 ಸಾವಿರ, ಎರಡು ಕಿಲೋವಾಟ್‌ಗೆ ₹60 ಸಾವಿರ ಹಾಗೂ ಮೂರು ಕಿಲೋವಾಟ್ ಸಾಮರ್ಥ್ಯದ ಸೌರ ಫಲಕ ಅಳವಡಿಸಿಕೊಂಡರೆ ₹78 ಸಾವಿರ ಸಬ್ಸಿಡಿ ದೊರೆಯಲಿದೆ.

ಮುಖ್ಯಾಂಶಗಳು

- 1 ಕೋಟಿ ಮನೆಗಳಿಗೆ 300 ಯೂನಿಟ್ ಉಚಿತ ವಿದ್ಯುತ್ ನೀಡಲು ಒತ್ತು
- ಯೋಜನೆಯ ಒಟ್ಟು ವೆಚ್ಚ ₹75,021 ಕೋಟಿ
- ಯೋಜನೆಯಡಿ ಪ್ರತಿ ಕುಟುಂಬಕ್ಕೂ ಸಬ್ಸಿಡಿ

ಹೊಸ ಇ.ವಿ ನೀತಿಗೆ ಅಸ್ತು



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಹೊಸ ಎಲೆಕ್ಟ್ರಿಕ್ ವಾಹನ ನೀತಿಗೆ ಅನುಮೋದನೆ ನೀಡಿದೆ.

ದೇಶದಲ್ಲಿ ಕನಿಷ್ಠ ₹4,150 ಕೋಟಿ (500 ಮಿಲಿಯನ್ ಡಾಲರ್) ಬಂಡವಾಳ ಹೂಡಿಕೆ ಮಾಡಿ ಇ.ವಿ ತಯಾರಿಕಾ ಘಟಕ ಸ್ಥಾಪಿಸುವ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಪ್ರಕಟಿಸಿದೆ. ಇದರಿಂದ ಭಾರತದ ಮಾರುಕಟ್ಟೆ ಪ್ರವೇಶಿಸಲು ಮುಂದಾಗಿರುವ ಅಮೆರಿಕದ ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯ ಹಾದಿ ಸುಗಮವಾಗಲಿದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಹೊಸ ನೀತಿ ಅನ್ವಯ ₹29 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿನ ಮೌಲ್ಯದ ಕಾರುಗಳ ಆಮದಿಗೆ ಶೇ 15ರಷ್ಟು ಆಮದು ಸುಂಕ ನಿಗದಿಪಡಿಸಲಾಗಿದೆ. ಈ ನಿಯಮವು ಸರ್ಕಾರ ಅನುಮತಿ ನೀಡಿದ ದಿನದಿಂದ ಐದು ವರ್ಷಗಳ ಅವಧಿಗೆ ಒಳಪಟ್ಟಿದೆ. ಪ್ರತಿ ವರ್ಷಕ್ಕೆ 8 ಸಾವಿರ ಕಾರುಗಳ ಆಮದಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಪ್ರಸ್ತುತ ಆಮದು ಮಾಡಿಕೊಳ್ಳುವ ಕಾರುಗಳ ಮೇಲೆ ಕೇಂದ್ರ ಸರ್ಕಾರವು ಶೇ 70ರಿಂದ ಶೇ 100ರಷ್ಟು ಆಮದು ಸುಂಕ ವಿಧಿಸುತ್ತಿದೆ. ₹33 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿನ ಮೌಲ್ಯದ ಕಾರುಗಳ ಎಂಜಿನ್ ಗಾತ್ರ, ವಿಮೆ ಹಾಗೂ ಸಾಗಣೆ ವೆಚ್ಚದ ಮೇಲೆ ಈ ಸುಂಕ ವಿಧಿಸಲಾಗುತ್ತದೆ.

ಎಲೆಕ್ಟ್ರಿಕ್ ವಾಹನಗಳ ಮಾರುಕಟ್ಟೆಯಲ್ಲಿ ಭಾರತವನ್ನು ಮುಂಚೂಣಿ ಸ್ಥಾನ-ಕ್ಕೇರಿಸಲು ಹಾಗೂ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಲು ಹೊಸ ನೀತಿ ಉತ್ತೇಜನ ನೀಡಲಿದೆ ಎಂದು ಕೇಂದ್ರ ಹೇಳಿದೆ.

ಕೇಂದ್ರ ಭಾರೀ ಕೈಗಾರಿಕೆಗಳ ಸಚಿವಾಲಯದಿಂದ ಅನುಮತಿ ಪಡೆದ ಮೂರು ವರ್ಷದೊಳಗೆ ಕಂಪನಿಗಳು ತಯಾರಿಕಾ ಘಟಕ ಸ್ಥಾಪಿಸಬೇಕು. ಮೇಕ್ ಇನ್ ಇಂಡಿಯಾ ನೀತಿಗೆ ಕೇಂದ್ರ ಒತ್ತು ನೀಡುತ್ತಿರುವುದರಿಂದ ಈ ಅವಧಿಯಲ್ಲಿ ದೇಶೀಯ ಮೌಲ್ಯ ವೃದ್ಧಿಗೆ ಒತ್ತು ನೀಡಬೇಕಿದೆ ಎಂದು ಹೇಳಿದೆ.

'ಆಸಕ್ತ ಕಂಪನಿಗಳು ಸಚಿವಾಲಯದ ಪೋರ್ಟಲ್ ಮೂಲಕ ಅರ್ಜಿ ಸಲ್ಲಿ-ಸಬಹುದಾಗಿದೆ' ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಬಿಜೆಪಿ ತೊರೆದ ಅಜಯ್ ಪ್ರತಾಪ್

ಭೋಪಾಲ್ (ಪಿಟಿಐ): ಮಧ್ಯ-ಪ್ರದೇಶದ ಬಿಜೆಪಿ ರಾಜ್ಯಸಭಾ ಸದಸ್ಯ ಅಜಯ್ ಪ್ರತಾಪ್ ಸಿಂಗ್ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಶನಿವಾರ ರಾಜೀನಾಮೆ ನೀಡಿದರು. ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

'ಎಕ್ಸ್'ನಲ್ಲಿ ತಮ್ಮ ರಾಜೀನಾಮೆ ಪತ್ರವನ್ನು ಸಿಂಗ್ ಹಂಚಿಕೊಂಡಿದ್ದಾರೆ. ಆದರೆ, ರಾಜೀನಾಮೆಗೆ ಕಾರಣ ಏನೆಂದು ಅವರು ಪತ್ರದಲ್ಲಿ ವಿವರಿಸಿಲ್ಲ.

ಬಳಿಕ ಸೀಧಿ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಪಕ್ಷದಲ್ಲಿ ಭ್ರಷ್ಟರಿಗೆ ರಕ್ಷಣೆ ನೀಡಲಾಗುತ್ತಿದೆ. ರಾಜಕೀಯ ವ್ಯಾಪಾರೀಕರಣದ ಹಾದಿ 'ಅಡ್ಡದಾರಿ' ಎಂದು ವಾಗ್ದಾಳಿ ನಡೆಸಿದರು.

'ಸಮೀಕ್ಷೆಯ ಆಧಾರದಲ್ಲಿ ಟಿಕೆಟ್ ನೀಡಲಾಗುತ್ತದೆ ಎಂದು ಪಕ್ಷವು ಹೇಳುತ್ತದೆ. ಆದರೆ, ಕೆಲವು ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಈ ನಿಯಮ ಅನ್ವಯವಾದಂತೆ ಕಾಣಿಸುತ್ತಿಲ್ಲ' ಎಂದು ದೂರಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

"ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಅಡಿಗೆಕೆಲಸದವರು ಮತ್ತು ಮಹಿಳಾ ಮನೆಗೆಲಸದವರು ಬೇಕಾಗಿದ್ದಾರೆ ಉತ್ತಮಸಂಬಳ ಹಾಗೂ ಇಬ್ಬರಿಗೂ ಪ್ರತ್ಯೇಕ ವಸತಿಸೌಲಭ್ಯ ನೀಡಲಾಗುತ್ತದೆ. 9845058243"

General

A Bright Future Awaits you
ALBERT DAVID
In pursuant to our ambitious growth strategy, we intend to recruit talents across all the levels of all Strategic Business Units.
We are looking for experienced candidates in Gynaecology & Orthopaedic segment- TBMs/Product Specialists/ BDOs/FLMs/SLMs/TLMs across Karnataka
Apply if you are...
- Young & Dynamic Sales & Mkt. Executive
- Preferably Science Graduate / B Pharm
- Good Communication skills & Personality
- Preferably experienced
Salient Benefits...
- Attractive remuneration
- Better career growth
- Rewards and incentives
- Health benefits
Those who are ready to join us for a bright future, are requested to send their resume on ashish.thakur@adlindia.in OR Walk in with your resume to the address mentioned below
VENUE KANDALA DISTRIBUTORS, No.37/4, "Kandala Towers", South cross Rd, Basavanagudi (Nr Yediyur Lk), Bangalore- 560004
TIMING 9:00 AM onwards on 20th - 22th March, 2024
CONTACT 9741944875

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Vasanth Nagar

HOUSE FOR sale in Vasanth Nagar near MCC contact Kushal 8105838503 or Thejus 8105569606.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 28.04.2024 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ.23.04.2024 06ದಿನಗಳು ಊಟಿವಾಲ್ ವರ್ಲ್ಡ್,ಇಷಾಫೌಂಡೇಷನ್. 24.04.2024, 18.05.2024 12/15/21ದಿನಗಳು ಈಶಾನ್ಯರಾಜ್ಯಗಳ (ಸೆವೆನ್ ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್, ತ್ರಿಪುರ,ಮಿಝೋರಾಂ, 18.04.2024 10ದಿನಗಳು ಅಯೋಧ್ಯಾ ಅಖಂಡ ನೇಪಾಳ ರಾಷ್ಟ್ರಪ್ರವಾಸ.10.04.2024 5ದಿನಗಳು ಅಯೋಧ್ಯಾ,ಕಾಶಿ, ಅಲಹಾಬಾದ್,ಗಯಾ. 28.04.2024 5ದಿನಗಳು 20000 ಪ್ರತಿ 5ದಿನಕ್ಕೊಮ್ಮೆ ವೋಲ್ವೋ ಬಸ್‌ನಲ್ಲಿ ನರ್ಮದಾ ಮಾಘಸ್ನಾನ ವಿಶೇಷ ಉಜ್ಜಯಿನಿ,ಓಂಕಾರೇಶ್ವರ, ಮಹೇಶ್ವರ.9743351212, 9206979202

17.05.2024 19.06.2024 ಸಿಂಗಾಪುರ್ ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.04.2024 05.05.2024 ಭೂತಾನ್ 8 ದಿನಗಳು. 15.04.2024 21.05.2024 ನೇಪಾಳ 9 ದಿನಗಳು. 16.04.2024 17.05.2024 ಕಾಶ್ಮೀರ್ ವೈಷ್ಣೋದೇವಿ 6/8 ದಿನಗಳು. 28.04.2024 26.05.2024 ಅಸ್ಸಾಂ ಮೇಘಾಲಯ ಅರುಣಾಚಲ 9 ದಿನಗಳು. 21.04.2024 21.05.2024 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 7 ದಿನಗಳು. 16.04.2024 14.05.2024 ಶಿಮ್ಲಾ ಕುಲುಮನಾಲಿ 8 ದಿನಗಳು. 18.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

ವ್ಯಾಪಾರ

Business to Business

Business

ಬೆಂಗಳೂರಿನ ನೀರಿನ ಸಮಸ್ಯೆಗೆ ರಾಮಬಾಣ, ನಮ್ಮ ರಕ್ಷಾ ಗ್ರೀನ್ ಸೊಲ್ಯೂಷನ್ಸ್ - ವಾಟರ್ ಟ್ರೀಟ್‌ಮೆಂಟ್ ಪ್ರೋಬಯೋಟಿಕ್, ನೀವು ಬಳಸಿದ ನೀರನ್ನು 90% ಮಾಲಿನ್ಯರಹಿತವಾಗಿ, ದುರ್ವಾಸನೆಯಿಲ್ಲದ ಶುದ್ಧಿ ಮಾಡಿದ ನೀರನ್ನು ತೋಟ, ಕೂಲಿಂಗ್ ಟವರ್, ಶೌಚಾಲಯ, ಗಾಡಿಗಳು ಮತ್ತು ಹೊರವಲಯದಲ್ಲಿ ಮರುಬಳಕೆಗೆ ಸಂಪರ್ಕಿಸಿ : 9940287574 ಅಥವಾ operations@rakshagreen.com

Business Offers

Distributors

WANTED DEALERS, DISTRIBUTORS: Renowned furniture manufacturer is looking for Dealers/Distributors across Karnataka; Call: 9019585095

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಮತದಾನದಿಂದ ಹೊರಗುಳಿದ ಭಾರತ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪಾಕಿಸ್ತಾನವು ಚೀನಾದ ಸಹಯೋಗದಲ್ಲಿ ಮಂಡಿಸಿದ 'ಇಸ್ಲಾಮೊಫೋಬಿಯಾ' ಕುರಿತ ಕರಡು ನಿರ್ಣಯದ ಮೇಲಿನ ಮತದಾನದಿಂದ ಭಾರತ ದೂರವುಳಿಯಿತು.

'ಕೇವಲ ಒಂದು ಧರ್ಮವನ್ನು ಪ್ರತ್ಯೇಕಿಸುವ ಬದಲು, ಹಿಂಸೆ ಮತ್ತು ತಾರತಮ್ಯ ಎದುರಿ-ಸುತ್ತಿರುವ ಹಿಂದೂ, ಬೌದ್ಧ, ಸಿಖ್ ಮತ್ತು ಇತರ ಧರ್ಮಗಳ ವಿರುದ್ಧದ 'ಧರ್ಮ ದ್ವೇಷ'ವನ್ನೂ ಖಂಡಿಸಬೇಕು' ಎಂದು ಭಾರತ ಪ್ರತಿಪಾದಿಸಿದೆ. ಜಾಗತಿಕವಾಗಿ ನಡೆಯುತ್ತಿರುವ ಧಾರ್ಮಿಕ ತಾರತಮ್ಯದ ವಿಶಾಲ ವ್ಯಾಪ್ತಿಯನ್ನು ಪರಿಗಣಿಸಲು ಭಾರತ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿದೆ.

193 ಸದಸ್ಯರ ಸಾಮಾನ್ಯ ಸಭೆಯಲ್ಲಿ ಪಾಕಿಸ್ತಾನ ಶುಕ್ರವಾರ ಮಂಡಿಸಿದ 'ಇಸ್ಲಾಮೊಫೋಬಿ-ಯಾವನ್ನು ಎದುರಿಸಲು ಕ್ರಮಗಳು' ಕುರಿತ ನಿರ್ಣಯವನ್ನು ಅಂಗೀಕ-ರಿಸಲಾಯಿತು. 115 ರಾಷ್ಟ್ರಗಳು ನಿರ್ಣಯದ ಪರವಾಗಿ ಮತ ಚಲಾಯಿಸಿದವು. ಯಾವುದೇ ರಾಷ್ಟ್ರ ಈ ನಿರ್ಣಯದ ವಿರುದ್ಧ ಮತ ಚಲಾಯಿಸಲಿಲ್ಲ. ಭಾರತ, ಬ್ರೆಜಿಲ್, ಫ್ರಾನ್ಸ್, ಜರ್ಮನಿ, ಇಟಲಿ, ಉಕ್ರೇನ್ ಮತ್ತು ಬ್ರಿಟನ್ ಸೇರಿ 44 ರಾಷ್ಟ್ರಗಳು ಮತದಾನದಿಂದ ದೂರವುಳಿದವು. ವಿಶ್ವಸಂ-ಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಂಬೋಜ್ ಅವರು, 'ನಾವು ಹಿಂದೂ, ಬೌದ್ಧ ಮತ್ತು ಸಿಖ್ ವಿರೋಧಿ ಭಾವನೆಗಳ ವಿರುದ್ಧ ನಿಂತಿದ್ದೇವೆ. ಅದು ಕ್ರಿಶ್ಚಿಯನ್‌ಫೋಬಿಯಾ ಅಥವಾ ಇಸ್ಲಾಮೊಫೋಬಿಯಾ ಆಗಿರಬಹುದು. ಎಲ್ಲಾ ರೀತಿಯ ಧಾರ್ಮಿಕ ಫೋಬಿಯಾ ವಿರುದ್ಧವಾದ ನಿಲುವು ನಮ್ಮದು' ಎಂದು ಹೇಳಿದ್ದಾರೆ.

ಪಾಕ್‌ಗೆ ತರಾಟೆ: ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಯೋಧ್ಯೆ ರಾಮಮಂದಿರ, ಸಿಎಎ (ಪೌರತ್ವ ತಿದ್ದುಪಡಿ ಕಾಯ್ದೆ) ಬಗ್ಗೆ ವಿಷಯ ಪ್ರಸ್ತಾಪಿಸಿರುವ ಪಾಕಿಸ್ತಾನವನ್ನು ಭಾರತ ತೀವ್ರ ತರಾಟೆಗೆ ತೆಗೆದುಕೊಂಡಿದ್ದು, ಪಾಕಿಸ್ತಾನ ಪದೇ ಪದೇ ಅದೇ ರಾಗ ತೆಗೆಯುತ್ತಿದೆ ಎಂದು ಟೀಕಿಸಿದೆ.

ಪೈಲಟ್ ಕರ್ತವ್ಯ: ಜೂನ್ 1ರಿಂದ ಹೊಸ ನಿಯಮ ಜಾರಿ – ಡಿಜಿಸಿಎ

ನವದೆಹಲಿ (ಪಿಟಿಐ): ಪೈಲಟ್‌ಗಳ ಕರ್ತವ್ಯ ಹಾಗೂ ವಿಶ್ರಾಂತಿ ಕುರಿತಂತೆ ರೂಪಿಸಿರುವ ಪರಿಷ್ಕೃತ ನಿಯಮಾ-ವಳಿಗಳನ್ನು ವಿಮಾನಯಾನ ಕಂಪನಿಗಳು ಜೂನ್ 1ರಿಂದ ಕಡ್ಡಾಯವಾಗಿ ಜಾರಿಗೊಳಿಸಬೇಕಿದೆ ಎಂದು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ಸೂಚಿಸಿದೆ.

ನಿಯಮಾವಳಿಗಳ ಜಾರಿಗೆ ನಿಗದಿಪಡಿಸಿರುವ ದಿನಾಂಕವನ್ನು ಮತ್ತೆ ವಿಸ್ತರಿಸುವುದಿಲ್ಲ. ಹಾಗಾಗಿ, ಏಪ್ರಿಲ್ 15ರೊಳಗೆ ಕಂಪನಿಗಳಿಂದ ಸಿದ್ಧಪಡಿಸಿರುವ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಬೇಕಿದೆ ಎಂದು ಹೇಳಿದೆ.

ವಿಮಾನಗಳ ಹಾರಾಟ ಅವಧಿಯ ಹೆಚ್ಚಳದಿಂದಾಗಿ ಒತ್ತಡಕ್ಕೆ ಸಿಲುಕುತ್ತಿದ್ದ ಪೈಲಟ್‌ಗಳಿಗೆ ವಿಶ್ರಾಂತಿ ಸಿಗುತ್ತಿ-ರಲಿಲ್ಲ. ಹಾಗಾಗಿ, ಮುಂಜಾಗ್ರತೆಯಾಗಿ ಅವಘಡಗಳನ್ನು ತಪ್ಪಿಸುವ ಉದ್ದೇಶದಿಂದ ಪೈಲಟ್‌ಗಳ ವಿಶ್ರಾಂತಿ ಅವಧಿಗೆ ಸಂಬಂಧಿಸಿದಂತೆ ಜನವರಿ 8ರಂದು ಡಿಜಿಸಿಎ ಪರಿಷ್ಕೃತ ನಿಯಮಾವಳಿಗಳನ್ನು ಪ್ರಕಟಿಸಿತ್ತು.

ಆದರೆ, ಈ ನಿಯಮಾವಳಿಗಳ ಜಾರಿಗೆ ಏರ್ ಇಂಡಿಯಾ, ಸ್ಪೈಸ್‌ಜೆಟ್ ಮತ್ತು ಇಂಡಿಗೊ ಕಂಪನಿಯು ಹೆಚ್ಚಿನ ಸಮಯಾವಕಾಶ ಕೋರಿದ್ದವು.

ಪರಿಷ್ಕೃತ ನಿಯಮಾವಳಿಗಳ ಅನ್ವಯ ಪೈಲಟ್‌ಗಳಿಗೆ ಈಗಿರುವ ವಾರದ ವಿಶ್ರಾಂತಿ ಅವಧಿಯನ್ನು 36 ಗಂಟೆಯಿಂದ 48 ಗಂಟೆವರೆಗೆ ಹೆಚ್ಚಿಸಲಾಗಿದೆ. ವಿಮಾನಯಾನ ಸಂಸ್ಥೆಗಳು ನಿಯಮಾವಳಿಗಳ ಜಾರಿ ಕುರಿತಂತೆ ತ್ರೈಮಾಸಿಕಕ್ಕೊಮ್ಮೆ ಡಿಜಿಸಿಎಗೆ ವರದಿ ಸಲ್ಲಿಸಬೇಕಿದೆ.

ಕೇರಳ: ಮತ್ತೆರಡು ಕ್ಷೇತ್ರಗಳಿಗೆ ಬಿಡಿಜೆಎಸ್ ಅಭ್ಯರ್ಥಿಗಳ ಘೋಷಣೆ

ತುಷಾರ್ ವೆಳ್ಳಾಪಳ್ಳಿ

ಕೋಟಯಂ (ಪಿಟಿಐ): ಕೇರಳದ ಕೋಟಯಂ ಮತ್ತು ಇಡುಕ್ಕಿ ಲೋಕಸಭಾ ಕ್ಷೇತ್ರಗಳಿಗೆ ಬಿಜೆಪಿಯ ಮಿತ್ರಪಕ್ಷವಾದ ಭಾರತ್ ಧರ್ಮ ಜನ ಸೇನಾವು (ಬಿಡಿಜೆಎಸ್) ಶನಿವಾರ ಅಭ್ಯರ್ಥಿ-ಗಳನ್ನು ಘೋಷಿಸಿದೆ.

ಕೋಟಯಂ ಕ್ಷೇತ್ರದಿಂದ ಬಿಡಿಜೆಎಸ್ ರಾಜ್ಯ ಘಟಕ ಅಧ್ಯಕ್ಷ ತುಷಾರ್ ವೆಳ್ಳಾಪಳ್ಳಿ ಮತ್ತು ಇಡುಕ್ಕಿ ಕ್ಷೇತ್ರದಿಂದ ಸಂಗೀತ ವಿಶ್ವನಾಥನ್ ಅವರು ಸ್ಪರ್ಧಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಮಾವೇಲಿಕ್ಕರ ಮತ್ತು ಚಾಲಕ್ಕುಡಿ ಕ್ಷೇತ್ರಗಳಿಗೆ ಕಳೆದ ವಾರ ಅಭ್ಯರ್ಥಿಗ-ಳನ್ನು ಘೋಷಿಸಲಾಗಿತ್ತು. ಚುನಾವಣೆ ದಿನಾಂಕ ಘೋಷಣೆಯಾಗಿರುವ ಹಿನ್ನೆಲೆ ಉಳಿದ ಕ್ಷೇತ್ರಗಳಿಗೂ ಶೀಘ್ರದಲ್ಲಿ ಘೋಷಣೆಯಾಗುವ ಸಾಧ್ಯತೆಗಳಿವೆ.

'ಬಯೊಮೆಟ್ರಿಕ್ ಪ್ರತಿಬಂಧ ಮುಕ್ತಗೊಳಿಸಲು ಕ್ರಮ'



ಹಿಮಂತ ಬಿಸ್ವಾ ಶರ್ಮ

ಗುವಾಹಟಿ (ಪಿಟಿಐ): ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ದಾಖಲಿಸುವ ವೇಳೆ ಪ್ರತಿಬಂಧಿಸಲಾಗಿರುವ ಸುಮಾರು 27 ಸಾವಿರ ಜನರ ಬಯೊಮೆಟ್ರಿಕ್‌ಗಳನ್ನು ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಅನುಷ್ಠಾನದ ವೇಳೆ ಮುಕ್ತಗೊ-ಳಿಸಲಾಗುವುದು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಅವರು ಹೇಳಿದ್ದಾರೆ.

ಬಯೊಮೆಟ್ರಿಕ್ ಪ್ರತಿಬಂಧಕ್ಕೆ ಒಳಗಾಗಿರುವ ಆಧಾರ್ ಕಾರ್ಡ್‌ಗಳನ್ನು ತಡೆಹಿಡಿಯಲಾಗಿ ರುತ್ತದೆ. ಜೊತೆಗೆ, ಅಂಥವರು ಪಡಿತರ ಚೀಟಿ ಮತ್ತು ಉದ್ಯೋಗ ಪಡೆಯಲೂ ಸಮಸ್ಯೆ ಆಗುತ್ತದೆ ಎಂಬುದನ್ನು ಒಪ್ಪಿಕೊಂಡ ಶರ್ಮಾ ಅವರು, ಸದ್ಯದಲ್ಲೇ ಈ ಸಮಸ್ಯೆಯನ್ನು ಬಗೆ ಹರಿಸಲಾಗುವುದು ಎಂದಿದ್ದಾರೆ.

ಅಖಿಲ ಅಸ್ಸಾಂ ವಿದ್ಯಾರ್ಥಿ ಪರಿಷತ್ (ಎಎಎಸ್‌ಯು) ಮತ್ತು ಸಂಬಂಧಪಟ್ಟ ಇತರರ ಜೊತೆ ಬಯೊಮೆಟ್ರಿಕ್‌ಗಳ ಪ್ರತಿಬಂಧ ತೆರವುಗೊಳಿಸುವ ಪ್ರಕ್ರಿಯೆ ಕುರಿತು ಚರ್ಚಿಸಲಾಗುತ್ತದೆ. ಲೋಕಸಭೆ ಚುನಾವಣೆ ಮುಗಿಯುತ್ತಿದ್ದಂತೆ ಈ ಕುರಿತು ಪರಿಹಾರ ಕಂಡು-ಕೊಳ್ಳಲಾಗುತ್ತದೆ ಎಂದು ಅವರು ಶುಕ್ರವಾರ ನಡೆದ ಸುದ್ದಿಗೋಷ್ಠಿ-ಯಲ್ಲಿ ತಿಳಿಸಿದ್ದಾರೆ. ಬರಾಕ್ ಮತ್ತು ಬ್ರಹ್ಮಪುತ್ರ ಕಣಿವೆಯ ಸುಮಾರು 6 ಲಕ್ಷ ಮಂದಿ ಪೌರತ್ವ ಪಡೆಯಲಿದ್ದಾರೆ ಎಂಬ ನಿರೀಕ್ಷೆ ಇದೆ ಎಂದರು.

ಅನುರಾಧಾ ಪೌಡ್ವಾಲ್ ಬಿಜೆಪಿಗೆ

ಬಾಲಿವುಡ್‌ನ ಖ್ಯಾತ ಗಾಯಕಿ ಅನುರಾಧಾ ಪೌಡ್ವಾಲ್ ಅವರು ಶನಿವಾರ ಬಿಜೆಪಿಗೆ ಸೇರ್ಪಡೆಯಾದರು.

ನವದೆಹಲಿ (ಪಿಟಿಐ): ಬಾಲಿವುಡ್‌ನ ಖ್ಯಾತ ಗಾಯಕಿ ಅನುರಾಧಾ ಪೌಡ್ವಾಲ್ ಅವರು ಶನಿವಾರ ಬಿಜೆಪಿ ಸೇರ್ಪಡೆಯಾದರು.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಶ್ಲಾಘಿಸಿದರು. ಮೋದಿ ನೇತೃತ್ವದ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ಸಂತಸ ತಂದಿದೆ ಎಂದು ಹೇಳಿದರು.

'ಸರ್ವ ಮಂಗಳ ಮಾಂಗಲ್ಯೆ' ಹಾಡನ್ನು ಹಾಡುವ ಮೂಲಕ ಆದಿಶಕ್ತಿಗೆ ನಮಸ್ಕರಿಸಿದರು.

'ಸನಾತನ ಧರ್ಮದೊಂದಿಗೆ ಆಳವಾದ ಸಂಬಂಧ ಹೊಂದಿರುವ ಸರ್ಕಾರ ಮತ್ತು ಜನರಿರುವ ಪಕ್ಷಕ್ಕೆ ಸೇರುತ್ತಿರುವುದು ಸಂತಸ ತಂದಿದೆ. ಸಿನಿಮಾ ಕ್ಷೇತ್ರದಲ್ಲಿ ಹಿನ್ನೆಲೆ ಗಾಯಕಿ ನನ್ನ ಕೆಲಸ ಕಡಿಮೆಯಾದ ನಂತರ ಹೆಚ್ಚಾಗಿ ಭಕ್ತಿಗೀತೆಗಳನ್ನು ಹಾಡುತ್ತಿದ್ದೇನೆ' ಎಂದರು.

'ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುತ್ತಿದ್ದಾರೆ' ಎಂದು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮತ್ತು ಮುಖ್ಯ ವಕ್ತಾರ ಅನಿಲ್ ಬಲೂನಿ ಮತ್ತು ಇತರರು ಇದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪಾಕಿಸ್ತಾನ: ಉಗ್ರರ ದಾಳಿಗೆ ಏಳು ಸೈನಿಕರ ಬಲಿ

ಪೆಶಾವರ (ಪಿಟಿಐ): ಅಫ್ಗಾನಿಸ್ತಾನದ ಗಡಿಯಲ್ಲಿರುವ ಉತ್ತರ ವಝೀರಿಸ್ತಾನದ ಭದ್ರತಾ ಚೆಕ್ ಪೋಸ್ಟ್ ಮೇಲೆ ಶನಿವಾರ ಉಗ್ರರು ನಡೆಸಿದ ಆತ್ಮಾಹುತಿ ದಾಳಿಯಲ್ಲಿ ಪಾಕಿಸ್ತಾನ ಸೇನೆಯ ಇಬ್ಬರು ಅಧಿಕಾರಿಗಳು ಸೇರಿದಂತೆ ಏಳು ಸೈನಿಕರು ಹತರಾಗಿದ್ದಾರೆ.

ಸತ್ತವರಲ್ಲಿ ಐವರು ಸೈನಿಕರು, ಒಬ್ಬ ಲೆಫ್ಟಿನೆಂಟ್ ಕರ್ನಲ್ ಮತ್ತು ಒಬ್ಬ ಕ್ಯಾಪ್ಟನ್ ಸೇರಿದ್ದಾರೆ. ಮೀರ್ ಅಲಿ ಪ್ರದೇಶದ ಚೆಕ್ ಪೋಸ್ಟ್ ಮೇಲೆ ದಾಳಿ ಮಾಡಿದ್ದ ಎಲ್ಲ ಆರು ಉಗ್ರರನ್ನು ಕೊಲ್ಲಲಾಗಿದೆ ಎಂದು ಸೇನೆ ತಿಳಿಸಿದೆ.

ಚೆಕ್ ಪೋಸ್ಟ್‌ನೊಳಗೆ ನುಗ್ಗುವ ಉಗ್ರರ ಆರಂಭಿಕ ಯತ್ನಗಳನ್ನು ಸೇನೆಯು ವಿಫಲಗೊ-ಳಿಸಿತ್ತು. ನಂತರ ಉಗ್ರರು ಸ್ಫೋಟಕ ತುಂಬಿದ ವಾಹನವನ್ನು ಚೆಕ್ ಪೋಸ್ಟ್ ಒಳಗೆ ನುಗ್ಗಿಸಿದರು. ಜತೆಗೆ ಆತ್ಮಾಹುತಿ ಬಾಂಬರ್‌ಗಳು ದಾಳಿ ನಡೆಸಿದರು. ಅವರಿಗೆ ದಿಟ್ಟ ಪ್ರತಿರೋಧ ತೋರಿದ ಸೇನೆ ಎಲ್ಲ ಉಗ್ರರನ್ನು ಗುಂಡಿಟ್ಟು ಕೊಂದಿತು. ಆದರೆ, ಗುಂಡಿನ ಚಕಮಕಿಯಲ್ಲಿ ಲೆಫ್ಟಿನೆಂಟ್ ಕರ್ನಲ್ ಸೈಯದ್ ಕಾಶಿಫ್ ಅಲಿ ಮತ್ತು ಕ್ಯಾಪ್ಟನ್ ಮುಹಮ್ಮದ್ ಅಹಮದ್ ಬದರ್ ಪ್ರಾಣ ತ್ಯಜಿಸಿದರು ಎಂದು ಸೇನೆಯ ಪ್ರಕಟಣೆ ತಿಳಿಸಿದೆ.

ಚುನಾವಣಾ ಬಾಂಡ್ ವಿತರಣೆ ವಿಚಾರವಾಗಿ ಮುಂದುವರಿದ ಕಾಂಗ್ರೆಸ್ ವಾಗ್ದಾಳಿ

‘ಭಾರತ ಇತಿಹಾಸದ ದೊಡ್ಡ ಹಗರಣ’

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ವಿತರಣೆ ವಿಚಾರವಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ ಮುಂದುವರಿಸಿದ್ದು, ‘ಯೋಜನೆಯು ಭಾರತದ ಇತಿಹಾಸದಲ್ಲಿಯೇ ಅತಿದೊಡ್ಡ ಹಗರಣವಾಗಿದೆ’ ಎಂದು ಶನಿವಾರ ಆರೋಪಿಸಿದೆ. ಹಗರಣದ ಆಳ–ಅಗಲ ಬಹಿರಂಗವಾಗಬೇಕಾದರೆ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ತನಿಖೆಯ ಅಗತ್ಯವಿದೆ ಎಂದೂ ಒತ್ತಿಹೇಳಿದೆ.

ಜೈರಾಮ್ ರಮೇಶ್

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಸುಳ್ಳು ಹೇಳುತ್ತ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ಹರಿಹಾಯ್ದರು.

‘ವಿರೋಧ ಪಕ್ಷಗಳು ಚುನಾವಣಾ ಬಾಂಡ್ ಮೂಲಕ ₹14,000 ಕೋಟಿ ಪಡೆದಿವೆ ಎಂದು ಅಮಿತ್ ಶಾ ಹೇಳಿದ್ದಾರೆ. ಸರ್ಕಾರ ಅಂಕಿ–ಅಂಶಗಳನ್ನು ತಿರುಚುತ್ತದೆ ಎಂದು ನಮಗೆ ಗೊತ್ತಿದೆ. ವಾಸ್ತವ ಏನೆಂದರೆ, ಬಿಜೆಪಿಯೇತರ ಪಕ್ಷಗಳು ಪಡೆದಿರುವುದು ₹6,000 ಕೋಟಿ ಮಾತ್ರ. ಈ ಪೈಕಿ ₹2,700 ಕೋಟಿ ಬಿಜೆಪಿಯ ‘ಬಿ’ ಟೀಮ್ ಅಥವಾ ಎನ್‌ಡಿಎಯ ಮಿತ್ರ ಪಕ್ಷಗಳ ಪಾಲಿಗೆ ಹೋಗಿದೆ’ ಎಂದು ಹೇಳಿದರು.

‘ಬಿಜೆಪಿ ಎಷ್ಟು ದೇಣಿಗೆ ಪಡೆದಿದೆ ಎಂಬುದು ವಿಷಯ ಅಲ್ಲ; ಹೇಗೆ ಪಡೆದಿದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಪಕ್ಷದ ಭ್ರಷ್ಟಾಚಾರ ಅನಾವರಣವಾಗಿದೆ’ ಎಂದು ಹೇಳಿದರು.

‘ಶೇ 50ರಷ್ಟು ಚುನಾವಣಾ ಬಾಂಡ್‌ಗಳನ್ನುಬಿಜೆಪಿ ಸ್ವೀಕರಿಸಿದೆ. ಇದೇ ಸಂದರ್ಭದಲ್ಲಿ ಅದು ಇ.ಡಿ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಗಳ ಮೇಲೆ ಶೇ 100ರಷ್ಟು ನಿಯಂತ್ರಣ ಹೊಂದಿದೆ. ಜೊತೆಗೆ ರಕ್ಷಣೆ, ಹೆದ್ದಾರಿ, ರೈಲ್ವೆ ಗುತ್ತಿಗೆಗಳ ಮೇಲೂ ನಿಯಂತ್ರಣ ಹೊಂದಿದೆ. ಈ ಸಂಸ್ಥೆಗಳ ಮೂಲಕ ನಾಲ್ಕು ರೀತಿಯಲ್ಲಿ ಭ್ರಷ್ಟಾಚಾರ ನಡೆಸುತ್ತಿದೆ. ‘ದೇಣಿಗೆ ನೀಡಿ, ವ್ಯವಹಾರ ಮಾಡಿ’ ಎನ್ನುವುದು ಒಂದು ಬಗೆ. ‘ಹಫ್ತಾ ವಸೂಲಿ’ ಇನ್ನೊಂದು ರೀತಿ. ‘ಲಂಚ ನೀಡಿ ಗುತ್ತಿಗೆ ಪಡೆಯಿರಿ’ ಎಂದು ಒಂದು ಕಡೆ ಹೇಳಿದರೆ, ‘ಶೆಲ್ ಕಂಪನಿ’ಗಳ ಮೂಲಕ ಇನ್ನೊಂದೆಡೆ ಭ್ರಷ್ಟ ವ್ಯವಹಾರ ನಡೆಸುತ್ತಿದೆ’ ಎಂದು ಅವರು ವಾಗ್ದಾಳಿ ಮಾಡಿದರು.

‘ಸರ್ಕಾರ ಉರುಳಿಸಲು ಬಳಕೆ’

ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ‘ಸರ್ಕಾರಗಳನ್ನು ಉರುಳಿಸಲು ಮತ್ತು ರಾಜಕೀಯ ಪಕ್ಷಗಳನ್ನು ಮುಳುಗಿಸಲು ಸುಲಿಗೆ ದಂಧೆಯನ್ನು ಬಳಸಲಾಗಿತ್ತು’ ಎಂದು ಕಿಡಿಕಾರಿದರು.

ಮಹಾರಾಷ್ಟ್ರದ ಠಾಣೆಯಲ್ಲಿ ಭಾರತ ಜೋಡೊ ನ್ಯಾಯಯಾತ್ರೆ ವೇಳೆ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಚುನಾವಣಾ ಬಾಂಡ್ ಯೋಜನೆಯು ಅಂತರರಾಷ್ಟ್ರೀಯ ಮಟ್ಟದ ಸುಲಿಗೆ ದಂಧೆ. ಯಾರು ಪ್ರತಿಭಟಿಸುತ್ತಾರೋ ಅವರ ಮೇಲೆ ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆ ದಾಳಿ ನಡೆಸುತ್ತವೆ’ ಎಂದು ಆರೋಪಿಸಿದರು.

ಕಾಂಗ್ರೆಸ್ ಬಾಂಡ್‌ಗಳನ್ನು ರಾಹುಲ್ ಹಿಂದಿರುಗಿಸುವರೇ?: ಬಿಜೆಪಿ

ದೇವೇಂದ್ರ ಫಡಣವೀಸ್

ಮುಂಬೈ (ಪಿಟಿಐ): ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಪಕ್ಷ ಪಡೆದಿರುವ ಚುನಾವಣಾ ಬಾಂಡ್‌ಗಳನ್ನು ಹಿಂದಿರುಗಿಸುತ್ತಾರೆಯೇ’ ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪ್ರಶ್ನಿಸಿದರು.

‘ಚುನಾವಣಾ ನಿಧಿಗಾಗಿ ಕಾಂಗ್ರೆಸ್ ಪಕ್ಷದ ಕಪ್ಪು ಹಣದ ಮೂಲವನ್ನು ಈ ಯೋಜನೆ ತಡೆದಿದೆ. ಹೀಗಾಗಿ ಅವರು ಚುನಾವಣಾ ಬಾಂಡ್‌ಗಳ ಕುರಿತು ಟೀಕಿಸುತ್ತಿದ್ದಾರೆ’ ಎಂದು ಅವರು ದೂರಿದರು.

ರಾಜ್ಯ ಸಂಪುಟ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘303 ಸಂಸದರನ್ನು ಹೊಂದಿರುವ ಬಿಜೆಪಿ ಒಟ್ಟು ಶೇ 30ರಷ್ಟು ಚುನಾವಣಾ ಬಾಂಡ್‌ಗಳನ್ನು ಪಡೆದುಕೊಂಡಿದೆ. ಆದರೆ ಉಳಿದ ಶೇ 70ರಷ್ಟು ಚುನಾವಣಾ ಬಾಂಡ್‌ಗಳನ್ನು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಪಡೆದುಕೊಂಡಿವೆ’ ಎಂದರು. ‘ಯಾರಿಗೆಲ್ಲ ಬೆದರಿಕೆಗಳನ್ನು ಹಾಕಿ ಕಾಂಗ್ರೆಸ್ ಪಕ್ಷದವರು ಚುನಾವಣಾ ಬಾಂಡ್‌ಗಳನ್ನು ಪಡೆದಿದ್ದಾರೆ. ಅವರು ಈ ಚುನಾವಣಾ ಬಾಂಡ್‌ಗಳನ್ನು ಹಿಂದಿರುಗಿಸುತ್ತಾರೆಯೇ’ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಏಕನಾಥ ಶಿಂದೆ ಅವರು, ‘ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಮಾತನಾಡಲು ರಾಹುಲ್ ಗಾಂಧಿ ಅವರಿಗೆ ಯಾವುದೇ ಹಕ್ಕಿಲ್ಲ. ದೇಶದಲ್ಲಿ ಮೋದಿ ಗ್ಯಾರಂಟಿ ಮಾತ್ರ ಕೆಲಸ ಮಾಡುತ್ತದೆ. ಮೋದಿ ಜನಪ್ರಿಯತೆಯಿಂದ ರಾಹುಲ್ ಅಸಮಾಧಾನಗೊಂಡಿದ್ದಾರೆ’ ಎಂದರು.

23ರವರೆಗೆ ಇ.ಡಿ ಕಸ್ಟಡಿಗೆ ಕವಿತಾ

ಅಬಕಾರಿ ಹಗರಣ– ಬಂಧನ ಅಕ್ರಮ: ಕೆಸಿಆರ್ ಪುತ್ರಿ

ನವದೆಹಲಿ (ಪಿಟಿಐ): ಅಬಕಾರಿ ನೀತಿಯ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಬಂಧಿತರಾಗಿರುವ ಕೆ.ಕವಿತಾ ಅವರನ್ನು ದೆಹಲಿ ನ್ಯಾಯಾಲಯವು ಮಾರ್ಚ್ 23ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಗೆ ಒಪ್ಪಿಸಿ ಶನಿವಾರ ಆದೇಶ ಹೊರಡಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಗಾಗಿ ಕವಿತಾ ಅವರನ್ನು 10 ದಿನಗಳ ಕಾಲ ತನ್ನ ಕಸ್ಟಡಿಗೆ ಒಪ್ಪಿಸಬೇಕೆಂದು ಇ.ಡಿ ಕೋರಿದ್ದ ಅರ್ಜಿಯ ವಿಚಾರಣೆ ನಡೆಸಿದ ಇ.ಡಿ ಪ್ರಕರಣಗಳ ವಿಶೇಷ ನ್ಯಾಯಾಧೀಶ ಎಂ.ಕೆ.ನಾಗ್‌ಪಾಲ್ ಅವರು ಈ ಆದೇಶ ನೀಡಿದರು.

ಅದಕ್ಕೂ ಮುನ್ನ, ಬಿಆರ್‌ಎಸ್ ನಾಯಕಿ ಹಾಗೂ ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರ ಪುತ್ರಿ ಕೆ.ಕವಿತಾ ಅವರನ್ನು ಇ.ಡಿ ಪ್ರಕರಣಗಳ ವಿಶೇಷ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು.

ತೆಲಂಗಾಣದ ವಿಧಾನ ಪರಿಷತ್ ಸದಸ್ಯರೂ ಆಗಿರುವ ಕವಿತಾ ಅವರು, ತಮ್ಮ ಬಂಧನ ಅಕ್ರಮವಾಗಿದ್ದು, ತಾವು ನ್ಯಾಯಾಲಯದಲ್ಲಿ ಈ ಕುರಿತು ಹೋರಾಡುವುದಾಗಿ ಹೇಳಿದರು.

ಕವಿತಾ ಅವರ ಪರವಾಗಿ ವಕೀಲರಾದ ವಿಕ್ರಮ್ ಚೌಧರಿ ಮತ್ತು ನಿತೇಶ್ ರಾಣಾ ವಾದ ಮಂಡಿಸಿದರು. ‘ಮಾರ್ಚ್ 10ರಂದು ಕವಿತಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಯಲಿದ್ದು, ಅದರ ಒಳಗೆ ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸಬಾರದೆಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ, ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಉಲ್ಲಂಘಿಸಿರುವುದರಿಂದ ಇದು ಕರಾಳ ದಿನವಾಗಿದೆ’ ಎಂದು ಕವಿತಾ ಪರ ವಕೀಲರು ವಾದಿಸಿದರು.

ಆದರೆ, ಕವಿತಾ ಅವರ ಬಂಧನದ ಕ್ರಮವನ್ನು ಇ.ಡಿ ಸಮರ್ಥಿಸಿಕೊಂಡಿತು. ‘ಕವಿತಾ ಅವರ ವಿರುದ್ಧ ಬಲವಂತದ ಕ್ರಮ ಜರುಗಿಸುವುದಿಲ್ಲ ಎಂದು ತಾನು ಸುಪ್ರೀಂ ಕೋರ್ಟ್ ಮುಂದೆ ಯಾವುದೇ ಹೇಳಿಕೆ ನೀಡಿರಲಿಲ್ಲ. ಅವರ ವಿರುದ್ಧ ಸಾಕಷ್ಟು ಪುರಾವೆ, ಸಾಕ್ಷಿಗಳ ಹೇಳಿಕೆಗಳು ಇವೆ. ಕವಿತಾ ಅವರು ಸಾಕ್ಷ್ಯನಾಶದಲ್ಲಿ ತೊಡಗಿದ್ದರು’ ಎಂದು ಇ.ಡಿ ವಾದಿಸಿತು.

ಹಗರಣದ ಸಂಬಂಧ ಕೆಸಿಆರ್ ಕುಟುಂಬ, ಬಿಜೆಪಿ ಟಿವಿ ಧಾರಾವಾಹಿಗಳಂತೆ ನಾಟಕವಾಡುತ್ತಿದ್ದು, ಅದು ಈಗ ಕ್ಲೈಮ್ಯಾಕ್ಸ್ ಮುಟ್ಟಿದೆ. ಎರಡೂ ಪಕ್ಷಗಳು ತಂತ್ರಗಾರಿಕೆ ಮಾಡುತ್ತಿವೆ.

ಎ.ರೇವಂತ್ ರೆಡ್ಡಿ, ತೆಲಂಗಾಣ ಮುಖ್ಯಮಂತ್ರಿ

‘ಯಾವ ಭ್ರಷ್ಟರನ್ನೂ ಬಿಡುವುದಿಲ್ಲ’

ಹೈದರಾಬಾದ್ (ಪಿಟಿಐ): ಅತ್ಯಂತ ಭ್ರಷ್ಟ ಪಕ್ಷಗಳ ಜತೆ ಬಿಆರ್‌ಎಸ್ ಅವ್ಯವಹಾರದಲ್ಲಿ ಪಾಲುದಾರಿಕೆ ಹೊಂದಿದ್ದು, ಯಾವ ಭ್ರಷ್ಟರನ್ನೂ ತಾವು ಸುಮ್ಮನೆ ಬಿಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಸಿದರು.

ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರ ಬಂಧನದ ಮರುದಿನ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ನೀಡಿದ್ದಾರೆ.

ನಾಗರಕರ್ನೂಲ್‌ನಲ್ಲಿ ಬಿಜೆಪಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ಮತ್ತು ಬಿಆರ್‌ಎಸ್ ಅನ್ನು ಭ್ರಷ್ಟ ಪಕ್ಷಗಳು ಎಂದು ಟೀಕಿಸಿದರು. ವಂಶಾಡಳಿತದ ಪಕ್ಷಗಳಲ್ಲಿ ಭ್ರಷ್ಟಾಚಾರದ ಪಾಲುದಾರಿಕೆ ಬಲಿಷ್ಠವಾಗಿರುತ್ತದೆ ಎಂದೂ ಅವರು ಆರೋಪಿಸಿದರು.

ಹಡಗುಗಳ ಅಪಹರಣ ಯತ್ನ ವಿಫಲ

ನವದೆಹಲಿ (ಪಿಟಿಐ): ಸೊಮಾಲಿಯಾದ ಪೂರ್ವ ಕರಾವಳಿಯ ಸಮೀಪ ಕಡಲ್ಗಳ್ಳರ ಗುಂಪೊಂದು ಹಡಗುಗಳನ್ನು ಅಪಹರಿಸಲು ಯತ್ನಿಸಿದ್ದು, ಭಾರತೀಯ ನೌಕಾಪಡೆಯು ಆ ಗುಂಪಿನ ಪ್ರಯತ್ನವನ್ನು ವಿಫಲಗೊಳಿಸಿದೆ.

ಡಿಸೆಂಬರ್ 14ರಂದು ಅಪಹರಣಕ್ಕೊಳಗಾಗಿದ್ದ ‘ರುಯೆನ್’ ಹೆಸರಿನ ಸರಕು ಸಾಗಣೆ ಹಡಗನ್ನು ಬಳಸಿ, ಕಡಲ್ಗಳ್ಳರು ಆಳ ಸಮುದ್ರದಲ್ಲಿ ಸಂಚರಿಸುವ ಹಡಗುಗಳನ್ನು ಅಪಹರಿಸಲು ಯತ್ನಿಸಿದ್ದಾರೆ ಎಂದು ನೌಕಾಪಡೆಯ ಅಧಿಕಾರಿಗಳು ತಿಳಿಸಿದರು.

‘ಭಾರತೀಯ ನೌಕಾಪಡೆಯ ಯುದ್ಧನೌಕೆಯು ಮಾರ್ಚ್ 15ರಂದು ಕಡಲ್ಗಳ್ಳರಿದ್ದ ಹಡಗನ್ನು ತಡೆದಿದೆ. ಈ ವೇಳೆ ಅದರಲ್ಲಿದ್ದ ಕಡಲ್ಗಳ್ಳರು ಯುದ್ಧನೌಕೆಯತ್ತ ಗುಂಡು ಹಾರಿಸಿದ್ದಾರೆ. ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಸ್ವರಕ್ಷಣೆಗಾಗಿ ನೌಕಾಪಡೆಯ ಯೋಧರು ಕಾರ್ಯಾಚರಣೆ ನಡೆಸಿದ್ದಾರೆ’ ಎಂದೂ ವಿವರಿಸಿದರು. ಸೊಮಾಲಿಯಾ ಸಾಗರ ಪ್ರದೇಶದಲ್ಲಿ ಸಂಚರಿಸುವ ಹಡಗುಗಳಿಗೆ ರಕ್ಷಣೆ ಒದಗಿಸಲು ಭಾರತೀಯ ನೌಕಾಪಡೆಯು ಬದ್ಧವಾಗಿದೆ ಎಂದರು.

ಕಳೆದ ಕೆಲವು ವಾರಗಳಿಂದ ಸೊಮಾಲಿಯಾ ಸಾಗರ ಪ್ರದೇಶದಲ್ಲಿ ಸಂಚರಿಸಿದ್ದ ಹಲವು ಹಡಗುಗಳಿಗೆ ನೌಕಾಪಡೆಯು ಕಡಲ್ಗಳ್ಳರಿಂದ ರಕ್ಷಣೆ ನೀಡಿದೆ ಎಂದೂ ತಿಳಿಸಿದರು.

ಮಹಾರಾಷ್ಟ್ರದ ಮುಂಬೈನಲ್ಲಿ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಭಾರತ್ ಜೋಡೊ ನ್ಯಾಯಯಾತ್ರೆಯ ರೋಡ್ ಶೋನಲ್ಲಿ ಭಾಗವಹಿಸಿದರು –ಎಎಫ್‌ಪಿ ಚಿತ್ರ

‘ಜಾತಿಗಣತಿ ದೇಶದ ಎಕ್ಸ್‌ರೇ’

ಪ್ರಜಾವಾಣಿ ವಾರ್ತೆ

ಮುಂಬೈ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಕೈಗೊಂಡಿರುವ 6,700 ಕಿ.ಮೀ ವ್ಯಾಪ್ತಿಯ 66 ದಿನಗಳ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯು ಶನಿವಾರ ಸಂಜೆ ಧಾರಾವಿಯಲ್ಲಿ ಸಮಾಪ್ತಿಗೊಂಡಿತು. ಇದಕ್ಕೂ ಮುನ್ನ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತೆರೆದ ಕಾರಿನಲ್ಲಿ ಮುಂಬೈನ ಪ್ರತಿ ರಸ್ತೆಗಳಲ್ಲಿ ಸಂಚರಿಸಿದರು.

ಆ ಬಳಿಕ ಧಾರಾವಿಯಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ರಾಹುಲ್, ‘ಧಾರಾವಿಯು ನಿಜವಾದ ಮೇಕ್ ಇನ್ ಇಂಡಿಯಾ ಆಗಿದೆ. ಭಾರತದ ಎಕ್ಸ್‌ರೇ ಮತ್ತು ಎಂಆರ್‌ಐ ಆಗಿರುವ ಜಾತಿಗಣತಿಯನ್ನು ನಡೆಸುವುದಾಗಿ ನಾವು ಭರವಸೆ ನೀಡಿದ್ದೇವೆ’ ಎಂದು ಹೇಳಿದರು. ಆಗ ಕಾರ್ಯಕ್ರಮದಲ್ಲಿ ನೆರೆದಿದ್ದ ಜನರ ಚಪ್ಪಾಳೆ ಹೊಡೆದರು.

‘ಪ್ರತಿಭಟನೆ ನೆಪದಲ್ಲಿ ಅರಾಜಕತೆ ಸೃಷ್ಟಿ ಯತ್ನ’

ನಾಗ್ಪುರ (ಪಿಟಿಐ): ಲೋಕಸಭಾ ಚುನಾವಣೆಗೂ ಮುನ್ನ ರೈತರ ಚಳವಳಿ ಹೆಸರಿನಲ್ಲಿ ಅರಾಜಕತೆಯನ್ನು ಸೃಷ್ಟಿಸುವ ಪ್ರಯತ್ನಗಳು ಪುನರಾರಂಭವಾಗಿದ್ದು, ಪಂಜಾಬಿನಲ್ಲಿ ‘ಪ್ರತ್ಯೇಕತಾವಾದಿ ಭಯೋತ್ಪಾದನೆ’ಯು ತನ್ನ ಕೊಳಕು ತಲೆಯನ್ನು ಎತ್ತಿದೆ ಎಂದು ಆರ್‌ಎಸ್‌ಎಸ್ ಆರೋಪಿಸಿದೆ.

ದತ್ತಾತ್ರೇಯ ಹೊಸಬಾಳೆ

ನಾಗ್ಪುರದಲ್ಲಿ ಶುಕ್ರವಾರದಿಂದ ಆರಂಭವಾಗಿರುವ ‘ಅಖಿಲ ಭಾರತೀಯ ಪ್ರತಿನಿಧಿ ಸಭಾ’ ಸಮಾವೇಶದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಮಂಡಿಸಿದ 2023–24ರ ವಾರ್ಷಿಕ ವರದಿಯಲ್ಲಿ ಈ ಕುರಿತು ಪ್ರಸ್ತಾಪಿಸಲಾಗಿದೆ.

ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ನೂರಾರು ಮಹಿಳೆಯರ ಮೇಲಿನ ದೌರ್ಜನ್ಯವು ಸಮಾಜದ ಆತ್ಮಸಾಕ್ಷಿಯನ್ನು ಅಲುಗಾಡಿಸಿದೆ ಎಂದಿರುವ ಸಂಘ, ಮಣಿಪುರದಲ್ಲಿ ನಡೆದ ಜನಾಂಗೀಯ ಸಂಘರ್ಷದ ಕುರಿತು ಕಳವಳ ವ್ಯಕ್ತಪಡಿಸಿದೆ. ಹರಿಯಾಣದ ನೂಹ್ ಜಿಲ್ಲೆಯಲ್ಲಿ ವಿಎಚ್‌ಪಿ ಯಾತ್ರೆಯ ಮೇಲೆ ಮುಸ್ಲಿಂ ಸಮುದಾಯದ ಕೆಲವರು ದಾಳಿ ನಡೆಸಿ, ಹಿಂಸಾಚಾರವನ್ನು ಪ್ರಚೋದಿಸಿದ್ದರು ಎಂದು ತಿಳಿಸಿದೆ.

ದೇಶದ ವಿವಿಧೆಡೆ ನಡೆದ ಘಟನೆಗಳು ಮತ್ತು ಬೆಳವಣಿಗೆಗಳ ಕುರಿತು ವರದಿಯಲ್ಲಿ ‘ರಾಷ್ಟ್ರೀಯ ಚಿತ್ರಣ’ ಶೀರ್ಷಿಕೆಯಡಿ ಉಲ್ಲೇಖಿಸಲಾಗಿದೆ. ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಹೊಸದಾಗಿ ನಿರ್ಮಿಸಲಾದ ಭವ್ಯ ದೇವಾಲಯದಲ್ಲಿ ಶ್ರೀರಾಮ ಮೂರ್ತಿ ಪ್ರತಿಷ್ಠಾಪನಾ ಕಾರ್ಯ 2024ರಲ್ಲಿ ನಡೆದಿದ್ದು, ಅದು ‘ಸುವರ್ಣ ವರ್ಷ’ ಎಂದು ಶಾಶ್ವತವಾಗಿ ನೆನಪಿನಲ್ಲಿ ಉಳಿಯುತ್ತದೆ ಎಂದಿದೆ.

‘ದೇಶದ ಎಲ್ಲ ಅನಾಹುತಗಳಿಗೆ ಸನಾತನ ಧರ್ಮ ಕಾರಣ ಎಂದು ಹೇಳುವುದು, ದಕ್ಷಿಣ ಭಾರತವನ್ನು ಪ್ರತ್ಯೇಕಿಸುವ ಮಾತುಗಳನ್ನಾಡುವುದು, ಜಾತಿ ಗಣತಿಯಂತ ಸೂಕ್ಷ್ಮ ವಿಷಯದಲ್ಲಿ ರಾಜಕೀಯ ಆಟವಾಡುವುದು– ಇವೆಲ್ಲವೂ ದೇಶದ ಏಕತೆಗೆ ಧಕ್ಕೆ ತರುವ ಪ್ರಯತ್ನಗಳಾಗಿವೆ’ ಎಂದು ವರದಿಯಲ್ಲಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಸಮನ್ಸ್ ನಿರ್ಲಕ್ಷ್ಯ ದೂರು: ಕೇಜ್ರಿವಾಲ್‌ಗೆ ಜಾಮೀನು

ನವದೆಹಲಿ (ಪಿಟಿಐ): ಅಬಕಾರಿ ಹಗರಣ ಕುರಿತ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿದ್ದ ಸಮನ್ಸ್‌ಗಳಿಗೆ ಸ್ಪಂದಿಸದ ಬಗ್ಗೆ ಜಾರಿ ನಿರ್ದೇಶನಾಲಯವು (ಇ.ಡಿ) ದಾಖಲಿಸಿದ್ದ ಎರಡು ಪ್ರಕರಣಗಳಿಗೆ ಸಂಬಂಧಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ದೆಹಲಿ ಕೋರ್ಟ್ ಶನಿವಾರ ಜಾಮೀನು ನೀಡಿದೆ.

ಅಲ್ಲದೆ, ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ದಿವ್ಯಾ ಮಲ್ಹೋತ್ರಾ ಅವರು ಕಲಾಪ ಕೊಠಡಿಯಿಂದ ನಿರ್ಗಮಿಸಬಹುದು ಎಂದು ಕೇಜ್ರಿವಾಲ್ ಅವರಿಗೆ ಅನುಮತಿ ನೀಡಿದರು.

‘ಆರೋಪ ಜಾಮೀನು ಸಹಿತ ಪ್ರಕರಣವಾಗಿದೆ. ಆರೋಪಿಯು ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ’ ಎಂದು ನ್ಯಾಯಾಧೀಶರು ಹೇಳಿದರು.

ಅಖೂಂದ್‌ಜಿ ಮಸೀದಿಯಲ್ಲಿ ಪ್ರಾರ್ಥನೆಗೆ ನಿರಾಕರಣೆ

ನವದೆಹಲಿ (ಪಿಟಿಐ): ಇತ್ತೀಚೆಗೆ ಕೆಡವಲಾಗಿದ್ದ ಮೆಹ್ರೌಲಿಯ ಅಖೂಂದ್‌ಜಿ ಮಸೀದಿಯಲ್ಲಿ ಪವಿತ್ರ ರಂಜಾನ್ ತಿಂಗಳ ಪ್ರಾರ್ಥನೆ ಸಲ್ಲಿಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾ ಮಾಡಿದೆ.

ಮುಂತಾಜ್ಮಿಯಾ ಕಮಿಟಿ ಮದರಸಾ ಬೆಹ್ರುಲ್ ಉಲುಮ್ ಆ್ಯಂಡ್ ಕಬರಸ್ತಾನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ದತ್ತಾ ಅವರು ವಜಾ ಮಾಡಿದ್ದು, ‘ಶಬ್–ಎ– ಬರಾತ್ ಸಂದರ್ಭದಲ್ಲಿಯೂ ಈ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಲು ಭಕ್ತರಿಗೆ ಕಳೆದ ತಿಂಗಳು ಈ ನ್ಯಾಯಾಲಯವು ಅವಕಾಶ ನೀಡಿರಲಿಲ್ಲ. ಅದೇ ರೀತಿ, ಈ ಮನವಿಗೆ ಸಂಬಂಧಿಸಿದಂತೆ ಬೇರೆ ದೃಷ್ಟಿಕೋನದಲ್ಲಿ ಯೋಚಿಸಿ ನಿರ್ಧರಿಸಲು ಯಾವ ಸಮರ್ಥನೆಯೂ ಕಾಣುತ್ತಿಲ್ಲ’ ಎಂದು ಹೇಳಿದರು.

ಉಗ್ರ, ಪ್ರತ್ಯೇಕತಾ ಸಂಘಟನೆಗಳ ನಿಷೇಧ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೀಪಲ್ಸ್ ಫ್ರೀಡಂ ಲೀಗ್ ಹಾಗೂ ಪ್ರತ್ಯೇಕತಾವಾದಿ ಸಂಘಟನೆಯಾದ ಹುರಿಯತ್ ಕಾನ್ಫರೆನ್ಸ್‌ನೊಂದಿಗೆ ನಂಟು ಹೊಂದಿದ್ದ ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಲೀಗ್‌ನ ಎಲ್ಲ ಬಣಗಳನ್ನು ಭಯೋತ್ಪಾದನಾ ನಿಗ್ರಹ ಕಾನೂನಿನ ಅಡಿಯಲ್ಲಿ ಕೇಂದ್ರ ಸರ್ಕಾರ ಶನಿವಾರ ನಿಷೇಧಿಸಿದೆ.

ಇದರ ಜೊತೆಗೆ ಬಂಧಿತ ಉಗ್ರ ಯಾಸಿನ್ ಮಲಿಕ್ ನೇತೃತ್ವದ ಜಮ್ಮು ಕಾಶ್ಮೀರ ಲಿಬರೇಷನ್ ಫ್ರಂಟ್‌ನ (ಜೆಕೆಎಲ್‌ಎಫ್) ನಿಷೇಧದ ಅವಧಿಯನ್ನು ಇನ್ನೂ ಐದು ವರ್ಷದವರೆಗೆ ವಿಸ್ತರಿಸಲಾಗಿದೆ.

ಲೋಕಸಭಾ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗುವ ಕೆಲವು ಗಂಟೆಗಳ ಮುನ್ನವಷ್ಟೇ ಕೇಂದ್ರ ಸರ್ಕಾರ ಈ ಘೋಷಣೆ ಮಾಡಿದೆ. ಉಗ್ರ, ಪ್ರತ್ಯೇಕತಾ ಸಂಘಟನೆಗಳ ನಿಷೇಧದ ಕುರಿತು ಮಾಹಿತಿ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ‘ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಸಂಘಟನೆಗಳು ಮತ್ತು ಜನರನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಉಳಿಸುವುದಿಲ್ಲ’ ಎಂದು ಹೇಳಿದ್ದಾರೆ.

ಮಹಿಳಾ ಪೊಲೀಸ್ ಮೇಲೆ ಕಾನ್‌ಸ್ಟೆಬಲ್‌ನಿಂದ ಅತ್ಯಾಚಾರ

ಜಲೌನ್ (ಪಿಟಿಐ): ಉತ್ತರ ಪ್ರದೇಶದಲ್ಲಿ ಮಹಿಳಾ ಪೊಲೀಸ್ ಪೇದೆಯ ಮೇಲೆ ಅವರ ಸಹೋದ್ಯೋಗಿಯೇ ಅತ್ಯಾಚಾರ ಮಾಡಿದ್ದಾನೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

‘ಪೇದೆ ಕರಮ್‌ವೀರ್ ಸಿಂಗ್ ತನ್ನೊಂದಿಗೆ ಅನುಚಿತವಾಗಿ ವರ್ತಿಸಿದ್ದಾನೆ ಮತ್ತು ತನ್ನ ಮೇಲೆ ಅತ್ಯಾಚಾರವೆಸಗಿದ್ದಾನೆ ಎಂದು ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್ ಶುಕ್ರವಾರ ನೀಡಿದ ದೂರಿನ ತನಿಖೆಗಾಗಿ ಒಂದು ಸಮಿತಿಯನ್ನು ರಚಿಸಿದ್ದೆವು. ಸಮಿತಿ ನೀಡಿದ ವರದಿ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿ ಕಾನ್‌ಸ್ಟೆಬಲ್‌ನನ್ನು ಬಂಧಿಸಲಾಗಿದೆ’ ಎಂದು ಜಿಲ್ಲಾ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿ ಡಾ.ಅಸೀಮ್ ಚೌಧರಿ ಹೇಳಿದ್ದಾರೆ.

ಸಂದೇಶ್‌ಖಾಲಿ: ಸಿಬಿಐನಿಂದ ಮತ್ತೆ ಮೂವರ ಬಂಧನ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್ ಖಾಲಿಯಲ್ಲಿ ಜನವರಿ 5ರಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಮೇಲೆ ನಡೆದಿದ್ದ ದಾಳಿಯಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಟಿಎಂಸಿ ಮುಖಂಡ ಶಾಜಹಾನ್ ಶೇಖ್ ಸಹೋದರ ಸೇರಿದಂತೆ ಮೂವರನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ಶನಿವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಬಿಐ ವಿಚಾರಣೆ ನಡೆಸುವ ವೇಳೆ ಶಾಜಹಾನ್ ಶೇಖ್ ಸಹೋದರ ಶೇಖ್ ಅಲಂಗೀರ್, ಸಂದೇಶ್‌ಖಾಲಿಯ ಟಿಎಂಸಿ ವಿದ್ಯಾರ್ಥಿ ವಿಭಾಗದ ಅಧ್ಯಕ್ಷ ಮಫುಜರ್ ಮೊಲ್ಲಾ ಹಾಗೂ ಸ್ಥಳೀಯನಾದ ಸಿರಾಜುಲ್ ಮೊಲ್ಲಾ ಅವರನ್ನು ಬಂಧಿಸಿದ್ದು, ಭಾನುವಾರ ನ್ಯಾಯಾಲಯದಲ್ಲಿ ಹಾಜರುಪಡಿಸಲಿದೆ. ಇದರೊಂದಿಗೆ ಈ ಪ್ರಕರಣದಲ್ಲಿ ಸಿಬಿಐ ಬಂಧಿಸಿರುವವರ ಸಂಖ್ಯೆ 14ಕ್ಕೆ ಏರಿದೆ.

ಬಿಟ್‌ಕಾಯಿನ್: ಅಧಿಕಾರಿಗಳ ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ ಆರೋಪಿ

ಸುಳಿವು ನೀಡಿದರೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಅಕ್ರಮ ಪ್ರಕರಣದಲ್ಲಿ ಬಂಧಿಸಲು ತೆರಳಿದ್ದ ವಿಶೇಷ ತನಿಖಾ ದಳದ (ಎಸ್‌ಐಟಿ) ತನಿಖಾಧಿಕಾರಿಗಳ ಮೇಲೆ ಕಾರು ಹತ್ತಿಸಿ ಕೊಲೆಗೆ ಯತ್ನಿಸಿ, ಪರಾರಿಯಾಗಿರುವ ಡಿವೈಎಸ್‌ಪಿ ಶ್ರೀಧರ್ ಕೆ. ಪೂಜಾರ್ (47) ಅವರ ಸುಳಿವು ನೀಡಿದವರಿಗೆ ಬಹುಮಾನ ನೀಡಲಾಗುವುದು ಎಂದು ಸಿಐಡಿ ಪ್ರಕಟಣೆ ಹೊರಡಿಸಿದೆ.

ಶ್ರೀಧರ್

ಬಿಟ್‌ಕಾಯಿನ್ ಅಕ್ರಮ ಸಂಬಂಧ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಶ್ರೀಧರ್ ಸಹ ಪ್ರಮುಖ ಆರೋಪಿ.

ಶ್ರೀಧರ್ ತಲೆಮರೆಸಿಕೊಂಡಿದ್ದು, 1ನೇ ಎಸಿಎಂಎಂ ನ್ಯಾಯಾಲಯದಲ್ಲಿ ಕಲಂ. 82ರ ಅಡಿಯಲ್ಲಿ ಘೋಷಿತ ಅಪರಾಧಿ ಎಂದು ಉದ್ಘೋಷಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಅವರ ಮಾಹಿತಿ ನೀಡಿದಲ್ಲಿ ಅಥವಾ ಅವರನ್ನು ಹಿಡಿದು ಕೊಟ್ಟಲ್ಲಿ ಬಹುಮಾನ ನೀಡಲಾಗುವುದು. ಮಾಹಿತಿ ನೀಡಿದವರ ಹೆಸರನ್ನು ಗೋಪ್ಯವಾಗಿ ಇಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿವೈಎಸ್‌ಪಿ, ಫೈನಾನ್ಷಿಯಲ್ ಇಂಟೆಲಿಜೆನ್ಸ್ ವಿಭಾಗ, ಸಿಐಡಿ, ಬೆಂಗಳೂರು, ದೂರವಾಣಿ: 080 22094485, 22094498 (ಸಿಐಡಿ ಕಂಟ್ರೋಲ್ ರೂಂ), ಮೊಬೈಲ್: 9480800181,ತನಿಖಾಧಿಕಾರಿಗಳು: 94481 49915 ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

ಆಂತರಿಕ ಭದ್ರತಾ ವಿಭಾಗದ ಡಿವೈಎಸ್‌ಪಿಯಾಗಿದ್ದ ಶ್ರೀಧರ್ ಅವರನ್ನು ಬಂಧಿಸಲು ಫೆ. 27ರಂದು ಎಸ್‌ಐಟಿಯ ಇಬ್ಬರು ಅಧಿಕಾರಿಗಳು ತೆರಳಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜು ಬಳಿಯ ಮೆಟ್ರೊ ನಿಲ್ದಾಣದ ಬಳಿ ವಕೀಲರ ಜೊತೆಗೆ ಕಾರಿನಲ್ಲಿದ್ದ ಶ್ರೀಧರ್ ಅವರು ತನಿಖಾಧಿಕಾರಿಗಳನ್ನು ಕಂಡತಕ್ಷಣ ತಪ್ಪಿಸಿಕೊಂಡು ಪರಾರಿಯಾಗಲು ಮುಂದಾದರು. ಅವರನ್ನು ಹಿಡಿಯಲು ತನಿಖಾಧಿಕಾರಿಗಳು ಬೆನ್ನಟ್ಟಿದರು. ಕಾಫಿ ಬೋರ್ಡ್ ಸಿಗ್ನಲ್ ಬಳಿ ಶ್ರೀಧರ್ ಅವರನ್ನು ಹಿಡಿಯಲು ಮುಂದಾದಾಗ ಎಸ್‌ಐಟಿ ಅಧಿಕಾರಿಗಳ ಮೇಲೆ ಕಾರು ಹತ್ತಿಸಿ ಪರಾರಿಯಾಗಿದ್ದರು. ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಘಟನೆಯಲ್ಲಿ ಎಎಸ್‌ಐ ಭಾಸ್ಕರ್ ಗಂಭೀರವಾಗಿ ಗಾಯಗೊಂಡಿದ್ದರು.

ಕೆಎಸ್‌ಆರ್‌ಟಿಸಿ: ₹ 84 ಕೋಟಿ ಪಾವತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸಿಬ್ಬಂದಿಯ ತುಟ್ಟಿಭತ್ಯೆ ಹಿಂಬಾಕಿ, ಗಳಿಕೆ ರಜೆ ನಗದೀಕರಣ ಹಾಗೂ ಉಪಧನದ ಬಾಕಿ ಮೊತ್ತ ಒಟ್ಟು ₹84 ಕೋಟಿ ಪಾವತಿಸಲು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಆದೇಶಿಸಿದ್ದಾರೆ.

2022-23ನೇ ಸಾಲಿನಲ್ಲಿ ಗಳಿಕೆ ರಜೆ ನಗದೀಕರಣದ ಮೊತ್ತ ₹24 ಕೋಟಿ, 2022ರ ಜುಲೈಯಿಂದ ನವೆಂಬರ್‌ವರೆಗಿನ 5 ತಿಂಗಳು, 2023ರ ಜನವರಿಯಿಂದ ಜುಲೈವರೆಗಿನ 7 ತಿಂಗಳು ಮತ್ತು ಜುಲೈಯಿಂದ ಅಕ್ಟೋಬರ್‌ವರೆಗೆ 4 ತಿಂಗಳ ಹಿಂಬಾಕಿ ತುಟ್ಟಿಭತ್ಯೆ ಮೊತ್ತ ₹54 ಕೋಟಿಯನ್ನು ಪಾವತಿಸಲು ಆದೇಶಿಸಲಾಗಿದೆ. ಈ ಅವಧಿಯಲ್ಲಿ ನಿವೃತ್ತರಾದವರಿಗೂ ಈ ಸೌಲಭ್ಯ ದೊರೆಯಲಿದೆ.

2024ರ ಜನವರಿಯಲ್ಲಿ ಸಂಸ್ಥೆಯ ಸೇವೆಯಿಂದ ನಿವೃತ್ತರಾದ ಸಿಬ್ಬಂದಿಯ ಉಪಧನ ₹6 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಲು ಆದೇಶಿಸಿದ್ದಾರೆ.

ಸಿಎಎಗೆ ತಡೆ ಕೋರಿ ಒವೈಸಿ ಅರ್ಜಿ

ನವದೆಹಲಿ (ಪಿಟಿಐ): ಪೌರತ್ವ (ತಿದ್ದುಪಡಿ) ಕಾಯ್ದೆಯ (ಸಿಎಎ) ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಲೇವಾರಿ ಮಾಡುವವರೆಗೂ, ಪೌರತ್ವ ತಿದ್ದುಪಡಿ ನಿಯಮಗಳನ್ನು ಜಾರಿಗೊಳಿಸುವುದಕ್ಕೆ ತಡೆ ನೀಡಬೇಕು ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಗಳ ವಿಚಾರಣೆ ಬಾಕಿ ಇರುವಂತೆ ಭಾರತದ ಪೌರತ್ವ ಕೋರಿ ಸಲ್ಲಿಕೆ ಆಗುವ ಅರ್ಜಿಗಳನ್ನು ಪೌರತ್ವ ಕಾಯ್ದೆ– 1955ರ ಸೆಕ್ಷನ್ 6ಬಿ ಅನ್ವಯ ಪರಿಗಣಿಸದಂತೆ ಪ್ರತಿವಾದಿಗಳಿಗೆ (ಕೇಂದ್ರ ಸರ್ಕಾರ) ನಿರ್ದೇಶನ ನೀಡುವಂತೆಯೂ ಮನವಿ ಮಾಡಿದ್ದಾರೆ.

ಸಿಎಎಯು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜೊತೆ ಸಂಬಂಧ ಹೊಂದಿದೆ. ಅಸ್ಸಾಂನಲ್ಲಿ ಈಗಾಗಲೇ ಎನ್‌ಆರ್‌ಸಿ ಪ್ರಕ್ರಿಯೆ ಮುಕ್ತಾಯವಾಗಿದೆ. ದೇಶದ ಎಲ್ಲೆಡೆ ಈ ಪ್ರಕ್ರಿಯೆ ಆರಂಭಿಸುವಂತೆ ಹೇಳಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರವೇ ಸಿಎಎಅನ್ನು 4 ವರ್ಷ ಜಾರಿಗೊಳಿಸಿರಲಿಲ್ಲ. ಹೀಗಾಗಿ ಈಗ ತಡೆ ನೀಡುವುದರಿಂದ ಪ್ರತಿವಾದಿಗಳ ವಿಷಯದಲ್ಲಿ ಪೂರ್ವಗ್ರಹ ಪೀಡಿತರಾಗಿ ಕ್ರಮ ಕೈಗೊಂಡಂತೆಯೂ ಆಗುವುದಿಲ್ಲ ಎಂದೂ ಹೇಳಲಾಗಿದೆ.

ಸಿಎಎಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಲೇವಾರಿ ಆಗುವವರೆಗೆ ಪೌರತ್ವ ತಿದ್ದುಪಡಿ ನಿಯಮಗಳು– 2024ನ್ನು ಜಾರಿಗೊಳಿಸದಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮಾ.19ರಂದು ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಶಿವಸೇನಾ ನಾಯಕನ ಆಸ್ತಿ ಜಪ್ತಿ

ನವದೆಹಲಿ (ಮುಂಬೈ): ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ವಲಸಿಗರಿಗೆ ‘ಕಿಚಡಿ’ ವಿತರಣೆ ಕಾರ್ಯಕ್ರಮದಲ್ಲಿ ನಡೆಸಲಾಗಿದೆ ಎಂಬ ಅಕ್ರಮ ಹಾಗೂ ಅದಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ ಶಿವಸೇನಾ (ಉದ್ಧವ್ ಬಣ) ಪದಾಧಿಕಾರಿ ಸೂರಜ್ ಚೌಹಾಣ್‌ಗೆ ಸೇರಿದ್ದ ₹88.51 ಲಕ್ಷ ಮೌಲ್ಯದ ಸ್ಥಿರಾಸ್ಥಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

ಪ್ರಶಸ್ತಿ ಪ್ರದಾನ

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಗುಣವಂತೆಯಲ್ಲಿ ಶನಿವಾರ ನಡೆದ ‘ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ’ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶತಾವಧಾನಿ ಆರ್.ಗಣೇಶ ಅವರಿಗೆ ‘ಕೆರೆಮನೆ ಶಿವರಾಮ ಹೆಗಡೆ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಕೆರೆಮನೆ ಶ್ರೀಧರ ಹೆಗಡೆ, ಕೆರೆಮನೆ ಶಿವಾನಂದ ಹೆಗಡೆ, ಪ್ರಮೋದ ಹೆಗಡೆ ಯಲ್ಲಾಪುರ, ಕೇರಳ ಪೋಕ್ ಸಂಸ್ಥೆಯ ಅಧ್ಯಕ್ಷ ಜಯರಾಜನ್, ಲಕ್ಷ್ಮಿನಾರಾಯಣ ಕಾಶಿ, ಪ್ರಭಾಕರ ಜೋಶಿ, ನಾರಾಯಣ ಯಾಜಿ, ದಿವಾಕರ ಹೆಗಡೆ ಕೆರೆಹೊಂಡ ಪಾಲ್ಗೊಂಡಿದ್ದರು

ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ತಂದೆಯನ್ನು ಗೃಹ ಬಂಧನದಲ್ಲಿಟ್ಟ ಪುತ್ರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತಂದೆಯ ಆರೋಗ್ಯಕ್ಕೆ ತೊಂದರೆ ನೀಡುತ್ತಿರುವ ಪುತ್ರಿ: ದೂರು
- ಸಹಿ ನಕಲು ಮಾಡಿ ಷೇರುಗಳ ವರ್ಗಾವಣೆ ಆರೋಪ
- ಪುತ್ರನಿಂದ ದೂರು ದಾಖಲು

ಬೆಂಗಳೂರು: ಆಸ್ತಿಗಾಗಿ ತಂದೆಯನ್ನು ಅಕ್ರಮ ಬಂಧನಲ್ಲಿಟ್ಟು ಹಿಂಸೆ ನೀಡಿದ ಪುತ್ರಿ ಸೇರಿದಂತೆ ನಾಲ್ವರ ವಿರುದ್ಧ ಇಲ್ಲಿನ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಉದ್ಯಮಿ ವೆಂಕಟಪ್ಪ ಲಕ್ಷ್ಮಿನಾರಾಯಣ್ ಅವರನ್ನು ಗೃಹ ಬಂಧನಲ್ಲಿಟ್ಟಿರುವ ಅವರ ಪುತ್ರಿ ತೇಜವತಿ ಲಕ್ಷ್ಮಿನಾರಾಯಣ ಹಾಗೂ ಪ್ರೇಮಾ ಜವರೇಗೌಡ, ಕಂಪನಿ ಮುಖ್ಯ ಲೆಕ್ಕಾಧಿಕಾರಿ ಚೌಡರೆಡ್ಡಿ, ಲೆಕ್ಕಪರಿಶೋಧಕ ಆರ್.ಮೋಹನ್ ವಿರುದ್ಧ ಪ್ರಕರಣ ದಾಖಲಾಗಿದೆ.

ವೆಂಕಟಪ್ಪ ಅವರ ಪುತ್ರ ವಿ.ಎಲ್. ಭರತ್‌ರಾಜ್ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘1995ರಲ್ಲಿ ನಮ್ಮ ತಂದೆ ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಾರಿಮನ್ ಶೆಲ್ಟರ್ ಕಂಪನಿ ಸ್ಥಾಪಿಸಿದ್ದರು. ಅದೇ ಕಂಪನಿಯಲ್ಲಿ ತಂದೆ ಶೇ 99.99ರಷ್ಟು ಷೇರು ಹೊಂದಿದ್ದಾರೆ. ಅದಾದ ಮೇಲೆ 2017ರಲ್ಲಿ ನಾರಿಮನ್ ಎಂಬ ಇನ್ನೊಂದು ಕಂಪನಿ ಸ್ಥಾಪಿಸಿದ್ದರು. ಎರಡು ಕಂಪನಿಗೆ ಅವರೇ ಮುಖ್ಯಸ್ಥರಾಗಿದ್ದರು. ಈ ಮಧ್ಯೆ ತಂದೆ ಹಾಗೂ ತಾಯಿ ವಿಜಯಲಕ್ಷ್ಮಿ ಅವರ ನಡುವೆ ಆಸ್ತಿ ವಿಚಾರಕ್ಕೆ ವಿವಾದ ಉಂಟಾಗಿತ್ತು. ಪ್ರಕರಣ ನ್ಯಾಯಾಲಯದಲ್ಲಿದೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ತಂದೆಗೆ ಆರೋಗ್ಯ ಹದಗೆಟ್ಟ ಕಾರಣಕ್ಕೆ ಕಂಪನಿಗಳ ನಿರ್ವಹಣೆ ಸಾಧ್ಯವಾಗಿರಲಿಲ್ಲ. ಇದನ್ನೇ ನೆಪ ಮಾಡಿಕೊಂಡ ಆರೋಪಿಗಳು, ಕಾನೂನು ಬಾಹಿರವಾಗಿ ಕಂಪನಿಯ ಸ್ವತ್ತನ್ನು ಸ್ವಂತ ಲಾಭಕ್ಕಾಗಿ ಮಾರಾಟ ಮಾಡಿದ್ದರು. ಕಂಪನಿಯ ರಕ್ಷಣೆ ಮಾಡುವಂತೆ ತಂದೆಯವರು, ನನ್ನನ್ನು ನಾರಿಮನ್ ಶೆಲ್ಟರ್ ಕಂಪನಿಗೆ ವ್ಯವಸ್ಥಾಪಕ ನಿರ್ದೇಶಕ ಹಾಗೂ ನಾರಿಮನ್ ಕಂಪನಿಗೆ ನಿರ್ದೇಶಕನಾಗಿ ನೇಮಿಸಿದ್ದರು. ಕಂಪನಿ ಹಣಕಾಸು ವ್ಯವಹಾರ ಪರಿಶೀಲನೆ ವೇಳೆ ಚೌಡರೆಡ್ಡಿ ಹಾಗೂ ಮೋಹನ್ ಅವರು ಸುಳ್ಳು ಲೆಕ್ಕ ತೋರಿಸಿ, ₹10 ಕೋಟಿಯಿಂದ ₹15 ಕೋಟಿ ವಂಚಿಸಿರುವುದು ಪತ್ತೆಯಾಗಿತ್ತು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ವೃತ್ತಿಯಲ್ಲಿ ವೈದ್ಯೆಯಾಗಿರುವ ಸಹೋದರಿ ಅವರು ತಂದೆಯನ್ನು ಬಲವಂತವಾಗಿ ಮನೆಗೆ ಕರೆದೊಯ್ದು ಬಂಧನದಲ್ಲಿ ಇಟ್ಟಿದ್ದಾರೆ. ಫೆ.14ರಂದು ನಡೆದ ಕಂಪನಿ ಆಡಳಿತ ಮಂಡಳಿ ಸಭೆಯಲ್ಲಿ ನಿರ್ದೇಶಕ ಹುದ್ದೆಯಿಂದ ನನ್ನನ್ನು ತೆಗೆದು ಹಾಕಿದ್ದಾರೆ. ನಂತರ, ತಂದೆಯ ಸಹಿಯನ್ನು ನಕಲು ಮಾಡಿ ಷೇರುಗಳನ್ನು ತೇಜವತಿ ಹಾಗೂ ಪ್ರೇಮಾ ಅವರ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ. ತಂದೆಯನ್ನು ಭೇಟಿಯಾಗಲೂ ನನಗೆ ಅವಕಾಶ ನೀಡುತ್ತಿಲ್ಲ. ತಂದೆಗೆ ಬೇರೆ ಯಾವುದೊ ಔಷಧ ನೀಡಿ ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ತೊಂದರೆ ನೀಡುತ್ತಿದ್ದಾರೆ’ ಎಂದು ದೂರಿನಲ್ಲಿ ಹೇಳಿದ್ದಾರೆ.

‘ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದ್ದಾರೆ.

₹24,000 ಲಂಚ ಪಡೆದಿದ್ದ ಪ್ರಕರಣ

ನಿವೃತ್ತ ಅಧಿಕಾರಿಗೆ 3 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಂಪರ್ಕವೊಂದಕ್ಕೆ ಅನುಮತಿ ನೀಡಲು ₹24,000 ಲಂಚ ಪಡೆದಿದ್ದ ಪ್ರಕರಣದಲ್ಲಿ ನಿವೃತ್ತ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕ ಕೆ.ವಿ.ಸದಾನಂದ ಅವರಿಗೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ (ಲೋಕಾಯುಕ್ತ) ವಿಶೇಷ ನ್ಯಾಯಾಲಯ, ಮೂರು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹1.5 ಲಕ್ಷ ದಂಡ ವಿಧಿಸಿದೆ.

ಸ್ಕಂದ ಎಂಟರ್‌ಪ್ರೈಸಸ್ ಎಂಬ ವಿದ್ಯುತ್ ಕಾಮಗಾರಿಗಳ ಗುತ್ತಿಗೆದಾರ ಕಂಪನಿಯ ಆರ್.ಬಿ. ದಯಾನಂದ ಅವರು ಕೋನೇನ ಅಗ್ರಹಾರದಲ್ಲಿ ಕಟ್ಟಡವೊಂದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಗುತ್ತಿಗೆ ಪಡೆದಿದ್ದರು. ಈ ಸಂಬಂಧ ಅನುಮತಿ ಕೋರಿ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿಗೆ 2016ರ ಸೆಪ್ಟೆಂಬರ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಅನುಮತಿ ನೀಡಲು ₹25,000 ಲಂಚ ನೀಡುವಂತೆ ಸದಾನಂದ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಅರ್ಜಿದಾರರು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಎಸಿಬಿ ಅಧಿಕಾರಿಗಳು, 2016ರ ಸೆಪ್ಟೆಂಬರ್ 30ರಂದು ₹24,000 ಲಂಚ ಪಡೆಯುತ್ತಿದ್ದಾಗ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರನ್ನು ಬಂಧಿಸಿದ್ದರು. ಪ್ರಕರಣದ ತನಿಖೆ ಪೂರ್ಣಗೊಳಿಸಿದ್ದ ಎಸಿಬಿ ಪೊಲೀಸರು, ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಎಂಟು ಸಾಕ್ಷಿಗಳ ವಿಚಾರಣೆ ನಡೆಸಿ, 48 ದಾಖಲೆಗಳನ್ನು ಪರಿಶೀಲಿಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎಂ. ರಾಧಾಕೃಷ್ಣ ಅವರು, ಮಂಗಳವಾರ (ಮಾರ್ಚ್ 12) ತೀರ್ಮಾನ ಪ್ರಕಟಿಸಿದ್ದಾರೆ. ‘ಲಂಚ ಪ್ರಕರಣದಲ್ಲಿ ಕೆ.ವಿ. ಸದಾನಂದ ಅಪರಾಧಿ’ ಎಂದು 41 ಪುಟಗಳ ಆದೇಶದಲ್ಲಿ ಘೋಷಿಸಿದ್ದಾರೆ.

ಅಪರಾಧಿಯು ದಂಡ ಪಾವತಿಗೆ ತಪ್ಪಿದಲ್ಲಿ ಹೆಚ್ಚುವರಿಯಾಗಿ ಎರಡು ತಿಂಗಳ ಜೈಲು ಶಿಕ್ಷೆ ನೀಡುವಂತೆ ಆದೇಶದಲ್ಲಿ ಹೇಳಲಾಗಿದೆ.

ನೂತನ ಅಧ್ಯಕ್ಷರಾಗಿ ಗೋವಿಂದ ರಾವ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾದೇಶಿಕ ಅಸಮತೋಲನ ನಿವಾರಣಾ ಆಯೋಗದ ಅಧ್ಯಕ್ಷರಾಗಿ ಆರ್ಥಿಕ ತಜ್ಞ ಪ್ರೊ. ಗೋವಿಂದ ರಾವ್ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಡಿ.ಎಂ. ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನ ನಿವಾರಣಾ ವರದಿ 22 ವರ್ಷಗಳಷ್ಟು ಹಳೆಯದು.

ಈ ಹಿನ್ನೆಲೆಯಲ್ಲಿ, ರಾಜ್ಯದ 233 ತಾಲ್ಲೂಕುಗಳಲ್ಲಿ ಪ್ರಸ್ತುತ ಲಭ್ಯವಿರುವ ಅಂಕಿ–ಅಂಶಗಳ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ಅಧ್ಯಯನ ಮಾಡಿ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವನ್ನು ಗುರುತಿಸಲು ಈ ಆಯೋಗವನ್ನು ಸರ್ಕಾರ ರಚಿನೆ ಮಾಡಿದೆ..

ರಂಗ ಭಾಷೆಯ ಹೊಸ ವಿನ್ಯಾಸ 11

ಕಿನ್ನಾಳ ಬೊಂಬೆಗಳು ಕಿಲ..ಕಿಲ...

ವಿಮಾನ ನಿಲ್ದಾಣದಲ್ಲೂ ಕಿನ್ನಾಳ ಕಲೆ

ರಾಜ್ಯದ ವಿವಿಧೆಡೆ ಸುಂದರ ಕಲಾಕೃತಿ ತಯಾರಿಸಿರುವ ಸಂತೋಷ್‌ಕುಮಾರ್ ಚಿತ್ರಗಾರ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನದ ಟರ್ಮಿನಲ್–2 ರಲ್ಲಿಯೂ ತಮ್ಮ ಕೈ ಚಳಕ ತೋರಿದ್ದಾರೆ.

ಅಲ್ಲಿ ಅವರು ತಯಾರಿಸಿದ 'ಸಿಂಫನಿ ಆಫ್ ಎಮೋಷನ್ಸ್' ಮತ್ತು 'ಟಾಯ್ಸ್' ಶೀರ್ಷಿಕೆಯ ಕಲಾಕೃತಿಗಳನ್ನು ಅಳವಡಿಸಲಾಗಿದೆ. 'ಕಿನ್ನಾಳ ಕಲೆ ಶ್ರೀಮಂತವಾಗಿದ್ದರೂ ಜನರಿಗೆ ಹೇಗೆ ತಲುಪಿಸಬೇಕು ಎನ್ನುವುದು ನಮ್ಮ ಸಮಾಜದ ಜನರಿಗೆ ಗೊತ್ತಿರಲಿಲ್ಲ. ಮನೆ ಬಾಗಿಲ ಬಳಿ ಬಂದ ಗ್ರಾಹಕರಿಂದ ಮಾತ್ರ ವ್ಯಾಪಾರವೆಂದುಕೊಂಡಿದ್ದ ಅವರಿಗೆಲ್ಲ ಸ್ಪರ್ಧಾತ್ಮಕ ಜಗತ್ತಿನ ಆಗುಹೋಗುಗಳು ಅರ್ಥವಾಗುತ್ತಿರಲಿಲ್ಲ. ಹೀಗಾಗಿ ಸಾಮಾಜಿಕ ಮಾಧ್ಯಮ ಮತ್ತು ಮಾರುಕಟ್ಟೆ ಬಳಸಿಕೊಂಡು ಊರಿನಿಂದಲೇ ಬೇಡಿಕೆ ಸೃಷ್ಟಿಸಿದ್ದೇನೆ. ಈಗ ಬೇಡಿಕೆಯಷ್ಟು ಕಲಾಕೃತಿ ನೀಡಲು ಹಗಲಿರುಳು ಕೆಲಸ ಮಾಡಬೇಕಾಗಿದೆ' ಎಂದು ಸಂತೋಷ್ ಖುಷಿಯಿಂದಲೇ ಹೇಳಿದರು.

ಮಾರುಕಟ್ಟೆ ಕೊರತೆಯಿಂದಾಗಿ ಸೊರಗಿದ್ದ ಕಿನ್ನಾಳ ಕಲೆಗೆ ಅದೇ ಗ್ರಾಮದ ಉತ್ಸಾಹಿ ಯುವ ಕಲಾವಿದ ಸಂತೋಷ್‌ಕುಮಾರ್ ಚೈತನ್ಯ ತುಂಬಿದ್ದಾರೆ. ಆನ್‌ಲೈನ್ ಬಳಸಿಕೊಂಡು ಸೃಷ್ಟಿಸಿದ ಮಾರುಕಟ್ಟೆಯಿಂದ ಕಲಾವಿದರಿಗೆ ಕೈ ತುಂಬಾ ಕೆಲಸ, ಆದಾಯ ಸಿಗುತ್ತಿದೆ.

ಪ್ರಮೋದ

ಮನೆಯ ಮುಂಭಾಗದ ವಿಶಾಲವಾದ ಅಂಗಳದಲ್ಲಿ ಬೊಂಬೆಗಳಿಗೆ ಅಂತಿಮ ರೂಪ ಕೊಡುತ್ತಿದ್ದ ಸೀತಮ್ಮ ಚಿತ್ರಗಾರ ಅವರಿಗೆ 79 ವರ್ಷ. ಅವರು ಮದುವೆಯಾಗಿ ಕೊಪ್ಪಳ ಸಮೀಪದ ಕಿನ್ನಾಳ ಗ್ರಾಮಕ್ಕೆ ಬಂದು ಐದೂವರೆ ದಶಕಗಳಾಗಿವೆ. ಗಂಡನ ಊರಿನ ಪ್ರಸಿದ್ಧ ಕಲೆಯನ್ನು ತಾವೂ ಕಲಿತು ಈಗ ಸೊಸೆ ಮಂಜುಳಾಗೂ ಕಲಿಸಿದ್ದಾರೆ. ಬದುಕಿನ ಇಳಿವಯಸ್ಸಿನಲ್ಲಿದ್ದರೂ ಅವರು ತಯಾರಿಸಿದ ಕಲಾಕೃತಿಗಳ ಸೌಂದರ್ಯಕ್ಕೆ ಮಾತ್ರ ವಯಸ್ಸಾಗಿಲ್ಲ.

ತಾಯಿ ಸೀತಮ್ಮಳೊಂದಿಗೆ ಕಿನ್ನಾಳ ಕಲಾಕೃತಿಗಳ ತಯಾರಿಕೆ ಕಲಿತಿರುವ ಮಗ ಮೈಲಾರಪ್ಪ ಚಿತ್ರಗಾರ ಅವರಿಗೆ ತಮ್ಮ ಕುಟುಂಬದ ಎಲ್ಲ ಸದಸ್ಯರು ತಮ್ಮೂರಿನ ಕಲೆಯನ್ನು ರೂಢಿಸಿಕೊಂಡಿದ್ದಾರೆ ಎನ್ನುವುದೇ ಹೆಮ್ಮೆ. ಅದೇ ಬಡಾವಣೆಯಲ್ಲಿರುವ 76 ವರ್ಷದ ಭಾಗ್ಯಮ್ಮ ಹಾಗೂ 63 ವರ್ಷದ ಲಕ್ಷ್ಮಮ್ಮ ಚಿತ್ರಗಾರ ಅವರದ್ದು ಕಿನ್ನಾಳ ಕಲಾಕೃತಿಗಳ ರಚನೆಯಲ್ಲಿ ಪಳಗಿದ ಕೈ.

ಏಳು ದಶಕಗಳ ಹಿಂದೆ ಊರೂರು ಅಲೆದಾಡಿ ದೇವಿಯರ ಮೂರ್ತಿಗಳ ಕೆತ್ತನೆ, ಕಲಾಕೃತಿ ರಚಿಸುತ್ತಿದ್ದ 86 ವರ್ಷದ ಸಣ್ಣರಂಗಪ್ಪ ಚಿತ್ರಗಾರ ಯುವ ಸಮುದಾಯಕ್ಕೆ ಮಾದರಿಯಂತಿದ್ದಾರೆ. ಸಣ್ಣರಂಗಪ್ಪ ರಾಜ್ಯದಾದ್ಯಂತ ಗ್ರಾಮದೇವತೆಗಳು, ಛತ್ರಿ, ಚಾಮರ, ದಶಮಿದಿಂಡು, ಬಾರಕೋಲಗುಣಿ ಮತ್ತು ಮಕ್ಕಳ ಆಟಿಕೆ ಬೊಂಬೆ ತಯಾರಿಸಿಕೊಟ್ಟಿದ್ದಾರೆ.

ಟೀಪಾಯಿ ಮೇಲೆ ಕಿನ್ನಾಳ ಚಿತ್ರಕಲೆಗೆ ಅಂತಿಮ ಸ್ಪರ್ಶ...

ಚಿತ್ರಗಳು: ಭರತ್ ಕಂದಕೂರ

ಯಂತ್ರಗಳು ಮತ್ತು ತಂತ್ರಜ್ಞಾನದ ವೇಗದ ಭರಾಟೆಯಲ್ಲಿ ಸಾಂಪ್ರದಾಯಿಕ ಕಲಾಕೃತಿಗಳ ರಚನೆಯ ಮೂಲವೇ ಮರೆಯಾಗುತ್ತಿದೆ. ಮೊದಲು ತಿಂಗಳಾನುಗಟ್ಟಲೇ ಕೆಲಸ ಮಾಡುತ್ತಿದ್ದ ಕಲಾವಿದರ ಶ್ರಮವನ್ನು ಈಗ ಯಂತ್ರಗಳು ಕ್ಷಣಾರ್ಧದಲ್ಲಿ ಮಾಡಿ ಮುಗಿಸುತ್ತಿವೆ. ಇದಕ್ಕೆ ಕಿನ್ನಾಳ ಕಲೆ ಅಪವಾದದಂತಿದೆ.

ಕಿನ್ನಾಳ ಕಲಾಕೃತಿಗಳು ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಹೆಸರಾಗಿದ್ದು ಹಂಪಿಯ ಪಂಪಾ ವಿರೂಪಾಕ್ಷೇಶ್ವರ, ವಿಜಯ ವಿಠ್ಠಲ ದೇವಾಲಯ, ಕನಕಗಿರಿಯ ಕನಕಾಚಲಪತಿ ದೇವಸ್ಥಾನ–ಹೀಗೆ ಅನೇಕ ಐತಿಹಾಸಿಕ ಸ್ಥಳಗಳಲ್ಲಿವೆ. ವಿಜಯನಗರ ಅರಸರು ತಾವು ಕುಳಿತುಕೊಳ್ಳುವ ಸಿಂಹಾಸನಕ್ಕೆ ಕಿನ್ನಾಳ ಕಲೆಯ ಕಲಾಕೃತಿ ಬಳಸಿಕೊಂಡಿದ್ದರು.

ಸಂತೋಷ್‌ಕುಮಾರ್ ಚಿತ್ರಗಾರ

ಈ ಕಲಾಕೃತಿಗಳಿಗೆ ಎಲ್ಲರನ್ನೂ ಮೆಚ್ಚಿಸುವ ಸೌಂದರ್ಯ, ಅಂದದ ಅಲಂಕಾರ, ಮೈಮೇಲೆ ಆಭರಣ, ಆಕರ್ಷಕ ಬಣ್ಣ, ಕೊರಳ ತುಂಬಾ ಸರಗಳು, ನವಿರಾದ ಹುಬ್ಬು ಪ್ರಮುಖ ಆಕರ್ಷಣೆ. 'ಕಿಸ್ಕಾಲು' ಬೊಂಬೆ ಕಿನ್ನಾಳ ಕಲೆಯ ಸಂಕೇತ.

ದುರ್ಗಾದೇವಿ, ಕೀಲುಗೌರಿ, ಕೀಲುಗೊಂಬೆ, ಅಲಂಕಾರಿಕ ಸಾಮಗ್ರಿಗಳು, ಆಕಳು, ಆನೆ, ಲಕ್ಷ್ಮಿ, ಸರಸ್ವತಿ, ಗಣೇಶ, ಮತ್ಸ್ಯ, ದ್ವಾರಪಾಲಕರು, ಆಂಜನೇಯ, ಪಲ್ಲಕ್ಕಿ, ಜಾತ್ರೆಯ ಸಾಮಗ್ರಿ, ಚೌಕಿ, ಟೀಪಾಯಿ, ಗರುಡ, ಆಂಜನೇಯ, ರತಿ–ಮನ್ಮಥ, ಕೂರ್ಮಾವತಾರ, ವರಾಹ, ನರಸಿಂಹ, ವಾಮನ, ಕೊಂತಿ ಪಟ್ಟಿ–ಹೀಗೆ ಅನೇಕ ಕಲಾಕೃತಿಗಳನ್ನು ಕಿನ್ನಾಳ ಶೈಲಿಯಲ್ಲಿ ತಯಾರಿಸಲಾಗುತ್ತಿದೆ.

ಈ ಕಲಾಕೃತಿಗಳನ್ನು ತಯಾರಿಸಲು ಬೇಕಾಗುವ ಹಗುರವಾದ ಕಟ್ಟಿಗೆಯ ತೀವ್ರ ಅಭಾವದ ನಡುವೆಯೂ ಕಲಾವಿದರು ಗ್ರಾಹಕರ ಬೇಡಿಕೆಗಳನ್ನು ಪೂರೈಸುತ್ತಿದ್ದಾರೆ. ಸೆಣಬು ನೆನೆಸಿ ತುಂಡುಗಳಾಗಿ ಕತ್ತರಿಸಿ, ಒಣಗಿಸಿ ಪುಡಿ ಮಾಡಿ ಕಟ್ಟಿಗೆಯ ಪುಡಿ ಮತ್ತು ಹುಣಸೆ ಬೀಜದ ಪೇಸ್ಟಿನೊಂದಿಗೆ ಬೆರೆಸಿ ತಯಾರಿಸುವ ಕಿಟ್ಟಾವೇ ಕಿನ್ನಾಳ ಕಲೆಯ ಅಂದ ಹೆಚ್ಚಿಸುತ್ತದೆ.

ಸಾಕಷ್ಟು ಸಮಯ, ದೈಹಿಕ ಶ್ರಮ, ತಾಳ್ಮೆಯಿಂದ ತಯಾರಿಸಿದ ಕಲಾಕೃತಿಗಳಿಗೆ ಮಾರುಕಟ್ಟೆ ಕಂಡುಕೊಳ್ಳುವುದು ಹೇಗೆ ಎನ್ನುವುದು ಕಲಾವಿದರಿಗೆ ತಿಳಿದಿರಲಿಲ್ಲ. ಊರಿನ ಸುತ್ತಲಿನ ಜಾತ್ರೆಗಳು, ಧಾರ್ಮಿಕ ಕಾರ್ಯಕ್ರಮ ಸ್ಥಳಗಳಿಗೆ ಹೋಗಿ ತಾವೇ ಕಲಾಕೃತಿಗಳನ್ನು ಮಾರಾಟ ಮಾಡುತ್ತಿದ್ದರು. ಆಗ ಬರುತ್ತಿದ್ದ ಆದಾಯವೂ ಅಷ್ಟಕ್ಕಷ್ಟೇ.

ಮೂಡಿತು ಸಂತೋಷ

ಹಲವು ದಶಕಗಳ ಹಿಂದೆ ಕಿನ್ನಾಳದಲ್ಲಿ ನೂರಾರು ಸಂಖ್ಯೆಯಲ್ಲಿದ್ದ ಚಿತ್ರಗಾರ ಕುಟುಂಬಗಳು ಈಗ 67ಕ್ಕೆ ಇಳಿದಿವೆ. ಇದರಲ್ಲಿ 30 ಕುಟುಂಬಗಳು ಮಾತ್ರ ಕಲಾಕೃತಿಗಳನ್ನು ತಯಾರಿಸುತ್ತಿವೆ. ಹತ್ತು ವರ್ಷಗಳ ಹಿಂದೆ ಈ ಕಲೆಯ ಆಯಸ್ಸು ಮುಗಿದೇ ಹೋಯಿತು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದ್ದಾಗ ಯುವ ಕಲಾವಿದ ಸಂತೋಷ್‌ಕುಮಾರ್ ಚಿತ್ರಗಾರ ಮಾಡಿದ ಹೊಸ ಪ್ರಯೋಗಗಳು ಆಟದ ಬೊಂಬೆಗಳ ಮೇಲೂ ನಗುವಿನ ಚೆಂಬೆಳಕು ಮೂಡಿಸಿವೆ.

ಲಲಿತ ಕಲೆಯಲ್ಲಿ ಪದವಿ ಮತ್ತು ದೃಶ್ಯಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಸಂತೋಷ್ ಬೆಂಗಳೂರಿನ ಕಂಪನಿಯೊಂದರಲ್ಲಿ ಡಿಸೈನರ್ ಆಗಿದ್ದರು. ತಮ್ಮೂರಿನ ಕಲೆ ವಿನಾಶದ ಅಂಚಿಗೆ ಹೋಗುತ್ತಿದ್ದ ವಿಷಯ ತಿಳಿದು ಸಂಕಟ ಪಟ್ಟು ಆರು ವರ್ಷಗಳ ಹಿಂದೆ ನೌಕರಿಗೆ ರಾಜೀನಾಮೆ ನೀಡಿ ಕಿನ್ನಾಳ ಕಲಾಕೃತಿಗಳ ಮಾರಾಟಕ್ಕೆ ಆನ್‌ಲೈನ್ ಮಾರುಕಟ್ಟೆ ಹುಡುಕಿಕೊಂಡರು.

ಹಿಂದೆ ಕಲಾವಿದರು ದೇವರ ವಿಗ್ರಹ, ಪಲ್ಲಕ್ಕಿ ತಯಾರಿಸಲು ಸೀಮಿತರಾಗಿದ್ದರು. ಸಂತೋಷ್ ಮಾಡಿದ ಮಾರುಕಟ್ಟೆಯ ಹೊಸ ಪ್ರಯೋಗಗಳಿಂದಾಗಿ ಕಲಾವಿದರು ಗೃಹಲಂಕಾರ ವಸ್ತುಗಳು ಮತ್ತು ಮಕ್ಕಳ ಆಟಿಕೆ ತಯಾರಿಕೆಗೆ ಒತ್ತು ನೀಡಿ ಜನರ ಗಮನ ಸೆಳೆದರು.

ಕಲಾಕೃತಿಗಳನ್ನು ತಯಾರಿಸುವ ವಿಧಾನ, ನೂರು ವರ್ಷ ಬಾಳಿಕೆ ಬರುತ್ತವೆ ಎನ್ನುವ ವಿಷಯಗಳನ್ನು ಅವರು ಸಾಮಾಜಿಕ ತಾಣಗಳ ಮೂಲಕ ಹಂಚಿಕೊಂಡರು.

11ನೇ ಪುಟಕ್ಕೆ...



ತೆರೆದ ಮಾರುಕಟ್ಟೆಗೆ ಮುದ್ರಣದ ಕೊನೆಯ ಸಂಚಿಕೆ

ನ್ಯಾಷನಲ್ ಜಿಯೋಗ್ರಫಿಕ್ ಮೊದಲ ಸಂಚಿಕೆ

ಮಸುಕಾದ ಜಗತ್ತಿನ ಜ್ಞಾನದ ಕಿಟಕಿ

ಕೃಪಾಕರ–ಸೇನಾನಿ

ಸಿಗ್ನಲ್ ಲೈಟ್ ಬಳಿ ನಿಂತಿರುವ ಐಶಾರಾಮಿ ಕಾರು. ಹವಾನಿಯಂತ್ರಣದಿಂದ ತಣ್ಣಗಿರುವ ಕಾರಿನ ಒಳಭಾಗದಲ್ಲಿ ಫ್ರೆಂಚ್ ದೇಶದ ಸುಗಂಧದ ಸುವಾಸನೆ ನಿಮ್ಮ ಕಲ್ಪನೆಗೆ ಬಿಟ್ಟಿದ್ದು. ಕಾರಿನ ಒಂದು ಕಿಟಕಿಯ ಗಾಜು ಸ್ವಲ್ಪ ಕೆಳಗಿಳಿದಿದೆ. ಮಳೆಗೆ ಗಾಜು ತೋಯ್ದಿದೆ. ಒದ್ದೆ ಗಾಜಿನಿಂದಾಗಿ ಹೊರಜಗತ್ತಿನ ಚಿತ್ರಣ ಮಸುಕಾಗಿದೆ. ಅಸ್ಪಷ್ಟವಾಗಿದೆ.

ಹೊರಗೆ ಕೆಂಪು ಸೀರೆಯುಟ್ಟ ಎಳೆ ವಯಸ್ಸಿನ ಮಹಿಳೆಯೊಬ್ಬಳು ಪುಟ್ಟಮಗುವನ್ನು ಕಂಕುಳಿನಲ್ಲಿ ಹೊತ್ತು ಮಳೆಯಲ್ಲಿ ತೊಯ್ದು ನಿಂತಿದ್ದಾಳೆ. ಕಾರಿನೊಳಗಿನ ಪ್ರಪಂಚವನ್ನು ಸ್ಪರ್ಶಿಸಲೆತ್ನಿಸುವಂತೆ ಆಕೆಯ ಕೈಗಳು ಕಿಟಕಿಯ ಗಾಜನ್ನು ಮುಟ್ಟಿನೋಡುತ್ತಿವೆ. ಬಡತನ ಹಸಿವು ಅಸಹಾಯಕತೆ ತುಂಬಿದ ಅವಳ ಕಣ್ಣುಗಳು ಕಿಟಕಿಯ ಗಾಜಿನೊಳಗೆ ಇಣಕುತ್ತವೆ. ಬಹುಶಃ ಏನೂ ಕಾಣುತ್ತಿಲ್ಲ. ಕಂಕಳಲ್ಲಿರುವ ಮಗುವಿನ ಅಗಲವಾದ ಹೊಳಪಿನ ಕಣ್ಣುಗಳಲ್ಲಿ ಹಸಿವು... ಕುತೂಹಲ, ನಿರೀಕ್ಷೆ, ಭರವಸೆಗಳು.

ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್ 135 ವರ್ಷಗಳಿಂದ ನಿರಂತರವಾಗಿ ಪ್ರಕಟಗೊಂಡು ಈಗ ನಿಧಾನವಾಗಿ ಕಣ್ಮುಚ್ಚುತ್ತಿದೆ. ಇದು ಇಲ್ಲಿಯವರೆಗೆ 1400 ಸಂಚಿಕೆಗಳು, ಎಂಟು ಸಾವಿರ ಲೇಖನಗಳನ್ನು ಎರಡು ಲಕ್ಷ ಚಿತ್ರಗಳನ್ನು ಜಗತ್ತಿಗೆ ನೀಡಿದೆ.

ಒಂದು ಗಾಜಿನ ಒಳಗೆ ಮತ್ತು ಹೊರಗೆ ಅನಾವರಣಗೊಳ್ಳುವ ಎರಡು ವ್ಯತಿರಿಕ್ತವಾದ ಜಗತ್ತುಗಳು.

ಇದು ನಮ್ಮ ನೆನಪಿನಲ್ಲಿ ಶಾಶ್ವತವಾಗಿ ಉಳಿದುಬಿಟ್ಟಿರುವ ಛಾಯಾಚಿತ್ರಗಳಲ್ಲಿ ಒಂದು. ನೋಡುಗರನ್ನು ಕಾಡುವ 'ಸ್ಟೀವ್ ಮ್ಯಾಕ್ರಿ' ತೆಗೆದ ಈ ಚಿತ್ರ 'ಡಗ್ಲಾಸ್ ಚಾಡ್ವಿಕ್' ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್‌ಗೆ ಮುಂಬೈ ಕುರಿತು ಬರೆದ ಲೇಖನದ ಒಳಗೆ ಮುನ್ನುಡಿಯಂತೆ ಕರೆದೊಯ್ಯುತ್ತದೆ.

ಲಕ್ಷಾಂತರ ವಲಸಿಗರ ಪಾಲಿಗೆ ಭರವಸೆಗಳ ಸ್ವರ್ಗವೆಂದೇ ಖ್ಯಾತವಾಗಿರುವ, ಅವರ ಶ್ರಮದಿಂದಲೇ ಬೆಳೆದು ರಾಷ್ಟ್ರದ ಆರ್ಥಿಕ ಕಣಜವಾಗಿರುವ, ಜೊತೆಜೊತೆಗೆ ತೀವ್ರ ಅಸಮಾನತೆಯನ್ನು ತನ್ನ ಒಡಲಲ್ಲಿಟ್ಟುಕೊಂಡಿರುವ ಒಂದು ಮಹಾನಗರ ಮುಂಬೈ. ಒಂದು ಇಡೀ ನಗರದ ಕನಸು, ನೋವುಗಳನ್ನೆಲ್ಲಾ ಅಕ್ಷರಗಳ ನೆರವಿಲ್ಲದೇ ಕೇವಲ ಒಂದು ಫ್ರೇಮಿನಲ್ಲಿ ಹಿಡಿದಿಡುವುದಾದರೂ ಹೇಗೆ ಸಾಧ್ಯ?

ಇಷ್ಟೆಲ್ಲಾ ಆಯಾಮಗಳನ್ನು ಹೊಂದಿರುವ ಚಿತ್ರಗಳು ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್‌ನಲ್ಲಿ ಆಗಾಗ್ಗೆ ಕಂಡುಬರುವುದು ಕಾಕತಾಳೀಯವಲ್ಲ.

ನಾವು ಸಣ್ಣವರಿದ್ದಾಗಿನಿಂದಲೂ ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್‌ನಲ್ಲಿ ಪ್ರಕಟವಾಗುತ್ತಿದ್ದ ಚಿತ್ರಗಳನ್ನು ನೋಡುತ್ತಾ, ಲೇಖನಗಳನ್ನು ಓದುತ್ತಾ ಆ ಪತ್ರಿಕೆಗೆ ಆಕರ್ಷಿತರಾಗಿದ್ದೆವು. ಅದರಲ್ಲೂ ಜೀವವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳು ನಮ್ಮನ್ನು ಮೋಡಿಗೊಳಗಾಗಿಸುತ್ತಿದ್ದವು. ನಾವು ತೆಗೆಯುತ್ತಿದ್ದ ಚಿತ್ರಗಳನ್ನು ನ್ಯಾಷನಲ್ ಜಿಯಾಗ್ರಫಿಕ್‌ನ ಚಿತ್ರಗಳೊಂದಿಗೆ ಹೋಲಿಸಿ ನೋಡುತ್ತಿದ್ದೆವು. ಹಾಗೆಯೇ ನಮ್ಮ ಯಾವ ಚಿತ್ರಗಳು ಅಷ್ಟು ಪರಿಣಾಮಕಾರಿಯಾಗಿಲ್ಲವಲ್ಲ ಏಕೆ ಎಂದು ಗಂಭೀರವಾಗಿ ಚಿಂತಿಸುತ್ತಿದ್ದೆವು. ಇಂತಹ ಹಲವಾರು ಚಿತ್ರಗಳು ನಮ್ಮ ಮನಸ್ಸಿನಲ್ಲಿ ಹೇಗೆ ಮುದ್ರೆ ಒತ್ತುತ್ತಿದ್ದವೆಂದರೆ ವರ್ಷ ಕಳೆದಂತೆ ಛಾಯಾಗ್ರಾಹಕರ ಹೆಸರುಗಳು ಮಾಸಿ ಹೋದರೂ ಕೂಡ, ಚಿತ್ರಗಳು ಮಾತ್ರ ತಮ್ಮ ಎಲ್ಲಾ ಸೂಕ್ಷ್ಮ ವಿವರಗಳೊಂದಿಗೆ ಹಾಗೇ ಕುಳಿತಿರುತ್ತಿದ್ದವು.

ಆನಂತರದ ದಿನಗಳಲ್ಲಿ ನಮಗೆ ನ್ಯಾಷನಲ್ ಜಿಯಾಗ್ರಫಿಕ್‌ನ ಹಲವಾರು ಛಾಯಾಗ್ರಾಹಕರನ್ನು, ಲೇಖಕರನ್ನು ಭೇಟಿಯಾಗುವ, ಕೆಲವೊಮ್ಮೆ ಅವರೊಂದಿಗೆ ಕೆಲಸ ಮಾಡುವ ಅವಕಾಶಗಳು ತೆರೆದುಕೊಂಡವು. ಇದರಲ್ಲಿ ನಮಗೆ ಹೆಚ್ಚು ನೆನಪಿನಲ್ಲಿ ಉಳಿದದ್ದು ಡಗ್ಲಾಸ್ ಚಾಡ್ವಿಕ್ ಅವರೊಂದಿಗೆ ಕಳೆದ ದಿನಗಳು.

12ನೇ ಪುಟಕ್ಕೆ...

ಮೈಸೂರು ಪಾಕ್, ಬೆಳಗಾವಿ ಕುಂದ, ಧಾರವಾಡ ಪೇಡ... ಹೀಗೆ ಕರ್ನಾಟಕದ ವೈವಿಧ್ಯಮಯ ಸಿಹಿತಿನಿಸಿನ ಪಟ್ಟಿಯಲ್ಲಿ ಬಳ್ಳಾರಿಯ ಸೈಕಲ್ ಕೋವಾ ಕೂಡ ಒಂದು.

ಚಿತ್ರಗಳು: ಮುರಳಿಕಾಂತ ರಾವ್

ಬಳ್ಳಾರಿ ಸೈಕಲ್ ಕೋವಾ

ಹರಿಶಂಕರ್ ಆರ್.

ಬಳ್ಳಾರಿ ಸೈಕಲ್ ಕೋವಾ ಮುಂಬೈನ ತಾಜ್ ಹೋಟೆಲ್‌ನ ಮೆನುವಿನಲ್ಲಿ ಸ್ಥಾನ ಪಡೆದುಕೊಂಡಿದೆ! ಇದರ ಸವಿರುಚಿಗೆ ಅಲ್ಲಿನ ಗ್ರಾಹಕರು ಮನಸೋತಿದ್ದಾರೆ. ಇಷ್ಟೇ ಅಲ್ಲದೇ ಬೆಂಗಳೂರು, ಮೈಸೂರು, ತುಮಕೂರಿನಲ್ಲಿ ಇದರ ಸ್ವಾದಕ್ಕೆ ಫಿದಾ ಆಗಿರುವ ಅಭಿಮಾನಿ ಬಳಗವೇ ಸೃಷ್ಟಿಯಾಗುತ್ತಿದೆ. ನೆರೆಯ ಆಂಧ್ರಪ್ರದೇಶದಲ್ಲೂ ಬೇಡಿಕೆ ಕುದುರಿಸಿಕೊಂಡಿದೆ.

ಬಳ್ಳಾರಿಯ ಈ ವಿಶಿಷ್ಟ ಕೋವಾಕ್ಕೆ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯಾ ನಂತರದ ಇತಿಹಾಸವಿದೆ. ಕೋವಾ ಮೊದಲಿಗೆ ತಯಾರಾಗಿದ್ದು ಬ್ರಿಟಿಷರ ಸೇನೆಯ ಪಾಕಶಾಲೆಯಲ್ಲಿ. ಮಿಲಿಟರಿ ಎಂದರೆ ಗೊತ್ತಲ್ಲ, ಅಲ್ಲಿ ಬರೀ ಬಂದೂಕು ಹಿಡಿಯುವವರು ಇರುವುದಿಲ್ಲ. ಸೈನಿಕರಿಗೆ ಭೋಜನ ಉಣಿಸುವ ಕೈಗಳೂ ಇರುತ್ತವೆ. ಸೇನೆಯ ಮೆನುವಿನಲ್ಲಿ ಬಳ್ಳಾರಿ ಕೋವಾ ಕೂಡ ಇತ್ತು.

ಬ್ರಿಟಿಷರ ಸೇನೆಯಲ್ಲಿನ ಪಾಕ ಪ್ರವೀಣ ಬಳ್ಳಾರಿಯ ಗುಡುಸಾಬ್ ಕೋವಾ ತಯಾರಿಸುವುದರಲ್ಲಿ ಪಳಗಿದ ಕೈ. 1947ರಲ್ಲಿ ಬ್ರಿಟಿಷರು ಭಾರತ ತೊರೆದರು. ಬಳಿಕ ಗುಡುಸಾಬರು ಮನೆಯಲ್ಲೇ ಕೋವಾ ತಯಾರು ಮಾಡಿ, ಹಿತ್ತಾಳೆ ಪಾತ್ರೆಯಲ್ಲಿಟ್ಟುಕೊಂಡು ಸೈಕಲ್‌ನಲ್ಲಿ ಬಳ್ಳಾರಿಯ ಗಲ್ಲಿ ಗಲ್ಲಿ ಸುತ್ತಿ ಮಾರಾಟ ಮಾಡುತ್ತಿದ್ದರು. ಮಧ್ಯಾಹ್ನದ ಹೊತ್ತಿಗೆ ಬೆಂಗಳೂರು ರಸ್ತೆಯಲ್ಲಿ ಸೈಕಲ್ ನಿಲ್ಲಿಸಿ ಸಂಜೆ ವರೆಗೆ ಮಾರಾಟ ಮಾಡುತ್ತಿದ್ದರು. ಹೀಗಾಗಿ ಈ ಕೋವಾಕ್ಕೆ 'ಸೈಕಲ್ ಕೋವಾ' ಎಂಬ ಹೆಸರು ಬಂದಿದೆ.

> **"ನನಗೆ ಪೈಲಟ್ ತರಬೇತಿ ಅವಕಾಶ ಸಿಕ್ಕಿತ್ತು. ಕೋವಾ ಕಾಯಕ ಬಳ್ಳಾರಿಯಲ್ಲೇ ಕಟ್ಟಿಹಾಕಿತು. ನನ್ನ ಅಪ್ಪನಿಗೆ ದಕ್ಕಿದ್ದ ಈ ಪಾಕಕಲೆ, ನನ್ನ ಮೊಮ್ಮಕ್ಕಳವರೆಗೂ ಮುಂದುವರಿದಿದೆ. ಇದು ಉದ್ಯಮದ ಸ್ವರೂಪ ಪಡೆಯುತ್ತಿರುವುದು ಖುಷಿಯ ವಿಚಾರ."**
> **ಮೆಹಬೂಬ್ ಪಾಷಾ,** ಗುಡುಸಾಬ್ ಮಗ

ಗುಡುಸಾಬ್ ಅವರ ಮಕ್ಕಳು, ಮೊಮ್ಮಕ್ಕಳ ನಂತರ ಈಗ ನಾಲ್ಕನೇ ತಲೆಮಾರು ಸೈಕಲ್ ಕೋವಾ ಮಾರಾಟವನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಕೋವಾದೊಂದಿಗೆ ಸೈಕಲ್ ಕೂಡ ಬೆಸೆದುಕೊಂಡಿರುವ ಕಾರಣಕ್ಕೆ ಈಗಲೂ ಸೈಕಲ್ ಮೇಲೆಯೇ ಮಾರಾಟ ಮಾಡಲಾಗುತ್ತದೆ. ಈಗ ಅದಕ್ಕೆ ದೊಡ್ಡ ವ್ಯವಹಾರದ ಸ್ಪರ್ಶ ಸಿಕ್ಕಿದ್ದು, ದ್ವಿಚಕ್ರ ವಾಹನಗಳು, ಅಂಗಡಿಗಳಲ್ಲಿ ಕೋವಾ ಮಾರಾಟ ಮಾಡಲಾಗುತ್ತಿದೆ. ಮುಂದೊಂದು ದಿನ ಇದಕ್ಕೆ ಉದ್ಯಮದ ರೂಪ ನೀಡಲಾಗುವುದು ಎನ್ನುತ್ತಾರೆ ಗುಡುಸಾಬರ ಮರಿಮೊಮ್ಮಗ ಅಫ್ತಾಬ್ ಪಾಷಾ.

ಎಲೆಯಲ್ಲಿ ಕೋವಾ ಸವಿಯುವುದೇ ಚೆನ್ನ...

ಈ ಸಿಹಿತಿನಿಸು ಸಿದ್ಧಪಡಿಸಲು ಎಮ್ಮೆ ಹಾಲೇ ಬೇಕು. ಅದರಲ್ಲೂ ಕೊಬ್ಬಿನಾಂಶ ಜಾಸ್ತಿ ಇರಲೇ ಬೇಕು. ಅದಕ್ಕಾಗಿಯೇ ಬಳ್ಳಾರಿ ಸಮೀಪದ ಮೋಕಾ, ದಮ್ಮೂರು, ಸೋಮಸಮುದ್ರ, ಲಕ್ಷ್ಮೀನಗರ ಕ್ಯಾಂಪ್, ಬತ್ರಿ, ಅಹಂಭಾವಿ, ಕೊಳಗಲ್, ಗುಗ್ಗರಹಟ್ಟಿಗಳಿಂದ ಪರಿಚಿತ ಹೈನುಗಾರರಿಂದ ಉತ್ತಮ ಜಾತಿಯ ಗಟ್ಟಿಮುಟ್ಟಾದ ಎಳೆಯ ಪ್ರಾಯದ ಎಮ್ಮೆಗಳಿಂದಲೇ ಹಾಲನ್ನು ಪಡೆಯಲಾಗುತ್ತದೆ. ಐದಾರು ಮಂದಿ ಹೈನುಗಾರರೇ ಕೋವಾಕ್ಕೆ ಹಿಂದಿನಿಂದಲೂ ನಿರಂತರವಾಗಿ ಹಾಲು ಸರಬರಾಜು ಮಾಡುತ್ತಿದ್ದಾರೆ.

ಎಮ್ಮೆಗಳು ಉತ್ಕೃಷ್ಟ ಗುಣಮಟ್ಟದ ಹಾಲು ನೀಡಲೆಂದೇ, ಹಿಂಡಿ, ಹುರುಳಿ, ಅಕ್ಕಿ ಹೊಟ್ಟು, ಅಕ್ಕಿ ನುಚ್ಚು, ಸಜ್ಜೆಹಿಟ್ಟು, ಹಸಿಹುಲ್ಲು, ನೆಲ್ಲುಹುಲ್ಲನ್ನು ಹೈನುಗಾರರಿಗೆ ಗುಡುಸಾಬ್ ಕುಟುಂಬವೇ ಸರಬರಾಜು ಮಾಡುತ್ತದೆ. ಅಷ್ಟೇ ಅಲ್ಲ, ಪ್ರತಿ ಲೀಟರ್ ಹಾಲಿಗೆ ₹60 ಗಳನ್ನು ನೀಡುತ್ತದೆ.

11ನೇ ಪುಟಕ್ಕೆ...

ಹಳೆಯ ವಿದ್ಯಾರ್ಥಿಗಳ ಕೊಡುಗೆ 'ಕಿಮ್ಸ್'ಗೆ ಮೆರುಗು

ಬಿ.ಜೆ.ಧನ್ಯಪ್ರಸಾದ್

ಮಾದರಿ

ಕರ್ನಾಟಕ ವಿಶ್ವವಿದ್ಯಾಲಯದ ಕೌಸಾಳಿ ನಿರ್ವಹಣಾ ಅಧ್ಯಯನ ಸಂಸ್ಥೆಯ (ಕಿಮ್ಸ್) ಹಳೆಯ ವಿದ್ಯಾರ್ಥಿಗಳು ಸಂಸ್ಥೆಗೆ ಹೊಸ ರೂಪ ನೀಡಿ ಮಾದರಿಯಾಗಿದ್ದಾರೆ. ಸ್ವಂತ ಕಟ್ಟಡ, ಸೌಕರ್ಯಗಳು ಇಲ್ಲದೆ ಸೊರಗಿದ್ದ ಸಂಸ್ಥೆ ಇದೀಗ ನವಚೈತನ್ಯ ತುಂಬಿಕೊಂಡಿದೆ.

ತಾವು ಕಲಿತ ಸಂಸ್ಥೆಯು ಸಂಕಷ್ಟ ಸ್ಥಿತಿಯಲ್ಲಿರುವುದನ್ನು ತಿಳಿದು ಅದಕ್ಕೆ ಕಾಯಕಲ್ಪ ನೀಡಿ ಉತ್ಕೃಷ್ಟ ಸಂಸ್ಥೆಯಾಗಿ ಬೆಳೆಸಲು ಹಳೆಯ ವಿದ್ಯಾರ್ಥಿಗಳು ಟೊಂಕಕಟ್ಟಿ ನಿಂತಿದ್ದಾರೆ. ದೇಣಿಗೆ ನೀಡಿ ತಾವೇ ಮುಂದೆ ನಿಂತು ಕಾಮಗಾರಿಗಳ ಮೇಲೆ ನಿಗಾ ಇಟ್ಟು ಅತ್ಯಾಧುನಿಕ ಸೌಕರ್ಯಗಳನ್ನು ಕಲ್ಪಿಸಿದ್ದಾರೆ.

1976ರಲ್ಲಿ ಆರಂಭವಾದ 'ಕಿಮ್ಸ್' ಸುವರ್ಣ ಮಹೋತ್ಸವದ ಹೊಸ್ತಿಲಲ್ಲಿದೆ. ಈವರೆಗೆ ಸುಮಾರು ನಾಲ್ಕು ಸಾವಿರ ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ. ಸಂಸ್ಥೆ ಆರಂಭವಾಗಿ 48 ವರ್ಷಗಳೇ ಕಳೆದರೂ ಸ್ವಂತಕಟ್ಟಡ, ಅಗತ್ಯ ಸೌಕರ್ಯಗಳು ಇರಲಿಲ್ಲ. ಪ್ರಾಚ್ಯ ವಸ್ತುಸಂಗ್ರಹಾಲಯದ ಕಟ್ಟಡದಲ್ಲಿ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಹಳೆಯ ವಿದ್ಯಾರ್ಥಿಗಳು 'ಕಿಮ್ಸ್ ಅಲುಮ್ನಿ ನೆಟ್‌ವರ್ಕ್' (ಕೆಎಎನ್) ರಚಿಸಿಕೊಂಡಿದ್ದಾರೆ. ಪ್ರತಿವರ್ಷ ಸಂಸ್ಥೆಯಲ್ಲಿ 'ದರ್ಪಣ್' ಕಾರ್ಯಕ್ರಮ ಆಯೋಜಿಸುತ್ತಾರೆ. ಎರಡು ವರ್ಷಗಳ ಹಿಂದೆ 'ದರ್ಪಣ್' ನಲ್ಲಿ ಸಂಸ್ಥೆಯ ಸ್ಥಿತಿ ಕುರಿತು ಬೋಧಕರು ಹಳೆಯ ವಿದ್ಯಾರ್ಥಿಗಳ ಗಮನಕ್ಕೆ ತಂದಿದ್ದರು.

'ಪ್ರತಿವರ್ಷ ದರ್ಪಣ್ ಕಾರ್ಯಕ್ರಮದಲ್ಲಿ ನೂರರಿಂದ ನೂರೈವತ್ತು ಹಳೆಯ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಾರೆ. ಸಂಸ್ಥೆಯ ಅಭಿವೃದ್ಧಿ ನಿಟ್ಟಿನಲ್ಲಿ ಅವರೊಂದಿಗೆ ಚರ್ಚಿಸಿದಾಗ ಹಲವರು ನೆರವಿಗೆ ಬಂದರು' ಎಂದು ಕಿಮ್ಸ್ ನಿರ್ದೇಶಕ ಪ್ರೊ.ಎನ್.ರಾಮಾಂಜನೇಯಲು ಹೇಳುತ್ತಾರೆ.

ಕೆಎಎನ್ ಅಧ್ಯಕ್ಷ ನರೇಶ್ ಶಾ, ಸಂಜೀವ್ ಫನಾಟೆ, ಪ್ರಮೋದ್ ಝಳಕೀಕರ್, ಜ್ಯೋತಿರಾಜ್, ಮಂಜುನಾಥ್ ಅವರು ಮುತುವರ್ಜಿ ವಹಿಸಿದರು. ಪ್ರಮೋದ್ ಹಣ ಸಂಗ್ರಹ ಹೊಣೆ, ಸಂಜೀವ ಫನಾಟೆ ಕಟ್ಟಡ ಕಾಮಗಾರಿ ನಿಗಾ... ಹೀಗೆ ಒಬ್ಬೊಬ್ಬರು ಒಂದೊಂದು ಜವಾಬ್ದಾರಿಯನ್ನು ವಹಿಸಿಕೊಂಡು ಕಾರ್ಯೋನ್ಮುಖರಾದರು. ಮೊದಲು ಸಂಸ್ಥೆಗೆ ಸ್ವಂತ ಕಟ್ಟಡ ಕಲ್ಪಿಸುವತ್ತ ಗಮನಹರಿಸಿ ಬೋಧಕರ ಜೊತೆ ಕುಲಪತಿಯವರಿಗೆ ಮನವಿ ಸಲ್ಲಿಸಿದರು. ಪ್ರಾಚ್ಯ ವಸ್ತುಸಂಗ್ರಹಾಲಯದ ಪಕ್ಕದ ನಿರ್ಮಾಣ ಹಂತದಲ್ಲಿದ್ದ ಕಟ್ಟಡವನ್ನು ಸಂಸ್ಥೆಗೆ ನೀಡಲು ಅವರು ಕ್ರಮ ವಹಿಸಿದರು. ವಿವಿಧೆಡೆಗಳಲ್ಲಿ ಇರುವ ಸಂಸ್ಥೆಯ ವಿದ್ಯಾರ್ಥಿಗಳನ್ನು ಪ್ರಮೋದ್ ಝಳಕೀಕರ್ ಅವರು ಸಂಪರ್ಕಿಸಿದರು. ಸುಮಾರು 400 ವಿದ್ಯಾರ್ಥಿಗಳಿಂದ ₹ 1.35 ಕೋಟಿ ದೇಣಿಗೆ ಸಂಗ್ರಹಿಸಿದರು. ಕನಿಷ್ಠ ₹ 5 ಸಾವಿರ, ಗರಿಷ್ಠ ₹ 10 ಲಕ್ಷದವರೆಗೂ ದೇಣಿಗೆ ನೀಡಿದ್ದಾರೆ.

ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಹಲವರು ವಿದೇಶದಲ್ಲಿ ಉದ್ಯೋಗದಲ್ಲಿದ್ದಾರೆ. ಕೆಲವರು ಐಐಟಿ, ಐಐಎಂಗಳಲ್ಲಿ ಬೋಧಕರಾಗಿದ್ದಾರೆ. ಇನ್ನು ಹಲವರು ಸ್ವಂತ ವ್ಯವಹಾರ, ಉದ್ಯಮದಲ್ಲಿ ತೊಡಗಿದ್ದಾರೆ. ಕೆನಡಾದಲ್ಲಿ ಸಂಸದರಾಗಿರುವ ಚಂದ್ರಆರ್ಯ ಅವರು ಕಿಮ್ಸ್‌ನ ಹಳೆಯ ವಿದ್ಯಾರ್ಥಿ.

ಹೈಟೆಕ್ ಸೌಕರ್ಯಗಳೊಂದಿಗೆ ಕಟ್ಟಡವನ್ನು (34 ಸಾವಿರ ಚದರ ಅಡಿ ವಿಸ್ತೀರ್ಣ) ನವೀಕರಣಗೊಳಿಸಲಾಯಿತು. ಡಿಜಿಟಲ್ ಬೋರ್ಡ್ ಸೌಲಭ್ಯದ ತರಗತಿ ಕೊಠಡಿ, ಗ್ರಂಥಾಲಯ, ಉದ್ಯೋಗ ಮಾರ್ಗದರ್ಶನ ಕೇಂದ್ರ, ಕಂಪ್ಯೂಟರ್ ಪ್ರಯೋಗಾಲಯ, ಬೋಧಕರಿಗೆ ಕೊಠಡಿಗಳು, ಸಭಾಂಗಣ, ಮೈದಾನ ಕಲ್ಪಿಸಲಾಗಿದೆ. ಹಳೆಯ ವಿದ್ಯಾರ್ಥಿಗಳ ತಂಡವು ಮೂಲಸೌಕರ್ಯ ಕಲ್ಪಿಸುವ ಮೊದಲ ಹಂತವನ್ನು ಪೂರ್ಣಗೊಳಿಸಿದೆ.

'ಕುಲಪತಿ ಪ್ರಾಚ್ಯ ವಸ್ತುಸಂಗ್ರಹಾಲಯದ ಪಕ್ಕದ ಕಟ್ಟಡ ಒದಗಿಸಿದರು. ಅನುದಾನದ ಕೊರತೆಯ ವಿಚಾರವನ್ನು ತಿಳಿಸಿದರು. ನಾವೇ ಹಣ ಸಂಗ್ರಹಿಸಿ ಹೈಟೆಕ್ ಸೌಲಭ್ಯ ಕಲ್ಪಿಸಿದೆವು' ಎಂದು ಕಿಮ್ಸ್ ಅಲುಮ್ನಿ ನೆಟ್‌ವರ್ಕ್ ಅಧ್ಯಕ್ಷ ನರೇಶ್ ಶಾ ಖುಷಿಯಿಂದಲೇ ಹೇಳುತ್ತಾರೆ.

ನರೇಶ್ ಶಾ ಅವರ ಸಮೂಹವು 'ಸಾಫ್ಟ್ ಸ್ಕಿಲ್', ಕೃತಕ ಬುದ್ಧಿವಂತಿಕೆ ಹಾಗೂ ಯಂತ್ರಭಾಷೆ ಮೊದಲಾದ ಸುಧಾರಿತ ಕೌಶಲಗಳ ತರಬೇತಿಯನ್ನು ಆರಂಭಿಸಿದೆ.

'ಕಿಮ್ಸ್ ಹಳೆಯ ವಿದ್ಯಾರ್ಥಿಗಳ ಈ ನಡೆ ಮಾದರಿ. ತಾವು ಕಲಿತ ಸಂಸ್ಥೆಗೆ ಏನಾದರೂ ಕೊಡುಗೆ ನೀಡುವುದು ಒಳ್ಳೆಯದು. ಈ ಮಾದರಿಯನ್ನು ಇತರ ಅಧ್ಯಯನ ವಿಭಾಗಗಳು ಅನುಸರಿಸಬೇಕು' ಎನ್ನುವುದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಬಿ.ಗುಡಸಿ ಅವರ ಆಶಯ.

ಸಂಸ್ಥೆಯ ಹಳೆಯ ವಿದ್ಯಾರ್ಥಿ ತೆಲಂಗಾಣ ರಾಜ್ಯ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥ ಸಿ.ಸಜ್ಜನವರ ಅವರು ನವೀಕೃತ ಕಟ್ಟಡವನ್ನು ಮಾರ್ಚ್ 3ರಂದು ಉದ್ಘಾಟಿಸಿದರು. ತಾವು ಕಲಿತ ಸಂಸ್ಥೆಗೆ ತಮ್ಮ ಕೈಲಾದ ನೆರವಿನ ಹಸ್ತಚಾಚಿ, ತಮ್ಮಂತೆಯೇ ಮುಂದಿನ ತಲೆಮಾರಿನ ವಿದ್ಯಾರ್ಥಿಗಳು ನೆಲೆ ಕಂಡುಕೊಳ್ಳಬೇಕು ಎನ್ನುವ ಕಾಳಜಿ ಮೆಚ್ಚುವಂತದ್ದು.

ಕಿಮ್ಸ್‌ನ ಕಟ್ಟಡದ ಉದ್ಘಾಟನಾ ಸಂಭ್ರಮದಲ್ಲಿ ಪಾಲ್ಗೊಂಡ ಹಳೆಯ ವಿದ್ಯಾರ್ಥಿಗಳೊಂದಿಗೆ ಕುಲಪತಿ ಪ್ರೊ.ಕೆ.ಬಿ.ಗುಡಸಿ, ಸಂಸ್ಥೆ ಸಿಬ್ಬಂದಿ.

ಅತ್ಯಾಧುನಿಕ ಕೊಠಡಿಯಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಚಿತ್ರ: ಬಿ.ಎಂ.ಕೇದಾರನಾಥ

ರಂಗ ಭಾಷೆಯ ಹೊಸ ವಿನ್ಯಾಸ

ಕೆ.ನರಸಿಂಹಮೂರ್ತಿ

ರಂಗಭೂಮಿ

ಫಲವತ್ತಾದ ತಾಯ್ನೆಲದಿಂದ ಬಂಜರುಭೂಮಿಗೆ ಎಸೆಯಲ್ಪಟ್ಟವರ ಅತೀವ ಸಂಕಟ ಚೀತ್ಕಾರವಾಗಬೇಕಿಲ್ಲ. ಅಳು ಕಣ್ಣೀರಾಗಬೇಕಿಲ್ಲ. ಮಾತು ಇರಲೇಬೇಕಿಲ್ಲ. ದೇಸಿ ಸಂಗೀತದ ಲಯಕ್ಕೆ ತಕ್ಕ ಧ್ವನಿ, ವೈವಿಧ್ಯಮಯ ಚಲನೆಗಳಲ್ಲೇ ಅಭಿನಯಿಸಬಹುದು. ನೋಡುಗರ ಎದೆಯೊಳಕ್ಕೂ ಈ ಸಂಕಟವನ್ನು ದಾಟಿಸಬಹುದು...

ಮೈಸೂರಿನ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಇಂಫಾಲದ ಅಖೋಕಾ ಥಿಯೇಟರ್‌ನ ಐವರು ಕಲಾವಿದರು ವೇದಿಕೆ ತುಂಬ ಮಣ್ಣು ಚೆಲ್ಲುತ್ತಲೇ ಕೇವಲ ಒಂದು ಗಂಟೆ ಅವಧಿಯಲ್ಲಿ ಇಂಥದ್ದೊಂದು ಅನುಭವವನ್ನು ನೋಡುಗರಿಗೆ ದಾಟಿಸಿದರು.

ಈ ತಂಡ ತೀವ್ರವಾಗಿ, ತಮ್ಮ ಎಲ್ಲ ದೈಹಿಕ ಶಕ್ತಿಯನ್ನೂ ಹಾಕಿ, ನೆಗೆದು, ಕುಣಿದು ಅಭಿನಯಿಸಿದ 'ಅಬೊರಿಜನಲ್ ಕ್ರೈ' ಸಂಭಾಷಣೆ ರಹಿತ ನಾಟಕ. ಅದರೊಂದಿಗೆ, ತನ್ನ ಪ್ರಯೋಗಶೀಲತೆಯ ಕಾರಣಕ್ಕೆ ರಂಗಭಾಷೆಗೊಂದು ಹೊಸ ಕಥನ ಕಾವ್ಯದ ಸಾಧ್ಯತೆಯನ್ನು ತೋರಿಸಿಕೊಟ್ಟಿತ್ತು. ಈ ಪ್ರಯೋಗದ ಪರಿಕಲ್ಪನೆ, ವಿನ್ಯಾಸ ಮತ್ತು ನಿರ್ದೇಶನ ಮಾಡಿದ ಥೌದಮ್ ವಿಕ್ಟರ್ ಸಿಂಗ್ ಕೂಡ ಮೆಚ್ಚುಗೆಗೆ ಪಾತ್ರರಾದರು.

ಕಳೆದ ವಾರ ನಡೆದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ ವಿವಿಧ ರಾಜ್ಯಗಳ ಆರು ನಾಟಕಗಳು ಇಂಥ ತಾಜಾ ಪ್ರಯೋಗಗಳಿಂದಲೇ ಗಮನ ಸೆಳೆದವು. ರಂಗಭೂಮಿಯಲ್ಲಿ ಹೊಸತನದ ನಿರೂಪಣೆಗಾಗಿ ಎದುರು ನೋಡುತ್ತಿದ್ದ ಬಹುತೇಕರು ಇಂಥ ನಾಟಕಗಳಿಗೆ ಮೊದಲಿಗರಾಗಿ ಬಂದು ಕುಳಿತಿದ್ದರು.

ವಿಶಿಷ್ಟ ಪರಿಕಲ್ಪನೆಗಳನ್ನು ಆಧರಿಸಿಯೇ ಹಲವು ವರ್ಷಗಳಿಂದ ಉತ್ಸವವನ್ನು ಹಮ್ಮಿಕೊಂಡು ಬಂದಿರುವ ರಂಗಾಯಣ, ಈ ಬಾರಿ 'ಇವ ನಮ್ಮವ, ಇವ ನಮ್ಮವ' ಪರಿಕಲ್ಪನೆಯಡಿ, ವಚನ ಚಳವಳಿಯ ಕನ್ನಡಿಯಲ್ಲಿ ಇಂದಿನ ಕಾಲಮಾನವನ್ನು ಅಭಿವ್ಯಕ್ತಿಸುವ ಸಾಧ್ಯತೆಯ ಹುಡುಕಾಟದಲ್ಲಿ ಉತ್ಸವವನ್ನು ಆಯೋಜಿಸಿತ್ತು.

'ಇವನಾರವ ಇವನಾರವ ಎಂದೆನಿಸದಿರಯ್ಯ; ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ' ಎಂಬ ಬಸವಣ್ಣನ ವಚನದ ಸಾಲುಗಳನ್ನೇ ಇಂದಿನ ಮೂಲನಿವಾಸಿಗಳು, ದಲಿತರು ಮತ್ತು ತಳಮಟ್ಟದಲ್ಲಿ ದುಡಿಯುತ್ತಿರುವ ಕೈ ಕಸುಬುದಾರ ಜನ ಸಂಕಟದಿಂದ ತಮ್ಮ ಭಾಷೆಯಲ್ಲಿ ಹೇಳುತ್ತಿದ್ದಾರೆ. ಅವರ ಸಂಕಟಕ್ಕೆ ದನಿಯಾದ ಇನ್ನೊಂದು ನಾಟಕ ಮಲಯಾಳಂನ 'ಚಿಲ್ಲರ ಸಮರಂ'. ಕೇರಳದ ಲಿಟಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್‌ನ ಕಲಾವಿದರು ಕಲಾಮಂದಿರದ ದೊಡ್ಡ ವೇದಿಕೆಯಲ್ಲಿ ಈ ನಾಟಕವನ್ನು ಅರೆಬೆತ್ತಲೆ ವೇಷಧಾರಿಗಳಾಗಿ ಅಭಿನಯಿಸುತ್ತಿದ್ದಾಗ ಅವರ ಮೈಯಲ್ಲಿ ಬೆವರು ಸುರಿಯುತ್ತಿತ್ತು.

ಅಭಿನಯವೆಂಬುದೊಂದು ಬಹುತೇಕ ಮೆಲು ನಡೆ ನುಡಿಗಳ ನಾಜೂಕು ಪ್ರಯೋಗ ಎಂಬ ಮಾತಿಗೆ ಹೊರತಾದಂತೆ, ಅಲ್ಲಿ ದೈಹಿಕ ಶ್ರಮ ಹೆಚ್ಚೇ ಆವರಿಸಿತ್ತು. ದುಡಿಯುವ ಜನರೆಂದರೆ ಬೆವರಿಳಿಸುವ ಜನರಲ್ಲವೇ. ಚಿಲ್ಲರೆ ಮುಷ್ಕರ ಎಂದರೆ ಯಾವ ಪ್ರಭಾವವೂ ಇಲ್ಲದ ಜನರ ಮುಷ್ಕರ. ಅವರ ಪ್ರತಿಭಟನೆಗೂ ಬೆವರು ಹರಿಯಲೇಬೇಕು.

ಬೃಹತ್ ಡಾಲರ್ ನೋಟಿನ ಜೊತೆಗೆ ಬರುವ ದಲ್ಲಾಳಿಗಳ ಠೇಂಕಾರ, ದೇಸಿ ವೃತ್ತಿಗಳನ್ನು ನೆಚ್ಚಿಕೊಂಡ ಚಿಲ್ಲರೆ ಜನರ ಅಸಹಾಯಕತೆಯನ್ನು ನಿರ್ದೇಶಕ ಅರುಣ್‌ಲಾಲ್ ಅವರು ಸ್ವಾರಸ್ಯಕರವಾಗಿ ಕಟ್ಟಿಕೊಟ್ಟಿದ್ದರಿಂದಲೇ, ನಾಟಕ ಮುಗಿದು ಹೊರಗೆ ಬಂದ ಮೇಲೆ ಬಹುಹೊತ್ತು ಪ್ರೇಕ್ಷಕರು ಚರ್ಚೆಯಲ್ಲಿ ತೊಡಗಿದ್ದರು.

ಉತ್ತರ ಪ್ರದೇಶದ ಕಮಲಾಶಂಕರ್ ಧನವಂತಿದೇವಿ ಫೌಂಡೇಶನ್ ತಂಡ ಪ್ರದರ್ಶಿಸಿದ 'ದುಖ್ವಾ ಮೇ ಬೀತಲ್ ರತಿಯಾ' ಕಥಾವಸ್ತುವಿನ ಕಾರಣಕ್ಕೆ ಮೈಜುಮ್ಮೆನಿಸಿದಂಥ ಹಿಂದಿ ನಾಟಕ.

ಹಳ್ಳಿಯಲ್ಲಿ ಸಾವಿಗೀಡಾದವರ ಆತ್ಮಕ್ಕೆ ಶಾಂತಿ ಕೋರಲೆಂದೇ ಹಸಿ ಹಾಲು ಕುಡಿದು, ನಂತರ, ಅದೇ ಕುಟುಂಬದವರಿಂದ ನಿಂದನೆ ಎದುರಿಸುವ ಸಂಪ್ರದಾಯವನ್ನು ಪಾಲಿಸುವ ಮಹಾಪಥರ್ ಸಮುದಾಯದಲ್ಲಿ ಹುಟ್ಟಿದ ಲೌಂಡ್ ಜರೇಲಾನ ಪ್ರತಿರೋಧವು ವ್ಯರ್ಥವಾಗುವ ಕಥೆ.

ಊಳಿಗಮಾನ್ಯ ವ್ಯವಸ್ಥೆಯ ಶೋಷಣೆ ವಿರುದ್ಧ ಬಂಡೇಳುವ ಆತನ ಒಳತೋಟಿ, ಬಂಡಾಯ ಸಫಲವಾಗದೆ ಮತ್ತೆ ಮಹಾಪಥರ್‌ಗೆ ಮರಳುವ ಸಂಕಟ ಕನ್ನಡದ ಪ್ರೇಕ್ಷಕರ ಮಟ್ಟಿಗೆ ಹೊಸ ಅನುಭವ. ಸಂಘರ್ಷದ ನಡುವೆಯೇ 'ಇವ ನಮ್ಮವ ಇವ ನಮ್ಮವನೆಂದಿನಿಸಯ್ಯ' ಎಂಬ ಭಾವವನ್ನು ಹೊಮ್ಮಿಸಲೆತ್ನಿಸಿ ಸೋಲುವ ಕ್ಷಣಗಳ ಅಭಿನಯ ಮನಕ್ಕೆ ತಾಕದೇ ಇರದು.

ಮಗಳ ಮದುವೆಗೆ ಅಡ್ಡಿಯಾದ ಎತ್ತಿನಬಂಡಿಯನ್ನು ಮಾರಬೇಕೇ ಬೇಡವೇ ಎಂಬ ಸಂದಿಗ್ದದ ನಡುವೆ ಸಿಲುಕುವ ಕುಟುಂಬದ ಕತೆಯನ್ನು ಹೇಳುವ ಮರಾಠಿ ನಾಟಕ 'ಖಟಾರ'. ಬದುಕಿಗೆ ಆಧಾರವಾದ ಕೃಷಿಯ ಸಂಪನ್ಮೂಲಗಳನ್ನು ಉಳಿಸಿಕೊಳ್ಳುವ ಸಲುವಾಗಿ ನಡೆಯುವ ತಾಕಲಾಟಗಳು ಮತ್ತವೇ ಆಧುನಿಕ ಬದುಕಿನ ಜಂಜಾಟಗಳ ಕಡೆಗೆ ಗಮನ ಸೆಳೆಯುತ್ತವೆ.

ಪರಿಕಲ್ಪನೆ ಮತ್ತು ಮಂಡನೆಯ ಹೊಸತನದ ಕಾರಣಕ್ಕೆ ಗಮನ ಸೆಳೆದ ಕನ್ನಡದ ನಾಟಕ, 'ಕಲ್ಯಾಣದ ಬಾಗಿಲು'. ಅದನ್ನು ನಾಟಕ ಎನ್ನುವುದಕ್ಕಿಂತ ಸಾಮರಸ್ಯದ ಗೀತರೂಪಕವೆಂದೇ ಹೇಳಬೇಕು. ಸಾಮರಸ್ಯದ ಹೊಸ ಕಲ್ಯಾಣ ಕಟ್ಟುವ ಆಶಯವನ್ನು ಪ್ರತಿ ದೃಶ್ಯದಲ್ಲೂ ಪ್ರತಿಪಾದಿಸುವ ನಾಟಕ, ವಚನ ಚಳವಳಿ ಸೇರಿದಂತೆ ಎಲ್ಲ ತಾತ್ವಿಕ ಧಾರೆಗಳ ಸಾಧಕರನ್ನು, ಆಧುನಿಕ ಕಾಲಘಟ್ಟದ ಸುಧಾರಣಾವಾದಿಗಳನ್ನು ಮುಖಾಮುಖಿಯಾಗಿಸುತ್ತದೆ. ದೇಶದ ಸಂವಿಧಾನವನ್ನು ರಕ್ಷಿಸಲೇಬೇಕಾದ ದುರಿತ ಕಾಲದ ಅಗತ್ಯವನ್ನು ಎತ್ತಿಹೇಳುವ ಕಾರಣಕ್ಕೆ ಇದು ಮಹತ್ವದ ನಾಟಕ. ಉತ್ಸವದ ಆಶಯವನ್ನು ಅತ್ಯಂತ ಉತ್ಕೃಷ್ಟ ಮಟ್ಟದಲ್ಲಿ ಎತ್ತಿಹಿಡಿಯುವ ನಾಟಕ.

ಆಶಯಕ್ಕೆ ತಕ್ಕ ಪ್ರಯೋಗಶೀಲ ನಾಟಕಗಳನ್ನು ಭಾರತೀಯ ಭಾಷೆಗಳಲ್ಲಿ ಹುಡುಕಾಡಿ ಆಯ್ಕೆ ಮಾಡಿದ ರಂಗಾಯಣಕ್ಕೆ ಅಭಿನಂದನೆಗಳು ಸಲ್ಲಲೇಬೇಕು.

'ಕನ್ನಡದ ಜೊತೆಗೆ ಜಗತ್ತು' ಎಂಬ ಆಶಯವೂ ಈ ಉತ್ಸವಕ್ಕೆ ಇರುವುದರಿಂದಲೇ ಬಹುಭಾಷಾ ನಾಟಕೋತ್ಸವದಲ್ಲಿ 'ಮುಟ್ಟಿಸಿಕೊಂಡವನು', 'ದ್ರೋಪದಿ ಹೇಳ್ತವ್ಳೆ', 'ಶಿಶುನಾಳ ಶರೀಫ' ನಂಥ ನಾಟಕಗಳೂ ಗಮನ ಸೆಳೆದವು.

ವಿಚಾರ ಸಂಕಿರಣ, ಚಲನಚಿತ್ರೋತ್ಸವ, ಜನಪದ ಸಂಭ್ರಮ, ಪುಸ್ತಕ ಮೇಳ, ಕರಕುಶಲ ಮೇಳ, ದೇಸಿ ಆಹಾರ ಮೇಳವೆಲ್ಲ ಬೆರೆತ ಸಿದ್ಧ ಚೌಕಟ್ಟಿನೊಳಗೇ ರಂಗಾಯಣ ಉತ್ಸವವನ್ನು ಆಯೋಜಿಸಿದ್ದರೂ ಚೌಕಟ್ಟು ಮೀರಿದ ಕೆಲವು ಚಿತ್ರಗಳೂ ಕಂಡು ಬಂದಿದ್ದು ವಿಶೇಷ.

ಮಣಿಪುರದ ಅಖೋಕಾ ಥಿಯೇಟರ್ ತಂಡ ಅಭಿನಯಿಸಿದ ಅಬೊರಿಜನಲ್ ಕ್ರೈ ನಾಟಕ ಚಿತ್ರ: ಅನೂಪ್ ಟಿ.ರಾಘ

ಕೇರಳದ ಲಿಟಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್‌ನ ಕಲಾವಿದರು ಅಭಿನಯಿಸಿದ ಮಲಯಾಳಂನ 'ಚಿಲ್ಲರ ಸಮರಂ' ನಾಟಕ

ಕಿನ್ನಾಳ ಬೊಂಬೆಗಳು...

10ನೇ ಪುಟದಿಂದ..

ಕಲಾವಿದರು ಕಿನ್ನಾಳ ಕಲೆಯ ಮೂಲ ಸ್ವರೂಪ ಉಳಿಸಿಕೊಂಡು ಬೇರೆ ಬೇರೆ ಕಲಾಕೃತಿಗಳನ್ನು ಮಾಡಲು ಆರಂಭಿಸಿದ್ದರಿಂದ ಬೇಡಿಕೆ ವ್ಯಾಪಕವಾಗುತ್ತಲೇ ಹೋಯಿತು. ಜರ್ಮನಿ, ಲಂಡನ್, ಮಲೇಷ್ಯಾ, ಸಿಂಗಪುರ, ದುಬೈ, ಸ್ವಿಟ್ಜರ್‌ಲೆಂಡ್ ಹೀಗೆ ಅನೇಕ ರಾಷ್ಟ್ರಗಳಿಗೆ ಕಿನ್ನಾಳ ಕಲಾಕೃತಿಗಳು ರಫ್ತಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ ಮನೆಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡಿದ್ದರಿಂದ ಕಲಾವಿದರಿಗೆ ಈಗ ಬಿಡುವಿಲ್ಲದಷ್ಟು ಕೆಲಸ.

ಸಾಮಾಜಿಕ ತಾಣಗಳಲ್ಲಿ ಪ್ರಚಾರ ಮಾಡುವ ಜೊತೆಗೆ ಸಂತೋಷ್ ಕಿನ್ನಾಳ ಕರಕುಶಲತೆ ಉತ್ತೇಜಿಸಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದರು. ಅಳಿವಿನ ಅಂಚಿನಲ್ಲಿದ್ದ ಕಿನ್ನಾಳ ಕಲೆ ಇದರಿಂದಾಗಿ ಮತ್ತೆ ಮುನ್ನೆಲೆಗೆ ಬಂತು. ವಿದ್ಯಾರ್ಥಿಗಳಿಗೆ ಕಾರ್ಯಾಗಾರ ನಡೆಸಿದರು. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯ ವಿದ್ಯಾರ್ಥಿಗಳಿಗೆ ಕಲಾಕೃತಿ ತಯಾರಿಕೆ ಬಗ್ಗೆ ಮಾಹಿತಿ ಒದಗಿಸಿದರು. ಸಂತೋಷ್ ಅವರ ಕಾರ್ಯದಿಂದ ಪ್ರೇರಣೆ ಪಡೆದ ಪಿಯುಸಿ ವಿದ್ಯಾರ್ಥಿ ಸಮರ್ಥ್, ಐಟಿಐ ಪೂರ್ಣಗೊಳಿಸಿರುವ ಪ್ರದೀಪ್ ಮಾನಪ್ಪ, ಸಂತೋಷ್ ಜೊತೆ ಕೈ ಜೋಡಿಸಿದ್ದಾರೆ.

ಸಂತೋಷ್ ಮೊದಲು ತಮ್ಮ ಸಮುದಾಯದ ಯುವಜನತೆಗೆ ಮಾತ್ರ ಕಿನ್ನಾಳ ಕಲೆ ತಯಾರಿಕೆಯ ತರಬೇತಿ ನೀಡುತ್ತಿದ್ದರು. ಎರಡು ತಿಂಗಳ ಹಿಂದೆ ಎಲ್ಲ ಸಮುದಾಯದವರಿಗೆ ತರಬೇತಿ ವಿಸ್ತರಿಸಿದ್ದಾರೆ. 25 ವಿದ್ಯಾರ್ಥಿಗಳನ್ನು ಒಳಗೊಂಡ ಮೂರು ತಂಡ ಈಗಾಗಲೇ ತರಬೇತಿ ಪೂರ್ಣಗೊಳಿಸಿದೆ. ತರಬೇತಿ ಪಡೆದವರು ಕಲಾಕೃತಿ ತಯಾರಿಸಲು ನಮ್ಮಲ್ಲಿ ಟೂಲ್ ಕಿಟ್ ಇಲ್ಲ ಎನ್ನುವ ನೆಪ ಹೇಳುತ್ತಿದ್ದರು. ಈಗ ಸರ್ಕಾರವೇ ಅವರಿಗೆ ಕಿಟ್ ನೀಡಿ ಹೊಸ ತಲೆಮಾರಿನ ಯುವಜನತೆಯನ್ನು ಕಲಾವಿದರನ್ನಾಗಿ ಮಾಡುತ್ತಿದೆ.

ಅಂದದ ಕಲಾಕೃತಿ ತಯಾರಿಸಲು ಶಕ್ತಿಯಿದ್ದರೂ ಮಾರುಕಟ್ಟೆಯ ಕೊರತೆಯಿಂದಾಗಿ ಕಲಾವಿದರು ಆಸಕ್ತಿ ಕಳೆದುಕೊಂಡಿದ್ದರು. ಈಗ ಡಿಜಿಟಲ್ ವೇದಿಕೆ ಕಲಾವಿದರಿಗೆ ಕೆಲಸ, ಹೊಸಬರಿಗೆ ತರಬೇತಿ, ಕಲೆ ಮುನ್ನಡೆಸುವ ನಾಯಕರನ್ನು ಹುಟ್ಟುಹಾಕಿದೆ. ದಶಕದ ಹಿಂದೆ ಸೌಂದರ್ಯವಿದ್ದರೂ ಮೊಗ ಬಾಡಿಸಿಕೊಂಡಿದ್ದ ಕಿನ್ನಾಳದ ಬೊಂಬೆಗಳಲ್ಲಿ ಈಗ ನಗು ನಲಿದಾಡುತ್ತಿದೆ. ಇದು ಯುವಜನತೆಗೆ ಸ್ಥಳೀಯವಾಗಿ ಉದ್ಯೋಗ ಹಾಗೂ ಜೀವನ ಭದ್ರತೆ ತಂದುಕೊಟ್ಟಿದೆ. 'ಕರಕುಶಲ ಕಲೆಗಳ ತವರು' ಎಂದೇ ಹೆಸರಾದ ಕಿನ್ನಾಳದಲ್ಲಿ ಬೊಂಬೆಗಳ ನಲಿದಾಟ ಜೋರಾಗಿದೆ.

ಸೈಕಲ್ ಕೋವಾ

10ನೇ ಪುಟದಿಂದ..

ಉತ್ತಮ ಜಾತಿಯ ಎಮ್ಮೆಗಳನ್ನು ಖರೀದಿಸಿ ತರಲೆಂದೇ ಆರ್ಥಿಕ ನೆರವನ್ನೂ ನೀಡುತ್ತದೆ. ಹಾಲು ಗಟ್ಟಿಯಾಗಿದ್ದರೆ, ಕೋವಾ ರುಚಿ ಹೆಚ್ಚಾಗುತ್ತದೆ ಎಂಬುದು ಇವರ ನಂಬಿಕೆ. ಹೀಗಾಗಿ ಹಾಲಿನ ವಿಚಾರದಲ್ಲಿ ರಾಜಿ ಮಾಡಿಕೊಂಡಿಲ್ಲ.

ನಿತ್ಯ ಒಂದು ಬಾರಿಗೆ 300 ಲೀಟರ್ ಹಾಲು ತರಿಸಿಕೊಳ್ಳಲಾಗುತ್ತದೆ. ಅದರಲ್ಲಿ 50 ರಿಂದ 60 ಕೆ.ಜಿಗಳಷ್ಟು ಕೋವಾ ತಯಾರಿಸಲಾಗುತ್ತದೆ. ಅದನ್ನು ಬೆಳಗ್ಗೆ ಮತ್ತು ಮಧ್ಯಾಹ್ನ ಪಾಳಿಯಂತೆ ಕೆ.ಜಿಗೆ ₹440ರಂತೆ ಮಾರಾಟ ಮಾಡಲಾಗುತ್ತದೆ. ಕೋವಾ ತಯಾರಿಕೆ, ಮಾರಾಟ, ವ್ಯಾಪಾರ ವ್ಯವಹಾರಕ್ಕೆಂದೇ ಕುಟುಂಬದ 20ಕ್ಕೂ ಹೆಚ್ಚು ಮಂದಿ ನಿತ್ಯ ಶ್ರಮಿಸುತ್ತಾರೆ.

'ಕೋವಾ ತಯಾರಿಸಲು ಏಳು ಗಂಟೆ ಹಾಲನ್ನು ಮಂದ ಉರಿಯಲ್ಲಿ ಕಾಯಿಸಬೇಕು. ನಿರಂತರವಾಗಿ ತಿರುವುತ್ತಲೇ ಇರಬೇಕು. ಇಲ್ಲವಾದಲ್ಲಿ ತಳ ಹಿಡಿದು ಕೋವಾ ಕಹಿಯಾಗಿಬಿಡುತ್ತದೆ' ಎನ್ನುತ್ತಾರೆ ಗುಡುಸಾಬ್ ಮರಿಮೊಮ್ಮಗ ಮೊಹಮದ್ ನವಾಜ್.

ಸೈಕಲ್ ಕೋವಾಕ್ಕೆ ಸಕ್ಕರೆ, ಬಾದಾಮಿ, ಏಲಕ್ಕಿ ಪುಡಿಯನ್ನು ಹೊರತುಪಡಿಸಿ ಬೇರೇನನ್ನೂ ಸೇರಿಸಲಾಗುವುದಿಲ್ಲ. ಕೆಡದಂತೆ ಮಾಡಲು ರಾಸಾಯನಿಕಗಳನ್ನು ಬಳಸುವುದಿಲ್ಲ. ಮಂದ ಉರಿಯಲ್ಲಿ ಮಾಡಿದ ಯಾವುದೇ ಖಾದ್ಯ ಬಹಳ ದಿನಗಳ ವರೆಗೆ ಕೆಡುವುದಿಲ್ಲ. ಈ ಕೋವಾ ಕೂಡ ಒಂದು ವಾರದ ವರೆಗೆ ಇರುತ್ತದೆ. ಅರಬ್ ರಾಷ್ಟ್ರಗಳಿಗೆ ಕೋವಾ ಕೊಂಡೊಯ್ದವರು ಫ್ರಿಡ್ಜ್‌ನಲ್ಲಿ ಇರಿಸಿ 15 ದಿನಗಳ ವರೆಗೆ ತಿಂದ ಉದಾಹರಣೆಗಳೂ ಇವೆ ಎಂದು ಹೇಳುತ್ತಾರೆ.

'ಸ್ನೇಹಿತರು ಬಳ್ಳಾರಿ ಸೈಕಲ್ ಕೋವಾ ರುಚಿಯನ್ನು ತೋರಿಸಿದರು. ಆಗಿಂದಲೂ ಸ್ನೇಹಿತರಿಂದ ಕೋವಾ ತರಿಸಿಕೊಳ್ಳುತ್ತಿದ್ದೆ. ಈಗ ನಾನೇ ಬಳ್ಳಾರಿಗೆ ಬಂದಿದ್ದು, ಅದೇ ಸ್ವಾದವನ್ನೇ ಹುಡುಕಿ ಖರೀದಿಸಿದ್ದೇನೆ' ಎನ್ನುತ್ತಾರೆ ದಾವಣಗೆರೆಯ ಟೆಕ್ಸ್‌ಟೈಲ್ಸ್ ಉದ್ಯಮಿ ಗೋವಿಂದರಾಜು.

'ಎಂಬತ್ತು ವರ್ಷಗಳ ಹಿನ್ನೆಲೆಯ ಸೈಕಲ್ ಕೋವಾ ಬಳ್ಳಾರಿಯಿಂದ ಹೊರಗಿನ ಪ್ರಪಂಚಕ್ಕೆ ಲಾಕ್‌ಡೌನ್ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮಗಳ ಮೂಲಕ ಪರಿಚಯವಾಯಿತು. ಹೊರ ಜಿಲ್ಲೆಗಳಿಂದಲೂ ಬೇಡಿಕೆ ಬರಲಾರಂಭಿಸಿತು' ಎಂದು ಗುಡುಸಾಬ್ ಅವರ ಮೊಮ್ಮಗ, ಎಂಜಿನಿಯರ್ ಪದವೀದರ ನಾಸಿರ್ ಹೇಳುತ್ತಾರೆ.

ಕೋವಾಕ್ಕೆ ಸಿಕ್ಕಿರುವ ಜನಪ್ರಿಯತೆ, ಮನ್ನಣೆಯಿಂದ ಪ್ರೇರಣೆಗೊಂಡಿರುವ ಗುಡುಸಾಬ್ ಅವರ ಕುಟುಂಬ 'ಬ್ರ್ಯಾಂಡ್' ರೂಪ ಕೊಡಲು ಮುಂದಾಗಿದೆ. 'ಬಳ್ಳಾರಿ ಸೈಕಲ್ ಕೋವಾ' ಎಂಬ ಹೆಸರಿನಲ್ಲಿ, ಫ್ಯಾಕ್ಟರಿ ಆರಂಭಿಸಿ, ಮಾರ್ಕೆಟಿಂಗ್ ಮೂಲಕ ಉದ್ಯಮದ ಸ್ಪರ್ಶ ನೀಡಲು ಚಿಂತನೆ ನಡೆಸಿದೆ.

ಬಳ್ಳಾರಿಯ ಹಳೇ ಬೆಂಗಳೂರು ರಸ್ತೆಯಲ್ಲಿ ಕೋವಾ ಸವಿಯುತ್ತಿರುವ ಗ್ರಾಹಕರು

ಮುನ್ನೋಟ 17-03-2024 ರಿಂದ 23-03-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹೆಚ್ಚಿನ ಗೌರವಕ್ಕಾಗಿ ಆಸೆಪಡುವಿರಿ. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ. ಅತಿ ಚುರುಕಾಗಿ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವಿರಿ. ಆಸ್ತಿ ಮಾಡುವ ವಿಚಾರದಲ್ಲಿ ಸಾಕಷ್ಟು ಮುನ್ನಡೆ ಸಾಧಿಸುವಿರಿ. ಮಕ್ಕಳಿಗಾಗಿ ಹೆಚ್ಚಿನ ಹಣ ಖರ್ಚುಮಾಡುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಶ್ರಮಕ್ಕೆ ತಕ್ಕಫಲ ದೊರೆಯುತ್ತದೆ. ಸಂಗಾತಿಯ ಮಾತಿನಲ್ಲಿ ವ್ಯತ್ಯಾಸವಿದ್ದರೂ ಕೂಡ ಅದಕ್ಕೆ ಹೆಚ್ಚು ಗಮನಕೊಡುವ ಅಗತ್ಯವಿಲ್ಲ.

ವೃಷಭರಾಶಿ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2

ಕಲೆಯ ಕಡೆ ಹೆಚ್ಚು ಗಮನ ಕೊಡುವಿರಿ. ಉತ್ತಮವಾಗಿ ಮಾತನಾಡಿ ವ್ಯವಹಾರದಲ್ಲಿ ಮುನ್ನಡೆ ಸಾಧಿಸುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸ್ಥಿರಾಸ್ತಿ ಸಿಕ್ಕರೂ ಅದರ ಮೂಲ ದಾಖಲೆಗಳಲ್ಲಿ ಸಾಕಷ್ಟು ಗೊಂದಲಗಳಿರುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಕಡಿಮೆ ಯಶಸ್ಸು ಇರುತ್ತದೆ. ಶೀತಬಾಧೆ ಮತ್ತು ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರ ವಹಿಸಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಾರದ ಆರಂಭ ತುಂಬಾ ಆನಂದದಾಯಕವಾಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಆಸ್ತಿ ವಿಚಾರದಲ್ಲಿ ನಿರೀಕ್ಷಿತ ಪ್ರಗತಿಯನ್ನು ಕಾಣುವುದಿಲ್ಲ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶ ದೊರೆಯುತ್ತದೆ. ಕೃಷಿಯಲ್ಲಿ ಹೆಚ್ಚು ಸಾಧನೆಯನ್ನು ಮಾಡಬಹುದು. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರ ಇರಲಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಡವಳಿಕೆಯಲ್ಲಿ ಸ್ವಲ್ಪ ಆಲಸೀತನ ಕಾಣಬಹುದು. ಸ್ಥಿರಾಸ್ತಿಯ ವಿಚಾರದಲ್ಲಿ ಸ್ವಲ್ಪ ಮುನ್ನಡೆ ಸಾಧಿಸುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ಉದ್ಯೋಗ ಸ್ಥಳದಲ್ಲಿ ಹಣಕಾಸಿನ ಕೊರತೆ ಕಾಡಬಹುದು. ಉದರ ಸಂಬಂಧಿ ಕಾಯಿಲೆಗಳು ಕೆಲವರನ್ನು ಕಾಡಬಹುದು. ತಂದೆಯ ವ್ಯಾಪಾರಗಳಲ್ಲಿ ನಿಮಗೆ ಸ್ಥಾನ ಸಿಗುವ ಸಾಧ್ಯತೆ ಇದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಒಂದು ರೀತಿಯ ದ್ವಂದ್ವ ನಡವಳಿಕೆಗಳು ನಿಮ್ಮಲ್ಲಿರುತ್ತವೆ. ಇದರಿಂದ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ವ್ಯತ್ಯಾಸಗಳಾಗಬಹುದು. ಹಣದ ಒಳ ಹರಿವು ಮಂದಗತಿಯಲ್ಲಿರುತ್ತದೆ. ನವೀನ ರೀತಿಯ ಕೃಷಿಯನ್ನು ಮಾಡುವವರಿಗೆ ಸಾಕಷ್ಟು ಸಹಾಯ ಧನ ಮತ್ತು ಸಲಹೆಗಳು ದೊರೆಯುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವಾರದ ಆರಂಭದಲ್ಲಿ ಬಹಳಷ್ಟು ಆಲಸೀತನ ಇರುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ಬಂಧುಗಳಿಂದ ಅಥವಾ ಒಡಹುಟ್ಟಿದವರಿಂದ ಕೆಲಸ ಕಾರ್ಯಗಳಿಗೆ ಅಡ್ಡಿಬರುವ ಸಾಧ್ಯತೆ ಇದೆ. ಸ್ಥಿರಾಸ್ತಿಯನ್ನು ಮಾಡಲು ಹೊಂದಿಸಿದ್ದ ಹಣ ಬೇರೆ ಕಾರಣಕ್ಕೆ ಖರ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಯಶಸ್ಸು ಇರುತ್ತದೆ. ವಾಹನ ಚಲಾವಣೆ ಮಾಡುವವರು ಹೆಚ್ಚು ಎಚ್ಚರಿಕೆ ವಹಿಸಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಅನಿಶ್ಚಿತತೆಯ ಫಲವಾಗಿ ನೀವು ಮುಜುಗರಕ್ಕೆ ಒಳಗಾಗುವಿರಿ. ಧನ ಆದಾಯವು ಮಂದಗತಿಯಲ್ಲಿರುತ್ತದೆ. ಹಿರಿಯರ ಜೊತೆ ಉತ್ತಮ ಸ್ನೇಹ ಗಳಿಸಲು ಪ್ರಯತ್ನ ಪಡುವಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಸಹಕಾರ ದೊರೆಯಬಹುದು. ಆಸ್ತಿ ಮಾಡುವ ವಿಚಾರದಲ್ಲಿ ಹಿಂಜರಿಕೆ ಉಂಟಾಗುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಕಡಿಮೆ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಧನ ಆದಾಯವು ಮಧ್ಯಮಗತಿಯಲ್ಲಿದ್ದರೂ ಹೆಚ್ಚಿನ ಖರ್ಚು ಒದಗಿ ಬರುತ್ತದೆ. ನಿಮಗೆ ಮೋಸಮಾಡಿದವರನ್ನು ಬಗ್ಗು ಬಡಿಯುವ ಪ್ರಯತ್ನಕ್ಕೆ ಕೈ ಹಾಕುವಿರಿ. ಕೃಷಿಕರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಆಹಾರ ಸಂಬಂಧಿತ ಅನಾರೋಗ್ಯಗಳು ಬರುವ ಸಾಧ್ಯತೆಗಳಿವೆ. ತೆರಿಗೆ ತಜ್ಞರಿಗೆ ವಿದೇಶಿ ಕಂಪನಿಗಳಲ್ಲಿ ಕೆಲಸ ಮಾಡಲು ಅವಕಾಶ ದೊರೆಯಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಕಡಿಮೆ ಆದಾಯವಿದ್ದರೂ ಕೂಡ ಹಣವನ್ನು ಸರಿಯಾಗಿ ನಿರ್ವಹಣೆಮಾಡುವಿರಿ. ಶತ್ರುಗಳನ್ನು ಮಟ್ಟ ಹಾಕಲು ಬುದ್ಧಿವಂತಿಕೆ ಮತ್ತು ದೇಹ ಬಲವನ್ನು ಸರಿಯಾಗಿ ಬಳಸುವಿರಿ. ವಿದೇಶದಲ್ಲಿರುವವರು ಆಸ್ತಿ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ದೊರೆಯುತ್ತದೆ. ಸ್ತ್ರೀಯರೊಡನೆ ಹಣಕಾಸಿನ ವ್ಯವಹಾರಗಳು ಅಷ್ಟು ಒಳಿತಲ್ಲ. ಪ್ರೇಮಿಗಳ ಪ್ರೇಮ ಯಶಸ್ವಿಯಾಗಿ ವಿವಾಹವಾಗುವ ಸಾಧ್ಯತೆಗಳಿವೆ. ತಾಯಿಯು ನಿಮ್ಮ ಮೇಲೆ ಸಿಟ್ಟಾದರೂ ಸಹಕಾರ ನೀಡುವವರು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸಾಹಸ ಕಲಾವಿದರುಗಳಿಗೆ ಹೆಚ್ಚಿನ ಅವಕಾಶಗಳು ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ನಿಮ್ಮಲ್ಲಿ ಹಠಹಿಡಿದು ಸಾಧಿಸುವ ಛಲವಿರುತ್ತದೆ. ಆಸ್ತಿಕೊಳ್ಳುವ ವಿಚಾರದಲ್ಲಿ ಮುಂದುವರೆಯಬಹುದು. ವಿದ್ಯಾರ್ಥಿಗಳಿಗೆ ಫಲಿತಾಂಶ ನಿರೀಕ್ಷೆಯ ಹತ್ತಿರಕ್ಕೆ ಬರುತ್ತದೆ. ಶೀತಬಾಧೆ ಕೆಲವರನ್ನು ಕಾಡಬಹುದು. ಅಲಂಕಾರಿಕ ವಸ್ತುಗಳಿಗಾಗಿ ಹಣ ಖರ್ಚಾಗುತ್ತದೆ. ಕೆಲವರ ಪ್ರೇಮ ಪ್ರಸಂಗಗಳು ಹಳಸಬಹುದು. ವೃತ್ತಿಯಲ್ಲಿ ಕಿರಿಕಿರಿಗಳಿದ್ದರೂ ವೃತ್ತಿ ಸರಿಯಾಗಿ ಸಾಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರಿಗೆ ಸಮಾಜದಿಂದ ಹೆಚ್ಚು ಗೌರವ ದೊರೆಯುತ್ತದೆ. ಧನ ಆದಾಯವು ಏರಿಕೆಯ ಹಾದಿಯಲ್ಲಿರುತ್ತದೆ. ಅತ್ಯಂತ ಚುರುಕಾಗಿ ಕೆಲಸ ಮಾಡಿ ಎಲ್ಲರಿಂದ ಪ್ರಶಂಸೆ ಪಡೆಯುವಿರಿ. ಸ್ವಪ್ರಯತ್ನದಿಂದ ಆಸ್ತಿ ಮಾಡಲು ಮುಂದಾಗುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ತಾಯಿಯಿಂದ ನಿರೀಕ್ಷೆಗಿಂತ ಹೆಚ್ಚು ಸಹಕಾರ ದೊರೆಯುತ್ತದೆ. ಸಂಗಾತಿಯಿಂದ ಸರಿಯಾದ ಸಮಯದಲ್ಲಿ ಆರ್ಥಿಕ ಸಹಾಯ ದೊರೆಯಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆತ್ಮ ಗೌರವವು ಅತಿಯಾಗಿರುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟಕ್ಕಿರುತ್ತದೆ. ನಿಮ್ಮ ಬಂಧುಗಳೇ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಮಾಡುವವರು. ಕೃಷಿಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ. ನಿಮ್ಮ ಸಂಗಾತಿಯಿಂದ ನಿರೀಕ್ಷಿತ ಸಹಕಾರಗಳು ದೊರೆಯುವುದು ಕಡಿಮೆ. ಸೌಂದರ್ಯ ಸಾಮಗ್ರಿಗಳಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ಪದಬಂಧ 2833



ಮೇಲಿನಿಂದ ಕೆಳಕ್ಕೆ

1. ಹಿಂದಿನ ಕಾಲದ ತೂಗುವ ದಂಡ 3
2. ಹಿಂದಿಯ ಈತ ಕನ್ನಡದವರಿಗೆ ಅನ್ಯನೇ? 3
3. ಖಡ್ಗದಂತ ಅಪಕ್ವ ಫಲ 4
4. ಹೊಸದಾಗಿ ಮೂಡಿದ ಆಂತರ್ಯದ ಅನಿಸಿಕೆ 4
7. ಜಲಗಜ ಪಡೆದ ಕನ್ನಡದ ಹೆಸರು 3
8. ಸುತ್ತಿ ಬರುವ ದೂರದ ಮಾರ್ಗ 5
9. ಪ್ರಾಣ ತುಂಬಿದ ಬದುಕಿನ ಹೆಜ್ಜೆ 4
12. ದಕ್ಷಿಣ ಕನ್ನಡದ ಹೆಗ್ಗಳಿಕೆಯ ಮನೆತನ 3
13. ತಾಯಿಯ ಬಗ್ಗೆ ಅಪಾರ ಪ್ರೀತಿ ಗೌರವ 4
14. ಮದುಮಗನಿಂದ ಬಂದ ಶ್ರೇಷ್ಠವಾದ ಕೊಡುಗೆ 4
15. ಕಿವಿಯಿಂದ ಹುಟ್ಟಿಬಂದವ 3
16. ತುಳು ನಾಡಿಗೆ ಸೇರಿದವ 3

ಎಡದಿಂದ ಬಲಕ್ಕೆ

1. ಮಾರ್ಗ ನಿರ್ದೇಶಕ ಬೆಳಕು 4
3. ಬಾಗಿಲೊಳಗೆ ಹಸುಬಂದಾಗ ನಡೆವ ಯುದ್ಧ 3
5. ಅಂತರಂಗ ಹಾಗೂ ಅನುಸರಣೆಯಲ್ಲಿ ದಾನವ ಗುಣ 6
6. ಮನಕ್ಕೆ ಮುದ ಕೊಟ್ಟು ಸಂತಸಗೊಳಿಸುವಂತದ್ದು 4
8. ರಕ್ತ ಮಾಂಸಗಳಿಲ್ಲದ ಶಕ್ತಿಹೀನನ ಶರೀರ 6
10. ಗೃಹದ ಮುಂದೆ ಬೃಂದಾವನ ಹಾಗೂ ರಂಗವಲ್ಲಿಯ ಆವರಣ 5
11. ಪುಂಗಿಯೂದಿದಾಗ ಎತ್ತಿದ ಸರ್ಪದ ತಲೆ 5
13. ಮನುಷ್ಯನ ಹಿತಾಸಕ್ತಿ ಕಾಪಾಡುವ ಸೈಂಧಾತಿಕ 6
15. ಸಂಭಾಷಣೆಯಲ್ಲಿ ಕೊನೆಯ ನುಡಿ 4
17. ಕೊಡುವದರಲ್ಲಿ ಕಲಿಯಾಗಿ ಕಿವಿಯಿಂದ ಕಿವಿಗೆ ಖ್ಯಾತನಾದವ 6
18. ಮನಸ್ಸಿನಲ್ಲೇ ಪಾಠವನ್ನು ಉರು ಹಚ್ಚುವುದು 3
19. ರಾಧಾ ಕೃಷ್ಣರ ಪ್ರೇಮವನ್ನು ಕೃತಿಯಲ್ಲಿ ಅಮರವಾಗಿಸಿದ ಕವಿ 4

ಪದಬಂಧ ಉತ್ತರ -2832

ಮೇಲಿಂದ ಕೆಳಕ್ಕೆ

1.ಶಿವರಾತ್ರೇಶ್ವರ 2.ಪುಡಾರಿ 3.ಅರ್ಧರಾತ್ರಿ 4.ತಪೋಭಂಗ 6.ಪುಲಿನ 7.ಪಥ 8.ರಂಜನಿ 9.ವಿಕ 10.ಸೌಕರ್ಯ 12.ಸಿಡಿಸು 13.ಸರಿ 14.ಹರಿಹರಪ್ರಿಯ 15.ಕಾಳಿ 16.ವೈದೇಹಿ 17.ಹಾದಿಹೋಕ 18.ಬಲಗಾಲು 20.ತಪನ

ಎಡದಿಂದ ಬಲಕ್ಕೆ

1.ಶಿಖಾರಿಪುರ 3.ಅಡ್ಡಮತ 5.ರಿಪು 7.ಪತ್ರಿಕಾರಂಗ 9.ವಿಧಾನಸೌಧ 11.ರಸಿಕ 13.ಸನಿಹ 15.ಕಾರ್ಯವೈಖರಿ 17.ಹಾಸುಗಂಬಳಿ 19.ಹಿತ 21.ಕಡಗೋಲು 22.ಜನಮೇಜಯ

ಕು ಶಿ ಹರಿದಾಸ ಭಟ್ಟರಿಗೆ ನೂರು

‘ಕು ಶಿ’ ಎಂದೇ ಜನಪ್ರಿಯರಾಗಿದ್ದ ಕುಂಜಿಬೆಟ್ಟು ಶಿವ ಹರಿದಾಸ ಭಟ್ಟರು ಬದುಕಿದ್ದರೆ ಅವರಿಗೀಗ ನೂರು ವರ್ಷವಾಗಿರುತ್ತಿತ್ತು. ಉಡುಪಿಯ ಸಾಂಸ್ಕೃತಿಕ ಲೋಕವನ್ನು ಹೊರ ಜಗತ್ತಿಗೆ ಪರಿಚಯಿಸುವಲ್ಲಿ ಮಹತ್ತರ ಪಾತ್ರ ವಹಿಸಿದ ಅವರ ಕೆಲಸ, ಸಾಧನೆಗಳ ಸಂಸ್ಮರಣೆ ಇಲ್ಲಿದೆ...

ಬಿ.ಎ.ವಿವೇಕ ರೈ

ಸ್ಮರಣೆ

‘ಕು ಶಿ’ (ಕುಂಜಿಬೆಟ್ಟು ಶಿವ) ಹರಿದಾಸ ಭಟ್ಟರು ಬದುಕಿದ್ದರೆ ಇವತ್ತಿಗೆ ಅವರಿಗೆ ನೂರು ವರ್ಷ ತುಂಬುತ್ತಿತ್ತು. ಜನನ :17 ಮಾರ್ಚ್ 1924. ನಿಧನ : 20 ಆಗಸ್ಟ್ 2000. ‘ಕುಶಿ’ ಎಂದೇ ಜನಪ್ರಿಯರಾಗಿದ್ದ ಇವರು, ಧಾರ್ಮಿಕ ಕೇಂದ್ರವಾಗಿ ಮಾತ್ರ ಪರಿಚಿತವಾಗಿದ್ದ ಉಡುಪಿಯನ್ನು ದೇಶದ ಒಳಗೆ ಮತ್ತು ಹೊರಗೆ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದವರು. ರಂಗಭೂಮಿ ಚಿತ್ರಕಲೆ ಸಂಗೀತ ಸಾಹಿತಿಗಳು ಜಾನಪದ ಕಲಾವಿದರು ವಿದ್ವಾಂಸರು ಶಿಕ್ಷಣ ತಜ್ಞರು-ಎಲ್ಲರಿಗೂ ಉಡುಪಿ ತೆರೆದುಕೊಂಡದ್ದು ಇವರ ಮೂಲಕ. ಉಡುಪಿಯ ಎಂ ಜಿ ಎಂ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ, ಬಳಿಕ ಪ್ರಿನ್ಸಿಪಾಲ್ ಆಗಿ (1964-1979) ಇದ್ದ ಕಾಲಘಟ್ಟದಲ್ಲಿ ಕುಶಿಯವರು ತಮ್ಮ ಕಾಲೇಜನ್ನು ಪುಟ್ಟ ವಿಶ್ವವಿದ್ಯಾಲಯದ ಮಟ್ಟಕ್ಕೆ ಏರಿಸಿದರು. 1979ರಲ್ಲಿ ಸೇವೆಯಿಂದ ನಿವೃತ್ತರಾದ ಬಳಿಕ 2000ದವರೆಗೆ ಅವರು ತಮ್ಮ ಕಾಲೇಜಿನ ಆವರಣದಲ್ಲೇ ಮಾಡಿದ್ದು ವಿಶ್ವಾಮಿತ್ರ ಸೃಷ್ಟಿ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ (ಆರ್ ಆರ್ ಸಿ), ಯಕ್ಷಗಾನ ಕೇಂದ್ರ ಎಂಬ ತ್ರಿವಳಿ ಸಂಸ್ಥೆಗಳನ್ನು ಸ್ಥಾಪಿಸಿ ಯಶಸ್ವಿಯಾದರು.

ಹರಿದಾಸ ಭಟ್ಟರು ಮೊದಲು ಸೇರಿದ್ದು ಉಡುಪಿಯ ಕಡಿಯಾಳಿ ಶಾಲೆಗೆ. ಅಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಬಳಿಕ ಮುಂದಿನ ವಿದ್ಯಾಭ್ಯಾಸ ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ. ಹರಿದಾಸ ಭಟ್ಟರಿಗೆ ಕಾಲೇಜಿಗೆ ಹೋಗುವ ಆಸೆ ಬಹಳ ಇತ್ತು. ಆದರೆ ಅವರ ಮನೆಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇರಲಿಲ್ಲ. ಕೊನೆಗೆ ಮಗನನ್ನು ಮಂಗಳೂರಿನಲ್ಲಿ ಶಿಕ್ಷಕ ವೃತ್ತಿಯ ತರಬೇತಿ ಶಾಲೆಗೆ ಕಳುಹಿಸಿದರು. ಎರಡು ವರ್ಷಗಳ ಆ ಶಿಕ್ಷಕ ತರಬೇತಿಯ ಅವಧಿಯಲ್ಲಿಯೇ ಹರಿದಾಸ ಭಟ್ಟರು ಸಂಜೆ ವೇಳೆ ನಡೆಯುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ‘ಕನ್ನಡ ಜಾಣ’ತರಗತಿಗಳಿಗೆ ಹಾಜರಾಗಿ ಪರೀಕ್ಷೆಗೆ ಕುಳಿತು ಪಾಸಾದರು. ಆ ವೇಳೆಗೆ ಪುಸ್ತಕಗಳ ಓದಿನ ಗೀಳು ಹುಟ್ಟಿ, ಪ್ರಬುದ್ಧ ಕರ್ನಾಟಕದ ಹಳೆಯ ಸಂಚಿಕೆಗಳ ಸಹಿತ ಕಾದಂಬರಿಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಂಡರು.



ಕು ಶಿ ಹರಿದಾಸ ಭಟ್ಟ

ಶಿಕ್ಷಕ ತರಬೇತಿ ಪಡೆದ ಕುಶಿ ತಾವು ಕಲಿತ ಕಡಿಯಾಳಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿಕೊಂಡರು. ಬಳಿಕ ಉಡುಪಿಯ ಕ್ರಿಶ್ಚನ್ ಹೈಸ್ಕೂಲ್ನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಅವರು ಕನ್ನಡದಲ್ಲಿ ಮತ್ತು ಸಂಸ್ಕೃತದಲ್ಲಿ ‘ವಿದ್ವಾನ್’ ಪರೀಕ್ಷೆಗಳನ್ನೂ ಹಿಂದಿಯಲ್ಲಿ ವಿಶಾರದ ಪರೀಕ್ಷೆಯನ್ನೂ ಪಾಸು ಮಾಡಿದರು. ಅವರ ಕನಸು ಇದ್ದದ್ದು ಕಾಲೇಜು ಕಟ್ಟೆ ಹತ್ತಬೇಕು ಎನ್ನುವುದು. 1946ರಲ್ಲಿ ಮದ್ರಾಸ್ ಕ್ರಿಶ್ಚನ್ ಕಾಲೇಜಿಗೆ ಸೇರಿ ಅಲ್ಲಿ ಅರ್ಥಶಾಸ್ತ್ರದಲ್ಲಿ ಬಿಎ ಆನರ್ಸ್ ಪದವಿ ಪಡೆದರು. ಅಲ್ಲಿ ಬಾಗಲೋಡಿ ದೇವರಾಯರ ಸಂಪರ್ಕದಿಂದ ಕುಶಿ ಅವರ ಸಾಹಿತ್ಯದ ಓದು ಇನ್ನಷ್ಟು ಬೆಳೆಯಿತು.

ಹರಿದಾಸ ಭಟ್ಟರು ಡಾ. ಮಾಧವ ಪೈಗಳು ಸ್ಥಾಪಿಸಿದ ಉಡುಪಿಯ ಎಂಜಿಎಂ ಕಾಲೇಜಿಗೆ ಸೇರಿದ್ದು 1950ರಲ್ಲಿ. ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿ 1964ರವರೆಗೆ. ಮತ್ತೆ15 ವರ್ಷ ಪ್ರಿನ್ಸಿಪಾಲರಾಗಿ 55 ವರ್ಷ ತುಂಬಿದಾಗ 1979ರಲ್ಲಿ ಸೇವಾನಿವೃತ್ತಿ. ಎಂಜಿಎಂ ಕಾಲೇಜಿನ ತಮ್ಮ ಸೇವಾವಧಿಯಲ್ಲಿ ಡಾ ಮಾಧವ ಪೈಗಳು ಕೊಟ್ಟ ಪ್ರೋತ್ಸಾಹವನ್ನು ಕುಶಿ ತಮ್ಮ ಎಲ್ಲ ಬರಹಗಳಲ್ಲಿ ನೆನಪಿಸಿಕೊಂಡಿದ್ದಾರೆ.

ಗೋವಿಂದ ಪೈ ನಿಧನದ ಬಳಿಕ ಅವರ ಅಪೂರ್ವ ಗ್ರಂಥ ಭಂಡಾರ ಅನಾಥವಾಗಿ ಇದ್ದಾಗ ಕುಶಿಯವರು ಪೈಯವರ ಬಂಧುಗಳಾದ ಅನಂತ ಪೈ, ತುಕಾರಾಮ ಪೈ ಅವರ ಮನವೊಲಿಸಿ 1965ರಲ್ಲಿ ಅದನ್ನು ಎಂಜಿಎಂ ಕಾಲೇಜಿಗೆ ತಂದು ಸಂರಕ್ಷಿಸಿ ಇಟ್ಟರು. ಅದೇ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರವಾಯಿತು. ತುಳುವಿನಂತಹ ಪ್ರಾದೇಶಿಕ ಶ್ರೀಮಂತ ಭಾಷೆಗೆ ಒಂದು ಸಮಗ್ರಸ್ವರೂಪದ ನಿಘಂಟು ಆಗಬೇಕು ಎಂದು ಕನಸು ಕಂಡ ಕುಶಿ ಅದಕ್ಕಾಗಿ ಆಫ್ರಿಕಾದ ಸೆನಗಲ್ನಲ್ಲಿ ಪ್ರಾಧ್ಯಾಪಕರಾಗಿದ್ದ ಭಾಷಾವಿಜ್ಞಾನಿ ದಂಪತಿ ಯುಪಿ ಉಪಾಧ್ಯಾಯ - ಸುಶೀಲಾ ಉಪಾಧ್ಯಾಯರನ್ನು ಆಹ್ವಾನಿಸಿದರು. ಉಪಾಧ್ಯಾಯ ದಂಪತಿ ತುಳು ನಿಘಂಟುವಿನ ಸಂಪಾದಕರಾಗಿ ಸೇವೆಯನ್ನು ಸಲ್ಲಿಸಿದರು. ಕುಶಿಯವರ ಅಧ್ಯಕ್ಷತೆಯ ಸಲಹಾ ಸಮಿತಿಯಲ್ಲಿ ಹಿರಿಯ ಸಾಹಿತಿಗಳ ಜೊತೆಗೆ ನಾನು ಆರಂಭದಿಂದ ಕೊನೆವರೆಗೆ ಇದ್ದೆ. 1979ರಲ್ಲಿ ಆರಂಭವಾದ ಯೋಜನೆ 1997ರಲ್ಲಿ ಮುಕ್ತಾಯವಾಗಿ ಒಟ್ಟು ಆರು ಬೃಹತ್ ಸಂಪುಟಗಳು ಬೆಳಕು ಕಂಡವು.

ಶಿವರಾಮ ಕಾರಂತರ ನೇತೃತ್ವದಲ್ಲಿ ವೀರಭದ್ರ ನಾಯಕರ ಗುರುತನದಲ್ಲಿ1971ರಲ್ಲಿ ಆರಂಭವಾದ ಯಕ್ಷಗಾನ ಶಾಲೆ ಮುಂದೆ ಕಾರಂತರ ಯಕ್ಷಗಾನ ಬ್ಯಾಲೆಯ ರಾಷ್ಟ್ರೀಯ ಅಂತರರಾಷ್ಟ್ರೀಯ ಪ್ರದರ್ಶನಗಳಿಂದ ಜಾಗತಿಕ ಯಕ್ಷಗಾನ ಕೇಂದ್ರವಾಗಿ ಖ್ಯಾತಿ ಪಡೆಯಿತು. ಕುಶಿಯವರು ಯಕ್ಷಗಾನ ಮೇಳವನ್ನು ಕಟ್ಟಿಕೊಂಡು ಜಗತ್ತಿನ ಅನೇಕ ದೇಶಗಳಲ್ಲಿ ಪ್ರದರ್ಶನ ಮಾಡಿಸಿದ ಕಾರಣ ತರಬೇತಿ ಕಮ್ಮಟ ಪ್ರದರ್ಶನಗಳ ಮೂಲಕ ಯಕ್ಷಗಾನ ಕೇಂದ್ರವು ಮಣಿಪಾಲ ಶಿಕ್ಷಣ ಸಂಸ್ಥೆಯ ಅನನ್ಯ ಅಂಗವಾಗಿದೆ.

ಸಾಂಸ್ಕೃತಿಕ ಮಿಷನರಿ ಕುಶಿಯವರು ಫೋರ್ಡ್ ಫೌಂಡೇಶನ್ ಸಂಪರ್ಕದಿಂದ 1984ರಲ್ಲಿ ಆರ್ ಆರ್ ಸಿ ಸಂಸ್ಥೆಯನ್ನು ಎಂಜಿಎಂ ಆವರಣದಲ್ಲಿ ಸ್ಥಾಪಿಸಿದರು. ಜಾನಪದದ ಬಹುರೂಪಗಳ ದಾಖಲಾತಿ ಮತ್ತು ಸಂರಕ್ಷಣೆಯ ಜೊತೆಗೆ ಅಂತರರಾಷ್ಟ್ರೀಯ ಜಾನಪದ ಕಮ್ಮಟಗಳು (1988-89) ಮತ್ತು ಫಿನ್ನಿಷ್ -ಇಂಡಿಯನ್ ಜಾನಪದ ಕ್ಷೇತ್ರಕಾರ್ಯ ಹಾಗೂ ತರಬೇತಿ ಶಿಬಿರ (1989): ಭಾರತದ ಜಾನಪದ ಕ್ಷೇತ್ರದಲ್ಲಿ ಚಾರಿತ್ರಿಕ ದಾಖಲೆಗಳಾದುವು. ಫಿನ್ಲೆಂಡ್‌ನ ತುರ್ಕು ವಿವಿಯ ಜಾನಪದ ಪ್ರಾಧ್ಯಾಪಕ ಲೌರಿ ಹಾಂಕೊರನ್ನು ಕುಶಿ 1985ರಲ್ಲಿ ಉಡುಪಿಗೆ ಆಹ್ವಾನಿಸಿ ಫಿನ್ನಿಷ್ ರಾಷ್ಟ್ರೀಯ ಮಹಾಕಾವ್ಯ ಕಲೆವಲದ 150ನೆಯ ವರ್ಷಾಚರಣೆಯನ್ನು ಮಾಡಿದರು. ಇದರಿಂದ ಪ್ರಭಾವಿತರಾಗಿ ಹಾಂಕೊ ಆರ್ ಆರ್ ಸಿ ಜೊತೆಗೆ ವೀರೇಂದ್ರ ಹೆಗ್ಗಡೆಯವರ ಸಹಕಾರದೊಂದಿಗೆ ಧರ್ಮಸ್ಥಳ ಪರಿಸರದಲ್ಲಿ ‘ಜಾನಪದ ಕ್ಷೇತ್ರಕಾರ್ಯ ಮತ್ತು ತರಬೇತಿ ಶಿಬಿರ’ವನ್ನು1989ರಲ್ಲಿ ನಡೆಸಿದರು.

ಕುಶಿ ಅವರ ಮೊದಲನೆಯ ಪುಸ್ತಕ - ಪ್ರೇಮಚಂದ್ರ ಗಬನ್ ಕಾದಂಬರಿಯ ಅನುವಾದ ‘ರಮಾನಾಥ’. ಅವರ ಆರಂಭದ ಕವನಗಳು ಪ್ರಕಟವಾದದ್ದು ಮಾಸ್ತಿ ಅವರ ‘ಜೀವನ’, ಉಡುಪಿಯ ಹೊನ್ನಯ್ಯ ಶೆಟ್ಟರ ನವಯುಗ, ಅಂತರಂಗ ಪತ್ರಿಕೆಗಳಲ್ಲಿ. ಅಂತರಂಗದಲ್ಲಿ ಕುಶಿಯವರ ಅನೇಕ ಕಥೆ ಕವನಗಳು ಅನುವಾದಗಳು ಪ್ರಕಟವಾದುವು : ‘ಯುಗವಾಣಿ’ ಕವನ ಸಂಕಲನ; ‘ಕಾಲವೇ ಬದಲಾಗಿದೆ’ (ಕಥೆ); ‘ವರ್ತಮಾನ ಕಾಲದ ನಾಲ್ವರು ಮಹಾನುಭಾವರು’ (ಜೀವನಚರಿತ್ರೆ). ಅನುವಾದ ಕೃತಿಗಳು: ಸಿಲೋನೆಯ ‘ಫಂಟಮಾರಾ’, ಜಾನ್ ಡ್ಯೂಯಿಯ ‘ಸ್ವಾತಂತ್ರ್ಯ ಮತ್ತು ಸಂಸ್ಕೃತಿ’, ಆರ್ಥರ್ ಕೊಸ್ಲರ್ನ ‘ನಡುಹಗಲಲ್ಲಿ ಕಗ್ಗತ್ತಲೆ’. ‘ಫಂಟಮಾರಾ’ ಇಟಲಿಯಲ್ಲಿ ಫ್ಯಾಸಿಸ್ಟ್ ಕಾಲಘಟ್ಟದಲ್ಲಿ ನಡೆದ ರೈತ ಬಂಡಾಯದ ಕಾದಂಬರಿ.

ಪುಸ್ತಕಗಳ ಓದು ಮತ್ತು ಪ್ರವಾಸ ಅವರ ಪ್ರಿಯವಾದ ಹವ್ಯಾಸಗಳು. ಇತಾಲಿಯಾ ನಾನು ಕಂಡಂತೆ, ಒಮ್ಮೆ ರಶಿಯಾ ಇನ್ನೊಮ್ಮೆ ಇತಾಲಿಯಾ, ರಂಗಾಯನ-ಪ್ರವಾಸ ಸಾಹಿತ್ಯ ಕೃತಿಗಳು. ಕುಶಿ ಬರೆದ ಜೀವನಚರಿತ್ರೆಯ ಮಹತ್ವದ ಗ್ರಂಥ ‘ಕಟ್ಟಿಂಗೇರಿ ಕೃಷ್ಣ ಹೆಬ್ಬಾರ-ಕಲೆ ಮತ್ತು ಬದುಕು’ ಒಂದು ಕ್ಲಾಸಿಕ್. ಕುಶಿಯವರ ಸ್ವತಂತ್ರ, ಅನುವಾದಿತ, ಸಂಪಾದಿತ ಪುಸ್ತಕಗಳ ಒಟ್ಟು ಸಂಖ್ಯೆ ಸುಮಾರು 75.

ಕುಶಿ ಬದುಕಿನ ಉದ್ದಕ್ಕೂ ತೆರೆದುಕೊಂಡದ್ದು ಜಾಗತಿಕ ಸಾಹಿತ್ಯದ ಓದಿನ ಮೂಲಕ ಸರ್ವಸಮಾನತೆಯ ಜೀವನದೃಷ್ಟಿಗೆ. 1949ರಲ್ಲಿ ಪ್ರಕಟವಾದ ಅವರ ‘ಯುಗವಾಣಿ’ ಕವನಗಳಲ್ಲೇ ಇದು ಮೊಳಕೆಯೊಡೆದಿದೆ-ದುಡಿಮೆಯೇ ದೇವರು, ಜಾತಿ ಬಂಧನದಾಚೆ, ಜಾತಿಯೊಂದೇ. ಆರಂಭಕಾಲದ ಅವರ ಈ ಧೋರಣೆ ಮುಂದೆ ಸಂಸ್ಥೆಗಳನ್ನು ಕಟ್ಟುವಲ್ಲಿ ಸಕಾರಾತ್ಮಕವಾಗಿ ಕೆಲಸಮಾಡಿದೆ. ಸದಾ ಹೊಸತನ್ನು ಕಟ್ಟುತ್ತಾ ಬಂದ 'ಕುಶಿ' ಎನ್ನುವ ಹೆಸರು ಕರ್ನಾಟಕ ಮರೆಯಲಾರದ ಮರೆಯಬಾರದ ಸಾಂಸ್ಕೃತಿಕ ಚಹರೆ.

ನಾಡು ನುಡಿ ಗೀತೆಗಳ ಸಮಗ್ರ ದರ್ಶನ

ಒಳನೋಟ



ಸಮಗ್ರ ಕನ್ನಡ ನಾಡು ನುಡಿ ಗೀತೆಗಳು ಸಂಪುಟ 1 ಮತ್ತು 2
ಸಂ: ಕಾ.ವೆಂ. ಶ್ರೀನಿವಾಸಮೂರ್ತಿ
ಪ್ರ: ಪ್ರಿಯದರ್ಶಿನಿ ಪ್ರಕಾಶನ
ಸಂ:9845062549

ಎಲ್ಲಾದರು ಇರು; ಎಂತಾದರು ಇರು;
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!

ಕರುನಾಡಿನ ವೈಭವವನ್ನು, ಹೆಮ್ಮೆಯನ್ನು ತಿಳಿಸುವ ರಾಷ್ಟ್ರಕವಿ ಕುವೆಂಪು ವಿರಚಿತ ಗೀತೆಯಿದು. ಕನ್ನಡ ನಾಡಿನಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಜನ್ಮತಳೆದ ಇಂತಹ ಸಾವಿರಾರು ನಾಡು–ನುಡಿ ಗೀತೆಗಳಿವೆ. ಭಾಷೆ, ನೆಲ, ಜಲದ ಕಿಡಿಯಾಗಿ ಹುಟ್ಟಿದ ಕವಿತಗಳಿವೆ. ನಾಡಿನ ಹಿರಿಮೆಯನ್ನು ಸಾರುವ ಇಂಥ ನುಡಿಗೀತೆಗಳನ್ನು ಒಂದೇ ಕಡೆ ತಂದಿರುವ ಕೃತಿ ‘ಸಮಗ್ರ ಕನ್ನಡ ನಾಡು ನುಡಿ ಗೀತೆಗಳು’. ಎರಡು ಸಂಪುಟಗಳಲ್ಲಿ ಕೃತಿ ಹೊರಬಂದಿದೆ. ಇದರ ಸಂಪಾದಕರಾದ ಕಾ.ವೆಂ.ಶ್ರೀನಿವಾಸಮೂರ್ತಿ ಮೂರು ದಶಕಗಳ ಕಾಲ ಈ ನಿಟ್ಟಿನಲ್ಲಿ ಅಧ್ಯಯನ ನಡೆಸಿ, ಮಾಹಿತಿಗಳನ್ನು ಸಂಗ್ರಹಿಸಿ ಕೃತಿಯನ್ನು ಹೊರತಂದಿದ್ದಾರೆ. ಒಂದು ಸಾವಿರ ಕವಿಗಳ ಐದಾರು ಸಾವಿರ ನುಡಿ ಗೀತೆಗಳು ಈ ಸಂಪುಗಳಲ್ಲಿರುವುದು ವಿಶೇಷ.

ಕರುನಾಡಿನ ನುಡಿ ಗೀತೆಗಳಿಗೆ ಭವ್ಯ ಇತಿಹಾಸವಿದೆ. ಹತ್ತಾರು ಹೋರಾಟಗಳ ಹಿನ್ನೆಲೆಯಿದೆ. ಕನ್ನಡದ ಅಸ್ಮಿತೆಯಾಗಿ ಹೊರಹೊಮ್ಮಿದ ಕವಿತೆಗಳಿವೆ. ಶಾಂತಕವಿ, ದ.ರಾ.ಬೇಂದ್ರೆ, ಕುವೆಂಪು, ಸಿದ್ಧಯ್ಯ ಪುರಾಣಿಕರಿಂದ ಹಿಡಿದು ಸಾಕಷ್ಟು ಕವಿಗಳು ಆಯಾ ಸಂದರ್ಭಕ್ಕೆ ಅನುಗುಣವಾಗಿ ನುಡಿ ಗೀತೆ ರಚಿಸಿದ್ದಾರೆ. ಅಂತಹ ಬಹುತೇಕ ಗೀತೆಗಳು ಇದರಲ್ಲಿವೆ.

ಈ ನುಡಿಗೀತೆಗಳು ಹುಟ್ಟಿದ ಸಂದರ್ಭಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಭಾಷಾ ಸಂಘರ್ಷ, ಸಾಮರಸ್ಯದ ಫಲವಾಗಿ ಜನ್ಮತಳೆದ ನುಡಿಗೀತೆಗಳದ್ದು ಒಂದು ವಿಭಾಗ. ಮುಂಬೈ ಕರ್ನಾಟಕ ಭಾಗದಲ್ಲಿ ನವ್ಯ, ದಲಿತ ಬಂಡಾಯದ ಸಂದರ್ಭದಲ್ಲಿಯೂ ಕನ್ನಡದ ಅಸ್ಮಿತೆಯ ಗುರುತರ ಕಾವ್ಯಾಭಿವ್ಯಕ್ತಿಯಾಗಿ ನಾಡಗೀತೆಗಳು ಹೇಗೆ ಕೆಲಸ ಮಾಡಿದವು ಎಂಬ ವಿವರ ಇಲ್ಲಿ ಸಿಗುತ್ತದೆ. ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಹುಯಿಲಗೋಳು ನಾರಾಯಣರಾವ್ ಮುಂತಾದ ಕವಿಗಳು ಈ ನಿಟ್ಟಿನಲ್ಲಿ ರಚಿಸದ ನಾಡು–ನುಡಿ ಗೀತೆಗಳನ್ನು ನೀಡಲಾಗಿದೆ.

ಹೈದರಬಾದ್ ಕರ್ನಾಟಕದಲ್ಲಿ ನಿಜಾಮ್ ಸರ್ಕಾರದ ಉರ್ದು ಭಾಷೆಯ ಎದುರಿಗೆ ಕನ್ನಡ ನುಡಿ ಹೇಗೆ ಅಸ್ಮಿತೆ ಉಳಿಸಿಕೊಂಡು, ಯಾವ್ಯಾವ ಕವಿಗಳು ಕೊಡುಗೆ ನೀಡಿದರು ಎಂಬ ಸಂಕ್ಷಿಪ್ತ ವಿವರಣೆ ಸಿಗುತ್ತದೆ. ಮೈಸೂರು ಸಂಸ್ಥಾನದಲ್ಲಿ ಮೊಳಗಿದ ಕರುನಾಡಿನ ವೈಭವದ ಗೀತೆಗಳನ್ನು ಕಾಣಬಹುದು. ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಎಂ.ಎನ್. ಕಾಮತ್, ಕಯ್ಯಾರ ಕಿಞ್ಞಣ್ಣ ರೈ ಮುಂತಾದವರು ಹೇಗೆ ಕನ್ನಡವು ಸರ್ವ ಮಾಧ್ಯಮ ಭಾಷೆಯೆಂದು ಹೋರಾಡಿದರು, ಯಾವೆಲ್ಲ ಗೀತೆಗಳನ್ನು ರಚಿಸಿದರು ಎಂಬ ವಿವರ ಕೃತಿಯಲ್ಲಿದೆ.

ಕರ್ನಾಟಕದ ಏಕೀಕರಣ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ನಮ್ಮ ಹೆಮ್ಮೆಯನ್ನು ಸಾರುವ ನುಡಿಗೀತೆಗಳು ಹುಟ್ಟಿದವು. ಅವುಗಳ ಇತಿಹಾಸದ ಮೆಲುಕನ್ನು ಇಲ್ಲಿ ಕಾಣಬಹುದು. ಬೆಂಗಳೂರು ದೂರದರ್ಶನದಲ್ಲಿ ಉರ್ದು ವಾರ್ತೆ ಪ್ರಾರಂಭವಾದಾಗ ನಡೆದ ಹೋರಾಟ, ಕಾವೇರಿ ನದಿ ನೀರಿನ ಹೋರಾಟದ ಸಮಯದಲ್ಲಿ ಜನ್ಮತಳೆದ ಆಕ್ರೋಶದ ಗೀತೆಗಳನ್ನು ನೀಡಲಾಗಿದೆ. ಒಟ್ಟಾರೆಯಾಗಿ ಕರುನಾಡಿನ ಅಸ್ಮಿತೆಗೆ ಧಕ್ಕೆಯಾದಾಗ ಪ್ರತಿಭಟನೆಯ ಧ್ವನಿಯಂತೆ ಮೊಳಗಿದ ಹೆಮ್ಮೆಯ ನಾಡಗೀತೆಗಳ ಸಂಗ್ರಹವೇ ಇಲ್ಲಿದೆ.

‘**ದೀಕ್ಷೆಯ ತೊಡು ಇಂದೇ| ಕಂಕಣ ಕಟ್ಟಿಂದೆ| ಕನ್ನಡ ನಾಡೊಂದೆ| ಇನ್ನೆಂದೂ ತಾನೊಂದೇ|** ಎಂದು ಅಂದು ಕುವೆಂಪು ಹಾಡಿದರು. ಅದನ್ನು ಇಂದಿಗೂ ನಾವು ಹಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಪಾದನಾ ಕಾರ್ಯ ಮತ್ತು ಅಧ್ಯಯನವಿದೆ’ ಎಂದು ಕಾ.ವೆಂ.ಶ್ರೀನಿವಾಸಮೂರ್ತಿ ಕೃತಿಯ ಪ್ರಸ್ತಾವನೆಯಲ್ಲಿ ಬರೆದಿದ್ದಾರೆ. ಕಾವ್ಯ ಮುಖೇನ ಕರುನಾಡಿನ ವೈಭವ ದರ್ಶನ ಮಾಡಿಸುವ ಕೃತಿಯಿದು. ಹತ್ತಾರು ತಲೆಮಾರಿಗೆ ಆಧಾರ, ಆಕರವಾಗಬಲ್ಲ ನಾಡು-ನುಡಿಯ ಐತಿಹಾಸಿಕ ಕೈಪಿಡಿಯೂ ಹೌದು. ಇದೊಂದು ಶ್ಲಾಘನೀಯ ಕೆಲಸ.

ಮೊದಲ ಓದು

ಹಲವಾರು ಸಾಧಕರ ನುಡಿ ಸಂಕಥನ



ಪು: 278
₹250

ನುಡಿಗೋಲು
ಲೇ: ಜಾಣಗೆರೆ ವೆಂಕಟರಾಮಯ್ಯ
ಪ್ರ: ಜಾಣಗೆರೆ ಪತ್ರಿಕೆ ಪ್ರಕಾಶನ
ಸಂ: 9343798078

ಕಥೆ, ಕಾದಂಬರಿ, ಪ್ರವಾಸ ಕಥನ–ಹೀಗೆ ಹಲವು ಪ್ರಕಾರಗಳ ಕೃತಿಗಳನ್ನು ರಚಿಸಿರುವ ಜಾಣಗೆರೆ ವೆಂಕಟರಾಮಯ್ಯ ಅವರ 36ನೇ ಕೃತಿ ಇದಾಗಿದೆ. ಸಾಧನೆ ಮಾಡಿದ ವ್ಯಕ್ತಿಗಳ ನುಡಿ ಸಂಕಥನವನ್ನು ಇದು ಒಳಗೊಂಡಿದೆ.

ಸಾಧಕರ ಅಭಿನಂದನಾ ಗ್ರಂಥಕ್ಕೆ, ಸಾಧಕರಿಗೆ 50–60 ವರ್ಷವಾದ ಸಂದರ್ಭದಲ್ಲಿ ಹೊರಬಂದ ಗ್ರಂಥಕ್ಕೆ ಹೀಗೆ ವಿವಿಧ ಸಂದರ್ಭಗಳಲ್ಲಿ ಲೇಖಕರು ಬರೆದಿದ್ದ ಲೇಖನಗಳ ಗುಚ್ಛ ಇದಾಗಿದೆ. ನಾಡಪ್ರಭು ಕೆಂಪೇಗೌಡರಿಂದ ಹಿಡಿದು ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ಎಸ್.ಬಂಗಾರಪ್ಪ ಹೀಗೆ ಬೆಂಗಳೂರು ನಿರ್ಮಾಣದ ಶಿಲ್ಪಿಯಿಂದ ಹಿಡಿದು, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದವರು, ನೀರಾವರಿ ತಜ್ಞರು, ರಾಜಕೀಯ ಧುರೀಣರು, ಸಾಹಿತ್ಯ ಲೋಕದ ಜನಪ್ರಿಯರು, ದಲಿತ ಚಳವಳಿ, ಪತ್ರಿಕೋದ್ಯಮ, ಸಮಾಜ ಸೇವೆ, ಕನ್ನಡ ಪರ ಹೋರಾಟಗಾರರು, ಜನಪದ, ಚಿತ್ರಕಲೆ ಹೀಗೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಒಟ್ಟು ಐವತ್ತು ಸಾಧಕರ ವೈವಿಧ್ಯಮಯ ಬದುಕಿನ ಅನಾವರಣವನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ.

ಇಲ್ಲಿನ ಸಾಧಕರಲ್ಲಿ ಕೆಲವರನ್ನು ಹೊರತುಪಡಿಸಿ ಹಲವರ ಜೊತೆ ಲೇಖಕರು ಒಡನಾಡಿದ ಕಾರಣ ಬರವಣಿಗೆ ಹಾಗೂ ವಿಷಯ ಪ್ರಸ್ತುತಿಯಲ್ಲಿ ಆಪ್ತತೆಯನ್ನು ಕಾಣಬಹುದಾಗಿದೆ. ಸಾಧಕರ ಹಿನ್ನೆಲೆ, ಅವರ ನಡೆ, ನುಡಿ ಹಾಗೂ ಹೋರಾಟಗಳನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡುವಲ್ಲಿ ಲೇಖಕರು ಯಶಸ್ಸು ಕಂಡಿದ್ದಾರೆ.

ಕಲ್ಲೆ ಶಿವೋತ್ತಮ ರಾವ್ ಸಾಧನೆ ಮೆಲುಕು



ಪು: 394
₹300

ಜನಪ್ರಗತಿಯ ಪಂಜು
ಸಂ: ಪಾರ್ವತೀಶ ಬಿಳಿದಾಳೆ
ಪ್ರ: ಕರ್ನಾಟಕ ಅಧ್ಯಯನ ಕೇಂದ್ರ, ಹಾರೋಹಳ್ಳಿ
ಸಂ: 9448380637

ಪ್ರಗತಿಪರ ಚಿಂತನೆಯ ಕಲ್ಲೆ ಶಿವೋತ್ತಮ ರಾವ್ ಏಳು ದಶಕಗಳ ಕಾಲ ಪತ್ರಿಕಾ ವೃತ್ತಿಯನ್ನು ಮಾಡಿದ್ದಾರೆ. ಹಲವು ಪತ್ರಿಕೆಯಲ್ಲಿ ಬೇರೆ ಬೇರೆ ಹುದ್ದೆಯನ್ನು ಅವರು ನಿರ್ವಹಿಸಿದ್ದಾರೆ. ‘ಜನಪ್ರಗ್ರತಿ’ ವಾರ ಪತ್ರಿಕೆಯನ್ನು ಮೂವತ್ತು ವರ್ಷ ಸಂಪಾದಕರಾಗಿ (1960–90) ಮುನ್ನಡೆಸಿದ್ದಾರೆ. ಅವರ ಬದುಕು ಮತ್ತು ಕೊಡುಗೆಯನ್ನು ವಿವರಿಸುವ ಕೃತಿ ‘ಕಲ್ಲೆ ಶಿವೋತ್ತಮ ರಾವ್: ಜನಪ್ರಗತಿಯ ಪಂಜು’.

ಪತ್ರಿಕಾ ವೃತ್ತಿಯಿಂದ ನಿವೃತ್ತರಾಗಿರುವ ಶಿವೋತ್ತಮ ರಾವ್ ಈಗ ಬೆಂಗಳೂರಿನ ಯಲಹಂಕದಲ್ಲಿ ನೆಲೆಸಿದ್ದಾರೆ. ಅವರ ಮನೆಯೇ ಪತ್ರಿಕಾ ಮ್ಯೂಸಿಯಂ ರೀತಿ ಕಾಣುತ್ತದೆ ಎಂದು ಕೃತಿ ಸಂಪಾದಕ ಪಾರ್ವತೀಶ ಬಿಳಿದಾಳೆ ವಿವರಿಸುತ್ತಾರೆ. ಕೃತಿ ಐದು ಭಾಗಗಳನ್ನು ಒಳಗೊಂಡಿದ್ದರೂ, ಬರಹದ ಆಶಯ ಮತ್ತು ಸಾರದಲ್ಲಿ ಏಕರೂಪತೆ ಇದೆ. ನಾಡಿನ ಪ್ರಮುಖ ಸಾಹಿತಿಗಳು, ಪತ್ರಕರ್ತರು ಕಲ್ಲೆ ಅವರನ್ನು ಭಿನ್ನ ಆಯಾಮದಲ್ಲಿ ಪರಿಚಯಿಸಿದ್ದಾರೆ.

ಮೊದಲ ಲೇಖನ ‘ಕನ್ನಡ ಪತ್ರಿಕೋದ್ಯಮದ ಸವ್ಯಸಾಚಿ ಕಲ್ಲೆ ನಾರಾಯಣ ರಾಯರು (1901–1980)’ ಶಿವೋತ್ತಮ ಅವರ ತಂದೆ ಕೂಡ ಪತ್ರಕರ್ತರಾಗಿದ್ದರು. ಅವರ ತಂದೆಯನ್ನು ಈ ಲೇಖನ ನೆನಪಿಸುತ್ತದೆ. ಎಂ.ಎಚ್. ಕೃಷ್ಣಯ್ಯ ಅವರು ‘ಜನಪ್ರಗತಿ’ಯನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಹೇಗೆ ರೂಪಿಸಲಾಗಿತ್ತು ಎನ್ನುವುದನ್ನು ಸಂಕ್ಷಿಪ್ತವಾಗಿ ಕಟ್ಟಿಕೊಟ್ಟಿದ್ದಾರೆ.

ಎರಡನೇ ಭಾಗದಲ್ಲಿ ‘ಕಲ್ಲೇ ಶಿವೋತ್ತಮ ರಾವ್: ಬೆಂಕಿ–ಬೆಳಕಿನ ಪಂಜು’ ಎಂಬ ಸಂಪಾದಕರ ದೀರ್ಘ ಲೇಖನವಿದೆ. ಇದು ಕನ್ನಡ ಪತ್ರಿಕೋದ್ಯಮದ ಪರಂಪರೆಯ ಅವಲೋಕನ ಮಾಡುವ ಜೊತೆಗೆ ಶಿವೋತ್ತಮ ಅವರ ಕಾಳಜಿ ಮತ್ತು ಸಮಾಜಮುಖಿ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ.

ನಾಲ್ಕನೇ ಭಾಗ ಜನಪ್ರಗತಿಯಲ್ಲಿ ಪ್ರಕಟಿಸಿದ ಕೆಲ ಸಂಪಾದಕೀಯ ಮತ್ತು ವ್ಯಕ್ತಿಚಿತ್ರಗಳನ್ನು ಒಳಗೊಂಡಿದೆ. 1971ರಲ್ಲಿ ಹರಿಜನೋದ್ಧಾರದ ಬಗ್ಗೆ ಪೇಜಾವರ ಮಠದ ಪೀಠಾಧೀಶರಾಗಿದ್ದ ವಿಶ್ವೇಶತೀರ್ಥ ಸ್ವಾಮೀಜಿ ಮತ್ತು ‘ಜನಪ್ರಗತಿ’ ಸಂಪಾದಕರ ನಡುವೆ ಪತ್ರಗಳ ಮೂಲಕ ನಡೆದ ವಾದ-ಪತ್ರಿವಾದವನ್ನು ನೀಡಿದ್ದಾರೆ. ಇದರಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಸಂಬಂಧಿಸಿದಂತೆ ಪತ್ರಿಕೆಯ ನಿಲುವು ಅದಕ್ಕೆ ಸ್ವಾಮೀಜಿಗಳ ಸ್ಪಷ್ಟನೆಯ ಪತ್ರಗಳ ಸರಣಿ ಈ ಕೃತಿಯ ಆಕರ್ಷಣೀಯ ಅಂಶ.

ಐದನೇ ಭಾಗ ಚಿತ್ರಪಟವನ್ನು ಒಳಗೊಂಡಿದೆ. ಅದು ಅನೇಕ ಚಾರಿತ್ರಿಕ ಕ್ರಿಯೆ-ಪ್ರತಿಕ್ರಿಯೆಗಳಿಗೆ ಸಾಕ್ಷೀಭೂತವಾಗಿದೆ. ಶಿವೋತ್ತಮ ಅವರು ‘ಬೂಸಾ ಪ್ರಕರಣ’ದ ಸಂಬಂಧ ಉಂಟಾದ ಪರ–ವಿರೋಧದ ಚಳವಳಿಯಲ್ಲಿ ಬಸವಲಿಂಗಪ್ಪ ಅವರ ಪರವಾಗಿ ನಿಂತ ವಿದ್ಯಾರ್ಥಿಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು ಎನ್ನುವುದೂ ಇಲ್ಲಿ ಉಲ್ಲೇಖವಾಗಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಗೊಟ್ಟಿಗಾಳೆಗ

ಗೊಟ್ಟಿಗಾಳೆಗ (ನಾ). ಗುಂಪುಗಾಳಗ; ತುಮುಲ ಯುದ್ಧ (ಗೊಟ್ಟಿ + ಕಾಳಗ)
ಕುವೆಂಪು ಅವರು ರಾಮ ಸೀತೆ ಲಕ್ಷ್ಮಣರಲ್ಲಿಯ ಒಂದು ಹಿಮಗಾಲದ ಕೌಟುಂಬಿಕ ಪ್ರೀತಿ ವಾತ್ಸಲ್ಯದ ಚಿತ್ರಣವನ್ನು ಮಹಾಕಾವ್ಯದಲ್ಲಿ ನೀಡಿದ್ದಾರೆ. ಒಂದು ದಿನ ನಸುಕಿನಲ್ಲಿಯೇ ಗೋದಾವರಿ ಹೊಳೆಗೆ ಹೋದ ಮೈದ ಲಕ್ಷ್ಮಣನು ಬಾರದಿರಲು ಸೀತೆ ಚಿಂತಿಸುತ್ತಾಳೆ. ಮಂಜಿನಲ್ಲಿ ಮಿಂದು ಬಂದಂತೆ, ಸ್ನಾನ ಮಾಡದೆ ಮಂಜಿನಲ್ಲಿ ಕಣ್ಣುತಪ್ಪಿ ಹಿಂದಿರುಗಿ ಬಂದ ಲಕ್ಷ್ಮಣ ಹುಹುಹು ನಡುಗುತ್ತ ಒಲೆಯೆಡೆಗೆ ಬೆಂಕಿ ಕಾಯಿಸಲು ಹೋಗುತ್ತಾನೆ.

ಆಗಿನ ಪ್ರಕೃತಿಯ ಕಾಡಿನ ಚಿತ್ರಣವನ್ನು ಕವಿ ಕಣ್ಣಿಗೆ ಕಟ್ಟುವಂತೆ ನುಡಿನುಡಿಯಲ್ಲಿ ಕಡೆದಿದ್ದಾರೆ. ಸ್ವಲ್ಪ ಹೊತ್ತಿನ ನಂತರ ಹೊತ್ತೇರಲು ಆಗ ಮೂಡಿದ ಸೂರ್ಯ ಕಿರಣಗಳಿಗೂ ದಟ್ಟೈಸಿದ ಹಿಮಕ್ಕೂ ಗುಂಪುಗಾಳಗವಾಯಿತು ಎಂದು ‘ಗೊಟ್ಟಿಗಾಳಗ’ ಪದ ರೂಪಿಸಿ ಬಣ್ಣಿಸಿದ್ದಾರೆ. ಆ ತುಮುಲ ಯುದ್ಧದಲ್ಲಿ ಮಂಜಿನಸೇನೆ ಸಾಂದ್ರತೆಯನ್ನು ಕಳೆದುಕೊಂಡು ಚೆದುರಿ ದಳದಳವಾಗಿ ಗಿರಿಶಿಖರ ಸೀಮೆಯಿಂದ ಹಿಮ್ಮೆಟ್ಟುತ್ತದೆ. ಕವಿಯು ಆ ಸಹಜ ನಿಸರ್ಗದಾಟವನ್ನು ನುಡಿನುಡಿಯಲ್ಲಿ ಹೀಗೆ ರೂಪಿಸಿದ್ದಾರೆ:

ಪೇಳ್ತಿನಿತನಂತರಂ ಪೇಳ್ತೇರೆ,
ಪೇಳ್ತರೆಯ ಕದಿರುಗಳಿಟ್ಟಣಿಸಿದೈಕಿಲಿಗೆ
ಗೊಟ್ಟಿಗಾಳೆಗವಾಗಿ, ಸೋಲ್ತು ಮಂಜಿನ ಸೇನೆ
ಸಾಂದ್ರತೆಯನುಳಿದು,
ವಿರಳತೆಯಾಂತುಮೊಳಸೋರ್ದು
ಚದರಿ, ದಳದಳಮಾಗಿ, ಗಿರಿ ಶಿಖರ ಸೀಮೆಯಿಂ
ಮೆಲ್ಲನೆ ಪೆಡಂಮೆಟ್ಟಿ ಸರಿಯತೊಡಗಿತು ಸಾನು
ನಿಮ್ನತೆಗೆ.

ಎದೆಯನ್ನೆ

ಅನ್ನೆ (ನಾ). ಅಂಥವಳು; ಆ ರೀತಿಯವಳು
ಮನದನ್ನೆ = 1. ಪ್ರೀತಿ ಪಾತ್ರಳಾದವಳು 2. ಹೆಂಡತಿ, ಪತ್ನಿ. ಬೇಂದ್ರೆಯವರು ‘ಆಡದಿರು ಮನದನ್ನೆ ಎನಗೆ ಇದಿರಾಡದಿರು’ ಎಂದು ತನ್ನ ಪತ್ನಿಯನ್ನು ‘ಮನದನ್ನೆ’ ಎಂದು ಕರೆದು, ಆ ಪದ ಜನಪ್ರಿಯವಾಗುವಂತೆ ಮಾಡಿದ್ದಾರೆ. ಕುವೆಂಪು ಅವರು ಆ ಮನದನ್ನೆಯನ್ನು ‘ಎದೆಯೆದೆಗೆ ಇಳಿದು ಬಾ ಎದೆಯನ್ನೆಯಂತೆ!’ ಎಂದು ‘ಅನಂತೆ ನೀಂ: ಮನಮನಕೆ ಮನದನ್ನೆ’ ಕವನದಲ್ಲಿ ಸಂಬೋಧಿಸಿದ್ದಾರೆ.

ಹೀಗೆ ‘ಎದೆಯನ್ನೆ’ ಪದ ಸೃಷ್ಟಿಸಿ ಪ್ರಯೋಗಿಸಿರುವುದು ಕುವೆಂಪು ‘ಮನದನ್ನೆ’ಯನ್ನು ‘ಎದೆಯನ್ನೆ’ ಆಗಿಸಿಕೊಂಡದ್ದರ, ಒಲ್ಮೆಯವಳನ್ನು ಮನಕ್ಕಿಂತ ಎದೆಗೆ ಹತ್ತಿರವಾಗಿಸಿಕೊಂಡ ಭಾವದೊಲ್ಮೆ. ಇದು ಸಾದೃಶ್ಯ ಮೂಲ ನವಪದ ನಿರ್ಮಾಣ.

ಇದೀಗ ಲಭ್ಯ
ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಕಥೆ
ಪ್ರೇಮಕುಮಾರ್ ಹರಿಯಬ್ಬೆ ಅವರ ಉರುಳುತ್ತಲೇ ಇವೆ ದಾಳಗಳು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಮಂಜಯ್ಯ ದೇವರಮನಿ ಅವರ ಒಂದು ಬೀಜದ ವ್ಯಥೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮಸುಕಾದ ಜಗತ್ತಿನ...

10ನೇ ಪುಟದಿಂದ...

ಚಾಡ್ವಿಕ್ ಜೀವವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆದ ಅಪೂರ್ವ ಪ್ರತಿಭೆ. ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್ ಪತ್ರಿಕೆಯಲ್ಲಿ ಐವತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದ ಹಿರಿಮೆ ಅವರದು. ಇದಲ್ಲದೆ ಮೂವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಅವರು ರಚಿಸಿದ್ದಾರೆ. ಇದೆಲ್ಲದ್ದಕ್ಕಿಂತ ಅವರ ಗ್ರಹಿಕೆ, ಕಥಾನಿರೂಪಣೆಯ ತಂತ್ರಕ್ಕೆ ನಾವು ಮನಸೋತಿದ್ದೆವು. ಹಾಗಾಗಿ ನ್ಯಾಷನಲ್ ಜಿಯಾಗ್ರಫಿಕ್ ಎಂದಾಗ ನಮಗೆ ಕೂಡಲೆ ನೆನಪಾಗುವುದು ಡಗ್ಲಾಸ್ ಚಾಡ್ವಿಕ್. ‘Out of time out of space’ ಎಂಬ ಆನೆಗಳ ಕುರಿತ ಲೇಖನಕ್ಕಾಗಿ ಚಾಡ್ವಿಕ್ ಮುದುಮಲೈಗೆ ಬಂದಿದ್ದರು. ವಾರಗಳ ಕಾಲ ಆನೆಗಳ ಜಾಡು ಹಿಡಿದು ಕಾಡಿನಲ್ಲಿ ಅಲೆದ ನೆನಪು ಇಂದಿಗೂ ಮಾಸಿಲ್ಲ. ಅವರೊಂದಿಗೆ ಜರುಗಿದ ನಮ್ಮ ಮಾತುಕತೆಗಳಲ್ಲಿ ಜೀವವಿಜ್ಞಾನದ ವಿಷಯದ ಬಗ್ಗೆ ಅವರಿಗಿರುವ ಅಪಾರ ಜ್ಞಾನ ನಮ್ಮ ಅರಿವಿಗೆ ಬಂತು. ಹೌದಲ್ಲ, ಒಬ್ಬ ಅಗ್ರಗಣ್ಯ ಲೇಖಕನಾಗಲು ಸಾಮಾನ್ಯ ಅರ್ಹತೆ ನೆರವಾಗಲಾರದು.

ಆಗೊಮ್ಮೆ ಮರುದಿನ ಭೇಟಿಯಾಗುವ ಯೋಜನೆಯ ಕಾರ್ಯಕ್ರಮವಿದ್ದರು ಚಾಡ್ವಿಕ್ ಬರಲೇ ಇಲ್ಲ. ನಡುರಾತ್ರಿಯಲ್ಲಿ ಬಂದ ಫೋನ್ ಕರೆಗೆ ಅವರು ಬ್ಯಾಂಕಾಕ್‌ಗೆ ತೆರಳಿದ್ದರು. ಅಲ್ಲಿಂದ ವಾರದಲ್ಲಿ ವಾಪಸ್ಸಾಗುವುದಾಗಿ ತಿಳಿಸಿದ ಅವರು ಚೀನಾದತ್ತ ಮುಖಮಾಡಿದ್ದರು. ಬಳಿಕ ಶ್ರೀಲಂಕಾ... ಹೀಗೆ ಅವರು ಮತ್ತೆ ವಾಪಸ್ಸಾಗುವಾಗ ಮೂರು ವಾರಗಳೇ ಕಳೆದಿತ್ತು. ಅವರು ದಿಕ್ಕುತಪ್ಪಿ ಅಲೆದಾಡುತ್ತಿರುವಂತೆ ಕಂಡಿತು.

ಅವರು ಏಷ್ಯಾಟಿಕ್ ಗಂಡಾನೆಗಳ ಹತ್ಯೆ, ಬಳಿಕ ದಂತಗಳು ಸಾಗುವ ಕಳ್ಳದಾರಿ, ಅವು ತಲುಪುವ ಸ್ಥಳ, ಅವುಗಳ ಮಾರುಕಟ್ಟೆ ಏನು, ಎಲ್ಲಿ, ಅದರಲ್ಲಿ ಪಾಲ್ಗೊಂಡಿರುವವರು ಯಾರು... ಇಡೀ ಕಳ್ಳದಂದೆಯ ವಹಿವಾಟಿನ ಖಚಿತ ವರದಿಗಾಗಿ ಗೂಢಾಚಾರನಂತೆ ಅಲೆದಾಡುತ್ತಿದ್ದರು. ಅಷ್ಟೇ ಅಲ್ಲ, ಆನೆಗಳ ಬಗ್ಗೆ ಸಂಶೋಧನೆ ನಡೆಸಿ ಆನೆಗಳ ಬದುಕನ್ನರಿತ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಆನೆ ಸಂತತಿಯ ಬದುಕು ಭವಿಷ್ಯಗಳನ್ನು ಅಂದಾಜಿಸುತ್ತಿದ್ದರು. ಈ ಚರ್ಚೆಗಳಲ್ಲಿ ಅವರು ಅಧಿಕೃತ ಛಾಯಾಗ್ರಾಹಕ ಥಾಮ್ಸನ್‌ನನ್ನು ಜೊತೆಯಲ್ಲಿರಿಸಿಕೊಳ್ಳುತ್ತಿದ್ದರು. ಏಕೆಂದರೆ ಛಾಯಾಗ್ರಾಹಕ ತನಗಿಷ್ಟಬಂದದ್ದನ್ನು ತೆಗೆದಾಗ ಅವು ಲೇಖನದೊಂದಿಗೆ ಜೋಗುಳ ಹಾಡುವುದಿಲ್ಲ. ಬದಲಾಗಿ ಅಂಚೆಪತ್ರದೊಂದಿಗೆ ಅಂಟಿಸಿರುವ ಸ್ಟಾಂಪ್‌ಗಳಂತಾಗಿಬಿಡುತ್ತವೆ. ಹಾಗಾಗಿ ದಿನದಿಂದ ದಿನಕ್ಕೆ ದಕ್ಕುವ ಮಾಹಿತಿಗಳಿನುಸಾರವಾಗಿ ರೂಪ ಬದಲಾಗುವ ಕತೆಗೆ ಪೂರಕ ಚಿತ್ರಗಳನ್ನು ಒದಗಿಸಲು ಆತನನ್ನು ಸದಾ ಕತೆಯೊಳಗಿರಿಸಿಕೊಳ್ಳುತ್ತಿದ್ದರು. ಬಹುಶಃ ಇದು ನ್ಯಾಷನಲ್ ಜಿಯಾಗ್ರಫಿಕ್‌ನ ಕಾರ್ಯಶೈಲಿಯಿರಬಹುದೇನೊ. ಇದಲ್ಲದೆ ಮುಂಜಾನೆಯಿಂದ ರಾತ್ರಿಯವರೆಗೂ ಕತೆಯೊಳಗಿದ್ದೇ ಚಿಂತಿಸುವ ವೃತ್ತಿಪರತೆ. ಹೀಗೆ ಎರಡು ವರ್ಷಗಳ ಕಾಲ ಧ್ಯಾನಿಸಿದ ಬಳಿಕ ಮೂವತ್ತೈದು ಪುಟಗಳ ಆ ಚಿತ್ರಲೇಖನ ಪ್ರಕಟಗೊಂಡಿತ್ತು.

ಚಾಡ್ವಿಕ್ ನೆನಪಾದದ್ದು ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್ ಕಣ್ಮುಚ್ಚುತ್ತಿದೆ ಎಂಬ ಸುದ್ದಿ ಓದಿದಾಗ. 135 ವರ್ಷಗಳಿಂದ ನಿರಂತರವಾಗಿ ಪ್ರಕಟಗೊಂಡ ಅದು ಇಲ್ಲಿಯವರೆಗೆ 1400 ಸಂಚಿಕೆಗಳು ಎಂಟು ಸಾವಿರ ಲೇಖನಗಳನ್ನು ಎರಡುಲಕ್ಷ ಚಿತ್ರಗಳನ್ನು ಜಗತ್ತಿಗೆ ನೀಡಿದೆ. ಓದುಗರನ್ನು ರಂಜಿಸಿದೆ, ಪ್ರಚೋದಿಸಿದೆ, ಅವರಿಗೆ ಜ್ಞಾನ-ವಿಜ್ಞಾನವನ್ನು ಪರಿಚಯಿಸಿದೆ. ಇಂತಹ ಹಿರಿಮೆಯುಳ್ಳ ಪತ್ರಿಕೋದ್ಯಮದ ಮಹಾ ಅಧ್ಯಾಯಯೊಂದು ಕಣ್ಮರೆಯಾಗುತ್ತಿರುವ ನೋವು ದೇಶ, ಧರ್ಮ, ಗಡಿಗಳನ್ನು ಮೀರಿ ಅಭಿಮಾನಿಗಳನ್ನು ದುಃಖಕ್ಕೆ ದೂಡಿದೆ.

ಬಹುಶಃ ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್‌ಗೆ ಸರಿಸಾಟಿಯಾದ ಮತ್ತೊಂದು ಪತ್ರಿಕೆಯನ್ನು ಜಗತ್ತು ಕಂಡಿಲ್ಲದಿರಬಹುದು. 135 ವರ್ಷಗಳ ಕಾಲ ಭೂಮಿಯ ಅಗಲ, ಕಡಲಿನ ಆಳ, ಆಕಾಶದ ಎತ್ತರ, ಚಂದ್ರನ, ಮಿನುಗುವ ನಕ್ಷತ್ರಗಳ ಸಂಸಾರ, ಮಾನವನ ಉಗಮ, ಅರಳಿದ-ನಶಿಸಿದ ನಾಗರಿಕತೆಗಳು, ಕಣ್ಮರೆಯಾದ ಸಂಸ್ಕೃತಿ, ಜೀವಜಾಲಗಳ ಸಂವಾದ, ತಂತ್ರಜ್ಞಾನ, ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನೆಲ್ಲಾ ಸ್ಪರ್ಶಿಸುತ್ತಾ, ಅನ್ವೇಷಿಸುತ್ತಾ, ವಿಶ್ಲೇಶಿಸುತ್ತಾ ಅಮೂಲ್ಯ ಜ್ಞಾನಗಳನ್ನು ಮನೆಮನೆಗಳಿಗೆ ತಲುಪಿಸಿದ ಕೀರ್ತಿಯನ್ನು ಬೇರಾವ ಪ್ರಕಟಣೆಗಳು ಪ್ರತಿಪಾದಿಸಲು ಸಾಧ್ಯವಿಲ್ಲ, ಅಷ್ಟೇ ಅಲ್ಲ ಜಗತ್ತಿನ ಕೋಟ್ಯಂತರ ಓದುಗರೊಂದಿಗೆ ಪ್ರಾಮಾಣಿಕವಾಗಿ ಸಂವಾದಿಸಿದ ವಿಶ್ವಾಸ, ನಂಬಿಕೆ, ಮನುಕುಲಕ್ಕೆ, ಜೀವಿಗಳಿಗೆ ಇರುವುದೊಂದೇ ಭೂಮಿ ಎಂದು ಎಚ್ಚರಿಸಿ, ಜಾಗೃತಿ ಮೂಡಿಸಿದ ಹಿರಿಮೆ ಅದಕ್ಕಿದೆ. ಸಮಾಜದ ಕತ್ತಲೆಯನ್ನು ಜ್ಞಾನದ ಪೊರಕೆಯಿಂದ ಗುಡಿಸಿಹಾಕಿದ ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್ ನಿಧಾನವಾಗಿ ಕಣ್ಮುಚ್ಚುತ್ತಿದೆ.

ನ್ಯಾಷನಲ್ ಜಿಯಾಗ್ರಫಿಕ್ ಮ್ಯಾಗಝಿನ್‌ನ ಅವನತಿಗೆ ಕಾರ್ಪೋರೇಟ್ ಧರ್ಮಗಳು ಕಾರಣವೆಂದು ವಿಶ್ಲೇಷಿಸಲಾಗುತ್ತಿದೆ. ಇದೇನೇ ಇರಲಿ, ಜಗತ್ತಿನಲ್ಲಿ ಅತ್ಯಂತ ಶ್ರೀಮಂತರಿದ್ದಾರೆ, ಅಗಣಿತ ಕಾರ್ಪೋರೇಟ್ ಕಂಪನಿಗಳಿದ್ದಾವೆ. ಕೇವಲ ಔತಣಕೂಟಗಳಿಗೆ, ಮದುವೆಗಳಿಗೆ ವ್ಯಯಿಸುವ ಸ್ವಲ್ಪ ಭಾಗದ ಹಣದಲ್ಲೇ ಜಗತ್ತು ಕಂಡ ಈ ಅದ್ಭುತ ಪವಿತ್ರ ಪತ್ರಿಕೆಯೊಂದನ್ನು ಉಳಿಸಿಕೊಳ್ಳಬಹುದಲ್ಲ ಎಂಬ ನೋವು ನಮ್ಮದು.

ಆದರೆ ಇಂದಿನ ಕಾರ್ಪೋರೇಟ್ ಸಂಸ್ಕೃತಿಯಲ್ಲಿ ಸೃಜನಶೀಲತೆ, ಜ್ಞಾನ, ಕಲೆ ಎಲ್ಲವೂ ಬಂಧನದಲ್ಲಿವೆ. ಸಂವೇದನೆ ಇಲ್ಲವಾಗಿದೆ. ಅವುಗಳ ಆತ್ಮವೇ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್. ಈ ಮನೋಧರ್ಮದಿಂದಾಗಿ ಜ್ಞಾನ, ಕಲೆ, ಸಂಸ್ಕೃತಿಗಳು ಕಣ್ಮರೆಯಾಗುತ್ತಾ ಸಾಗಿ, ಅಜ್ಞಾನದ ಕತ್ತಲು ಮತ್ತೆ ಜಗತ್ತನ್ನು ಆಳಲು ಹೆಚ್ಚಿನ ಸಮಯ ಹಿಡಿಯುವುದಿಲ್ಲ. ಮನುಕುಲದ ಚರಿತ್ರೆಯಲ್ಲಿ ಇದೊಂದು ದುರಂತದ ಅಧ್ಯಾಯವಾಗಿ ಉಳಿದುಬಿಡಬಹುದು.

ಭಕ್ತಿ ಭಂಡಾರ ಬದುಕು...

ಜಾತ್ರೆ ಎಂದರೆ ಭಕ್ತಿ. ಹಲವರಿಗೆ ಸಂಭ್ರಮ. ಮತ್ತೆ ಕೆಲವರಿಗೆ ಬದುಕು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದಲ್ಲಿ ಈ ಬಾರಿ ನಡೆದ ಭಾರತ ಹುಣ್ಣಿಮೆ ಜಾತ್ರೆಯ ಕೆಲ ಝಲಕ್‌ಗಳು...

ಗುಡ್ಡದಲ್ಲಿ ಎತ್ತ ನೋಡಿದರೂ ಜನವೋ ಜನ. ಜನ ಜಂಗುಳಿಯ ನೂಕು ನುಗ್ಗಾಟದಲ್ಲಿ ಜಾತಿ ಮತಗಳೆಲ್ಲ ಕ್ಷಣಿಕವಾಗಿ ತಲೆ ಮರೆಸಿಕೊಂಡಂತೆ ಭಾಸವಾಯಿತು. ಇಡೀ ಗುಡ್ಡಕ್ಕೆ ಭಂಡಾರದ ಹೊದಿಕೆ! ಬೀಸುತ್ತಿದ್ದ ಗಾಳಿಯಲ್ಲೂ ಭಂಡಾರದ ಕಣಗಳಲ್ಲಿ ತೇಲಿಬಂತು ಭಕ್ತಿ. ಜೋಗತಿಯರ ಚೌಡಿಕಿ ನಿನಾದದಲ್ಲಿ ಯಲ್ಲಮ್ಮನ ಮಹಿಮೆ...

ಈ ದೃಶ್ಯಕಾವ್ಯವನ್ನು ಕಟ್ಟಿಕೊಟ್ಟವರು ಕಲಬುರಗಿ ಪ್ರಜಾವಾಣಿಯ ಹಿರಿಯ ಪತ್ರಿಕಾ ಛಾಯಾಗ್ರಾಹಕ ತಾಜುದ್ದೀನ್ ಆಜಾದ್.

ಸಾವಿರಾರು ಎತ್ತಿನಗಾಡಿಗಳು, ಟ್ರ್ಯಾಕ್ಟರ್‌ಗಳು, ತೂಫಾನ್ ವಾಹನಗಳು ದಶ ದಿಕ್ಕುಗಳಿಂದ ಗುಡ್ಡಕ್ಕೆ ಧಾವಿಸತೊಡಗಿದ್ದವು. ಕೋಟೆಗೆ ಸೈನಿಕರು ಮುತ್ತಿಗೆ ಹಾಕಿದಂತೆ.

ಚಿತ್ರ ಕಥೆ

ಈ ಬಾರಿಯ ಬರ ರೈತಾಪಿ ಮಕ್ಕಳ ಬದುಕಿನ ಬಣ್ಣವನ್ನೇ ನುಂಗಿದೆ. 'ಅಮ್ಮ'ನ ಸನ್ನಿಧಿಯಲ್ಲಿ ಬಾರುಕೋಲು, ಹಗ್ಗ, ಕೊರಳ ಗಂಟೆ, ಕುಚ್ಚುಗಳ ಬಿಕರಿಗಾಗಿ ವ್ಯಾಪಾರಿ ಎದುರು ನೋಡುತ್ತಾ...

ದೇವಿಗೆ ಪರಡಿ ತುಂಬಲು ನೈವೇದ್ಯ ಸಿದ್ಧಪಡಿಸುವುದಕ್ಕಾಗಿ ತಾಜಾ ತಾಜಾ ತರಕಾರಿಗಳ ಮಾರಾಟ ಭರಾಟೆ.

ಭಂಡಾರದಲ್ಲಿ ಮಿಂದೆದ್ದ ಯುವಕನೊಬ್ಬ 'ಬಾಳು ಬಂಗಾರಮಯವಾದ ಭಂಡಾರದಂತೆ ಹೊಳೆಯಲಿ' ಎಂದು ದೇವಿಯ ಪ್ರಾರ್ಥನೆಯಲ್ಲಿ ಮಗ್ನ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಕ್ಕು ಕೇಶ್ರಸ್ಸು ಕಥೆಯ — ಗಾಲ್ಫ್ ಆಟ.. ಓಟ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

1

2



ಗುಂಡ ಗಾಲ್ಫ್ ಆಡುತ್ತಿದ್ದ. ಒಂದೇ ಹೊಡೆತದಲ್ಲಿ ಚೆಂಡನ್ನು ಗುಂಡಿಯೊಳಗೆ ಹಾಕಲು ಜೋರಾಗಿ ಕ್ಲಬ್ ಬೀಸಿದ. ಚೆಂಡು ಉರುಳುತ್ತಾ ಹೋಲ್‌ನತ್ತ ಸಾಗಿತು. ಗುಂಡನ ಗುರಿ ತಪ್ಪಿರಲಿಲ್ಲ. ಚೆಂಡು ಹೋಲ್ ಒಳಗೆ ಬಿತ್ತು. ಅದರೊಳಗೆ ಅವಿತಿದ್ದ ಇಲಿ ಚೆಂಡು ಮೈಮೇಲೆ ಬಿದ್ದೊಡನೆ ಬೆಚ್ಚಿಬಿತ್ತು. ಚೆಂಡು ಹಿಡಿದುಕೊಂಡು ಅಲ್ಲಿಂದ ಕಾಲ್ಕಿತ್ತಿತು...

3

4

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಗುರು	ಮಣ	ಗಡು
ಸರಿ	ಹರ	ಗಣಿ

ಅಕ್ಷರ ಪಟ್ಟಿ

ಚಿ	ರ	ಶ	ತ್ವ	ವು	ಕೆ
ತ	ಗೆ	ಕೇ	ಕ	ತ	ತ

ಪುಟ್ಟುವಿನ ಹುಟ್ಟುಹಬ್ಬ

ಒಟ್ಟಿಗೆ ಗೆಳೆಯರು ಸೇರಿದರು
ಹುಟ್ಟಿದ ಹಬ್ಬವ ಮಾಡಿದರು
ಸುಂದರ ಮಂಟಪ ಕಟ್ಟಿದರು
ಚೆಂದದ ಲೈಟನು ಹಾಕಿದರು

ಮೇಣದ ಬತ್ತಿಯ ಉರಿಸಿದರು
ಗುಣ ಗುಣ ಹಾಡನು ಹಾಡಿದರು
ನೆನಪಿನ ಉಡುಗೊರೆ ನೀಡಿದರು
ಮಿತ್ರಗೆ ಒಳಿತನು ಬಯಸಿದರು

ಆರತಿ ಬೆಳಗುತ ಹರಿಸಿದರು
ತರತರ ತಿಂಡಿ ಹಂಚಿದರು
ತಿಂಡಿಯ ತಿನ್ನುತ ಹಿಗ್ಗಿದರು
ತಮ್ಮಯ ಮನೆಗೆ ತೆರಳಿದರು.

ಭಾಷಾ ಬೆಡಗು

ನಮ್ಮ ದೇಹದಲ್ಲಿನ ಕೆಲವು ಅಂಗಾಂಗಗಳು ನಿತ್ಯ ಆಡುಮಾತಿನಲ್ಲಿ ಗಾದೆಯಾಗಿ ಪಡೆನುಡಿಗಳಾಗಿ ಹೇಗೆ ಬಳಕೆಯಾಗಿವೆ ನೋಡಿ.

1	ಉಗುರಿಗೆ ಹೋಗುವುದಕ್ಕೆ ಕೊಡ್ಲಿ ತಗೊಂಡ್ರಂತೆ
2	ಪಾದ ಕಮಲ
3	ಕಾಲಿಗೆ ಬುದ್ಧಿ ಹೇಳು
4	ಮಂಡಿಯೂರಿದನು
5	ತೊಡೆತಟ್ಟು
6	ಹೊಟ್ಟಿ ಮ್ಯಾಗ ಹೊಡಿಬ್ಯಾಡ
7	ಕಳ್ಳ ಚುರ್ರ ಅಂತು
8	ಎದೆ ಸೆಟೆಸಿ
9	ನನ್ನ ಕೊಳ್ಳಿಗೆ ಹಾಕಿದ್ರು
10	ತುಟಿ ಪಿಟಿಕ್ಕನ್ನಲಿಲ್ಲ
11	ಎಲುಬಿಲ್ಲದ ನಾಲಿಗೆ
12	ಉಗುಳು ನುಂಗಿ ಹೊಟ್ಟಿ ತುಂಬಿಸಿಕೊಳ್ಳವ
13	ಹಲ್ಲಾಗ ನಾಲ್ಗಿ ಇಟ್ಗೊಂಡು ಇರು
14	ಮೂಗಿನ ನೇರಕ್ಕೆ
15	ಹಣೆ ಬರಹ
16	ಕಿವ್ಯಾಗ ಗೂಟ ಇಟ್ಗೊಂಡಿಯೇನ
17	ಕೂದ್ಲ ಇದ್ದಾರೆ ಹ್ಯಾಂಗ ಬಾಚಿದ್ರೂ ಚಂದ

ಗಣಿತದಲ್ಲಿ ಗರ್ದಿ ಗಮ್ಮತ್ತು

ಸೋಜಿಗ ಗಣಿತ

ABC ಈ ಮೂರು ಅಕ್ಷರಗಳನ್ನು ಎಷ್ಟು ಸಾರಿ ಸ್ಥಾನ ಪಲ್ಲಟ ಮಾಡಬಹುದು. ಉತ್ತರ– 6 ಸಾರಿ. ಅದು ಹೇಗೆ ಎನ್ನಬಹುದಲ್ಲವೇ? ಹೀಗೆ...

ABC, BCA, CBA, ACB, BAC, CAB

ಇದರಂತೆ A ದಿಂದ Zವರೆಗಿನ ಎಲ್ಲ 26 ಅಕ್ಷರಗಳನ್ನು ಹೊಂದಿಸಬಹುದು. ಎಷ್ಟು ಸಾರಿ ಈ ಅಕ್ಷರಗಳನ್ನು ಹೊಂದಿಸಬಹುದು ಎಂದು ನೋಡಿ...ಆದರೆ ನೆನಪಿಡಿ ಒಂದು ಎರಡು ದಿನಗಳಲ್ಲಿ ಮುಗಿಯುವ ಲೆಕ್ಕ ಇದಲ್ಲ!

ಬಾಲ ವಿಜ್ಞಾನ

ಹಿರಿದಾಗುತ್ತಿರುವ ಸಾಗರ

ಖಂಡಗಳು ಸರಿಯುತ್ತ ಕಿರಿದಾಗುತ್ತಿರುವಾಗಲೇ ಸಾಗರಗಳು ಹಿರಿದಾಗುತ್ತಿವೆ. ಉದಾಹರಣೆಗೆ ಈಗ ಉತ್ತರ ಅಮೆರಿಕ ಯೂರೋಪ್ ಹೆಚ್ಚು ದೂರ ಸರಿದಿವೆ. ಅಟ್ಲಾಂಟಿಕ್ ಸಾಗರ 500 ವರ್ಷಗಳ ಹಿಂದೆ ಇದ್ದುದ್ದಕ್ಕಿಂತ ಈಗ 10ಮೀ ಹೆಚ್ಚು ಅಗಲವಾಗಿದೆ. ಸಮುದ್ರದಲ್ಲಿ ಅಲೆಗಳ ಎತ್ತರವು ಗಾಳಿ ಬೀಸುವ ದಿಕ್ಕು, ಅವಧಿ ಮತ್ತು ವೇಗಗಳನ್ನು ಅವಲಂಬಿಸಿರುತ್ತದೆ. ಮಂದ ಮಾರುತದಿಂದ ಕಿರುದೆರೆಗಳು ಏಳುತ್ತವೆ. ತುಫಾನು ಬಿರುಗಾಳಿಗಳಿಂದ 150 ಸೆಂ.ಮೀ.ಗು ಎತ್ತರ ಅಲೆಗಳು ಏಳುತ್ತವೆ. ಅಲೆಯ ಒಂದು ಶಿಖರದಿಂದ ಇನ್ನೊಂದಕ್ಕೆ ಇರುವ ಅಂತರವೇ ಅಲೆಯ ಉದ್ದ. ಒಂದೇ ಜಾಗದಲ್ಲಿ ಅಲೆಯ ಒಂದು ಶಿಖರ ಕಾಣಿಸುವುದಕ್ಕೂ ಮತ್ತೊಂದು ಕಾಣಿಸುವುದಕ್ಕೂ ನಡುವಿನ ಕಾಲದ ಅಂತರವೇ ಅಲೆಯ ಅವಧಿ.

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1. ಕೋಮಲಗು 2.ಕೇವಲಸೆ 3.ಬಹಳದಿ 4.ಗಮನವಿ 5.ಕುಸುಮತಿ 6.ಶಬರಿದು

ಜಾಣಪದ ಆಟ: 1.ಶಂಕರ 2.ಈಶ್ವರ 3.ಹರ 4.ಗಂಗಾಧರ 5.ಶಶಿಧರ

ಪಂಚಕ್ವಿಜ್ಞಾಯ: 1.ಶ್ರೀನಿವಾಸನಾಯಕ 2.ಘಟಪ್ರಭಾ ಮತ್ತು ಮಲಪ್ರಭಾ 3.ಜಯ ಚಾಮರಾಜ ಒಡೆಯರ್ 4.ಬಡ್ಡಿಯ ಪಟ್ಟಿಗಳು 5.ಆದಿಕವಿ ಪಂಪ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಮಾನ್ವಿತ ಡಿ.
ತರೀಕೆರೆ

ಸ್ಫೂರ್ತಿ ಎಚ್.ಎಂ.
ಚಿಕ್ಕಬೂದಿಹಾಳ್

ಚಿನ್ಮಯ್ ವಿ.ಎಸ್.
ನರಗುಂದ

ಪ್ರಣವ್ ಎಸ್. ಗೌಡ
ಬೆಂಗಳೂರು

ರಮೇಶ ಎಸ್.ಕೆ.
ಹರಪನಹಳ್ಳಿ

ಮಧುರ ಡಿ.
ನ್ಯಾಮತಿ

ಮಹಿಳಾ ಪ್ರೀಮಿಯರ್ ಲೀಗ್ ಫೈನಲ್ ಇಂದು • ಸ್ಮೃತಿ ಮಂದಾನ ಬಳಗಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ಸವಾಲು

ಈ ಸಲ ಆರ್‌ಸಿಬಿ ಮಹಿಳೆಯರಿಗೆ ಕಪ್?

ನವದೆಹಲಿ (ಪಿಟಿಐ): ಸ್ಮೃತಿ ಮಂದಾನ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರ ತಂಡ ಈಗ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯದ ಕನಸು ಕಾಣುತ್ತಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಆರ್‌ಸಿಬಿ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸೆಣಸಲಿದೆ.

ಲೀಗ್ ಹಂತದಲ್ಲಿ ಉತ್ತಮವಾಗಿ ಆಡಿ ಪ್ಲೇ ಆಫ್ ತಲುಪುವಲ್ಲಿ ಆರ್‌ಸಿಬಿ ಯಶಸ್ವಿಯಾಗಿತ್ತು. ಎಲಿಮಿನೇಟರ್ ಪಂದ್ಯದಲ್ಲಿ ಹೋದ ವರ್ಷದ ಚಾಂಪಿಯನ್ ಮುಂಬೈ ಇಂಡಿಯನ್ಸ್ ಎದುರು ರೋಚಕ ಜಯ ಸಾಧಿಸಿದ ಸ್ಮೃತಿ ಬಳಗವು ಫೈನಲ್‌ಗೆ ಲಗ್ಗೆ ಇಟ್ಟಿತ್ತು.

ಆಸ್ಟ್ರೇಲಿಯಾದ ದಂತಕಥೆ ಎಲಿಸ್ ಪೆರಿ, ಆಲ್‌ರೌಂಡರ್ ಸೋಫಿ ಮಾಲಿನೆ, ಕನ್ನಡದ ಹುಡುಗಿ ಶ್ರೇಯಾಂಕಾ ಪಾಟೀಲ ಅವರ ಛಲದ ಆಟದ ಮುಂದೆ ಮುಂಬೈ ಸೋತಿತ್ತು. ಇದೀಗ ಹೋದ ಸಲದ ರನ್ನರ್ಸ್ ಅಪ್ ತಂಡವನ್ನು ಮಣಿಸಿ ಕಿರೀಟ ಧರಿಸುವ ಛಲದಲ್ಲಿ ತಂಡವಿದೆ.

ಶ್ರೇಯಾಂಕ ಪಾಟೀಲ

ಟ್ರೋಫಿಯೊಂದಿಗೆ ಡೆಲ್ಲಿ ಕ್ಯಾಪಿಟಲ್ಸ್ ನಾಯಕಿ ಮೆಗ್ ಲ್ಯಾನಿಂಗ್ ಹಾಗೂ ಆರ್‌ಸಿಬಿ ನಾಯಕಿ ಸ್ಮೃತಿ ಮಂದಾನ

ತಂಡಗಳು

ಆರ್‌ಸಿಬಿ: ಸ್ಮೃತಿ ಮಂದಾನ (ನಾಯಕಿ), ರಿಚಾ ಘೋಷ್ (ವಿಕೆಟ್‌ಕೀಪರ್), ಸೋಫಿ ಡಿವೈನ್, ಹೀಥರ್ ನೈಟ್, ಸಿಮ್ರನ್ ಬಹಾದ್ದೂರ್, ಸೋಫಿ ಡಿವೈನ್, ಶ್ರೇಯಾಂಕಾ ಪಾಟೀಲ, ಎಲಿಸ್ ಪೆರಿ, ಸೋಫಿ ಮಾಲಿನೆ, ರೇಣುಕಾ ಸಿಂಗ್, ಜಾರ್ಜಿಯಾ ವೆರ್ಹಾಮ್, ಆಶಾ ಶೋಭನಾ, ಏಕತಾ ಬಿಷ್ಠ, ಎಸ್. ಮೇಘನಾ, ಇಂದ್ರಾಣಿ ರಾಯ್, ಸತೀಶ್ ಶುಭಾ, ದಿಶಾ ಕಸತ್,

ಡೆಲ್ಲಿ ಕ್ಯಾಪಿಟಲ್ಸ್: ಮೆಗ್ ಲ್ಯಾನಿಂಗ್ (ನಾಯಕಿ), ತನಿಯಾ ಭಾಟಿಯಾ (ವಿಕೆಟ್ ಕೀಪರ್), ಲಾರಾ ಹ್ಯಾರಿಸ್, ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ಅಲೈಸ್ ಕ್ಯಾಪ್ಸಿ, ಮರಿಝಾನೆ ಕಾಪ್, ಶಿಖಾ ಪಾಂಡೆ, ಅನಾಬೆಲ್ ಸದರ್ಲೆಂಡ್, ಜೆಸ್ ಯಾನ್ಸೆನ್, ಮಿನು ಮಣಿ, ಪೂನಮ್ ಯಾದವ್, ಅರುಂಧತಿ ರೆಡ್ಡಿ, ತಿತಾಸ್ ಸಾಧು, ರಾಧಾ ಯಾದವ್ ಅಶ್ವನಿ ಕುಮಾರಿ, ಅಪರ್ಣಾ ಮಂಡಲ್, ವಿ. ಸ್ನೇಹಾ ದೀಪ್ತಿ.

ಮೆಗ್ ಲ್ಯಾನಿಂಗ್ ನಾಯಕತ್ವದ ಡೆಲ್ಲಿ ತಂಡವನ್ನು ಮಣಿಸುವುದು ಸುಲಭವಲ್ಲ. ಲೀಗ್ ಹಂತದ ಎರಡೂ ಪಂದ್ಯಗಳಲ್ಲಿ ಮಂದಾನ ಬಳಗವು ಡೆಲ್ಲಿಗೆ ಮಣಿದಿತ್ತು. ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ಅಲೈಸ್ ಕ್ಯಾಪ್ಸಿ ಅವರು ಅಮೋಘ ಲಯದಲ್ಲಿದ್ದಾರೆ.

ಮುಖ್ಯಾಂಶಗಳು

- ಸತತ ಎರಡನೇ ಬಾರಿ ಫೈನಲ್ ಪ್ರವೇಶಿಸಿರುವ ಡೆಲ್ಲಿ
- ಎಲಿಸ್ ಪೆರಿ ಮೇಲೆ ನಿರೀಕ್ಷೆಯ ಭಾರ
- ಕನ್ನಡತಿ ಶ್ರೇಯಾಂಕ ಪಾಟೀಲ ಮೇಲೆ ಭರವಸೆ

ಆರ್‌ಸಿಬಿ ತಂಡದಲ್ಲಿ ಎಲಿಸ್ ಪೆರಿ ಅವರು ನಿರಂತರವಾಗಿ ಆಲ್‌ರೌಂಡ್ ಆಟವಾಡುತ್ತಿದ್ದಾರೆ. ಆರೆಂಜ್ ಕ್ಯಾಪ್ ಧರಿಸಿದ್ದಾರೆ. ಸ್ಮೃತಿ ಮಂದಾನ ಮತ್ತು ಸೋಫಿ ಅವರು ಉತ್ತಮ ಆರಂಭ ನೀಡಿದರೆ ಗೆಲುವು ಸುಲಭವಾಗಬಹುದು.

ಆದರೆ ಡೆಲ್ಲಿ ತಂಡದ ಬೌಲಿಂಗ್ ಪಡೆಯು ಬಲಿಷ್ಠವಾಗಿದ್ದು ಎದುರಿಸಿ ನಿಲ್ಲುವುದೇ ಪ್ರಮುಖ ಸವಾಲಾಗಲಿದೆ.

ಆರ್‌ಸಿಬಿ ಬೌಲರ್ ರೇಣುಕಾ ಸಿಂಗ್, ಆಶಾ ಶೋಭನಾ ಮತ್ತು ಶ್ರೇಯಾಂಕ ಅವರು ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ಹೆಚ್ಚು ರನ್ ಕೊಡದೇ ವಿಕೆಟ್ ಬೇಟೆಯಾಡಿದರೆ ಡೆಲ್ಲಿ ತಂಡವನ್ನು ಕಟ್ಟಿಹಾಕಬಹುದು. ಮುಂಬೈ ಎದುರಿಗೆ ಇದೇ ತಂತ್ರಗಾರಿಕೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದ ಸ್ಮೃತಿ ಬಳಗವು ಜಯಿಸಿತ್ತು.

ಪುರುಷರಿಗಿಂತ ಮೊದಲು ವನಿತೆಯರಿಗೇ ಪ್ರಶಸ್ತಿ?

ಬೆಂಗಳೂರು/ನವದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕಳೆದ 17 ವರ್ಷಗಳಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಒಮ್ಮೆಯೂ ಚಾಂಪಿಯನ್ ಆಗಿಲ್ಲ. ಮೂರು ಬಾರಿ ಫೈನಲ್ ತಲುಪಿದರೂ ಗೆದ್ದಿರಲಿಲ್ಲ.

ಆದರೆ ಇದೀಗ ಎರಡನೇ ಆವೃತ್ತಿಯ ಡಬ್ಲ್ಯುಪಿಎಲ್ ಟೂರ್ನಿಯಲ್ಲಿ ಮಹಿಳೆಯರ ಆರ್‌ಸಿಬಿ ತಂಡವು ಫೈನಲ್ ಪ್ರವೇಶಿಸಿದೆ. ಇದರಿಂದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಈಗ ವಿವಿಧ ಮೀಮ್‌ಗಳು, ಚಟಾಕಿಗಳೂ ಓಡಾಡುತ್ತಿವೆ.

‘ಹೆಣ್ಮಕ್ಕಳೇ ಸ್ಟ್ರಾಂಗು ಗುರು..’ ಆರ್‌ಸಿಬಿಗೆ ಮಹಿಳೆಯರೇ ಕಪ್ ತರಲಿದ್ದಾರೆ ಎಂಬ ಪೋಸ್ಟ್‌ಗಳು ಹರಿದಾಡುತ್ತಿವೆ.

ಈ ಕುರಿತು ಶನಿವಾರ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸ್ಮೃತಿ ಮಂದಾನ, ‘ಆ ರೀತಿಯ ಭಾವನೆ ಏನಿಲ್ಲ. ಅವರ (ಪುರುಷರು) ತಂಡದೊಂದಿಗೆ ನಮ್ಮ ಪೈಪೋಟಿಯೇನಿಲ್ಲ. ಉಭಯ ತಂಡಗಳ ನಡುವಣ ಹೋಲಿಕೆ ಬೇಡ. ಇದರಿಂದಾಗಿ ಒತ್ತಡ ಹೆಚ್ಚಾಗುತ್ತದೆ’ ಎಂದರು.

ಡೆಲ್ಲಿ ಕ್ಯಾಪಿಟಲ್ಸ್

ಬೌಲರ್	ವಿಕೆಟ್
ಮರಿಝಾನೆ ಕ್ಯಾಪ್	11
ಜೆಸ್ ಯಾನ್ಸೆನ್	11
ರಾಧಾ ಯಾದವ್	10

ಪ್ರಶಸ್ತಿ ಮೊತ್ತ (₹ ಅಂದಾಜು)

ವಿಜೇತರಿಗೆ: 1 ಕೋಟಿ	
ರನ್ನರ್ಸ್ ಅಪ್: 50 ಲಕ್ಷ	

ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್
ಪಂದ್ಯ ಆರಂಭ: ರಾತ್ರಿ 7.30

ಹೆಚ್ಚು ರನ್ ಗಳಿಸಿದವರು

ಆರ್‌ಸಿಬಿ	
ಬ್ಯಾಟರ್	ರನ್
ಎಲಿಸ್ ಪೆರಿ	312
ಸ್ಮೃತಿ ಮಂದಾನ	269
ರಿಚಾ ಘೋಷ್	240

ಡೆಲ್ಲಿ ಕ್ಯಾಪಿಟಲ್ಸ್

ಮೆಗ್ ಲ್ಯಾನಿಂಗ್	308
ಶಫಾಲಿ ವರ್ಮಾ	265
ಜೆಮಿಮಾ ರಾಡ್ರಿಗಸ್	235

ಹೆಚ್ಚು ವಿಕೆಟ್ ಗಳಿಸಿದ ಬೌಲರ್‌ಗಳು

ಆರ್‌ಸಿಬಿ	
ಆಶಾ ಶೋಭನಾ	10
ಸೋಫಿ ಮಾಲಿನೆ	9
ಶ್ರೇಯಾಂಕಾ ಪಾಟೀಲ	7

ಭಾರತದಲ್ಲಿಯೇ ಐಪಿಎಲ್ ಆಯೋಜನೆ: ಧುಮಾಲ್

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಸ್ಥಳಾಂತರಿಸುವುದಿಲ್ಲ ಎಂದು ಐಪಿಎಲ್ ಚೇರ್ಮನ್ ಅರುಣ್ ಧುಮಾಲ್ ಹೇಳಿದ್ದಾರೆ.

ಅರುಣ್

ಏಪ್ರಿಲ್ 19ರಿಂದ ಜೂನ್ 1ರವರೆಗೆ ಚುನಾವಣೆ ನಡೆಯಲಿವೆ.

‘ಐಪಿಎಲ್ ಟೂರ್ನಿಯನ್ನು ಎಲ್ಲಿಗೂ ಸ್ಥಳಾಂತರ ಮಾಡುವುದಿಲ್ಲ. ಈಗಾಗಲೇ ಮೊದಲ ಎರಡು ವಾರಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದ್ದೇವೆ. ಉಳಿದ ಪಂದ್ಯಗಳ ವೇಳಾಪಟ್ಟಿಯನ್ನೂ ಶೀಘ್ರದಲ್ಲಿಯೇ ಬಿಡುಗಡೆ ಮಾಡುತ್ತೇವೆ’ ಎಂದು ಧುಮಾಲ್ ಸ್ಪಷ್ಟಪಡಿಸಿದ್ದಾರೆ.

ಇದೇ 22ರಂದು ಟೂರ್ನಿ ಆರಂಭವಾಗಲಿದೆ. ಚೆನ್ನೈನಲ್ಲಿ ನಡೆಯುವ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮುಖಾಮುಖಿಯಾಗಲಿವೆ.

2019ರಲ್ಲಿ ಚುನಾವಣೆ ಸಂದರ್ಭದಲ್ಲಿ ಮಾಡಿದ್ದಂತೆ ಈ ಬಾರಿಯೂ ಪೂರ್ಣ ಐಪಿಎಲ್ ಟೂರ್ನಿಯನ್ನು ಭಾರತದಲ್ಲಿಯೇ ನಡೆಸಲಾಗುವುದು ಎಂದು ಈಚೆಗೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದರು.

KAS
ಅಧಿಸೂಚನೆ ಪ್ರಕಟಣೆ!
ಪೂರ್ವಭಾವಿ ಪರೀಕ್ಷಾ (Prelims) ದಿನಾಂಕ: 05-05-2024
384 ಗೆಜೆಟೆಡ್ ಪ್ರೊಬೆಷನರ್ಸ (KAS) ಹುದ್ದೆಗಳ ನೇಮಕಾತಿಗೆ ಇದೀಗ ಅಧಿಸೂಚನೆ ಪ್ರಕಟಿಸಿ ಅರ್ಜಿ ಆಹ್ವಾನಿಸಲಾಗಿದೆ!!
ನಿಮ್ಮ ತಯಾರಿಯನ್ನು ಪೂರ್ಣಗೊಳಿಸಿ
EXAM DH ಪ್ರಜಾವಾಣಿ MASTERMIND™
ಇಂದೇ KAS ಮಾಕ್ ಟೆಸ್ಟ್ ಸರಣಿಗೆ ಚಂದಾದಾರರಾಗಿ!
- 12 KAS ಮಾಕ್ ಪ್ರಿಲಿಮ್ಸ್ ಪರೀಕ್ಷೆಗಳ ಸರಣಿ
- 24 ಗಂಟೆಗಳ ಒಳಗೆ ಸಮಗ್ರ ಪರಿಹಾರಗಳು ಮತ್ತು ಶ್ರೇಯಾಂಕಗಳನ್ನು ಪಡೆಯಿರಿ
- ಪ್ರತಿ ಪರೀಕ್ಷೆಯನ್ನು 3 ಬಾರಿ ಪ್ರಯತ್ನಿಸಿ
ಹೆಚ್ಚಿನ ಮಾಹಿತಿಗಾಗಿ WhatsApp ಮಾಡಿ: 96069 66128
ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ
www.exammastermind.com

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಸಿಂಗಲ್ಸ್ ಸೆಮಿಫೈನಲ್‌ಗೆ ಲಕ್ಷ್ಯ ಸೇನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪುರುಷರ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದರು.

ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 22 ವರ್ಷದ ಲಕ್ಷ್ಯ ಸೇನ್ 20-22, 21-16, 21-19 ರಿಂದ ಮಲೇಷ್ಯಾದ ಲೀ ಝೀ ಜಿಯಾ ವಿರುದ್ಧ ಜಯಿಸಿದರು. 71 ನಿಮಿಷಗಳ ಕಾಲ ಈ ಹೋರಾಟ ನಡೆಯಿತು. ಲಕ್ಷ್ಯ ಅವರು 2022ರಲ್ಲಿ ಇಲ್ಲಿ ರನ್ನರ್ ಅಪ್ ಆಗಿದ್ದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 18ನೇ ಸ್ಥಾನದಲ್ಲಿರುವ ಲಕ್ಷ್ಯ ಅವರು ಕಳೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಾಂಪಿಯನ್ ಆಗಿದ್ದರು. ಈ ಟೂರ್ನಿಯ ಸೆಮಿಫೈನಲ್‌ನಲ್ಲಿ ಅವರು ವಿಶ್ವ ರ್‍ಯಾಂಕಿಂಗ್‌ನಲ್ಲಿ 9ನೇ ಸ್ಥಾನದಲ್ಲಿರುವ ಇಂಡೋನೇಷ್ಯಾದ ಜೊನಾಥನ್ ಕ್ರಿಸ್ಟಿ ಅವರನ್ನು ಎದುರಿಸಲಿದ್ದಾರೆ.

‘ನಿಜಕ್ಕೂ ತುಂಬಾ ಒಳ್ಳೆಯ ಪಂದ್ಯ ಇದು. ಪ್ರತಿಸ್ಪರ್ಧಿಯು ತುಂಬಾ ಒಳ್ಳೆಯ ಆಟಗಾರ ಎಂಬುದು ಗೊತ್ತಿತ್ತು. ಆದ್ದರಿಂದ ಪ್ರತಿ ಹಂತದಲ್ಲಿಯೂ ಸಮಚಿತ್ತದೊಂದಿಗೆ ಆಡುವ ಅಗತ್ಯವಿತ್ತು ಎಂದು ಲಕ್ಷ್ಯ ಸೇನ್ ಅವರು ಹೇಳಿದರು.

ಧೋನಿಗೆ ಚಿರಋಣಿ: ಅಶ್ವಿನ್

ಅಶ್ವಿನ್

ಚೆನ್ನೈ (ಪಿಟಿಐ): ತಮ್ಮ ಜೀವನದುದ್ದಕ್ಕೂ ಮಹೇಂದ್ರಸಿಂಗ್ ಧೋನಿ ಅವರಿಗೆ ಋಣಿಯಾಗಿರುವುದಾಗಿ ಭಾರತ ತಂಡದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಹೇಳಿದ್ದಾರೆ.

ತಮಿಳುನಾಡು ಕ್ರಿಕೆಟ್ ಸಂಸ್ಥೆ (ಟಿಎನ್‌ಸಿಎ) ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಹಾಗೂ ₹ 1 ಕೋಟಿ ಬಹುಮಾನ ಸ್ವೀಕರಿಸಿದ ಅಶ್ವಿನ್ ಮಾತನಾಡಿದರು.

‘ಅವತ್ತು ರಾಯಲ್ ಚಾಲೆಂಜರ್ಸ್ ಎದುರಿನ ಪಂದ್ಯದಲ್ಲಿ ಕ್ರಿಸ್ ಗೇಲ್ ಎದುರು ಬೌಲಿಂಗ್ ಮಾಡಲು ಹೊಸ ಚೆಂಡು ನೀಡಿದ ಧೋನಿ ವಿಶ್ವಾಸಕ್ಕೆ ಋಣಿ ನಾನು. 2008ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೇರ್ಪಡೆಯಾದಾಗ ಖ್ಯಾತನಾಮರಾದ ಮ್ಯಾಥ್ಯೂ ಹೇಡನ್ ಮತ್ತು ಧೋನಿ ಅವರನ್ನು ಭೇಟಿಯಾದೆ. ಆಗ ನಾನಿನ್ನೂ ಏನೂ ಆಗಿರಲಿಲ್ಲ’ ಎಂದರು.

CIPET: School for Advanced Research in Petrochemicals (SARP)-APDDRL
Central Institute of Petrochemicals Engineering & Technology (CIPET)
सि पे ट CIPET
sabic
(Department of Chemicals and Petrochemicals Ministry of Chemicals and Fertilisers, Govt. of India)
Plot No. 7P, Hi-tech Defense and Aerospace Park, Jalahobli, Devanahalli, Bengaluru North-562149
E-mail: apddrl@cipet.gov.in / apddrlbengaluru@gmail.com ; Website: www.cipet.gov.in

Applications for Job Oriented Skill Training (Free of cost)

CIPET:SARP-APDDRL, Bengaluru, invites application for the following job assured free skill development training program sponsored by M/s SABIC India Private Limited, Gurugram under Corporate Social Responsibility (CSR) initiative.

Program Name	Total No. of seats available	Training Duration	Minimum Qualification
Machine Operator – Injection Moulding (MO-IM)	22 (Boys & Girls)	960 Hours (6 Months)	10th Pass

Training Fee, Study Material, Uniform, Safety Shoe, Food & Accommodation are free of cost

Date of Counselling: 26-03-2024
Age: Minimum 18 years & Maximum 28 years (Relaxable by 5 years for SC/ST and 3 years for OBC participants)
Job Opportunity: On successful completion of training CIPET will arrange job in plastic industry with good salary.
Interested Candidates to join the training program and get immediate job opportunity may come directly at above mentioned address with the following certificates (originals and Xerox copies) 1. Mark Sheet & Certificates (10th) ; 2. Transfer Certificate (TC); 3. Community Certificate; 4. Income Certificate; 5. Aadhar Card; 6. Passport Size Photo (5 Nos.)
Those who are unable to come directly, please send the application with details (Name, Father / Mother Name, Date of Birth, Sex, category, Present address, Mobile Number, Email ID, Aadhar Number with Copies of all mark sheet / Certificates) through email / post.
Senior Scientist & Head
For any assistance / more information please contact: 88676 86766, 76663 55661, 63602 03434

20 ಕಿ.ಮೀ ನಡಿಗೆ ಸ್ಪರ್ಧೆ: ರಾಮ್ ಬಾಬು ತೃತೀಯ

ನವದೆಹಲಿ (ಪಿಟಿಐ): ಭಾರತದ ರಾಮ್ ಬಾಬು ಅವರು ಸ್ಲೊವಾಕಿಯಾದಲ್ಲಿ ನಡೆಯುತ್ತಿರುವ ಡುಡಿನಾಸ್ಕ್ 50 ಮೀಟ್‌ನಲ್ಲಿ ಶನಿವಾರ ಪ್ಯಾರಿಸ್ ಒಲಿಂಪಿಕ್ಸ್ ಪುರುಷರ 20 ಕಿ.ಮೀ. ನಡಿಗೆ ಸ್ಪರ್ಧೆಯ ಅರ್ಹತಾ ಮಾನದಂಡವನ್ನು 1ಗಂಟೆ, 20 ನಿಮಿಷಗಳಲ್ಲಿ ಸಾಧಿಸಿದರು.

ಈ ಸಾಧನೆ ಮಾಡಿದ ಭಾರತದ 7ನೇ ಪುರುಷ ಅಥ್ಲೀಟ್ ಆಗಿದ್ದಾರೆ. ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ 35 ಕಿ.ಮೀ ನಡಿಗೆ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿರುವ ಬಾಬು, ಈ ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆದರು.

ಇದೇ ಮೊದಲ ಬಾರಿಗೆ ಭಾರತೀಯ ಅಥ್ಲೀಟ್ ಒಬ್ಬರು ಈ ಕೂಟದಲ್ಲಿ ಮೂರನೇ ಸ್ಥಾನ ಪಡೆದಿದ್ದಾರೆ.

ಒಲಿಂಪಿಕ್ ಅರ್ಹತೆಗಾಗಿ 1ಗಂಟೆ, 20ನಿಮಿಷ ಹಾಗೂ 10ಸೆಕೆಂಡುಗಳ ಅವಧಿಯನ್ನು ನಿಗದಿ ಮಾಡಲಾಗಿತ್ತು.

ರಾಮ್ ಬಾಬು

ಪೆರುವಿನ ಸೀಸರ್ ರೊಡ್ರಿಗಸ್ (1ಗಂ:19ನಿ, 41ಸೆ) ಮೊದಲ ಸ್ಥಾನ ಪಡೆದರೆ, ಈಕ್ವೆಡಾರ್‌ನ ಬ್ರಿಯಾನ್ ಪಿಂಟಾಡೊ (1ಗಂ:19ನಿ:44ಸೆ) ಎರಡನೇ ಸ್ಥಾನ ಪಡೆದರು.

ಒಲಿಂಪಿಕ್ಸ್‌ನಲ್ಲಿ ದೇಶವು ವೈಯಕ್ತಿಕ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಯಲ್ಲಿ ಕೇವಲ ಮೂವರು ಕ್ರೀಡಾಪಟುಗಳನ್ನು ಮಾತ್ರ ಕಳುಹಿಸಬಹುದು. ಪ್ಯಾರಿಸ್ ಕ್ರೀಡಾಕೂಟಕ್ಕೆ ಏಳು ರೇಸ್ ವಾಕರ್‌ಗಳಲ್ಲಿ ಯಾರು ಸ್ಥಾನ ಪಡೆಯುತ್ತಾರೆ ಎಂಬುದನ್ನು ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ನಿರ್ಧರಿಸಲಿದೆ.

ಅಂತಿಮ ಆಯ್ಕೆ ಜೂನ್ ನಲ್ಲಿ ನಡೆಯಲಿದೆ ಎಂದು ಮುಖ್ಯ ಅಥ್ಲೆಟಿಕ್ಸ್ ಕೋಚ್ ರಾಧಾಕೃಷ್ಣನ್ ನಾಯರ್ ಹೇಳಿದ್ದಾರೆ.

ವಾಲಿಬಾಲ್ ಲೀಗ್: ಟಾರ್ಪಿಡೋಸ್‌ಗೆ ಗೆಲುವು

ಚೆನ್ನೈ: ಬೆಂಗಳೂರು ಟಾರ್ಪಿಡೋಸ್ ತಂಡ, ಮೂರನೇ ಆವೃತ್ತಿಯ ರುಪೇ ಪ್ರೈಮ್ ವಾಲಿಬಾಲ್ ಲೀಗ್‌ನ ಸೂಪರ್ ಫೈವ್ ಹಂತದ ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಮುಂಬೈ ಮಿಟಿಯೋರ್ಸ್ ವಿರುದ್ಧ ಶನಿವಾರ ಜಯಗಳಿಸಿತು.

ಈ ಪಂದ್ಯ ಸೋತಿದ್ದಲ್ಲಿ ಬೆಂಗಳೂರು ಟಾರ್ಪಿಡೋಸ್ ತಂಡ ಹೊರಬೀಳುತಿತ್ತು.

ಆದರೆ ಬೆಂಗಳೂರು ತಂಡ ಇಲ್ಲಿನ ಜವಾಹರಲಾಲ್ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಈ ಮಹತ್ವದ ಪಂದ್ಯದಲ್ಲಿ ಮುಂಬೈ ಮಿಟಿಯೋರ್ಸ್ ತಂಡವನ್ನು 15-13, 16-14, 15-10 ಸೋಲಿಸಿತು. ಜಿಷ್ಣು ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಜಿಷ್ಣು ಅವರ ಬ್ಲಾಕ್‌ಗಳು ಟಾರ್ಪಿಡೋಸ್ ತಂಡಕ್ಕೆ ಆರಂಭಿಕ ಮುನ್ನಡೆ ಪಡೆಯಲು ನೆರವಾದವು, ಆದರೆ ಮುಂಬೈ ತಂಡ ಅಮಿತ್ ಗುಲಿಯಾ ಅವರ ದಾಳಿಯ ಮೂಲಕ ಕೆಲಮಟ್ಟಿಗೆ ಪ್ರತಿಹೋರಾಟ ತೋರಿತು.

ದಾಳಿಯಲ್ಲಿ ಶುಭಂ ಅವರ ವೈಫಲ್ಯ ಮುಂಬೈ ತಂಡಕ್ಕೆ ಹಿನ್ನಡೆ ಉಂಟುಮಾಡಿತು. ಬೆಂಗಳೂರು ತಂಡ ಎದುರಾಳಿಗಳ ಕೋರ್ಟ್‌ನ ಮಧ್ಯಭಾಗ ಗುರಿಯಾಗಿಸಿತು. ದಾಳಿಯಲ್ಲಿ ಜಿಷ್ಣು ಅವರನ್ನು ಹೆಚ್ಚು ತೊಡಗಿಸಿಕೊಳ್ಳಲು ಪ್ರಾರಂಭಿಸಿತು. ಮುಂಬೈಗೆ ಅಂಕ ಪಡೆಯಲು ಅವಕಾಶ ನೀಡಲಿಲ್ಲ.

ಮಹಿಳಾ ಹಾಸ್ಟೆಲ್‌ಗೆ ಅಕ್ರಮ ಪ್ರವೇಶ: ಅಂಚಿತ್ ಅಮಾನತು

ನವದೆಹಲಿ (ಪಿಟಿಐ): ಪಟಿಯಾಲದಲ್ಲಿ ನಡೆಯುತ್ತಿರುವ ಒಲಿಂಪಿಕ್ ಪೂರ್ವಸಿದ್ಧತಾ ಶಿಬಿರದಲ್ಲಿ ಎನ್‌ಐಎಸ್ ಮಹಿಳಾ ಹಾಸ್ಟೆಲ್‌ಗೆ ಅಕ್ರಮವಾಗಿ ಪ್ರವೇಶ ಮಾಡಿದ ಆರೋಪದ ಮೇರೆಗೆ ಕಾಮನ್‌ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ವೇಟ್ ಲಿಫ್ಟರ್ ಅಚಿಂತ್ ಶೆವುಲಿ ಅವರನ್ನು ಅಮಾನತು ಮಾಡಲಾಗಿದೆ.

ಶಿಸ್ತು ಉಲ್ಲಂಘನೆ ಗುರುವಾರ ರಾತ್ರಿ ಸಂಭವಿಸಿದೆ. ಪುರುಷರ 73 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ 22 ವರ್ಷದ ಅಚಿಂತ್ ಭದ್ರತಾ ಸಿಬ್ಬಂದಿಗೆ ಸಿಕ್ಕಿಬಿದ್ದಿದ್ದು, ಅವರು ಘಟನೆ ಬಗ್ಗೆ ವಿಡಿಯೊ ಮಾಡಿದ್ದಾರೆ.

‘ಅಶಿಸ್ತು ಸಹಿಸಲಾಗುವುದಿಲ್ಲ. ತಕ್ಷಣವೇ ಶಿಬಿರದಿಂದ ಹೊರಹೋಗುವಂತೆ ಅಚಿಂತ್ ಅವರಿಗೆ ಸೂಚಿಸಲಾಗಿದೆ’ ಎಂದು ಭಾರತ ವೇಟ್ ಲಿಫ್ಟಿಂಗ್ ಫೆಡರೇಷನ್ (ಐಡಬ್ಲ್ಯುಎಲ್ ಎಫ್) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತೀಯ ಕ್ರೀಡಾ ಪ್ರಾಧಿಕಾರ ಮತ್ತು ಎನ್‌ಐಎಸ್ ಪಟಿಯಾಲ ಕಾರ್ಯನಿರ್ವಾಹಕ ನಿರ್ದೇಶಕ ವಿನೀತ್ ಕುಮಾರ್ ಅವರಿಗೆ ಘಟನೆಯ ಬಗ್ಗೆ ತಕ್ಷಣ ಮಾಹಿತಿ ನೀಡಲಾಯಿತು. ಘಟನೆಯ ವಿಡಿಯೊ ಪುರಾವೆಗಳು ಇದ್ದ ಕಾರಣ, ಸಾಯ್ ತನಿಖಾ ಸಮಿತಿಯನ್ನು ರಚಿಸಲಿಲ್ಲ.

‘ವಿಡಿಯೊವನ್ನು ಎನ್‌ಐಎಸ್ ಪಟಿಯಾಲದ ವಿನೀತ್ ಕುಮಾರ್ ಮತ್ತು ನವದೆಹಲಿಯ ಸಾಯ್ ಪ್ರಧಾನ ಕಚೇರಿಗೆ ಕಳುಹಿಸಲಾಗಿದೆ ಮತ್ತು ಅಚಿಂತಾ ಅವರನ್ನು ಶಿಬಿರದಿಂದ ಹೊರ ಹಾಕಲು ಐಡಬ್ಲ್ಯುಎಲ್‌ಎಫ್‌ಗೆ ತಿಳಿಸಲಾಗಿದೆ’ ಎಂದು ಸಾಯ್ ಮೂಲಗಳು ತಿಳಿಸಿವೆ.

ಅಚಿಂತ್ ಶೆವುಲಿ

ಪಟಿಯಾಲದ ಎನ್‌ಐಎಸ್‌ನಲ್ಲಿ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕ ಹಾಸ್ಟೆಲ್ ಇದೆ. ಪ್ರಸ್ತುತ ಮಹಿಳಾ ಬಾಕ್ಸರ್‌ಗಳು, ಕ್ರೀಡಾಪಟುಗಳು, ಕುಸ್ತಿಪಟುಗಳು ಇದ್ದಾರೆ.

ತಪ್ಪಿದ ಅವಕಾಶ: ಅಂಚಿತ್ ಅವರು ಅಮಾನತುಗೊಂಡಿರುವ ಕಾರಣ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಅವಕಾಶಗಳು ಸಹ ಅಂತ್ಯಗೊಂಡಿದೆ. ಏಕೆಂದರೆ ಈ ತಿಂಗಳ ಥೈಲ್ಯಾಂಡ್‌ನ ಫುಕೆಟ್ ನಲ್ಲಿ ನಡೆಯಲಿರುವ ಪ್ಯಾರಿಸ್ ಕ್ರೀಡಾಕೂಟದ ಅರ್ಹತಾ ಪಂದ್ಯದಲ್ಲಿ ಭಾಗವಹಿಸುವಂತಿಲ್ಲ. ಶೆಲಿ ಒಲಿಂಪಿಕ್ ಅರ್ಹತಾ ಶ್ರೇಯಾಂಕದಲ್ಲಿ 27 ನೇ ಸ್ಥಾನದಲ್ಲಿದ್ದಾರೆ.

ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ ಮೀರಾಬಾಯಿ ಚಾನು (49 ಕೆಜಿ) ಮತ್ತು ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ಪದಕ ವಿಜೇತೆ ಬಿಂದ್ಯಾರಾಣಿ ದೇವಿ ಮಾತ್ರ ಪ್ಯಾರಿಸ್ ಕ್ರೀಡಾಕೂಟಕ್ಕೆ ಸ್ಪರ್ಧೆಯಲ್ಲಿದ್ದಾರೆ.

ಐಡಬ್ಲ್ಯುಎಫ್ ವಿಶ್ವಕಪ್ ನಲ್ಲಿ ಭಾಗವಹಿಸಲು ಇಬ್ಬರೂ ಈ ತಿಂಗಳು ಥೈಲ್ಯಾಂಡ್ ಗೆ ಪ್ರಯಾಣಿಸಲಿದ್ದಾರೆ.

ಪ್ರಜಾವಾಣಿಗೆ ಟಿಪ್‌ಸ್ಟರ್ ಟ್ರೋಫಿ

ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆಗೆ ಬೆಂಗಳೂರು ಟರ್ಫ್ ಕ್ಲಬ್‌ನ (ಬಿಟಿಸಿ) ಟಿಪ್‌ಸ್ಟರ್ ಟ್ರ್ಯಾಲಿ ಟ್ರೋಫಿ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿತು.

ಬೆಂಗಳೂರಿನ 2023-24 ಸಾಲಿನ ಚಳಿಗಾಲದ ರೇಸ್‌ಗಳಲ್ಲಿ ಬಿಟಿಸಿಯು ದಿನಪತ್ರಿಕೆ ವಿಭಾಗದಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಪ್ರಜಾವಾಣಿ ಮೊದಲ ಸ್ಥಾನ ಗಳಿಸಿತು. 24ನೇ ಬಾರಿ ಈ ಪ್ರಶಸ್ತಿಯು ಪತ್ರಿಕೆಗೆ ಸಂದಿದೆ.

ಚಳಿಗಾಲದ ಅವಧಿಯ 22 ದಿನಗಳಲ್ಲಿ ನಡೆದ 169 ರೇಸ್‌ಗಳಲ್ಲಿ, ರೇಸ್ ಪ್ರತಿನಿಧಿ ಡಿ.ರವಿಕುಮಾರ್ 69 ವಿಜಯೀ ಕುದುರೆಗಳನ್ನು ಗುರುತಿಸಿದ್ದಾರೆ.

ರಾಯಲ್ ಚಾಲೆಂಜರ್ಸ್ ಅನ್‌ಬಾಕ್ಸ್ 19ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರ್ ತಂಡದ ಅನ್‌ಬಾಕ್ಸ್ ಕಾರ್ಯಕ್ರಮವು ಇದೇ 19ರಂದು ನಡೆಯಲಿದೆ. ಈ ಸಂದರ್ಭದಲ್ಲಿ ತಂಡದ ಹೆಸರಿನಲ್ಲಿ ಬೆಂಗಳೂರ್ ಪದವನ್ನು ಬೆಂಗಳೂರು ಎಂದು ಬದಲಾವಣೆ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂದು ಸಂಜೆ 4 ಗಂಟೆಯಿಂದ ಕಾರ್ಯಕ್ರಮ ನಡೆಯಲಿದೆ.

ಈ ಸಂದರ್ಭದಲ್ಲಿ ತಂಡದ ಆಟಗಾರರೆಲ್ಲರೂ ಅಭ್ಯಾಸ ನಡೆಸುವರು. ತಂಡದ 12ನೇ ಪ್ಲೇಯರ್ ಆರ್ಮಿ (ಅಭಿಮಾನಿಗಳು)ಯೊಂದಿಗೆ ಬಾಂಧವ್ಯ ಬೆಸೆಯುವ ಕಾರ್ಯಕ್ರಮ ಇದಾಗಿದೆ. ಕಳೆದ ಮೂರು ವರ್ಷಗಳಿಂದ ಆರ್‌ಸಿಬಿಯು ಈ ಕಾರ್ಯಕ್ರಮ ಮಾಡುತ್ತಿದೆ. ಅಭಿಮಾನಗಳೂ ತಮ್ಮ ನೆಚ್ಚಿನ ಆಟಗಾರರನ್ನು ಹತ್ತಿರದಿಂದ ನೋಡುವ ಅವಕಾಶ ಪಡೆಯಲಿದ್ದಾರೆ.

ಹೋದ ವರ್ಷದ ಅನ್‌ಬಾಕ್ಸ್ ಕಾರ್ಯಕ್ರಮದಲ್ಲಿ ವಿರಾಟ್ ಕೊಹ್ಲಿ – ಪಿಟಿಐ ಚಿತ್ರ ಸಂಗ್ರಹ

ಅನ್‌ಬಾಕ್ಸ್ ವೀಕ್ಷಿಸಲು ಟಿಕೆಟ್ ಖರೀದಿಸಬೇಕು. ಆರ್‌ಸಿಬಿಯ ವೆಬ್‌ಸೈಟ್‌ನಲ್ಲಿ ಟಿಕೆಟ್‌ಗಳು ಲಭ್ಯ ಇವೆ. ₹ 800 ರಿಂದ ಆರಂಭಿಕ ದರಗಳನ್ನು ನಿಗದಿಪಡಿಸಲಾಗಿದೆ.

ಹೋದ ವರ್ಷ ನಡೆದಿದ್ದ ಅನ್‌ಬಾಕ್ಸ್‌ನಲ್ಲಿ ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಮತ್ತು ವೆಸ್ಟ್‌ಇಂಡೀಸ್‌ನ ಕ್ರಿಸ್ ಗೇಲ್ ಅವರು ಹಾಜರಿದ್ದರು.

ಕೆಎಸ್‌ಸಿಎ ಗ್ರೂಪ್ ಒಂದರ ಐದನೇ ಡಿವಿಷನ್ ಕ್ರಿಕೆಟ್ ಟೂರ್ನಿಯ (ಜೆ.ಬಿ. ಮಲ್ಲಾರಾಧ್ಯ ಶೀಲ್ಡ್) ಪ್ರಶಸ್ತಿ ಮುಡಿಗೇರಿಸಿಕೊಂಡ ಕರ್ನಾಟಕ ಯೂತ್ ಕ್ರಿಕೆಟ್ ಅಸೋಸಿಯೇಷನ್ ಮಾಲೂರು ತಂಡ. (ಎಡದಿಂದ ನಿಂತವರು) ರಾಜಶೇಖರನ್, ರವಿ, ಕಾರ್ತಿಕ್ ಎಸ್, ಅನಿಲ್, ಸಂದೀಪ್ ಎಸ್, ಅರುಣ್, ತಿಲಕ್, ರಕ್ಷಿತ್, ಗಂಗಾಧರ್, ಅಶ್ವಿನ್, ಅಭಿಷೇಕ್ ಕಟಗಿ, (ಎಡದಿಂದ ಕುಳಿತವರು) ಲಕ್ಷ್ಮೀ ನಾರಾಯಣ, ಅನಂತ ಪದ್ಮನಾಭ ಉಪಾಧ್ಯಾಯ, ಎಂ.ಎನ್.ಮುನಿ ರೆಡ್ಡಿ, ಎಂ.ಪಿ.ನಾರಾಯಣಸ್ವಾಮಿ, ಸಾಗರ್, ಮಂಜುನಾಥ್ ಬಿ.ಎಸ್. (ಎಡದಿಂದ ಮಂಡಿಯೂರಿದವರು) ಸುಜಲ್ ಗೋವಿಂದ್, ಗಿರೀಶ್, ದೀಕ್ಷಿತ್, ಪ್ರಜ್ವಲ್, ಜಗನ್ನಾಥ್, ಮುರಳಿ.

Buy Now
SWIGGY instamart
HOME NEEDS IN 10 MINUTES
ಸೃಜನಾತ್ಮಕ ದೃಶ್ಯೀಕರಣ. *ಹಳೆಯ ಪ್ಯಾಕ್‌ಗೆ ಹೋಲಿಸಿದರೆ ಹೊಸ ಪ್ಯಾಕೇಜಿಂಗ್ ವಿನ್ಯಾಸ. #ಮಹಿಳೆಯರ ಮೇಲೆ ಐಸಿಎಂಆರ್ 2020 ಮಾರ್ಗಸೂಚಿಗೆ ಅನುಗುಣವಾಗಿ 2 ಸರ್ವ್ ಗಳಲ್ಲಿ (60 ಗ್ರಾಂ). ದೈನಂದಿನ ಆಹಾರದ ಭಾಗವಾಗಿ ಸೇವಿಸಿದಲ್ಲಿ ಹಾರ್ಲಿಕ್ಸ್ ವುಮೆನ್ಸ್ ಪ್ಲಸ್ ಪೌಷ್ಟಿಕಾಂಶಯುಕ್ತ ಪೇಯವಾಗಿದೆ. ~ಮೂಲ – [ಪೋಷಕಾಂಶಗಳು. 2021;13(2):364] *ಯಾವುದೇ ಸಕ್ಕರೆ ಸೇರಿಸಲಾಗಿಲ್ಲ. ಸಕ್ಕರೆ ಎನ್ನುವುದು ಸುಕ್ರೋಸ್ ಅನ್ನು ಸೂಚಿಸುತ್ತದೆ, ಇದು ಪ್ರಾಕೃತಿಕವಾಗಿ ದೊರೆಯುವ ಸಕ್ಕರೆ ಹೊಂದಿದೆ
ಇದು ಅಸೆಸಲ್ಫೇಮ್ ಪೊಟ್ಯಾಷಿಯಂ ಹೊಂದಿದೆ. ಮಕ್ಕಳು, ಗರ್ಭಿಣಿಯರು ಅಥವಾ ಹಾಲುಣಿಸುವ ಮಹಿಳೆಯರಿಗೆ ಶಿಫಾರಸ್ಸು ಮಾಡಲಾಗಿಲ್ಲ.
ಕ್ಯಾಲೊರಿ ರಹಿತ ಸಿಹಿಕಾರಕ ಹೊಂದಿದೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ನವಮಿ

RERA REGISTRATION NUMBER
PRM/KA/RERA/1251/309/PR/060324/006678
For more details, visit: https://rera.karnataka.gov.in

NAVAMI®
Tested and Trusted
An ISO 9001 : 2015 Certified Company

Thank you

Tower A sold out. Get ready for Tower B.
Call us to know more.

Thoughtfully Crafted | Metro Access | Well Connected | About 70% Open Space | Residential Locality | 20+ Amenities

NAVAMI
CHAMARA HEIGHTS
A PLACE TO CALL HOME

2, 2.5 & 3 BHK LUXURY HIGH-RISE APARTMENTS

Call: +91 8095566666 / 080-67095101

Enquiry: sales@navamibuilders.com | www.navamichamaraheights.com / www.navamibuilders.com

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ನವಮಿ

NAVAMI®
Tested and Trusted
An ISO 9001 : 2015 Certified Company

Level up your lifestyle towards a better future.

Walk Way / Pergola

Library

Indoor Games

Kids Play Area

Badminton Court

Welcome to Navami Chamara Heights

Luxury Living in Ullal, Bengaluru

Experience the perfect blend of nature, luxury, and convenience at Navami Chamara Heights. Our spacious 2, 2.5 and 3 BHK apartments offer a refreshing escape amidst lush greenery. Enjoy top-notch Amenities and easy Access to Educational institutions, Healthcare facility, Shopping centers, and Dining options, all within close proximity.

Embrace a luxurious life at Navami Chamara Heights. Your new home awaits.

NAVAMI
CHAMARA HEIGHTS
A PLACE TO CALL HOME

Location

Project Walkthrough

2, 2.5 & 3 BHK LUXURY HIGH-RISE APARTMENTS

Call: +91 8095566666 / 080-67095101

Enquiry: sales@navamibuilders.com | www.navamichamaraheights.com / www.navamibuilders.com

Disclaimer: The contents provided in this brochure are intended for informational purposes only and are not intended to constitute an offer or solicitation. We reserve our right to change or modify any information, material, data, etc. Customers are responsible for seeking the advice of professionals, as appropriate, regarding the information, opinions, advice, or contents pertaining to the property and its development, the details of which are set out in the ad. We make no representations and disclaim all warranties, whether express, implied, or statutory, including but not limited to warranties as to accuracy, reliability, usefulness, completeness, merchantability, or fitness of information for any particular purpose, non-infringement, and any damages ensuing thereby.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

3 BHK LUXURY FLATS FOR SALE
DREAMVILLE HOME

GYM · Library · Waling Track · Kids Play area · Club House · Party Hall

SBI · ICICI Bank · AXIS BANK · HDFC BANK

BBMP APPROVED
RERA APPROVED
PRM/KA/ RERA/1251/446/PR/220622/005013

63645 88805 / 9901834205
promaxdreamvillehome.com

No .37 1st Cross, Patelmunishamappa Layout Ward
No 25, Kothanur Hennur Main Road, Bangaluru .77

THE BIGGEST REAL ESTATE EXPO
VISIT US
In East Bengaluru

REALTY INVESTMENT EXPO
LAST DAY TODAY
25+ REPUTED BUILDERS
100+ PROJECTS

Platinum Sponsor
AMT
Crafting Spaces, Building Legacies

Why Visit RIE ?
1. Properties At Prime Location With Best R.O.I.
2. Verified & RERA Registered Properties.
3. Exclusive Deals & Offers For Walk-In Visitors Only.
4. Showcasing Properties In Bangalore & Outskirts Of Bangalore For Best Investment & ROI.

SAVE THE DATE
Saturday 16TH & Sunday 17TH
March-2024
11 AM - 7 PM | FREE ENTRY | FREE PARKING

VISIT US
MARRIOTT HOTEL WHITEFIELD,
EPIP ZONE, NEAR SRI SATHYA SAI HOSPITAL
(METRO STATION - SRI SATHYA SAI HOSPITAL)

BRIGADE · ADARSH · SUMADHURA · CASAGRAND · DSR · Aranyakaa · MAHAVEER · JRC · ceyone · BHAVISHA HOMES · Bespoke Realty · SN CITY · Elegance Enterprises · ECO CITY · CASATRANCE · UTOPIAA · KAIG · And Others

98451 66756 | 99864 42255
www.realtyinvestmentexpo.com
propFTX · Digi Infiniti
Conceptualized & Organized By EVENT EXPERTZZ

Prime Residential Plot for Sale
DC Converted Sites
Before HIRANANDANI Project Devanahalli
₹ 2599 per sqft
Upto 80% Bank Loan Available
❖ Black Tap Roads
❖ Under Ground Drainage
❖ Fully Covered Compound for Entire Layout
❖ Individual Water Connection for Each Plot
Ready for Registration 7022160615 / 7993847390

FLAT FOR SALE
2 BHK +1 Room Bathroom Attached at BASAVANAGUDI
(Upper Floor) + Car Parking
Carpet Area 1,000 Sq.ft.
1.3 Cr. Slightly Negotiable
Bull Temple Road, Bangalore.
Available for Visit Today from 11 am To 4 pm.
CALL: 9663890570

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

WANTED 20X30 or 30x40 Site Anjanapura BDA Layout any Block & any Facing Contact: 9980978986

Kanakapura Road

WANTED SITE: 40x60, 30x40 NarayanaNagar, BCMC Layout, Anjanapura BDA, Banashankari 6th.Stage, Gubblala, Agents Excuse. 6363726250.

Mallathalli

'**WANTED SITE** at Sir. M. Vishweshwaraiah Layout, 3rd and 4th Block, 30x40, 40x60 only Owners 9743173661'

Nagadevana Halli

WANTED HOUSES Sites, Flats Surrounding Nagarbhavi, Mallathahallli Vishveshwaraiah Layout 20x30, 30x40, 40x60. ABHILASHA CONSULTANT. 9480565758

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BDA-SITES WANTED Vishweshwaraiah Layout, Banashankari 6th Stage, 30x40, 40x60, 50x80 Immediate Settlement Contact: 98455-55666

R T Nagar

WANTED SITES in R.T. Nagar, Sultanpalya, Kanakanagar in and around. Genuine sellers Contact: 9845575731.

RENTAL PROPERTIES

Accommodation Available

Commercial

FOR RENT: 3200 Sft New Commercial Building with Ground & First Floor Opp. Basaveshwaranagar police station. Ideal for showroom/ Banks/ Super Market. Contact: 9448278155

FOR SALE
KIADB INDUSTRIAL PLOT IN MALUR
Measuring 35,520 Sq.ft with 3,500 Sq.ft Office Building. Prime Location. Well maintained property.
Contact through whatsapp: +1 60968 67466
Please call between 7am to 10am on weekdays or on weekends.

OFFICE SPACE available for rent in V.V. School premises, Vijayanagar, B'lore- 40 for running school related activities like Stationery, Canteen, Abacus, Tutorial etc...Contact : 080-23405860, 9686265860

PRIME SPACE for a Diagnostic Center available on Main Wind Tunnel Road, Murgeshpalya, HAL Airport Road, Bangalore. Ideal location. 9845192752

Flats

SF 3BHK FLAT RENT in Sumukha Meadows on VishnuVardhan Road, Channsandra, Bangalore. 24hrs water supply, carpark,Lift. Contact: 9533339694, 9246369439.

Industrial And Factory

INDUSTRIAL SHED for RENT. Near Srirangapatna Mandya Beside New Bangalore Mysore Road. Contact: 9008739737

House

COX TOWN Rent 3 & 4 BHK Italian Kitchen, Wardrobe, posh, Lift, water. Charles Campbell Road. 9686897004.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

BUILDING SOLUTIONS Waterproofing Roof, Sump, Bathroom, Skylight,Swimming pool, Heat resistant coating, House painting. 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Agricultural Land Converted

Sarjapur Road

24000 SQ, DC Converted Land, on Main Road/HWY, Near Sarjapura, 4000/sqft. DD Payment, IT, Clean! blrsitesarjapur@gmail.com

Farm House/ Land/ Resorts

Rajarajeshwari Nagar

LOOKING FOR Investors Upcoming Project Apartment With Mutual Benefit BEML 5th Stage Rajarajeshwari Nagar BBMP Approved A Khata 8300 Land Area Call: 7090909022/ 9108910278

Commercial Building

Banashankari

"BANASHANKARI 2ND-STAGE Commercial Building 30x40 with Rental income 6.40 Crore. "Sri.Ganesh Estate" 9845286505"

HSR Layout

HSR LAYOUT prime location Brand New Commercial Building For sale pls Contact Genuine buyers 9986447735

Jayanagar

***JAYANAGAR* 9TH** Block Commercial 5150sqft Site Build-up350000sqft Rental income 10.5Lakhs, price 21Cr. Contact: 9945079777

Nagarabhavi

"NAGARABHAVI BDA 30x40 West facing Newly constructed G+4 Commercial Building Rental income 1.60 Lakhs, for sale. 9901405391"

Commerical

BTM Layout

BTM 2ND, Suitable Semi Commercial/ PG 40' Road 40X60 East, Near 7th Main 6,72,00,000/- 9739995042

Jayanagar

JAYANAGAR 4TH T Block 80' Road 40x60 Suitable Commercial, BDA Near Sagar Hospital 8,40,00,000/- 9739995042

Mysore

164.05 SQ mts East facing Corner Commercial plot for sale at prime location call 9980057693

Sarjapur Road

COMMERCIAL33000 SFT Suitable For Complex Near Dommasandra Circle Rs 6500/-Buyers Contact:8884501767

Vijayanagar

500 SQFT Commercial office Space For Sale, Opposite to Vijayanagar Metro Station Contact: 9945569909 7676900174

General

Multiple Locations

ELECTRONICITY 2 & 3 Bedroom NEW FLATS, Chandapura BMRDA 3 & 4 VILLA. Contact- 9916763727

South

30X45 SOUTH/WEST facing corner site on MM Road for sale at Byatarayanapura, Mysore Road. Contact: 9845900432

Industrial & Factory

Jigani

INDUSTRIAL SITEFOR Sale in Jigani,Bangalore,Plot area:6000 sqft, Rate: 3800 sqft, Legal Documents. Contact: 9448793428

BIAAPA APPROVED
RESIDENTIAL PLOTS FOR SALE
NEAR DEVANAHALLI AIRPORT
Available Residential Site Dimensions 1,200 sq. ft - 3,000 sq. ft
GENUINE BUYERS ONLY
BROKERS EXCUSED
Build Your Dream Home
- Devanahalli International Airport (10 min.)
- Bengaluru City (30 min.)
- Near Bengaluru-Chennai Express Highway
- Upcoming Namma Metro Blue Line
- Near Devanahalli Industrial Park

Interested buyers can request inquiries on the below mentioned contact number.
CONTACT- 9686664985

Residential/ Commercial

HRBR Layout

HOUSE SALE 600 SFT NEAR EMPIRE HOTEL. GROUND 1BHK, FIRST AND SECOND EACH 2 BHK. RENTAL INCOME RUPEES 60,000. 1.35 CRORES: 9886633233

Marathahalli

NEW RESIDENTIAL BUILDING Sale, Marathahalli, Lift, Generator, Rental Getting 2.70L, A katha, Plan, 3.40cr 9980577227.

Singsandra

FOR SALE 55x50 to 2750sqft site @ near Manipal County Signal, Singasandra Metro Station,Hosur rd, Rs.8,500/- persqft. Bangalore-560068. Contact: 9731456798

Villas/Bunglows

Hennur

SALE ROW house villa in ARGE HELIOS. Kothanur. Hennur Road. Site 2550sft. Building 5600sft. 4BHK Fully furnished. 3 carpark. Arun 9845077299.

Commercial Land

Outskirts

7 ACRES Industrial Conversion Harohalli Industrial Area, First Stage 6Cr per Acre. KK REALTORSS KRISHNA 9741437555, 6366623666

House

Banashankari

RENT SALE House Apartments 2 3 4 BHK Banashankari 2nd 3rd stage Pattalamma Bharath Jayanagar Housing, 40*60 Siddappa 9964079497/ 9480984441

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles at BEML Layout, Basaveshwaranagar, Bangalore. Clear Titles & 'A' Katha. Rs.5.75 Crores. Party going out of station, Immediate Registration, Contact: 9845765559/ 9845043282

HOUSE SALE Behind Chord Road Hospital Ground One BHK, First and Second 3 BHK Duplex East Facing on 550 Sqft 1.20 Cr. 9880443362

"40X60 HOUSE 5.65 Crore, 40x60 Site 5.70 Crore, 50x80-Site 9.60 Crore, 50x65 Site 7.45 Crore, "Sri.Ganesh Estate"- 9845286505"

Basavanagudi

BDA 30X65 Old House West Face 30 Feet Road Hanumatha Nagar Basavanagudi Good Location: 8050705145

HBR Layout

SALE G+2 HOUSE HBR LAYOUT 4TH BLOCK WEST FACING PLOT- 1200SFT BUILTUP-2400SFT. 9535434647

MORE Classifieds IN MAIN ISSUE

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

MAGNOLIA

Your once in a Lifetime Opportunity is now knocking!

GREAT Investment, HIGH Appreciation
GOOD Rental Income

Ready to Move In

VISIT
SPOT BOOKING
SPOT BENEFITS
LAUNCHING
16th - 17th
March, 2024

ಮ್ಯಾಗ್ನೋಲಿಯಾ
MAGNOLIA
Cedar Court
BIDADI BANGALORE NEXT

APPROVED BMRDA APPROVED

PART OF
110 ACRES
OF INTEGRATED LIVING

1 & 2 BHK Residential Apartment in BIDADI Town.
for everyone & every budget.

Approved by all Leading banks | PRM/KA/RERA/1250/302/PR/181226/002263 | Commencement Certificate Received

Trust committed to you | Hassle-free Transparent documentation and clear titles | Risk-free investment, assures good capital appreciation | Quality that is built to last

www.magnoliaprojects.in
call: 84949 11199

EQUINOX Raindrop
BENGALURU NORTH
EQUINOX

ಪ್ರೀಮಿಯಂ ವಸತಿ ನಿವೇಶನಗಳು
ದೇವನಹಳ್ಳಿ, ಬೆಂಗಳೂರು ಉತ್ತರ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ

PREMIUM VILLA PLOTS
RERA No.ACK/KA/RERA/1250/303/PR/010224/007825

Helping you Build your Dream

BIAAPA APPROVED
TP/LAO/41/2023-24

A KHATA SITES

ಸೈಟುಗಳು ನೋಂದಣಿಗೆ ಮತ್ತು ವಸತಿ ನಿರ್ಮಾಣಕ್ಕೆ ಸಿದ್ಧ
ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ
ರೇರಾದಲ್ಲಿ ನೋಂದಾಣಿ

CREDAI BENGALURU

AMENITIES
- Underground Electricity & Communication System
- Rain water Harvesting
- Underground Drainage & Sewage System
- Drinking water & Irrigation System
- RCC Roads & LED Street Lights
- Kids Play & Yoga Zone
- Outdoor Gym & Party Lawn
- Seating with Pergola

SBI Bank Loans Available
₹36* LAKHS ONWARDS
*Conditions Apply

ಇಕ್ವಿನಾಕ್ಸ್ ಗ್ಲೋಬಲ್ ಶೆಲ್ಟರ್ಸ್
EQUINOX GLOBAL SHELTERS
Call for FREE Site Visit: +91 8880 449 449

THE HINDU GROUP

PROPERTY SHOPPING SEASON IS HERE!

WALK IN TO BAG THE BEST PROPERTY DEALS IN TOWN.

CASAGRAND building aspirations
Presents
THE HINDU Livingspaces 2024

In association with
PURAVANKARA | KRUSHIKA FARMING COMMUNITY | Shriram Properties Homes that live in you

The Hindu Livingspaces brings you an unmatched range of homes, apartments & commercial investments that best suit your tastes, budget, and dreams. The exhibition features **reputed builders, trusted land developers, and leading financial institutions** under one roof. Enjoy the shopping spree.

MARCH 23&24
CHANDRA SAGARA CONVENTION HALL, JAYANAGAR, BENGALURU
10 AM ONWARDS

200+ PRESTIGIOUS PROJECTS

FREE ENTRY
FOR QUERIES, CONTACT +91 94483 64925

Durability Partner: Zuari Cement
Silver Sponsors: Choodeshwari Real Estate, DS MAX, ELEGANT Builders & Developers, GOPALAN, JRC, KNS INFRA, MOGG'S ESTATES, PRIDE
Silver Sponsors: PROVIDENT, SARVADA, SOBHA
Finance Partners: Canara Bank, Central Bank of India, IIFL HOME LOAN, pnb, UCO BANK

To find your dream property, register using the QR code or visit link:
newsth.live/THPF